ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಆರನೆಯ ಅಧಿವೇಶನ

SIXTH SESSION OF THE FOURTH LEGISLATIVE ASSEMBLY

೨೯ನೇ ಶುಕ್ರವಾರ, ಆಗಸ್ಟ್ ೧೯೬೯ [ಭಾದ್ರಪದ ೭, ೧೮೯೧ (ಶಕ)]

FRIDAY, 29TH AUGUST 1969 [BHADRAPADA 7, 1891 (SAKA)]

ಸಂಪುಟ ೨೦—ಕ್ರಮಾಂಕ ೧೨

Vol. XX—No. 12

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪುಸ್ತಿ ಕ್ರಮಾಂಕ Accession No. 4869
ದಿನಾಂಕ Date.....

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಆರನೆಯ ಅಧಿವೇಶನ

SIXTH SESSION OF THE FOURTH LEGISLATIVE ASSEMBLY

೧ನೇ ಸೋಮವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೦, ೧೮೯೧ (ಶಕ)]

MONDAY, 1ST SEPTEMBER 1969 [BHADRAPADA 10, 1891 (SAKA)]

ಸಂಪುಟ ೨೦—ಕ್ರಮಾಂಕ ೧೩

Vol. XX—No. 13

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

		Pages
1	Starred Questions and Answers ...	731—750
	(ii) Question for Answer on the day (but not taken up) ...	751
	(iii) Requests to allow discussion on the Reports of the Fifth Finance Commission ...	751—753
	(iv) Misappropriation in the Sirsi Municipality ...	753—754
2	Calling Attention to Matters of Urgent Public Importance	
	(i) *re* : Extension of Services to some Forest Officers ...	754—756
	(ii) *re* : Hunger strike by the Workers of the Government Soap Factory, Bangalore ...	756—757
3	Eleventh Report of the Committee on Private Members' Bills and Resolution—(Adopted) ...	757—758
4	Business of the House ...	758
5	(a) Supplementary and Additional Demands for Grants for 1969-70 (First Instalment) ... (b) Demands for Grants to cover Expenditure incurred in excess of Voted Grants for the year 1964-65 ... (c) Demands for grants to cover Expenditure incurred excess of Voted grants for the year 1965-66—Grants—(Voted) ...	758—792
6	Mysore High Court (Amendment) Bill, 1969—(Passed)...	792—793
7	Private Member's Business—	
	(A) University of Technical Education Bill, 1969—(Introduction) ...	793—794
	(B) Mysore Agricultural Produce Market Committee (Amendment) Bill, 1969—(Consideration postponed) ...	794
	(C) (i) Mysore Sales Tax (Amendment) Bill, 1969—(Introduction) ... (ii) Motion to consider—(Withdrawn)	794—803
	(D) Mysore Public Men Enquiries Bill, 1969—(Motion to consider—Debate not concluded) ...	804—807

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
4869
ಸಂಖ್ಯೆ ಕ್ರಮಾಂಕ Accession No....

CONTENTS

		PAGES
1	(i) Starred Questions and Answers ...	809—827
	(ii) Short Notice Questions and Answers ...	827—834
	(iii) Questions for Answers on the day (but not taken up)	834—839
	(iv) Procedure for admitting Supplementaries ...	839—840
	(v) Application of Rule 308 *re* : Withdrawal of Members...	840—841
2	(i) Notice of an Adjournment motion *re* : Consideration of the Report of the Technical Committee—(Disallowed)	841—850
	(ii) Notice of Privilege Motion give by Sri R. M. Hegde *re* : threat and intimidation by Sri S. Gopala Gowda —(Withdrawn) ...	851—859
3	Calling Attention to a matter of urgent Public Importance :	
	(i) *re* : Cholera Epidemic in Hubli-Dharwar Area ...	859—860
	(ii) *re* : Strike by Workers of the Gokak Mills Limited...	860—861
4	(i) Mysore Village Panchayats and Local Boards (Amendment) Bill, 1969—(Introduction) ...	862
	(ii) Mysore Irrigation (Levy of Betterment Contribution and Water Rate) (Amendment) Bill, 1969—(Introduced) ...	862
	(iii) Mysore Public Premises (Eviction of Unauthorised Occupants) (Amendment) Bill, 1969—(Introduced) ...	862
	(iv) Mysore Land Revenue (Second Amendment) Bill, 1969—(Introduced) ...	862
	(v) Mysore Appropriation (No. 4) Bill, 1969—(Introduced) ...	863
5	Mysore Appropriation (No. 4) Bill, 1969—(Passed) ...	863—864
6	Formation of a Committee for Scheduled Castes and Scheduled Tribes and Statement of the Chief Minister ...	864
7	Notice of privilege Motion given by Sri R. M.Hegde ...	864—865
8	General Discussion on the Annual Financial Statement of the M.S.E.B. for 1969-70—(Debate not concluded)	865—888

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 29th August 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Purchase of Ginning Factory Equipment by the T.A.P.C.M. Society Ltd., Ranebennur

15. Sri N. L. BELLAD (Ranebennur).—

Will the Minister for Development be pleased to state :—

(*a*) whether it has come to the notice of the Government that an advance of Rs. 10,000 was made recently to a secondhand and useless ginning factory equipment by the President, Taluk Agricultural Produce Co-operative Marketing Society Ltd., Ranebennur ;

(*b*) if so, the action taken in the matter ?

Sri B. L. GOWDA (Deputy Minister for Co-operation).—

(*a*) The Chairman, Taluk Agricultural Produce Co-operative Marketing Society Ltd., Ranebennur has purchased 5 secondhand gins through Sri K. I. Davangeri at Rs. 2,500 per gin.

(*b*) Action is in progress.

ಶ್ರೀ ಎನ್. ಎಲ್. ಬೆಲ್ಲದ್.—ರಾಣಿಬೆನ್ನೂರು ತಾಲ್ಲೂಕಿನ ವ್ಯವಸಾಯೋತ್ಪಾದನಾ ಸಹಕಾರಿ ಮಾರಾಟ ಸಂಘದ ಅವ್ಯವಹಾರದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದ್ದೆ. ಈ ಸೊಸೈಟಿಯಲ್ಲ ಒಂದು ವರ್ಷ 27 ಸಾವಿರ ರೂಪಾಯಿ ನಷ್ಟ ತೋರಿಸಲಾಗಿದೆ, ಇತ್ತೀಚೆಗೆ 39 ಸಾವಿರ ಖರ್ಚು ಮಾಡಿದರು, ಗೋಡೌನ್ ಅಡಿಗಲ್ಲು ಹಾಕಲು 12 ಸಾವಿರ ರೂಪಾಯಿ ಖರ್ಚುಮಾಡಿದ್ದಾರೆ, ಫರ್ಟಿಲೈಜರಿನ ಬಾಕಿ 3 ಲಕ್ಷ ಕೊಚ್ಚಿಲ್ಲ. ಹೀಗೆ ಅನೇಕ ರೀತಿಯ ಅವ್ಯವಹಾರವಿದ್ದರೂ ಅವನ್ನು ಕಂಡರೂ ಹಾರಿಸಿ ಉತ್ತರ ಕೊಡುತ್ತಿದ್ದಾರೆ. ಯಾವ ಕ್ರಮ ಈ ವಿಚಾರದಲ್ಲಿ ತೆಗೆದುಕೊಂಡಿದ್ದೀರಿ ಮತ್ತು ತೆಗೆದುಕೊಳ್ಳಲಿದ್ದೀರಿ ಎಂಬುದನ್ನು ಹೇಳುತ್ತೀರಾ ?

†ಶ್ರೀ ಬಿ. ಎಲ್. ಗೌಡ.—ಈಗಾಗಲೆ ಮಾನ್ಯ ಸದಸ್ಯರು ಕೇಳಿರುವ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಸಂಬಂಧಪಟ್ಟ ಅಧಿಕಾರಿ ಮಂಡಲಿಯನ್ನು ಸೂಪರ್‌ಸೀಡ್ ಮಾಡಲಾಗಿದೆ. ಅವ್ಯವಹಾರ ನಡೆದಿರುವುದರ ತನಿಖೆಯಾಗುತ್ತಿದೆ. ಅದಕ್ಕೆ ಸಂಬಂಧಪಟ್ಟ ವರದಿ ಬಂದಮೇಲೆ ಸೂಕ್ತ ಕ್ರಮ ಕಾನೂನಿನ ಪ್ರಕಾರ ತೆಗೆದುಕೊಳ್ಳುತ್ತೇವೆ.

Sri SIDDIAH KASHIMATH.—May I know whether tenders were called for while purchasing gin ?

Sri B. L. GOWDA.—No, Sir.

ಶ್ರೀ ಕೆ. ಎಚ್. ಪಾಟೀಲ್.—ಈ ಸೊಸೈಟಿಯಲ್ಲಿ ಸರಕಾರದಿಂದ ನಾಮಕರಣ ಮಾಡಲ್ಪಟ್ಟ ಅಸಿಸ್ಟೆಂಟ್ ರಿಜಿಸ್ಟ್ರಾರರು ಮತ್ತು ಡೈರೆಕ್ಟರಿಯವಾಗ ಮತ್ತು ಈ ರೀತಿ ಅಪವ್ಯವಹಾರ ನಡೆದಿರುವಾ , ಅಪಾದನೆಗಳಿಗೊಳಗಾಗಿರುವಾಗ ಅಸಿಸ್ಟೆಂಟ್ ರಿಜಿಸ್ಟ್ರಾರರನ್ನು ಏಕೆ ಸಸ್ಪೆಂಡ್ ಮಾಡ ಬಾರದು ? ಸರಕಾರಿ ಅಧಿಕಾರಿಯ ಮೇಲೇಕೆ ಮೊದಲು ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಬಿ. ಎಲ್. ಗೌಡ.—ತಪ್ಪು ಯಾರೇ ಮಾಡಿರಲಿ, ಎಲ್ಲರಮೇಲೂ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬೋಳ ರಘುರಾಮಶೆಟ್ಟಿ.—ಈ ಮೆಷೀನ್ ತೆಗೆದುಕೊಳ್ಳುವಾಗ ಅಕ್ರಮ ನಡೆದಿರುವು ದೇನು ?

ಶ್ರೀ ಬಿ. ಎಲ್. ಗೌಡ.—ಅದನ್ನು ತೆಗೆದುಕೊಳ್ಳುವಾಗ ಸಾಮಾನ್ಯವಾಗಿ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಳ್ಳಬೇಕು. ಅವರು ತೆಗೆದುಕೊಂಡಿಲ್ಲ. ಏಕೆ ತೆಗೆದುಕೊಂಡಿಲ್ಲ ಎಂದು ನೋಟೀಸ್ ಕೊಡಲಾಗಿದೆ. ಅದಕ್ಕೆ ಜವಾಬು ಬಂದಿಲ್ಲ.

ಶ್ರೀ ಎನ್. ಎಲ್. ಬೆಲ್ಲದ್.—5 ಸಾವಿರ ರೂಪಾಯಿಗಳಿಗೆ ಹೊಸದು ದೊರೆಯುವಾಗ 12 ಸಾವಿರ ಕೊಟ್ಟು ಸೆಕೆಂಡ್‌ಹ್ಯಾಂಡ್ ಸಾಮಾನನ್ನು ತೆಗೆದುಕೊಂಡಿದ್ದಾರೆ. ಇಂಥ ಅಕ್ರಮಗಳಿರುವುದರಿಂದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ಒಪ್ಪಿದ್ದೇನೆ. ಅನ್ಯಾಯವ ವ್ಯವಹಾರ ನಡೆದಿದೆ, ವ್ಯವಹಾರ ಸರಿಯಾಗಿಲ್ಲ. ಏಕೆ ಹಾಗಾಗಿದೆ ಎಂದು ನೋಟೀಸು ಕೊಡಲಾಗಿದೆ. ಜವಾಬು ಬಂದಮೇಲೆ, ತನಿಖೆಯ ವರದಿ ಬಂದಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಸಂಗನಗೌಡ.—ಈ ಜಿನ್ ಖರೀದಿ ಸಲುವಾಗಿ ಸರ್ಕಾರದ ವತಿಯಿಂದ ಸಾಲ ಅಥವಾ ಗ್ರಾಂಟ್ ಕೊಟ್ಟಿದ್ದೀರಾ ? ಎಷ್ಟು ಕೊಟ್ಟಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಹತ್ತು ಸಾವಿರ ರೂಪಾಯಿ ಷೇರು ಬಂಡವಾಳ ಕೊಟ್ಟಿದ್ದೇವೆ.

Sri D. B. KALMANKAR.—You have been pleased to say that action will be taken. May I know whether you are going to take criminal action or civil action ?

Sri B. L. GOWDA.—I have already stated that the Board Management has been superseded and our officers are conducting enquiry. After the enquiry report is received, we will examine what kind of action we could take.

ಶ್ರೀ ಹಂಜಿ ಶಿವಣ್ಣ.—ಯಾವಾಗಲೂ ಸರ್ಕಾರದವರು ಇಂತಹ ತನಿಖೆ ಮಾಡುವಾಗ ಮೊದಲು ಬಹಳ ಜೋರಾಗಿ ನಡೆಸುತ್ತಾರೆ, ಕೊನೆಗೆ ವರ್ಷಾನುಗಟ್ಟಲೆ ಮಾಡಿ, ಅದನ್ನು ಸಣ್ಣದು ಮಾಡಿ ಕೈ ಬಿಡುತ್ತಾರೆ. ಆ ರೀತಿ ಮಾಡದೆ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

Sri B. L. GOWDA.—We are anxious to take action as early as possible.

ಶ್ರೀ ಕೆ. ಎಚ್. ರಾಗನಾಥ್.—ನ್ಯಾಯವಿ, ಈ ಜಿನ್‌ನ ಚೇರ್ಮನ್‌ರು ಈಗ ಗದಗಿನಮಠದ ಶಿಷ್ಯರಾಗಿ ಹೋಗುವುದರಿಂದ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರಲ್ಲಾ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ? ನಾಳೆ ಅವರು ಸ್ವಾಮಿಗಳಾಗುತ್ತಾರೆ, ಅವರ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳುತ್ತೀರಿ ? ಅವರೇನಾದರೂ ಆಸ್ತಿ ಬಿಟ್ಟಿದ್ದಾರೆಯೇ, ಹೇಗೆ ?

†Indicates that the remarks or speeches have not been revised by the member, concerned

ಶ್ರೀ ಬಿ. ಎಲ್. ಗೌಡ.—ಅವರು ಸ್ವಾಮಿ ಅಗುವುದಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ. ಅವರ ಮೇಲೆ ಇರತಕ್ಕ ಅಪಾದನೆಗಳೇನಾದರೂ ರುಜುವಾತಾದರೆ ಅವರು ಎಲ್ಲೇ ಇರಲಿ ಕ್ರಮ ತೆಗೆದುಕೊಳ್ಳುತ್ತೇವೆ.

Supply of Diesel Oil Engine Pumpsets in each taluk of Bangalore District

27. Sri C. R. RANGE GOWDA (Magadi).—

Will the Minister for Agriculture be pleased to state :—

(*a*) number of Diesel Oil Engine Pumpsets of M/s. Ganga Precision Industries Limited, Coimbatore supplied to each one of the Taluks in Bangalore district since the last three years up to a convenient date (yearwar information may be furnished) ;

(*b*) of them, the number of sets that are in working condition ;

(*c*) whether the Government have received any complaints about the working condition of those pumpsets) ;

(*d*) if so, the action taken to help the ryots in the matter ?

Sri D. B. PAWAR (Deputy Minister for Agriculture).—

(*a*)—

Name of the Taluk	*By the Dept. of Agriculture*			*By Mysore State Co-op. Land Development Bank*	*By Mysore State Agro Industries. Corporation*
	1965-66	*66-67*	*67-68*	*1967-69*	*1967-68*
Bangalore South	...	...	1	...	...
Bangalore North	...	...	1	...	...
Dodballapur	...	...	3	...	...
Nelamangala	...	...	3	1	...
Magadi	...	7	4	...	...
Ramanagaram	...	...	4	...	1
Channapatna	...	9	4	...	...
Kanakapura	...	...	3	...	...
Hosakote	...	3	...	...	...
Devanahalli	...	...	2	...	...
Anekal	...	...	1	...	...
	...	19	26	1	1

(SRI D. B. PAWAR)

(*b*) 46.

(*c*) Yes ; one complaint only in respect of the engine supplied by the Department of Agriculture.

(*d*) The firm has been requested to repair the engine at their cost.

ಶ್ರೀ ಸಿ. ಆರ್. ರಂಗೇಗೌಡ.—ಒಂದು ಪಂಪ್‌ಸೆಟ್ಟು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರು ಬಂದಿದೆ. ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿ, ದಾನರಹಳ್ಳಿ ಗ್ರಾಮದ ಮುತ್ತ ಮಾದಯ್ಯನವರಿಗೆ ಒಂದು ಪಂಪ್‌ಸೆಟ್ಟ್ ಕೊಟ್ಟಿರುತ್ತಾರೆ, ಅವರು ಅದನ್ನೇ ನಂಬಿಕೊಂಡು 4 ಎಕರೆ ಜಮೀನಿನಲ್ಲಿ ಮುನುಕಿನ ಜೋಳ ಬೆಳೆದ, ಒಂದು ಹದ ಬರುವುದರಲ್ಲೇ ಪಂಪ್‌ಸೆಟ್ಟು ಕೆಟ್ಟುಹೋಯಿತು. ಅರ್ಜಿಕೊಟ್ಟರೂ ಕೂಡ ಇರಾಖೆಯವರು ಕಂಪೆನಿ ಮೇಲೆ, ಕಂಪೆನಿಯವರು ಇರಾಖೆಯವರ ಮೇಲೆ ಜವಾಬ್ದಾರಿ ಹಾಕುತ್ತಾ ಇದ್ದಾರೆ, ರೈತನಿಗೆ ನಾವಿರಾರು ರೂಪಾಯಿ ನಷ್ಟವಾಗಿದೆ. ಇದಕ್ಕೆ ಯಾರು ಜವಾಬ್ದಾರರು ?

† **Sri D. B. PAWAR.**—So far we have received one complaint from one Sri Madiah. He was asked to transport the engine to the workshop. But he expressed his inability to do so. Now we have asked the Company to make the repairs free of cost.

ಶ್ರೀ ಸಿ. ಆರ್. ರಂಗೇಗೌಡ.—ಈ ರೈತ ಸರ್ಕಾರದವರಿಗೆ ಮನವಿ ಕೊಟ್ಟಮೇಲೆ ಇರಾಖೆಯವರು ಅವರ ಜವಾಬ್ದಾರಿಯಿಂದ ರಿಪೇರಿ ಮಾಡುವುದಕ್ಕೆ ಆಗದೆ ಕಂಪೆನಿಯವರ ಮೇಲೆ ಬಿಟ್ಟಿದ್ದಾರೆ, ಕಂಪೆನಿಯವರು ಇದುವರೆಗೂ ರಿಪೇರಿ ಮಾಡಿಲ್ಲ, ಇದಕ್ಕೆ ಯಾರು ಜವಾಬ್ದಾರರು ?

Sri D. B. PAWAR.—Representation was received from the concerned person in the month of February. We asked the person to shift the engine from the field to the workshop. He could not do it. Then we requested the Company to carry out the repairs free of cost.

Sri C. K. RAJAIAH SHETTY.—Has it come to the notice of the Government that officials of the Agriculture Department are in league with the Company which is supplying pumpsets and they are not helping the people to get pumpsets ?

Sri D. B. PAWAR.—So far as the distribution of the pumpsets is concerned, it is discontinued from 1st January 1969. This question does not arise.

ಶ್ರೀ ಬಿ. ದೊಡ್ಡಬೋರೇಗೌಡ.—ವ್ಯವಸಾಯದ ಇರಾಖೆಯ ಮೂಲಕ ತಾಲ್ಲೂಕ್‌ಬೋರ್ಡ್‌ಗಳಿಗೆ ಒದಗಿಸಿರತಕ್ಕ ಡೀಸೆಲಾಯಿರ್ ಮತ್ತು ವಿದ್ಯುಚ್ಛಕ್ತಿಯ ಪಂಪ್‌ಸೆಟ್ಟುಗಳಲ್ಲಿ ಶೇ. 60 ರಷ್ಟು ಕೆಟ್ಟುಹೋಗಿರುತ್ತವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri D. B. PAWAR.—No Sir, we have not received any such complaint.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೆಸರ್ಸ್ ಗಂಗಾ ಇಂಡಸ್ಟ್ರಿಯಸ್ ಲಿಮಿಟೆಡ್ ಅವರಿಂದ ನಮ್ಮ ರಾಜ್ಯದಲ್ಲಿ ಈ ಡಿಸೇರಾಯಿಲ್ ಇಂಜಿನ್‌ಗಳನ್ನು ಕೊಂಡಹಾಗೆ ಬೇರೆ ರಾಜ್ಯಗಳವರೂ ಕೊಂಡಿದ್ದಾರೆ. ಆದರೆ ಬೇರೆ ರಾಜ್ಯಗಳವರು ಕೊಂಡಿರುವುದಕ್ಕಿಂತ ನಮ್ಮ ರಾಜ್ಯದಲ್ಲಿ ಕೊಂಡಿರತಕ್ಕ ಇಂಜಿನ್‌ಗಳಿಗೆ ಹೆಚ್ಚು ಬೆಲೆಯನ್ನು ಕೊಟ್ಟಿದೆ. ಇದಕ್ಕೆ ಯಾರು ಕಾರಣ ? ಅವರ ಬಗ್ಗೆ ಸರ್ಕಾರದವರೇನು ಕ್ರಮಗಳನ್ನು ಕೈಗೊಂಡಿದ್ದಾರೆ ?

Sri D. B. PAWAR.—This question is under examination.

Reservation in Allotment of Fishing Boats to Harijans and Girijans

76. Sri A. RAMACHANDRA (Sulya).—

Will the Minister of State for Ports and Fisheries be pleased to state :—

(*a*) whether reservation is being made to Harijans and Girijans while giving any type of help to fishermen by Fisheries Departmant in the State;

(*b*) the number of mechanised boats given to fisherman on loan basis and by way of help and the places where they have been given ?

Sri H. C. LINGA REDDY (Minister of State for Ports and Fisheries).—

(*a*) No.

(*b*) So far, 125 boats have been given in North Kanara District and 65 boats in South Kanara District on loan basis and also by way of help through fisheries department and 27 and 173 boats, respectively, have been given through Fisheries Co-operative Societies.

ಶ್ರೀ ಎ. ರಾಮಚಂದ್ರ.—ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಈ ಮೀನುಗಾರಿಕೆ ಇಲಾಖೆಯಲ್ಲಿ ಏಕೆ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ದೋಣಿಗಳನ್ನು ರಿಜರ್ವ್ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಂಡಿಲ್ಲ ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ 18 ಪರ್ಸೆಂಟ್ ರಿಜರ್ವೇಷನ್ ಹೇಳಿರತಕ್ಕುದು ನೌಕರಿಗಳನ್ನು ಕೊಡತಕ್ಕ ವಿಚಾರದಲ್ಲಿ ಮಾತ್ರ. ಆದರೆ ಈ ಮೀನುಗಾರಿಕೆ ಇಲಾಖೆಯಲ್ಲಿ ಕೂಡ ಹರಿಜನ ಗಿರಿಜನರಿಂದ ಬಂದ ಅರ್ಜಿಗಳಿಗೆ ಸರ್ಕಾರದವರು ಪುರಸ್ಕಾರ ನೀಡಿದ್ದಾರೆ. ಆದರೆ ಹಾಗೆ ರಿಜರ್ವ್ ಮಾಡುವುದಕ್ಕೆ ಯಾವ ರೂಲ್ಸ್‌ಗಳೂ ಇಲ್ಲ.

ಶ್ರೀ ಎ. ರಾಮಚಂದ್ರ.—ಈ ವಿಚಾರದಲ್ಲಿ ಹರಿಜನ ಗಿರಿಜನರಿಂದ ಬಂದಿದ್ದ ಅರ್ಜಿಗಳೆಷ್ಟು ? ಮತ್ತು ಆ ಪೈಕಿ ಎಷ್ಟು ಜನರಿಗೆ ಸೌಲಭ್ಯ ನೀಡಲಾಗಿದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ಜನರು ಯಾವ ಯಾವ ಸಹಾಯವನ್ನು ಕೇಳಿದ್ದರು, ಎಷ್ಟು ಜನ ಕೇಳಿದ್ದರೆಂಬ ವಿವರಗಳು ನಮ್ಮಲ್ಲಿ ನನ್ನಲಿಲ್ಲ. ಆದ್ದರಿಂದ ಇದಕ್ಕೆ ನಮ್ಮಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಆಲ್ ಇಂಡಿಯಾ ಡೆವಲಪ್‌ಮೆಂಟ್ ಸ್ಕೀಮುಗಳಲ್ಲಿ ಈ ಹರಿಜನ ಗಿರಿಜನರಿಗೆ ಹಣವನ್ನು ಹಂಚುವುದರಲ್ಲಿ ಕೂಡ ಶೇ. 18 ರಿಜರ್ವ್‌ಮಾಡಬೇಕೆಂದು ಹೇಳಿರುವಾಗ ಈ ಇಲಾಖೆಯಲ್ಲೂ ಕೂಡ ಈ ನಿಮ್ನವರ್ಗದವರಿಗೂ ಮತ್ತು ನಿಮ್ನಹಂಗಡದವರಿಗೂ ಒಂದು ವಿಶೇಷರೀತಿಯ ಅನುಕೂಲಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಮ್ಮಲ್ಲಿ ಹರಿಜನ ಗಿರಿಜನರಲ್ಲಿ ಒಟ್ಟು 93 ಜನರಿಗೆ ಮೀನು ಹಿಡಿಯುವುದರಲ್ಲಿ ತರಬೇತಿ ನೀಡಲಾಗಿದೆ. ಈ ಪೈಕಿ 52 ಜನರು ಇನ್‌ಲ್ಯಾಂಡ್ ಮೀನುಗಾರಿಕೆಯಲ್ಲೂ ಮತ್ತು 41 ಜನರು ಮೆರೈನ್ ಮೀನುಗಾರಿಕೆಯಲ್ಲೂ ಟ್ರೈನಿಂಗನ್ನು ಪಡೆದಿದ್ದಾರೆ. ಇವರಿಗೆ ಸಮುದ್ರದಲ್ಲಿ ಹೋಗಿ ಮೀನುಹಿಡಿಯುವುದು ಅಷ್ಟು ಸುಲಭವಲ್ಲವಾದ ಕಾರಣ ಇನ್‌ಲ್ಯಾಂಡ್ ಟ್ರೈನಿಂಗ್ ಪಡೆದವರಿಗೆ ನೂಕ್ಕ ಸಹಾಯಗಳನ್ನು ಮಾಡಿದ್ದೇವೆ.

ಶ್ರೀ ಚಿಕ್ಕೇಗೌಡ.—ಇವರಿಗೆ 18 ಪರ್ಸೆಂಟ್ ಮೀಸಲಾಗಿಟ್ಟರೇಕೆ ಆಗುವುದಿಲ್ಲ ? ಅದರಲ್ಲಿ ಏನು ಕಷ್ಟ ಇದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಪರಿಶೀಲನೆ ಮಾಡತಕ್ಕ ವಿಷಯ.

ಶ್ರೀ ಬಿ. ಭೌನ್ಕಿಕ ಶೆಟ್ಟಿ.—ಈಗ ಹರಿಜನ ಗಿರಿಜನರಿಗೆ ಕೊಟ್ಟಿರುವ ದೋಣಿಗಳು ಏನಿವೆ ಅವುಗಳ ಬಗ್ಗೆ ಸರ್ಕಾರದ ವತಿಯಿಂದ ಎಷ್ಟು ಸಹಾಯಧನವನ್ನು ಕೊಟ್ಟಿದ್ದೀರಿ, ಬೇರೆ ಸವಲತ್ತುಗಳನ್ನು ಏನೇನು ಕೊಟ್ಟಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಷ್ಟು ದೋಣಿಗಳನ್ನು ಕೊಟ್ಟಿದೆ ಎಂಬ ಬಗ್ಗೆ ಲೆಕ್ಕ ಇದೆ. ಅದನ್ನು ಈಗಾಗಲೇ ಹೇಳಿದ್ದೇನೆ. ಈಗಾಗಲೇ ಸರ್ಕಾರದ ಕಡೆಯಿಂದ 605 ಬೋಟುಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ 350 ಮೆಕನೈಜ್ಡ್ ಬೋಟುಗಳನ್ನು ಕೊಡ ಬೇಕೆಂದು ತೀರ್ಮಾನಮಾಡಿದ್ದೇವೆ. ನಬ್ಸಿಡಿಯನ್ನು ಶೇಕಡ 50 ರಷ್ಟು ಕೊಡುತ್ತಿದ್ದೇವೆ. ಇಂಜಿನ್ ಖರ್ಚಿನಲ್ಲಿ ಈಗ ಶೇಕಡ 25ರಷ್ಟು ಕಡಿಮೆಮಾಡಬೇಕೆಂದು ತೀರ್ಮಾನಮಾಡಿ 350 ಬೋಟ್‌ಗಳಿಗೆ ಬದಲು 700 ಬೋಟ್‌ಗಳನ್ನು ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಲೋನ್ ಮುಖಾಂತರ ಈಗಾಗಲೇ 200 ಬೋಟ್‌ಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕಯೋಜನೆ ಮುಗಿಯುವುದರೊಳಗೆ ಒಂದು ಸಾವಿರ ಬೋಟ್‌ಗಳನ್ನು ಕೊಡಬೇಕೆಂದಿದ್ದೇವೆ.

ಶ್ರೀ ಎಂ. ಶ್ರೀನಿವಾಸ ನಾಯಕ್.—ಇಂಡಿಯಾ ಸರ್ಕಾರದಿಂದ ನಮಗೆ ಟ್ರಾಲರ್ಸ್‌ಗಳೇ ನಾದರೂ ಬಂದಿವೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎರಡು ಟ್ರಾಲರ್‌ಗಳನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಒಂದನ್ನು ಮುಂಬಿನ ತಿಂಗಳು 10ನೇ ತಾರೀಖಿನಲ್ಲಿ ಗೋವಾ ಷಿಪ್ ಯಾರ್ಡ್‌ನಲ್ಲಿ ರ್ಯಾಂಡ್ ಮಾಡಬೇಕೆಂದಿದ್ದೇವೆ. 15 ಲಕ್ಷರೂಪಾಯಿಗಳ ಮೌಲ್ಯದ 2 ಟ್ರಾಲರ್ಸ್‌ಗಳನ್ನು ಉಪ ಯೋಗಿಸುವುದರಿಂದ ಡೀಪ್ ಸಿ ಫಿಷಿಂಗ್‌ಗೆ ಅನುಕೂಲವಾಗುತ್ತದೆ.

Smt. WINNIFRED F. FERNANDES.—You have said that you have given 125 boats for North Canara and 265 boats through Co-operative Societies and Fisheries Department in South Kanara. What is the time you have taken to supply them ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಮ್ಮ ಬೋಟ್ ಬಿಲ್ಡಿಂಗ್ ಯಾರ್ಡ್‌ನವರು ಅದನ್ನು 2-3 ವರ್ಷಗಳಿಂದ ಕೊಡುತ್ತಿದ್ದಾರೆ.

Mr. SPEAKER.—Question Nos. 116, 322 and 327 may be taken up together.

Implementation of Recommendations of Tukol Commission

116. Sri D. B. KALMANKAR (Aland).—

Will the Minister for Finance, Planning and Youth Welfare be pleased to state:—

the Recommendations of the Tukol Commission that have been approved by the Government and given effect to ?

Sri RAMAKRISHNA HEGDE (Minister for Finance, Planning and Youth Welfare).—

(1) The Recommendation in respect of D.A., C.C.A. and H.R.A. to Government Servants, Officials of Local Bodies and aided Institutions, has been accepted in Government Order No. FD 20 SRP (1) 69, dated 10th Mach 1969.

(2) Relief suggested to Pensioners has also been implemented with effect from 1st April 1969 in Government Order No. FD 24 SRP (1) 68, dated 1st April 1968.

Payment of Arrears of D. A. and Implementation of Recommendation of Tukol Commission

322. Sri M. S. KRISHNAN (Malleswaram).—

Will the Minister for Finance, Planning and Youth Welfare be pleased to state:—

(*a*) whether the Governmeut is aware that there has been continuous agitation by the N.G.O.'s of the State for the payment of arrears of D.A. in cash for bringing up D.A. to Central rates and for implementing the recommendations of the Tukol Pay Commission, etc,;

(*b*) if so, the action the Government has taken or is proposing to take to meet the legitimate demands of the N.G.O.'s and to alleviate their grievances?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) Orders have been issued for payment of Dearness Allowance in cash from 1st January 1969 (*Vide* G. O. No. FD 17 SRP (1) 69, dated 23rd January 1969). The amount due from 1st March 1968 to end of December 1968, is to be invested in Five Year Fixed Deposit Scheme and in National Savings Certificates.

Dearness Allowance, House Rent Allowance, City Compensatory Allowance have been already sanctioned by Government as per Government Order No. FD 20 SRP (1) 69 of 10th March 1969 as per recommendations made by the Pay Commission. The recommendation regarding cash allowance for minor ailments has not been accepted. The other recommendations of the Pay Commission are under consideration of Government.

Demands of N.G.O.'s and Implementation of Recommendations of Tukol Pay Commission

327. Sri P. VENKATAGIRIYAPPA (Kolar).—

Will the Minister for Finance, Planning and Youth Welfare be pleased to state :—

(*a*) whether the Government is aware that the discontentment is growing among the N.G.O.'s of the State due to the failure of Goverament to implement the Tukol Pay Commission Report in full;

(*b*) the number of representations received by the various N.G.O.'s Associations in this regard and the points raised in their representations;

(*c*) the ways and means thought of to mobilise the resources to meet the legitimate demands of the N.G.O.'s early?

Sri RAMAKRISHNA HEGDE (Minister for Finance, Planning and Youth Welfare).—

(*a*) Some representations from N.G.O.'s Association have been received.

(*b*) A large number of representations mostly, printed post-cards have been received.

The main points urged are :

1 Revision of Minimum basic wage and increments especially for Class IV Staff.

2 Creation of Joint Consultative Machinery.

3 Regularising services of Local Candidates.

4 Implementations of Pay Commission's recommendations with progressive modifications.

(*c*) This depends on additional resources being raised and can be considered with reference to the recommendations of the Fifth Finance Commission or possibility of additional taxation and retrenchment.

Sri D. B. KALMANKAR.—May I know after the submission of the Report of the Fifth Finance Commission, whether the Government has dropped the consideration of the remaining recommendations of the Tukol Commission as far as the N.G.O.'s are concerned ?

† Sri RAMAKRISHNA HEGDE.—Sir, we have not decided to drop the idea considering the Tukol Commission Report under the circumstances, it appears rather difficult to implement them.

ಶ್ರೀ ಎಂ. ಎಸ್. ಕೃಷ್ಣನ್.—(ಅ) ಪ್ರಶ್ನೆಗೆ ಉತ್ತರವಾಗಿ ವೇತನಾ ಆಯೋಗದವರ ಶಿಫಾರಸ್ಸುಗಳನ್ನು ಜಾರಿಗೆ ತರುವುದು ಸರ್ಕಾರದ ಗಮನದಲ್ಲಿದೆಯೆಂದು ಹೇಳಿದ್ದೀರಿ. ಇವತ್ತು ಬೆಳಗ್ಗೆ ಪತ್ರಿಕೆಗಳಲ್ಲಿ ವರದಿ ಮಾಡಿರುವ ಪ್ರಕಾರ ನಿಮ್ಮ ಕಾಂಗ್ರೆಸ್ಸಿನ ಶಾಸಕರು ವೇತನಾ ಆಯೋಗದವರ ಶಿಫಾರಸುಗಳನ್ನು ಜಾರಿಗೆ ತರುವುದನ್ನು ವಿರೋಧ ಮಾಡಿದ್ದಾರೆಂದು ತಿಳಿದು ಬಂದಿದೆ ಹೇಗೆ ?

Mr. SPEAKER.—What has happened in Party Meeting should not be referred to here. Irrespective of what has happened in the Party, the hon. Member may put the question independently. Reference to Party proceedings is not permitted here.

ಶ್ರೀ ಎಂ. ಎಸ್. ಕೃಷ್ಣನ್.—ಆ ಒಂದು ನಿರ್ಣಯದಿಂದ, ತಾವು ಏನು "ಕನ್ಸಿಡರೇಶನ್ ಆಫ್ ದಿ ಗವರ್ನ್‌ಮೆಂಟ್" ಎಂದು ಹೇಳಿದ್ದಿರಿ. ಅದನ್ನು ಬಿಟ್ಟು ಬಿಡುತ್ತೀರೋ ? ಹಾಗೆ ಬಿಟ್ಟುಬಿಟ್ಟರೆ, ತಮ್ಮನ್ನು ಮಜನಭ್ರಷ್ಟರು, ತಾವು ಏನು ಅಶೂರೆನ್ಸ್ ಕೊಟ್ಟಿದ್ದೀರಿ, ಅದನ್ನು ಪಾಲನೆ ಮಾಡಿಲ್ಲ ಎಂದು ಹೇಳಿದಂತಾಗುವುದಿಲ್ಲವೇ ? ತಾವು ಪ್ರೇಕಪಿಶನ್ ಮಾಡುವಾಗ ಏನು ಹೇಳಿದ್ದೀರೋ, ಅದಕ್ಕೆ ತಪ್ಪಿದಂತಾಗುವುದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕಾಂಗ್ರೆಸ್ ಪಕ್ಷದಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ, ಆ ತೀರ್ಮಾನವನ್ನು ಸರ್ಕಾರ ಜಾರಿಯಲ್ಲಿ ತರುತ್ತದೆ. ಆದರೆ ಬಗ್ಗೆ ನನಗೆ ಏನೂ ನಾಚಿಕೆ ಇಲ್ಲ.

(*Interruptions*)

Mr. SPEAKER.—If the hon. Members want to put supplementaries, let them put after he completes his reply to a particular question. When the Hon. Minister is replying, it is against parliamentary procedure to interrupt him like this.

Sri RAMAKRISHNA HEGDE.—I beg to state that in parliamentary democracy, ultimately the Party that runs the Government decides policy matters. It is not new. We are not in a Communist regime.

(Interruptions)

Mr. SPEAKER.—When a question is asked, the Minister will reply. If in the light of that reply, any questions are raised, they may be permitted. As I have already stated, it is not proper to interrupt when the Hon. Minister is replying; It is against parliamentary procedure. If any hon. Members are not satisfied with the reply, there are other ways of ventilating their grievances. But this is not the time for that.

Sri V. N. PATIL.—Can he Comment on the communist Party ?

Mr. SPEAKER.—I will not allow this controversy.

ಶ್ರೀ ರಾಮಕೃಷ್ಣ ಹೆಗಡೆ.—ಪತ್ರಿಕೆಯಲ್ಲಿ ಏನು ಸಮಾಚಾರ ಬಂದಿದೆ ಅದರ ಬಗ್ಗೆ ನಾನು ಏನು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಾರ್ಲಮೆಂಟರಿ ಡೆಮೊಕ್ರೆಸಿಯಲ್ಲಿ ಯಾವುದೇ ಪಕ್ಷ ಆಡಳಿತ ನಡೆಸುತ್ತಿದ್ದರೂ ಯಾವುದೇ ವಿಚಾರ ವಾಗಿ, ಸರ್ಕಾರ ಕ್ರಮವನ್ನು ಕೈಗೊಳ್ಳುವ ಮೊದಲು ಆದು ಪಕ್ಷದಲ್ಲಿ ನಿರ್ಧಾರ ಮಾಡಬೇಕು. ಆದು ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರಲಿ, ಅಥವಾ ಕಮ್ಯುನಿಸ್ಟ್ ಪಕ್ಷವೇ ಅಧಿಕಾರದಲ್ಲಿರಲಿ, ಅದಕ್ಕೆ ಪಾರ್ಲಮೆಂಟರಿ ಡೆಮೋಕ್ರೆಸಿ ಎಂದು ಹೇಳುತ್ತಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟರ ಮಟ್ಟಿಗೆ ಇದೆ, ತುಕೋಳ್ ಆಯೋಗದ ವರದಿಯನ್ನು, ತುಕೋಳ್ ಆಯೋಗದ ಶಿಫಾರಸ್ಸುಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೇಗೆ ಎಂಬುದನ್ನು ಯೋಚಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ತುಕೋಳ್ ಕಮಿಷನ್ನಿನ ವರದಿ ಸರ್ಕಾರಕ್ಕೆ ಬಂದು ಅನೇಕ ತಿಂಗಳು ಆದರೂ ಕೂಡ ಆದನ್ನು ಕಾರ್ಯಗತ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರವ ನೀತಿ ಏನು, ಯಾವಾಗ ಈ ವರದಿಯನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕಾರಣದಿಂದ ತುಕೋಳ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದಕ್ಕೆ ತಡವಾಗಿದೆ, ತೊಂದರೆಯಾಗಿದೆ ಎಂದು ನಾನು ಅನೇಕ ಸಲ ಹೇಳಿದ್ದೇನೆ. 5ನೇ ಫೈನಾನ್ಸ್ ಕಮಿಷನ್ನಿನ ಮುಂದೆ ನಮ್ಮ ಕೇಸನ್ನು ಇಟ್ಟಿದ್ದೆವು. ಅವರು ಮೊನ್ನೆತಾನೆ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಆದರಿಂದ ನಮಗೆ ಅತ್ಯಂತ ಅನಾನುಕೂಲ ವಾದ ಒಂದು ಅವಾರ್ಡ್ ಆಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರ ಹತ್ತಿರ ಪ್ರತಿಭಟನೆ ಮಾಡಿ ವಾಗ್ವಾದ ಮಾಡಿ ಎಷ್ಟರಮಟ್ಟಿಗೆ ಆದರಿಂದ ಪರಿಹಾರ ಸಿಕ್ಕುತ್ತದೆ ಎಂಬುದನ್ನು ನೋಡಿಕೊಂಡು ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆವರೆ ಈಗ ಈ ಬಗ್ಗೆ ಆಶ್ವಾಸನೆ ಕೊಡುವುದು ಸಾಧ್ಯವಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ನಾನಗೆಜೆಟೆಡ್ ನೌಕರರ ಬೇಡಿಕೆಗಳ ಮುಖ್ಯಾಂಶಗಳು (1) ಕನಿಷ್ಠ ಮೂಲವೇತನವನ್ನು ಮತ್ತು ವಾರ್ಷಿಕ ಹೆಚ್ಚುವರಿಯನ್ನು ಅದರಲ್ಲೂ ವಿಶೇಷವಾಗಿ 4ನೇ ದರ್ಜೆಯ ಸಿಬ್ಬಂದಿಯವರ ಮೂಲವೇತನ ಮತ್ತು ವಾರ್ಷಿಕ ಹೆಚ್ಚುವರಿಯನ್ನು ಪರಿಷ್ಕರಿಸುವುದು, (2) ಸಂಯುಕ್ತ ಸಮಾಲೋಚನಾ ಸಮಿತಿಯನ್ನು ರಚಿಸುವುದು, (3) ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಕ್ರಮಬದ್ಧಗೊಳಿಸುವುದು (4) ವೇತನಾ

(ಶ್ರೀ ಪಿ. ವೆಂಕಟಗಿರಿಯಪ್ಪ)

ಅಯೋಗಾದವರ ಶಿಫಾರಸುಗಳನ್ನು ಪ್ರಗತಿಪರ ಮಾರ್ಪಾಟುಗಳೊಡನೆ ಕಾರ್ಯಗತಗೊಳಿಸುವುದು, ಎಂದು ಹೇಳಿದ್ದೀರಿ, ಈ ಬೇಡಿಕೆಗಳು ಸರಳವಾಗಿವೆ, ಮತ್ತು ನ್ಯಾಯಬದ್ಧವಾಗಿವೆ. ಇವುಗಳಲ್ಲಿ ಯಾವ ಬೇಡಿಕೆಗಳನ್ನು ಸರ್ಕಾರದವರು ಒಪ್ಪಿಕೊಳ್ಳುತ್ತೀರಿ, ಯಾವ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಕಷ್ಟ, ಆ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳನ್ನಾದರೂ ಒಪ್ಪಿಕೊಳ್ಳುತ್ತೀರಾ ದಯವಿಟ್ಟು ಖಚಿತವಾಗಿ ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ತುಕೋಳ್ ಅಯೋಗದವರು ಮಾಡಿರುವ ಶಿಫಾರಸ್ಸುಗಳಲ್ಲಿ ಕೆಲವೊಂದು ಮುಖ್ಯ ಶಿಫಾರಸ್ಸುಗಳನ್ನು ನಾವು ಅಂಗೀಕಾರ ಮಾಡಿದ್ದೇವೆ, ಅವುಗಳನ್ನು ಕಾರ್ಯಗತ ಮಾಡಿದ್ದೇವೆ. ಈಗ ನಾನ್ ಗೆಜಿಟೆಡ್ ನೌಕರರ ಸಂಘದವರು ಕೇಳಿರುವ ಬೇಡಿಕೆಗಳಲ್ಲಿ ಎರಡು ಮಹತ್ವವಾದ ಪ್ರಶ್ನೆಗಳು ಇವೆ. ಅದರಲ್ಲಿ ಮೊದಲನೆಯದು ಕೇಂದ್ರ ಸರ್ಕಾರದವರ ಸಂಬಳದ ಮಟ್ಟಕ್ಕೆ ನಮ್ಮ ಸಂಬಳವನ್ನು ಏರಿಸಬೇಕು ಎಂಬುದು. ಎರಡನೆಯದು, ತುಟ್ಟಿಭತ್ಯದ ಕೆಲವು ಅಂಶವನ್ನು ಬೇಸಿಕ್ ಪೇನಲ್ಲಿ ಮರ್ಜ್‌ಮಾಡಬೇಕು ಎಂಬುದು. ಈ ಎರಡು ಬೇಡಿಕೆಗಳನ್ನು ಪೂರೈಸಬೇಕಾದರೆ ಅವಕ್ಕೆ ಹೆಚ್ಚು ಹಣವನ್ನು ವಿನಿಯೋಗಿಸಬೇಕಾಗಿದೆ. ತುಕೋಳ್ ಅಯೋಗದವರು ಮಾಡಿರುವ ಉಳಿದ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಲು ಕ್ರಮವನ್ನು ತೆಗೆದುಕೊಳ್ಳಬೇಕಾದರೆ ನಮ್ಮ ಹಣಕಾಸಿನ ಪರಿಸ್ಥಿತಿ ತಕ್ಕಷ್ಟು ಸುಧಾರಿಸದ ಹೊರತು ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಖಂಡಿತವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತುಕೋಳ್ ಅಯೋಗದವರ ವರದಿ ಬಂದ ವೇಳೆ ಅದನ್ನು ಸರ್ಕಾರ ಕಾರ್ಯಗತ ಮಾಡಿದ್ದರೆ 5ನೇ ಆರ್ಥಿಕ ಅಯೋಗದವರು ಹೇಗೂ ಸರ್ಕಾರದವರು ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ ಎಂದು ಅದನ್ನು ಸೇರಿಸಿಕೊಂಡು ತಮಗೆ ಹಣವನ್ನು ಕೊಡುತ್ತಿದ್ದರು. ಆದ್ದರಿಂದ ಆರ್ಥಿಕ ಆಯೋಗದವರು ತಮಗೆ ಕಡಿಮೆ ಹಣವನ್ನು ಕೊಡುವುದಕ್ಕೆ ಇದೂ ಒಂದು ಕಾರಣವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಕಮಿಟ್ ಮಾಡಿಕೊಂಡಿರತಕ್ಕ ಎಕ್ಸ್‌ಪೆಂಡಿಚರನ್ನು ತೋರಿಸಿದ್ದೇವೆ. ಆದರಲ್ಲಿಯೂ ಸಂಪೂರ್ಣವಾಗಿ ಅದನ್ನು ಸ್ವೀಕಾರ ಮಾಡಿಲ್ಲವೆಂದು ಗೊತ್ತಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ನೌಕರರ ಸಂಬಳದ ಮಟ್ಟಕ್ಕೆ ರಾಜ್ಯ ಸರ್ಕಾರದ ನೌಕರರ ಸಂಬಳವನ್ನೂ ಹೆಚ್ಚು ಮಾಡಿದ್ದರೆ ಅದನ್ನು 5ನೇ ಆರ್ಥಿಕ ಆಯೋಗದವರು ಸ್ವೀಕಾರ ಮಾಡುತ್ತಿದ್ದರು ಎನ್ನುವುದು ಅಷ್ಟೊಂದು ಸರಿಯಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ತುಕೋಳ್ ಆಯೋಗವನ್ನು ನೇಮಕ ಮಾಡುವಾಗ ಸರ್ಕಾರದ ಹತ್ತಿರ ದುಡ್ಡಿದೆ, ಕೊಡಬಹುದು ಎಂಬ ಧೈರ್ಯದಿಂದ ನೇಮಕ ಮಾಡಿದಿರಾ ಮತ್ತು ಆಯೋಗದ ವರದಿ ಬಂದ ಮೇಲೆ ಸರ್ಕಾರದ ಹತ್ತಿರವಿದ್ದ ದುಡ್ಡು ಮಾಯವಾಯಿತೇ ಎಂಬುದನ್ನು ತಿಳಿಸಬೇಕು ? ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ಆಗದಿದ್ದರೆ ಇಷ್ಟೊಂದು ಹಣ ಖರ್ಚುಮಾಡಿ ಆಯೋಗವನ್ನು ನೇಮಕ ಮಾಡಬೇಕಾದರೆ ಪ್ರಯೋಜನವಾದರು ಏನಿತ್ತು ?

1-30 P.M.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ನೆನಪು ಇರಲಿಕ್ಕೆ ಇಲ್ಲವೆಂದು ಕಾಣುತ್ತದೆ. ತುಕೋಳ್ ಆಯೋಗವನ್ನು ಸರ್ಕಾರದವರೇ ನೇಮಕ ಮಾಡಿದ್ದು ಅಲ್ಲ, ಮತ್ತು ಆಗ ಸರ್ಕಾರದ ಹತ್ತಿರ ಸಾಕಷ್ಟು ಹಣ ಇತ್ತು ಎಂದು ಆಯೋಗವನ್ನು ಸರ್ಕಾರದವರೇ ನೇಮಕ ಮಾಡಿದ್ದು ಅಲ್ಲ. ಸರ್ಕಾರಿ ನೌಕರರು ಒಂದು ಆಯೋಗವನ್ನು ನೇಮಕ ಮಾಡಬೇಕೆಂದು ಪುನಃ ಪುನಃ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದರು. ಆ ಬೇಡಿಕೆಯನ್ನು ಈಡೇರಿಸುವುದಕ್ಕಾಗಿ ಆಯೋಗವನ್ನು ನೇಮಕ ಮಾಡಬೇಕಾಯಿತು. ತುಕೋಳ್ ಆಯೋಗವನ್ನು ನೇಮಕ ಮಾಡಿದಾಗ ಅವರು ಯಾವ ತರಹದ ಶಿಫಾರಸ್ಸನ್ನು ಮಾಡಬಹುದು, ಸರ್ಕಾರಕ್ಕೆ ಎಷ್ಟು ಖರ್ಚು ಬರಬಹುದು ಎಂಬುದನ್ನು ಕನಸಿನಲ್ಲಿಯೂ ಕೂಡ ತಿಳಿದುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ.

Sri SIDDIAH KASHIMATH.—May I know when and how the Tukol Commission report will be implemented by the Government ?

Sri RAMAKRISHNA HEGDE.—I can only answer the latter part of the question, *i.e.*, how can this Tukol Commission report be implemented It is simple. If the Government of India agrees to give the additional financial assistance that is required to implement this, I am prepared to implement it from today. But if you ask me from when, I have no answer to that.

ಶ್ರೀ ಎಂ. ನಾಗಪ್ಪ.—327ನೇ ಪ್ರಶ್ನೆಯಲ್ಲಿ (ಇ) ಪ್ರಶ್ನೆಗೆ ಉತ್ತರವಾಗಿ ಮೂರು ಕಾರಣಗಳನ್ನು ಕೊಟ್ಟು ಅದರ ಆಧಾರದಮೇಲೆ ಪರಿಶೀಲಿಸಬಹುದಾಗಿದೆ ಎಂದು ಹೇಳಿದ್ದಿರಿ. ಈಗಾಗಲೇ ಐದನೇ ವಿತ್ತೀಯ ಆಯೋಗದವರ ವರದಿ ಬಂದಿದೆ. ತೆರಿಗೆಯನ್ನು ಹೆಚ್ಚಿಸುವ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಿದ್ದೀರಿ, ಅದರ ವರದಿ ಯಾವಾಗ ಬರಬಹುದು ಮತ್ತು ನೌಕರರುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎರಡನೆಯದಾಗಿ ಈಗ ತಾವು ಪಾರ್ಟ್ ಗವರ್ನಮೆಂಟ್ ಈಗ ಇರುವುದರಿಂದ ಪಾರ್ಟಿಯ ಡಿಸಿಷನ್ ಅನುಸರಿಸಬೇಕಾಗಿತ್ತೆ ಎಂದು ಹೇಳಿದಿರಿ. ತಮ್ಮ ಪಾರ್ಟಿಯವರು ಈ ಬಗ್ಗೆ ಏನು ಡೈರಕ್ಷನ್ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು ; ಮೂರನೆಯದಾಗಿ ನಿವೃತ್ತಿವೇತನ ಪಡೆಯುವವರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಮೊನ್ನೆತಾನೆ ಇಂದಿರಾಗಾಂಧಿಯವರು ಕೇಂದ್ರನರ್ಕಾರದ ನಿವೃತ್ತನೌಕರರಿಗೆ 10 ರೂಪಾಯಿಗಳಷ್ಟು ಸಂಬಳವನ್ನು ಹೆಚ್ಚು ಮಾಡಿದ್ದಾರೆ. ಅದೇ ಪ್ರಕಾರ ನಮ್ಮ ರಾಜ್ಯದ ನಿವೃತ್ತ ನೌಕರರಿಗೂ ಹೆಚ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದವರು ತಮ್ಮ ನಿವೃತ್ತ ನೌಕರರಿಗೆ 10 ರೂಪಾಯಿಗಳನ್ನು ಮೊನ್ನೆ ಹೆಚ್ಚಿಸಿರಬಹುದು. ಆದರೆ ನಾವು ಒಂದೂವರೆ ವರ್ಷದ ಹಿಂದೆಯೇ ಕೊಟ್ಟಿದ್ದೇವೆ. ಆದ್ದರಿಂದ ಕೇಂದ್ರನರ್ಕಾರದವರು ಏನೂ ದೊಡ್ಡ ಕಾರ್ಯಸಾಧನೆ ಮಾಡಿದಹಾಗೆ ಆಗಲಿಲ್ಲ. 5ನೇ ವಿತ್ತೀಯ ಆಯೋಗದವರ ವರದಿಯನ್ನು ನೋಡಬೇಕಾಗಿದೆ ಎಂದು ಹೇಳಿರುವುದು ನಿಜ. ಈಗ ಅವರ ವರದಿ ಬಂದಿದೆ. ಆ ಬಗ್ಗೆ ನೆನ್ನೆ ಇಲ್ಲಿ ಪ್ರಸ್ತಾಪಕೂಡ ಆಗಿದೆ. ರಿಸೋರ್ನಸ್ ಅಂಡ್ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರು ತಮ್ಮ ವರದಿಯನ್ನು ಇನ್ನು ಎರಡು ತಿಂಗಳಲ್ಲಿ ಕೊಡಬಹುದೆಂದು ಆಶೆ ಮಾಡುತ್ತೇನೆ. ನಾನ್-ಗೆಜೆಟೆಡ್ ನೌಕರರಿಗೆ ಏನೂ ಮಾಡಲಿಲ್ಲವೆಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು. ತುಕೋಳ್ ಆಯೋಗವನ್ನು ನೇಮಕ ಮಾಡಿದಮೇಲೆ ಅವರು ಕೊಟ್ಟಂತಹ ಇಂಟೀರಮ್ ರಿಪೋರ್ಟ್‌ಗಳಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ತುಕೋಳ ಆಯೋಗವನ್ನು ನೇಮಕ ಮಾಡುವುದಕ್ಕೆ ಮೊದಲು ಕೂಡ ಅನೇಕ ಸಲ ತುಟ್ಟಿಭತ್ಯ ಹೆಚ್ಚು ಮಾಡಿದ್ದೇವೆ. ಅಲ್ಲದೆ ಮೊನ್ನೆತಾನೆ ಕೇಂದ್ರನರ್ಕಾರದ ನೌಕರರಿಗೆ ಸಿಗತಕ್ಕಂಥ ತುಟ್ಟಿಭತ್ಯದ ಮಟ್ಟದಲ್ಲಿ ನಮ್ಮ ನೌಕರರಿಗೂ ತುಟ್ಟಿಭತ್ಯ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಅಲ್ಲದೆ ಆಯೋಗದವರು ಸಿ.ಸಿ.ಎ. ಮತ್ತು ಎಚ್.ಆರ್.ಎ. ಬಗ್ಗೆ ಏನು ಶಿಫಾರಸ್ ಮಾಡಿದ್ದರೋ ಅದನ್ನು ಅಂಗೀಕರಿಸಿದ್ದೇವೆ. ಇದರ ಜೊತೆ ಏನೂ ಮಾಡಲಿಲ್ಲವೆಂದು ಆಗುವುದಿಲ್ಲ. ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅಷ್ಟನ್ನೂ ಮಾಡಿದ್ದೇವೆ. ಹಣದ ಅನುಕೂಲವಾದರೆ ಮತ್ತೆ ಹೆಚ್ಚು ಮಾಡುತ್ತೇವೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ತುಕೋಳ್ ಕಮಿಷನ್‌ರವರ ವರದಿಯನ್ನು ಸಂಪೂರ್ಣವಾಗಿ ಅಂಗೀಕಾರ ಮಾಡುತ್ತೀರಾ ಹೇಗೆ ? ತುಕೋಳ್ ಕಮಿಷನ್ನಿನವರು ಕೆಲವೊಂದು ಇಲಾಖೆಗಳನ್ನು ಹೆಚ್ಚು ಮಾಡಿರುವುದನ್ನು ತೆಗೆಯಬೇಕೆಂದು ಎಂದು ಹೇಳಿದ್ದಾರೆ. ಎಂದರೆ ಡಿವಿಜನಲ್ ಕಮಿಷನರ ಪೋಸ್ಟ್‌ಗಳನ್ನು ರದ್ದು ಮಾಡಬೇಕು ಹಾಗೂ ಇನ್ನೂ ಕೆಲವು ಪೋಸ್ಟ್‌ಗಳನ್ನು ಕಡಿಮೆ ಮಾಡಬಹುದು ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ ? ಮತ್ತು ಈಗ ಕೆಲವು ನಾಲ್ಕನೆ ದರ್ಜೆ ನೌಕರರನ್ನು ಹಾಗೂ ಲೋಕರ್ ಕ್ಯಾಂಡಿಡೇಟುಗಳಾಗಿರುವವರನ್ನು ರಿಟ್ರೆಂಚ್ ಮಾಡಬೇಕೆಂದು ಇರುವುದನ್ನು ರೆಗ್ಯುಲರೈಸ್ ಮಾಡುವ ಯಾವುದಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಇದರ ಬಗ್ಗೆ ಸರಕಾರದವರ ಅಭಿಪ್ರಾಯ ಹೇಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ತುಕೋಳ್ ಆಯೋಗದ ಸಂಪೂರ್ಣ ಶಿಫಾರಸುಗಳನ್ನು ನಾವು ಜಾರಿಗೆ ತಂದರೆ ನಾನು ಆಗಲೇ ಹೇಳಿದಹಾಗೆ ಸರಕಾರಕ್ಕೆ ವರ್ಷಕ್ಕೆ ಸುಮಾರು 22 ಕೋಟಿ ರೂಪಾಯಿಗಳಷ್ಟು ಹೆಚ್ಚು ಖರ್ಚು ಬರುತ್ತದೆ. ಇದರಲ್ಲಿ ಈಗಾಗಲೇ ನರಕಾರ ಮೂರುವರೆ ಕೋಟಿಯಷ್ಟು ಖರ್ಚಿನ ಶಿಫಾರಸುಗಳನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಇನ್ನುಳಿದ ಕೆಲವು ಶಿಫಾರಸುಗಳಲ್ಲಿ ಅವರು ಹೇಳಿರುವುದು ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಓವರ್ ಸ್ಟಾಫ್ ಇದೆ. ಇದನ್ನು

(ಶ್ರೀ ರಾಮಕೃಷ್ಣ ಹೆಗಡೆ)

ಕಡಿಮೆ ಮಾಡಬಹುದು. ಮತ್ತು ಇದನ್ನು ಮಾಡಿದರೆ ಸುಮಾರು ಒಂದುಕೋಟಿ ರೂಪಾಯಿಗಳಷ್ಟು ಉಳಿತಾಯ ಮಾಡಬಹುದು. ಇನ್ನು ಕೆಲವು ಡಿಪಾರ್ಟ್‌ಮೆಂಟಿನಲ್ಲಿ ನೂರಕ್ಕೆ ಹತ್ತರಷ್ಟು ಪ್ರೊಪೇರೇಟಾದಫೆಲೆ ರಿಟ್ರೆಂಚ್ ಮಾಡಬಹುದು. ಇದು ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವವರನ್ನು ರೆಗ್ಯುಲರೈಸು ಮಾಡಬೇಕಾಗುತ್ತದೆ ಎಂದು ಹೇಳಿದರೆ ಇರತಕ್ಕ ಪರ್ಮನೆಂಟು ನೌಕರರುಗಳನ್ನೇ ತೆಗೆದುಹಾಕುವ ಪ್ರಶ್ನೆ ಬಂದರೆ ಅದರಿಂದ ಬಹಳ ಜನಕ್ಕೆ ಅನ್ಯಾಯವಾಗುತ್ತದೆ ಮತ್ತು ಜನರಲ್ಲಿ ಒಂದು ರೀತಿಯಾದ ಕಳವಳಕ್ಕೆ ಅವಕಾಶವಾಗುತ್ತದೆ. ಇದನ್ನು ಮಾನ್ಯ ಸದಸ್ಯರೂ ಕೂಡ ವಿಚಾರ ಮಾಡಬೇಕು. ಇದನ್ನು ಕೆಲವೊಂದು ಇಲಾಖೆಗಳ ಮೂಲಕ ವರಮಾನವನ್ನು ಹೆಚ್ಚು ಮಾಡಿಕೊಳ್ಳ ಬಹುದು ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಇದರಿಂದ ಸುಮಾರು 3—4 ಕೋಟಿಯಷ್ಟು ವರಮಾನ ಬರಬಹುದು. ಲಕ್ಸುರಿ ಗುಡ್ಸ್‌ಮೇಲೆ ಈಗಿರುವ ಸೇಲ್ಸ್‌ಟ್ಯಾಕ್ಸ್ ಕಡಿಮೆ. ಇದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಿಕೊಳ್ಳಬಹುದು. ಈಗ ಇಲ್ಲಿ ಸೇಲ್ಸ್‌ಟ್ಯಾಕ್ಸನ್ನು ಶೇಕಡಾ ಮೂರರಷ್ಟು ಎಂದು ಏರಿಸಿದರೆ ಮುಂದೆ ಇದರಿಂದ ಏನು ಪರಿಣಾಮವಾಗುತ್ತದೆ ಎಂದರೆ ಇಂದು ಇಲ್ಲಿ ಒಬ್ಬರು ಒಂದು ರೆಫ್ರಿಜರೇಟರನ್ನು ಖರೀದಿ ಮಾಡಿದರೆ ಬೆಲೆ ಹೆಚ್ಚು ಎಂದು ಬೊಂಬಾಯಿ ಅಥವಾ ಮದ್ರಾಸಿನಲ್ಲಿ ಕೊಂಡುಕೊಳ್ಳುತ್ತಾರೆ. ಏಕೆಂದರೆ ಅಲ್ಲಿ ಸೇಲ್ಸ್‌ಟ್ಯಾಕ್ಸ್ ದರ ಬಹಳ ಕಡಿಮೆ ಇದೆ. ಮತ್ತು ರೆವೆನ್ಯೂ ಸ್ಟ್ಯಾಂಪು ಈಗಿರುವ ಹತ್ತು ಪೈಸಾದಿಂದ ಹದಿನೈದು ಪೈಸಾದವರೆಗೆ ಹೆಚ್ಚು ಮಾಡಬಹುದು ಹಾಗೇ ಇನ್ನೂ ಕೆಲವು ಸೂಚನೆಗಳನ್ನು ಅವರು ತಮ್ಮ ವರದಿಯಲ್ಲಿ ಮಾಡಿದ್ದಾರೆ. ಮತ್ತೆ ಮದುವೆಗೆ ರಿಜಿಸ್ಟರು ಮಾಡುಮಾಗ ರಿಜಿಸ್ಟ್ರೇಷನ್ ಫೀ ಜಾಸ್ತಿ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಮದುವೆ ರಿಜಿಸ್ಟ್ರೇಷನ್‌ಗೆ ಫೀ ಹಾಕುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್ ಮದುವೆಯಾಗುವವರಿಗೆ ಫೀಸು ಜಾಸ್ತಿ ಮಾಡುವುದಿಲ್ಲ. ಅವರು ಮದುವೆ ಮಾಡಿಕೊಂಡಮೇಲೆ ಹಾಕಬಹುದು. (ನಗು). ಹೀಗೆ ಬಹಳ ಮಹತ್ವವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಇದರಿಂದ ಸುಮಾರು ಮೂರರಿಂದ ಐದುಕೋಟಿಯವರೆಗೆ ವರಮಾನ ಬರುತ್ತದೆ. ನಾನು ಆಗಲೇ ಹೇಳಿದ ಹಾಗೆ ಈ ಆಯೋಗದ ಸೂಚನೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾದರೆ ಒಂದು ವರ್ಷಕ್ಕೆ ಸುಮಾರು 22 ಕೋಟಿಯವರೆಗೆ ಖರ್ಚು ಬರುತ್ತದೆ. ಮಾನ್ಯ ಸದಸ್ಯರಲ್ಲಿ ಇನ್ನೂ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಸರಕಾರದ ನೌಕರರುಗಳು ನಮ್ಮ ಇಡಿ ಜನತೆಯ ಎಂದರೆ ಸುಮಾರು ಎರಡುಕೋಟಿ ಇರುವ ಜನಸಂಖ್ಯೆಯಲ್ಲಿ ಶೇಕಡಾ ಒಂದರಷ್ಟು ಎಂದರೆ ಕೇವಲ ಎರಡು ಲಕ್ಷ ಜನರಿದ್ದಾರೆ. ಇದರಲ್ಲಿ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳೂ ಸೇರುತ್ತವೆ. ಎರಡು ಲಕ್ಷ ಇರುವ ನೌಕರರು ಗಳಿಗಾಗಿ ಎಷ್ಟು ಪರ್ಸೆಂಟು ಖರ್ಚು ಬರುತ್ತಿದೆ ಎಂದರೆ ಈಗಾಗಲೇ ಶೇಕಡ 46 ಪರ್ಸೆಂಟು ಇದೆ. ಮುಂದೆ ಇನ್ನೂ 22 ಕೋಟಿಯಷ್ಟು ಖರ್ಚುಮಾಡುವುದಾದರೆ ತುಕೋಳ್ ಆಯೋಗದಂತೆ ಇರುವ ನೌಕರರುಗಳಿಗಾಗಿ ಖರ್ಚು ಸುಮಾರು ಶೇಕಡಾ 52ರಷ್ಟು ಬರುತ್ತದೆ. ಇದನ್ನು ಮಾಡಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡಬೇಕು. ಸರಕಾರದ ನೌಕರರುಗಳ ಬಗ್ಗೆ ಇವೆಲ್ಲ ವಿಚಾರ ಗಳನ್ನು ವಿಚಾರ ಏನಿಮಯ ಮಾಡಲಕ್ಕೆ ಸರಕಾರಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಬೋಳ ರಘುರಾಮ ಶೆಟ್ಟಿ.—ಸ್ವಾಮಿ, 1968ನೇ ಏಪ್ರಿಲ್‌ನಿಂದ ನಾನ್-ಗೆಜೆಟೆಡ್ ನೌಕರರಿಗೆ ಡಿಯರ್‌ನೆಸ್ ಅಲೋಯನ್ಸ್ ಜಾಸ್ತಿ ಮಾಡಿದ್ದೀರಿ. ಆದರೆ ನೀವು ಕೊಟ್ಟಂಥ ಡಿಯರ್‌ನೆಸ್ ಅಲೋಯನ್ಸ್‌ನ್ನು 1968ನೇ ಏಪ್ರಿಲ್‌ನಿಂದ 1968ನೇ ಡಿಸೆಂಬರ್‌ರವರೆಗೆ ಏಕಾಏಕಿ ಫಿಕ್ಸ್‌ಡ್ ಡಿಪಾಸಿಟ್ ಇಟ್ಟಿದ್ದು ಅನ್ಯಾಯವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ವರ್ಷದ ಪರಿಸ್ಥಿತಿ ಹಾಗೆ ಬಂತು. ಮತ್ತೆ ಅದನ್ನು ಮಧ್ಯದಲ್ಲಿ ಕೊಡತಕ್ಕಂಥ ಪರಿಸ್ಥಿತಿ ಬಂತು. ಆಗ ಓವರ್‌ಡ್ರಾಫ್ಟ್ ಇದ್ದಿದ್ದುದರಿಂದ ಅವರಿಗೆಲ್ಲರಿಗೂ ಕೆಲವು ಭಾಗವನ್ನು 1968ರ ಏಪ್ರಿಲ್‌ನಿಂದ ಡಿಸೆಂಬರ್‌ರವರಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ರೂಪದಲ್ಲಿ ಕೊಟ್ಟಿದ್ದೇವೆ. 1969ನೇ ಜನವರಿಯಿಂದ ಕ್ಯಾಷ್ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಉತ್ತರದಲ್ಲಿ ತಾವು ಆಡಳಿತ ಪಕ್ಷದ ಆದೇಶದಂತೆ ಆಡಳಿತ ನಡೆಯುತ್ತದೆ ಎಂದು ಈಗತಾನೇ ತಿಳಿಸಿದಿರಿ. ತಮ್ಮ ಆಡಳಿತ ಪಕ್ಷ ಈ ತುಕೋಳ್ ವರದಿಯ ಬಗ್ಗೆ ಏನು ತೀರ್ಮಾನ ಮಾಡಬೇಕು ಎನ್ನುವ ಆದೇಶ ಏನಾದರೂ ಕೊಟ್ಟಿದೆಯೇ ? ಅಥವಾ ಕೊಟ್ಟಿಲ್ಲವೇ, ಈ ಬಗ್ಗೆ ಚರ್ಚೆ ನಡೆದಿಲ್ಲವೇ ? ಎರಡನೆಯದಾಗಿ ಮುಂದಿನ ಬಜೆಟ್ ಸೆಷನ್ ಹೊತ್ತಿಗೆ ನನ್ನ ಮದುವೆ ಬರುತ್ತದೆ ಅಲ್ಲಿಯವರೆಗೆ ತೆರಿಗೆ ಹಾಕುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆಗೆ ಕಾಂಗ್ರೆಸ್ ಪಕ್ಷ ಸರ್ಕಾರಕ್ಕೆ ಏನು ಆದೇಶ ಕೊಟ್ಟಿದೆ ಎಂದು ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಗೆ ಬರೆದು ತಿಳಿದುಕೊಳ್ಳಬಹುದು. ಅವರು ಕೇಳಿದ ವಿಚಾರ ಈ ಪ್ರಶ್ನೆಗೆ ಸಂಬಂಧಪಟ್ಟಿದ್ದಲ್ಲ. ಎರಡನೇ ಪ್ರಶ್ನೆಗೆ ಉತ್ತರ ಹೇಳಬೇಕಾದ ಅಗತ್ಯ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, ಈ ತುಕೋಳ್ ವೇತನ ಆಯೋಗ ಬೇಕಾದಂಥ ಹೆಚ್ಚಿನ ಹಣ ಯಾವರೀತಿ ಸಂಗ್ರಹಿಸಬೇಕು ಎನ್ನುವುದನ್ನು ಶಿಫಾರಸು ಮಾಡಿದ್ದಾರೆ. ಹೆಚ್ಚಿನ ತೆರಿಗೆ ಹಾಕುವುದಾಗಲಿ ಅಥವಾ ನಿಕರನ್ನು ಕಡಿಮೆ ಮಾಡುವುದಾಗಲಿ ಅಥವಾ ವಿತ್ತೀಯ ಆಯೋಗದಂತೆ ಹೆಚ್ಚಿನ ಹಣ ದೊರೆತರೆ ಇದನ್ನು ಜಾರಿಗೆ ತರುತ್ತೀರಿ ಇಲ್ಲದಿದ್ದರೆ ಈ ತುಕೋಳ್ ವೇತನದ ಆಯೋಗದ ವರದಿಯನ್ನು ಕೈಬಿಡುವ ಪ್ರಶ್ನೆ ಬರಬಹುದೇ ?

Sri RAMAKRISHNA HEGDE.—It is an hypothetical question.

ಶ್ರೀ ಶರಣಗೌಡ ಇನಾಂದಾರ್.—ಸ್ವಾಮಿ, ಪ್ರಶ್ನೆ 140 (322) (ಅ) ಗೆ ಉತ್ತರವಾಗಿ ವೇತನಾ ಆಯೋಗದವರು ಮಾಡಿರುವ ಶಿಫಾರಸುಗಳ ಮೇರೆಗೆ ಎಷ್ಟು 20 ಎಸ್.ಆರ್.ಪಿ. (1) 1969ನೇ ಕ್ರಮಾಂಕದ 10-3-1969 ನೇ ದಿನಾಂಕದ ಸರ್ಕಾರಿ ಆದೇಶದ ಪ್ರಕಾರ ತುಟ್ಟಿ ಭತ್ಯ, ಮನೆ ಬಾಡಿಗೆ ಭತ್ಯ, ನಗರ ಪರಿಹಾರ ಭತ್ಯಗಳನ್ನು ಈಗಾಗಲೇ ಮುಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಈ ತುಕೋಳ್ ಆಯೋಗವನ್ನು ನೇಮಿಸುವುದಕ್ಕಿಂತ ಮುಂಚೆ ಎನ್.ಜಿ.ಓ. ಗಳು ಏನು ರಪ್ರೆಸೆಂಟೇಷನ್ ಕೊಟ್ಟಿದ್ದರು ? ಅದರಲ್ಲಿ ಕೊಟ್ಟಿದಂಥ ಬೇಡಿಕೆ ಏನು ? ಈಗ ಹೊಸದಾಗಿ ಇಟ್ಟಿರುವ ಬೇಡಿಕೆಗಳು ಏನು ? ಇದರಲ್ಲಿ ವ್ಯತ್ಯಾಸ ಏನು ಇದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ವಿಷಯದಲ್ಲಿ ಈಗಲೇ ಏನೂ ಹೇಳಲಾರೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ವರದಿಯಲ್ಲಿ ತಿಳಿಸಿದ್ದೀರಿ. ಟ್ಯಾಕ್ಸಸ್ ಅಂಡ್ ರಿಸೋರ್ಸಸ್ ಕಮಿಟಿಯವರು ಕೊಟ್ಟ ವರದಿಯಮೇಲೆ ಹಾಗೂ ಐದನೆಯ ವಿತ್ತೀಯ ಆಯೋಗದವರಿಗೆ ಈಗ ಏನು ಒಂದು ವರದಿಯನ್ನು ಒಪ್ಪಿಸಿದ್ದೀರೋ ಅದರ ಆಧಾರದ ಮೇಲೆ, ನಮ್ಮ ರಾಜ್ಯದ ಸಂಪನ್ಮೂಲಗಳ ಆಧಾರ ಏನು ಇದೆಯೋ ಅದರ ಆಧಾರದ ಮೇಲೆ ಈ ತುಕೋಳ್ ವೇತನಾ ಆಯೋಗದ ಕಮಿಟಿಯ ವರದಿಯನ್ನು ಅವಲಂಬಿಸಿರುತ್ತದೆ ಎಂದು. ಈ ದೃಷ್ಟಿಯಿಂದ ನಾನು ಹೇಳುವುದು ಐದನೇ ಆರ್ಥಿಕ ಆಯೋಗದವರು ಈಗಾಗಲೇ 18 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಖೋತಾ ಹಾಕಿದ್ದಾರೆ. ಆದುದರಿಂದ ಆ ಹಣ ಬರದೇ ಹೋದರೆ ಈ ಆಯೋಗದ ವರದಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ತಿಳಿದುಕೊಳ್ಳಬಹುದೇ ? ಎರಡನೆಯದಾಗಿ ತಾವು ತಿಳಿಸಿದಿರಿ ಡೆವಾಕ್ಸಟಿಕ್ ಸೆಟ್ ಅಪ್‌ನಲ್ಲಿ ಯಾವ ಸರ್ಕಾರ ರನ್ ಮಾಡುತ್ತದೋ ಅದು ಆ ಒಂದು ಪಕ್ಷದ ತೀರ್ಮಾನವನ್ನು ಒಪ್ಪಬೇಕು ಎಂದು. ಹಾಗಾದರೆ ಕಾಂಗ್ರೆಸ್ ಪಕ್ಷ ಈ ಒಂದು ಆಯೋಗದ ತೀರ್ಮಾನವನ್ನು ಒಪ್ಪಿದ್ದಾರೆಯೇ ಅಥವಾ ವಿರೋಧ ಮಾಡಿದ್ದಾರೆಯೇ ? ಅದು ಹೇಗಾದರೂ ಇರಲಿ ತಾವು ಈ ಆಯೋಗದ ತೀರ್ಮಾನವನ್ನು ಒಪ್ಪಿಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ 18 ಕೋಟಿ ರೂಪಾಯಿ ಖೋತಾ ಏನು ಇದೆಯೋ ಅದು ಸಿಕ್ಕಿದರೆ ಏನು ಮಾಡುತ್ತೀರಿ, ಸಿಕ್ಕದೆ ಹೋದರೆ ಏನು ಮಾಡುತ್ತೀರಿ ಎನ್ನುವ ಬಗ್ಗೆ ಈಗಲೇ ಉತ್ತರ ಹೇಳಲು ಆಗುವುದಿಲ್ಲ. ಎರಡನೆಯದಾಗಿ ಕಾಂಗ್ರೆಸ್ಸಿನ ಪಕ್ಷದ ತೀರ್ಮಾನ ಏನಾದರೂ ಇದ್ದರೆ ಆ ಕಾರ್ಯಕಲಾಪಗಳಿಗೂ, ಈ ಹೌಸ್‌ನ ಕಾರ್ಯಕಲಾಪಗಳಿಗೂ ಸಂಬಂಧವಿಲ್ಲ. ಕಾಂಗ್ರೆಸ್ಸಿನ ಪಕ್ಷ ಏನು ತೀರ್ಮಾನ ಮಾಡಿಕೊಂಡರೂ ಈ ಹೌಸ್‌ಗೆ ನಾನು ಜವಾಬ್ದಾರ.

ಶ್ರೀ ನದಾಶಿವಪ್ಪ ಪಾಟೀಲ್.—ತುಕೋಳ್ ಆಯೋಗದವರು ಮಂತ್ರಿಗಳ ಸಂಖ್ಯೆಯನ್ನು ಕಡಮೆ ಮಾಡುವುದರ ಬಗ್ಗೆಯಾಗಲೀ, ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ತೆಗೆದು ಹಾಕುವುದರ ಬಗ್ಗೆಯಾಗಲೀ ಏನಾದರೂ ಸಿಫಾರಸು ಮಾಡಿದ್ದಾರೆಯೇ ? ಹಾಗೆ ಸಿಫಾರಸು ಮಾಡಿದ್ದ ಪಕ್ಷದಲ್ಲಿ ಅದರ ಬಗ್ಗೆ ಯಾವ ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಮಾಡಿರುವ ಸಿಫಾರಸು ಕಾಪಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ. ಅವರ ಕಕ್ಷೆಯಲ್ಲಿ ಯಾವ ಯಾವ ವಿಚಾರಗಳಿದ್ದುವು ಅವುಗಳ ಬಗ್ಗೆ ಸಿಫಾರಸು ಮಾಡಿದ್ದಾರೆ. ಮಂತ್ರಿ ಮಂಡಲದ ವಿಚಾರ ಅವರ ಕಕ್ಷೆಯೊಳಗೆ ಪುಣ್ಯದಿಂದ ಬರಲಿಲ್ಲ. ಎರಡನೆಯದು ಆಡಳಿತಕ್ಕೆ ಸಂಬಂಧಪಟ್ಟಂಥ ಭಾಗವೇನಿವೆ ವರದಿಯಲ್ಲಿ ಅದನ್ನು ಸರ್ಕಾರ ಇನ್ನೂ ಪರಿಶೀಲನೆ ಮಾಡುತ್ತಿದೆ. ಡಿವಿಜನಲ್ ಕಮಿಷನರ್ ಹುದ್ದೆಯನ್ನು ಖೋತಾ ಮಾಡಬೇಕು ಎಂದು ಸೂಚಿಸಿದ್ದಾರೆ. ಇದರ ಬಗ್ಗೆ ಭಿನ್ನಾಭಿಪ್ರಾಯವಿರತಕ್ಕುದು ಸಾಧ್ಯ. ಇದಲ್ಲದೆ ಕೆಲವು ಬೇರೆ

(ಶ್ರೀ ರಾಮಕೃಷ್ಣ ಹೆಗಡೆ)

ಬೇರೆ ಇಲಾಖೆಗಳಲ್ಲಿ, ಉದಾಹರಣೆಗೆ ಪ್ಲಾನಿಂಗ್ ಇಲಾಖೆಯಲ್ಲಿ ಪ್ಲಾನಿಂಗ್ ಸೆಕ್ಶಿಯರಿ ಬೇಡ, ಹಣಕಾಸಿನ ಇಲಾಖೆಗೇ ಆ ಕೆಲಸವನ್ನು ಮಹಿಸಬೇಕು ಎನ್ನುವ ನಿಶ್ಚಾರಸು ಇದೆ. ಇದರ ಬಗ್ಗೆ ಕೂಡ ಭಿನ್ನಾಭಿಪ್ರಾಯವಿರುವುದು ಸಾಧ್ಯ. ಒಂದು ದೃಷ್ಟಿಯಿಂದ ಪ್ಲಾನಿಂಗ್ ಮತ್ತು ಫೈನಾನ್ಸ್ ಒಟ್ಟಿಗೆ ಹೋಗುವುದಾದರೂ ಫೈನಾನ್ಸ್ ಕೆಳಗೆ ಪ್ಲಾನಿಂಗ್ ಬಂದರೆ, ಪ್ಲಾನಿಂಗಿಗೆ ಲಿಮಿಟೆಡ್ ವಿಷನ್ ಆಗುತ್ತದೆ. ಅದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ತೀರ್ಮಾನ ತಗೆದುಕೊಳ್ಳಬೇಕಾಗುತ್ತದೆ.

Sri A. R. BADRINARAYAN.—What is the commitment to the Government in respect of the salaries and allowances of the Government officials if the Tukol Commission Report is given effect to ?

Sri RAMAKRISHNA HEGDE.—I have already answered this question.

ಶ್ರೀ ಮಹದೇವ್ ಜಿ. ಬಣಕಾರ್.—ಐದನೆಯ ಆರ್ಥಿಕ ಆಯೋಗಕ್ಕೆ ಸರ್ಕಾರ ಬೇಡಿಕೆಯನ್ನು ನಲ್ಲಿಸಿದಾಗ, ತುಕೋಳ್ ಆಯೋಗದ ವರದಿಯನ್ನು ಕಾರ್ಯಗತ ಮಾಡಿದರೆ ಬರಬಹುದಾದ ಖರ್ಚನ್ನೂ ಸೇರಿಸಿ ಒಟ್ಟು ಇಷ್ಟು ಹಣ ಬೇಕು ಎಂದು ಆಯೋಗದವರಿಗೆ ತಿಳಿಸಿದ್ದೀರಾ ? ತಿಳಿಸದೆ ಇದ್ದರೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಬಹಳ ಸ್ಪಷ್ಟವಾಗಿ ತಿಳಿಸಿದ್ದೇವೆ.

P. W. D. Roads in Coorg District pending repairs

140. Sri N. LOKAYYA NAIK (Virajpet).—

Will the Minister for Public Works be pleased to state :—

number of roads taken over by the Public Works Department in Coorg District, pending repairs, for more than five years and two years ?

Sri BASAVARAJ MAGAVI (Deputy Minister for Public Works).—

There are no such roads ; repairs have been effected to all the roads to the extent funds are available.

ಶ್ರೀ ಎನ್. ಲೋಕಯ್ಯ ನಾಯಕ್.—ಹತ್ತು ಮೈಲಿ ಇರುವ ರಸ್ತೆಯಲ್ಲಿ ಒಂದು ಮೈಲಿ ದುರಸ್ತಿ ಮಾಡಿದರೆ ದುರಸ್ತಿ ಮಾಡಿದಹಾಗಾಯಿತೇ ?

† ಶ್ರೀ ಬಸವರಾಜ ಮಾಗಾವಿ.—ಹಣದ ಅನುಕೂಲ ನೋಡಿಕೊಂಡು ಕೆಲಸ ಮಾಡಲಾಗಿದೆ. ಪ್ರತಿಯೊಂದು ರಸ್ತೆಗೂ 3 ವರ್ಷಗಳಿಂದ ಮಾಡಿರುವ ರಿಪೇರಿ ಬಗ್ಗೆ ಒಂದು ದೊಡ್ಡ ಸ್ಟೇಟ್‌ಮೆಂಟ್ ನನ್ನ ಬಳಿ ಇದೆ. ಅಧ್ಯಕ್ಷರು ಅನುಮತಿ ಕೊಟ್ಟರೆ ಅದನ್ನು ಸಭೆಯ ಟೇಬರ್‌ಮೇಲೆ ಇಡುತ್ತೇನೆ.

Mr. SPEAKER.—The Hon. Minister may place the statement on the Table of the House.

Smuggling of Foodgrains in Border Areas of the State

160. Sri B. M. IDINABBA (Mangalore).—

Will the Minister for State of Food and Civil Supplies be pleased to state :—

(*a*) whether Government is aware that regular smuggling of foodgrains is going on in border areas of the State ;

(*b*) whether Government is aware that Police force has remained silent without taking any action ;

(*c*) the strict measures that the Government has taken to prevent smuggling of foodgrains ?

Sri B. VITHALDAS SHETTY (Minister of State for Food and Civil Supplies).—

(*a*) Government is aware that smuggling of foodgrains is going on in the border areas but this is neither regular nor on a large scale.

(*b*) No, all possible precautions are taken by the Police Force.

(*c*) Check Posts have been established all along the borders of Mysore State to check movement of foodgrains. Mobile Squads have been established for patrolling in the border Districts. Mechanised boats have been provided of the police for patrolling by sea and river to prevent smuggling of foodgrains by country craft. A special cell in the Police Department under a Superintendent of Police with 4 Regional Centres at Mangalore, Gulbarga, Belgaum and Bangalore, each under a Deputy Superintendent of Police has been established to devote exclusive attention to the detection of food offences including smuggling of foodgrains.

ಶ್ರೀ ಬಿ. ಎಂ. ಇದಿನಬ್ಬ.—ಮೆಕೆನೈಜ್ಡ್ ದೋಣಿಗಳನ್ನು ಪೋಲೀಸರಿಗೆ ಒದಗಿಸಿದ್ದರೂ ಅವು ದಿನವಹಿ ಹಾಳಾಗುವುದರಿಂದ ಪೋಲೀಸರು ಹೋಗಿ ನೋಡಲು ಅವಕಾಶವಿಲ್ಲದೆ ಕಳ್ಳಸಾಗಾಣಿಕೆಗೆ ಅವಕಾಶವಾಗಿರುವುದು ಗಮನಕ್ಕೆ ಬಂದಿದೆಯೇ ?

† ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಮೆಕೆನೈಜ್ಡ್ ಬೋಟ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುವುದು ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಒಂದು ವರ್ಷಕ್ಕೆ ಮೊದಲೇ ಈ ಪ್ರಶ್ನೆಗಳನ್ನು ಕೇಳಿದ್ದಾರೆ. ಈಗ ಸೂಕ್ತ ಕ್ರಮ ತೆಗೆದುಕೊಂಡಮೇರೆ ಕಳ್ಳ ಸಾಗಾಣಿಕೆ ಕಡಮೆಯಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ವ್ಯವಸ್ಥಿತ ರೀತಿಯಲ್ಲಿ ಕಳ್ಳಸಾಗಾಣಿಕೆ ನಡೆಯುತ್ತಿಲ್ಲವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದು ಕಳ್ಳ ಸಾಗಾಣಿಕೆಯಾಗದೆ ಖಾದಿಧಾರಿಗಳ ಸಾಗಾಣಿಕೆಯಾಗಿರುವುದರಿಂದ ತಡೆಗಟ್ಟುವುದಕ್ಕೆ ಕಷ್ಟವಾಗಿದೆಯಲ್ಲವೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಪ್ರದೇಶದಲ್ಲಿ ಖಾದಿ ಹಾಕಿಕೊಳ್ಳುತಕ್ಕವರ ಸಂಖ್ಯೆ ಹೆಚ್ಚಾಗಿರುವುದರಿಂದ ಮತ್ತು ಶ್ರೀ ಭಾಸ್ಕರಶೆಟ್ಟರೂ ಖಾದಿ ಹಾಕುವುದರಿಂದ ಬಹಳ ಕಷ್ಟವಾಗಿದೆ.

Increasing the speed of trains running between Chamarajanagar-Mysore

172. Sri S. PUTTASWAMY (Chamarajanagar).—

Will the Minister for Public Works be pleased to state :—

(*a*) whether State Government has recommended to Government of India to increase the speed of the trains running between Mysore to Chamarajanagar ;

(*b*) if so, the action taken thereon ?

Sri BASAVARAJ MAGAVI (Deputy Minister for Public Works).—

(*a*) No.

(*b*) Does not arise.

ಶ್ರೀ ಎಸ್. ಪುಟ್ಟಸ್ವಾಮಿ.—ಮೈಸೂರು-ಚಾಮರಾಜನಗರಗಳ ಮಧ್ಯೆ ನಂಜನಗೂಡು-ಚಾಮರಾಜನಗರಗಳ ಮಧ್ಯೆ ಇರುವ ಕಂಬಿ 40 ಪೌಂಡಿನದು, ಅದರಿಂದ ರೈಲಿನ ವೇಗ ಹೆಚ್ಚಿಸಲು ಸಾಧ್ಯವಿಲ್ಲ ಎಂದು, ಕಳೆದ ತಿಂಗಳು ಕೇಂದ್ರ ಸರಕಾರದ ಉಪಮಂತ್ರಿಗಳು ಬಂದಾಗ ನಿಯೋಗ ಪೊಂದು ಮನವಿ ಸಲ್ಲಿಸಿದಾಗ ರಾಜ್ಯ ಸರಕಾರದೊಡನೆ ವ್ಯವಹರಿಸಿ ಬೇಗ ವೇಗವನ್ನು ಜಾಸ್ತಿ ಮಾಡಲು ಕಂಬಿಯನ್ನು ಬದಲಾಯಿಸಲಾಗುವುದೆಂದು, ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಅವರು ನಮಗೆ ಭರವಸೆ ಕೊಟ್ಟರು ; ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಬಸವರಾಜ ಮಾಗಾವಿ.—ಬಂದಿದೆ. ಕೇಂದ್ರ ಸರಕಾರದಿಂದ ಬಂದ ಆಯೋಗಕ್ಕೆ ರಾಜ್ಯ ಸರಕಾರ ಮನದಟ್ಟಾಗುವಹಾಗೆ ಒತ್ತಾಯಮಾಡಿದೆ. ಆದರೆ ಕೇಂದ್ರ ಸರಕಾರ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಸ್. ಪುಟ್ಟಸ್ವಾಮಿ.—ಈ ಲೈನಿನಲ್ಲಿ 40 ಪೌಂಡ್ ಕಂಬಿಗಳ ಜಾಗದಲ್ಲಿ 60 ಪೌಂಡ್ ಕಂಬಿ ಆಥವ ಇನ್ನೂ ಜಾಸ್ತಿಯ ಕಂಬಿ ಹಾಕಿ ರೈಲಿನ ವೇಗ ಜಾಸ್ತಿಮಾಡಬಹುದು. ಹಾಗೆ ಮಾಡದಿರುವುದರಿಂದ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿ ನಷ್ಟವಾಗುತ್ತಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ರೈಲುವೆ ಸೆಂಟ್ರಲ್ ಸಬ್ಜೆಕ್ಟ್. ಮಾನ್ಯ ಸದಸ್ಯರು ಹೇಳುವುದು ನಿಜ. ನಾವು ಕೇಂದ್ರಕ್ಕೆ ತಿಳಿಸಿದ್ದೇವೆ, ಇನ್ನೊಂದು ಸಲ ಬರೆಯುತ್ತೇವೆ.

Classification, Grading and Improvements of Roads

173. Sri S. PUTTASWAMY (Chamarajanagar).—

Will the Minister for Public Works be pleased to state :—

(*a*) whether Government intends to upgrade the Venkatayyana. chatra—Kodivagane—Bisolvadi Road (ii) Diddarayapet—Alur—Kagalavad Road (iii) Udigale-Sagade—Kabbali Road (iv) Chandkavadi-Kagalvadi Honganur Road (v) Ummathur—Nallur—Aldur Road (vi) Narayanadevanapura Panyada Hundi Road (vii) Terakanambi Kothalavadi—Yanaganahalli road and classify them as district roads and allot required grants as per rules ;

(*b*) whether Government intends to upgrade (i) Gundlupet—Chamarajanagar road (ii) Biligere Rangana Hills road (iii) Chamarajanagar—T. Narsipur Road (iv) Hardanahalli—Arkalvadi—Yaraganahalli road (v) Kavalande—Yelandur—Kollegal Road; and (vi) Veeranapura-Harave and Heggavadi Road and classify them as State Highways and allot funds as per rules;

(*c*) whether Government intends to upgrade Nanjanagud—Hassarur Ghat road and classify it as National Highway and allot funds as per rules?

Sri K. LAKKAPPA (Minister for Public Works).—

(*a*) Not for the present.

(*b*) Not for the present.

(*c*) No.

ಶ್ರೀ ಎಸ್. ಪುಟ್ಟಸ್ವಾಮಿ.—ನಾನು ಪ್ರಶ್ನೆಯಲ್ಲಿ ತಿಳಿಸಿರುವ ರಸ್ತೆಗಳಲ್ಲಿ ಕೆಲವು ಒಂದು ತಾಲ್ಲೂಕು ಹೆಡ್‌ಕ್ವಾರ್ಟರಿನಿಂದ ಇನ್ನೊಂದು ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಹೋಗುತ್ತವೆ, ಇನ್ನು ಕೆಲವು ಒಂದು ರಾಜ್ಯದ ಎಲ್ಲೆಯಿಂದ ಇನ್ನೊಂದು ರಾಜ್ಯದ ಎಲ್ಲೆಯವರೆಗೆ ಹೋಗುತ್ತವೆ ಆದುದರಿಂದ ಇವುಗಳ ಪ್ರಾಮುಖ್ಯತೆ ಬಹಳವಾಗಿರುವುದರಿಂದ ಅದಷ್ಟು ಜಾಗ್ರತೆಯಾಗಿ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳುವುದು ನಿಜ. ರಸ್ತೆಗಳು ಎಲ್ಲಿಂದ ಎಲ್ಲಿಗೆ ಹೋಗುತ್ತವೆ, ಮತ್ತು ಎಷ್ಟು ವಾಹನಗಳು ಅವುಗಳಮೇರೆ ಸಂಚಾರಮಾಡುತ್ತವೆ ಮುಂತಾದ್ದೆಲ್ಲವನ್ನೂ ಗಮನಿಸಿ ಅನೇಕ ಕ್ಯಾಟಗರಿ ರಸ್ತೆಗಳನ್ನು ಮಾಡಿದ್ದೇವೆ. ಈಗಿರುವ ಕ್ಯಾಟಗರಿಯಿಂದ ಬೇರೆ ಕ್ಯಾಟಗರಿಗೆ ಬದಲಾಯಿಸಲು ಹಣಕಾಸಿನ ಸೌಲಭ್ಯವಿಲ್ಲದಿರುವುದು ಒಂದು ಕಾರಣ, ಮತ್ತು ಪ್ರಯಾಣ ಮಾಡುವವರು ಹೆಚ್ಚಾಗಿಲ್ಲದಿರುವುದು ಇನ್ನೊಂದು ಕಾರಣ. ಈ ಎರಡು ಕಾರಣಗಳಿಂದ ನದ್ಯಕ್ಕೆ ಅಪ್‌ಗ್ರೇಡ್ ಮಾಡುವ ಪರಿಸ್ಥಿತಿಯಲ್ಲಿಲ್ಲ.

Industrial Dispute regarding termination of Deccan Herald and Prajavani Employees

324. Sri M. S. KRISHNAN (Malleswaram).—

Will the Mister for Law, Labour and Parliamentary Affairs be pleased to state :—

(*a*) whther tb Bangalore Newspaper Employees' Union had raised an industrial Dispute regarding the illegal termination of services of employees by the Management of 'Deccan Herald' and 'Prajavani' (*i.e.*, Printers (Mysore) P. Ltd., Bangalore);

(*b*) if so, when the Conciliation proceedings were initiated and when it concluded;

(*c*) when the final reports in respect of the dispute reached the Government;

(*d*) the further action taken by the Government to resolve the dispute?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) The report of failure of conciliation proceedings reached Government on 25th January, 1969.

(*c*) The final report reached Government on 3rd February, 1969.

(*d*) The dispute has been referred for adjudication to the Industrial Tribunal, Bangalore.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಟ್ರಿಬ್ಯೂನಲ್‌ಗೆ ಯಾವಾಗ ಹಾಕಲಾಯಿತು, ತಾರೀಖನ್ನು ತಿಳಿಸುವುದಕ್ಕೆ ಆಗುತ್ತದೆಯೇ?

† Sri K. PUTTASWAMY.—It was referred on 14-8-1969.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ಯಾವಾಗಲೂ ಸಹ ಯಾವುದಾದರೂ ಒಂದು ಕ್ವೆಗಾರಿಕಾ ವಿವಾದ ಬಂದರೆ ಅದನ್ನು ಲೇಬರ್ ಕಮಿಷನರು ಮತ್ತು ಲಾ ಸೆಕ್ರೆಟರಿ ಅವರಿಬ್ಬರೂ ಸಹ ರೆಫರ್ ಮಾಡಬಹುದು ಎಂದರೆ ಮಾಡತಕ್ಕ ಒಂದು ಪದ್ಧತಿ ಮತ್ತು ಪ್ರತೀತಿ ಉಂಟೇ?

Sri K. PUTTASWAMY.—That is an internal matter. There are certain matters on which the Secretary may take decision and there are certain other matters on which the Secretary will have to consult the Minister.

Road work of Holenarasipur-Keralapur Road

356. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether it has come to the notice of Government that the road work of Holenarasipur-Keralapur road is pending for the last seventeen years ;

(*b*) the amount required to complete the same ;

(*c*) whether the Government intends to take steps to sanction necessary funds to complete the said road work ?

Sri K. LAKKAPPA (Minister for Public Works).—

(*a*) Formation of a major portion of the road and construction of some of Cross Drainage works have been done.

(*b*) Rs. 5.40 lakhs.

(*c*) This will be considered subject to the availabilty of funds.

ಶ್ರೀ ಎಚ್. ಡಿ. ದೇವೇಗೌಡ.—'ಸಿ' ಗೆ ಉತ್ತರವಾಗಿ ಸರ್ಕಾರದ ಹಣದ ಒಂದು ಪರಿಸ್ಥಿತಿಯನ್ನು ಅವಲಂಬಿಸಿದೆ ಎಂದು ಹೇಳಿದ್ದೀರಿ. ಎಷ್ಟೋ ವರ್ಷದಿಂದ ಈ ರಸ್ತೆಯನ್ನು ಮುಗಿಸುವುದಕ್ಕೆ ತಡವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ? ಇದು ಎರಡು ತಾಲ್ಲೂಕುಗಳಿಗೆ ಕನೆಕ್ಷನ್ ಕೊಡುವ ರಸ್ತೆ, ಅತಿ ಮುಖ್ಯವಾದ ರಸ್ತೆ ಎಂದಾದರೂ ತಮ್ಮ ಗಮನಕ್ಕೆ ಬಂದಿಲ್ಲವೇ? ಇನ್ನು ಎಷ್ಟು ವರ್ಷದಲ್ಲಿ ಪೂರೈಸುತ್ತೀರಿ?

† ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಯ ಪರಿಸ್ಥಿತಿ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಸಾನು ಜಿಲ್ಲಾಬೋರ್ಡ್ ಅಧ್ಯಕ್ಷನಾಗಿದ್ದಾಗ ಪ್ರಾರಂಭ ಮಾಡಿದಂತಹ ಕಾರ್ಯ ಇದು. ಇದುವರೆಗೂ ಆಗದೆ ನಿಧಾನವಾಗುತ್ತಾ ಇದೆ. ಇದರ ಅವಶ್ಯಕತೆ ಬಹಳ ಜರೂರಾಗಿ ಇದೆ ಅನ್ನುವುದನ್ನು ಮನಗಂಡೇ ಇದನ್ನು ಬಜೆಟ್‌ನಲ್ಲೂ ಸಹ ಸೇರಿಸಿಕೊಂಡು ಈ ವರ್ಷ ಸುಮಾರು 35 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ವ್ಯವಸ್ಥೆ ಮಾಡಿದೆ.

Starting of Evening Classes in Government Colleges

390. Sri P. VENKATAGIRIYAPPA (Kolar).—

Will the Minister for Education be pleased to state :—

(*a*) whether it has come to the notice of Government that in places where there is a single Government College, there is a great demand by the N. G. O's. and others to start evening classes ;

(*b*) whether Government intend to start evening classes in such places with a view to benefit the poorer section of the youngsters who could not afford to continue their studies in Colleges after passing S. S. L. C. but now desire to pursue their studies while working ?

Sri N. M. KOTRABASAIAH SOGI (Deputy Minister for Education).—

(*a*) Such a demand has come only from One Place, Kolar.

(b) Government have no such intention at present.

ಶ್ರೀ ಪಿ. ವೆಂಕಟಗಿರಿಯಪ್ಪ.—ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಸಂಜೆ ಕಾಲೇಜನ್ನು ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ಹೇಳಿದ್ದೀರಿ. ಈಗ ಬೆಂಗಳೂರು ಮತ್ತು ಇತರ ಕಡೆಗಳಲ್ಲೂ ಕೂಡ ಸಂಜೆ ಕಾಲೇಜು ಇದ್ದು ಎಸ್. ಎಸ್. ಎಲ್. ಸಿ. ಪಾಸ್ ಆಗಿ ಕಾರಕೂನರಾಗಿ ಕೆಲಸಮಾಡುತ್ತಾ ಇರುವವರು ಮತ್ತು ಗುತ್ತಾಸಹಶಾಲಗಳಿಗೆ ಓದುವುದಕ್ಕೆ ಅವಕಾಶವಾಗಿದೆ ಅದೇ ರೀತಿಯಲ್ಲಿ ಕೋಲಾರದಲ್ಲಿ ಎಸ್. ಎಸ್. ಎಲ್. ಸಿ. ಪಾಸ್ ಆಗಿ ಕೆಲಸದಲ್ಲಿರತಕ್ಕವರಿಗೆ ಕೂಡ ಇಂತಹ ಒಂದು ಅವಕಾಶವನ್ನು ಮಾಡಿಕೊಡುವುದಕ್ಕೆ ಏನಾದರೂ ತೊಂದರೆ ಇದೆಯೇ ಅಥವಾ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರಿ ಕಾಲೇಜು ಇರುವ ಕಡೆ ಎಲ್ಲಾ ಸಂಜೆ ಕಾಲೇಜು ನಡೆಸುತ್ತಾ ಇಲ್ಲ. ಸಂಜೆ ಕಾಲೇಜು ಶಾಶ್ವತವಾಗಿ ನಡೆಸುವುದು ಕಷ್ಟಕರ ಅನ್ನುವುದು ಅನುಭವಕ್ಕೆ ಬಂದಿದೆ. ಮತ್ತು ಅಂತಹ ಅವಶ್ಯಕತೆಯೂ ಸಹ ಕಂಡುಬರುತ್ತಾ ಇಲ್ಲ. ಕೋಲಾರದಲ್ಲಿ ಆ ರೀತಿ ಸಂಜೆ ಕಾಲೇಜು ನಡೆಸಿದರೆ ಸಾಕಾದಷ್ಟು ಜನ ಅಭ್ಯರ್ಥಿಗಳು ಬರುತ್ತಾರೆ ಎಂಬ ಭರವಸೆ ಇಲ್ಲ. ತುಮಕೂರಿನಲ್ಲಿ ಸಿದ್ಧಗಂಗಾ ಕಾಲೇಜಿನವರು ಸಂಜೆ ಕಾಲೇಜನ್ನು ನಡೆಸಿ ಸಾಕಷ್ಟು ಜನ ಅಭ್ಯರ್ಥಿಗಳು ಬರದೆ ಬಹಳ ಕಷ್ಟದ ಪರಿಸ್ಥಿತಿಯಲ್ಲಿರುವುದು ನಮ್ಮ ಅನುಭವಕ್ಕೆ ಬಂದಿದೆ. ಮತ್ತು ಸರ್ಕಾರಿ ಕಾಲೇಜು ಇರತಕ್ಕ ಎಲ್ಲಾ ಕಡೆಯಲ್ಲೂ ಸಂಜೆ ಕಾಲೇಜನ್ನು ಮಾಡುವುದು ನಮ್ಮ ನೀತಿಯೂ ಕೂಡ ಅಲ್ಲ.

U.G.C. Scales of Pay for College Staff

450. Sri R. G. WALI (Hubli).—

Will the Minister for Education be pleased to state :—

(*a*) whether the Government has accepted to pay the University Grants Commission Scales of pay to the Collegiate Staff;

(*b*) the number of Government Colleges and private colleges that have implemented these scales;

(*c*) whether it is true that several institutions have not accepted the University Grants Commission scales of pay;

(*d*) the difficulties for immediate implementation of the same ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) All the 15 Government Colleges and 84 out of 120 Private Colleges of Arts, Science and Commerce have implemented the new scales.

(*c*) 9 out of 90 grant-in-aid receiving institutions and 26 out of 30 non-grant-in-aid receiving institutions have not implemented the new scales.

(*d*) There should be none, at least in the case of grant-in-aid receiving colleges.

Sri R. G. WALI.—In answer to (*c*) it is stated that 9 out of 90 grant-in-aid receiving institutions and 26 out of 30 non-grant-in-aid receiving institutions have not implemented the new scales. The staff working in these 9 and 26 institutions are the sufferers due to non-implementation of the new scales. It seems that these institutions have not implemented the new scales due to the fact that they have not been paid the grants by the Government. May I know when the Government will give grants to these institutions ?

2-00 P.M.

† Sri N. M. KOTRABASAIAH SOGI.—I have made it clear in the answer that all the grant receiving institutions have adopted the University Grants Commission pay scales. If there is any specific instance where it has not been implemented and if the Hon. Member bring it to the notice of the Government, necessary action would be taken.

Mr. SPEAKER.—Question Hour is over.

(ಸಂಸದೀಯ ವ್ಯವಹಾರಗಳು)
ವಿಧಾನ ಪರಿಷತ್ತು Accession No.... 4869

QUESTIONS FOR ANSWERS ON THE DAY

(but not taken up)

Appeal petitions regarding Seniority of Officials of Bellary District pending in R. D.

188. Sri M. DODDANAGOUD (Sirguppa).—

Will the Minister for Revenue be pleased to state :—

(*a*) whether there are any appeal petitions of officials of Bellary District pending at Government level questioning the seniority of I Dn. Clearks in Bellary District ;

(*b*) if so, the number of applications pending and since what date ;

(*c*) the reasons for delay on the part of the Government in disposing of the appeal petitions ?

Sri H. V. KOUJALGI (Minister for Revenue).—

(*a*) Nil.

(*b*) Does not arise in view of reply to clause (*a*).

(*c*) Does not arise.

Requests to allow discussion on the Repors of the Fifth Finance Commission

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ತರಬೇಕಾಗಿದೆ. ಅದೇನೆಂದರೆ ಕೇಂದ್ರದ ಐದನೇ ಹಣಕಾಸಿನ ಆಯೋಗದವರು ಕೊಟ್ಟಿರತಕ್ಕ ಒಂದು ವರದಿಯಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಬಹಳ ಧಕ್ಕೆ ಬರುವಹಾಗೆ ನಮಗೆ ಕಂಡುಬರುತ್ತಿದೆ. ಈಗಾಗಲೇ ಸುಮಾರು 50 ಜನರು ಒಂದು ಸಹಿಸಂಗ್ರಹಣೆಮಾಡಿ ಕಾವೇರಿಜಲಾಶಯದ ಪ್ರದೇಶದಲ್ಲಿ ಕೂಡಲೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯಿಸಲು ನಿರ್ಣಯವನ್ನು ಕಳುಹಿಸುವುದರಲ್ಲಿದ್ದಾರೆ. ಅದಕ್ಕೆ ಸಾಕಷ್ಟು ಹಣವಿಲ್ಲದಿದ್ದರೆ ರಾಜ್ಯದ ಅಭಿವೃದ್ಧಿಗೆ ಬಹಳ ಕುಂದಕವುಂಟಾಗುತ್ತದೆಂಬ ಭಯ ರಾಜ್ಯದ ಪ್ರಜೆಗಳಲ್ಲಿ ಮೂಡಿರುತ್ತದೆ. ಈ ದಿವಸ ಇಂಥ ಒಂದು ಸಮಸ್ಯೆ ಐದನೆಯ ಹಣಕಾಸಿನ ಆಯೋಗದವರ ವರದಿಯಿಂದ ಉದ್ಭವವಾಗಿದೆ. ಅವರು ಇಂಥ ಒಂದು ವರದಿಯನ್ನು ಮಾಡುವುದಕ್ಕೆ ಯಾರು ಕಾರಣರು. ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನೆಲ್ಲಾ ಈ ಮಾನ್ಯ ಸಭೆಯವರು ಜರೂರಾಗಿ ಚರ್ಚೆಮಾಡತಕದ್ದು ಅತ್ಯಗತ್ಯ. ನಮ್ಮ ರಾಜ್ಯದ ಆರ್ಥಿಕಮಟ್ಟ ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ತಿಳಿಯಲು ನಮಗೆ ಬಹಳ ಆಸಕ್ತಿ ಉಂಟಾಗಿದೆ. ರಾಜ್ಯದಲ್ಲಿ ಇಂಥ ಒಂದು ಜರೂರಾದ ಪರಿಸ್ಥಿತಿಯುಂಟಾಗಿರುವುದರಿಂದ ಅಧ್ಯಕ್ಷರು ಶೀಘ್ರವಾಗಿ ತತ್ಸಂಬಂಧದಲ್ಲಿ ಒಂದು ಚರ್ಚೆಯನ್ನು ಮಾಡುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬಹುದೆಂದು ನನಗೆ ಅನಿಸುತ್ತಿರುವುದರಿಂದ ಅಧ್ಯಕ್ಷರು ಚರ್ಚೆಗೆ ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

V-, 31 N69
N69-20-12-13

Sri K. PUTTASWAMY (Minister for Law, Labour and Parliamentary Affairs).—Perhaps the hon. Leader of Opposition always wants to take us by surprise by bringing in such matters without previous intimation. I wish he had discussed this matter with me outside the House and then we would have been able to come to some understanding and we would not have also given the trouble to the hon. Chair or take the time of the House. Sir, yesterday or the day before, the Finance Minister made it clear that the Government has not yet received the report of the Finance Commission. In the light of his statement, I would like to ask whether any useful purpose would be served by trying to have discussion based on a report which is not before the House. Any way, we could discuss the matter in consultation with the Finance Minister.

Mr. SPEAKER.—I think the importance of the subject matter cannot be over-emphasized and I think it should come up for debate as a result of agreement between all the parties. It is better that hon. Leaders and whips of both the Ruling party aud opposition party meet together and decide before raising it on the floor of this House. I shall also be very much willing to provide an opportunity if it is possible. But in the absence of the report of the Finance Commission and without knowing the reasons for which the Finance Commission has not given a due share to the State to which it is entitled, it may not be useful to have a debate on it.

Sri H. SIDDAVEERAPPA.—Sir, if the Finance Minister had waited till the Report of the Finance Commison is received before making a statement here it would have been better. Supposing the Report is not received before this House adjourns, are we to wait for three months ?

Mr. SPEAKER.—I request the Leaders on both the sides may confer and come to some understanding, After all, hon. Members are concerned with State's interest.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಮಾನ್ ಶಿವಪ್ಪನವರು ಮತ್ತೆ ಕಾವೇರಿ ನೀರಿನ ನಿರ್ಣಯದ ಬಗ್ಗೆ ವಿಚಾರವನ್ನು ಈ ಸಭೆಯ ಗಮನಕ್ಕೆ ತಂದರು. ಮೊನ್ನೆ ಇದಕ್ಕಾಗಿ ರಚನೆಯಾಗಿರತಕ್ಕ ಜೆಕ್ನಿಕಲ್ ಡೇಟಾ ಕಮಿಟಿ ಮತ್ತು ರಿಸೋರ್ಸಸ್ ಕಮಿಟಿ ತೀರ್ಮಾನಗಳು ಬಂದಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳಿದಿರಿ. ನಿನ್ನೆ ಜೆಕ್ನಿಕಲ್ ಡೇಟಾ ಕಮಿಟಿ ನಿರ್ಣಯವಾಗಿದೆ, ರಿಸೋರ್ಸಸ್ ಕಮಿಟಿಯವರು ಕಡೆಯ ತೀರ್ಮಾನವನ್ನು ಈ ಅಧಿವೇಶನ ಮುಗಿಯುವುದರೊಳಗೆ ತೆಗೆದುಕೊಳ್ಳುವ ಸಂಭವವಿಲ್ಲ ವೆಂದು ಗೊತ್ತಾಗುತ್ತದೆ. ಈಗ ಒಂದು ಕಡೆ ಫೈನಾನ್ಸ್ ಕಮಿಷನ್ ಅವರಿಂದ ಸಹಾಯ ಸಿಗುವುದಿಲ್ಲವೆಂದು ಹೇಳುತ್ತೀರಿ. 1974ನೇ ಇಸವಿ ಬಹಳ ಆತುರಾತುರವಾಗಿ ಬರುತ್ತಾ ಇದೆ. ಈಗ ಜೆಕ್ನಿಕಲ್ ಡೇಟಾ ಕಮಿಟಿಯಲ್ಲಿ ಕಾವೇರಿಗೆ ಸಂಬಂಧ ಪಟ್ಟಹಾಗೆ ನೀರಾವರಿ ಕಾಮಗಾರಿಗಳು 1974 ರೊಳಗೆ ಆಖೈರು ಆಗಬೇಕೆಂಬುದಾಗಿ ನಿರ್ದಿಷ್ಟ ಸಲಹೆ ಇರುವುದರಿಂದ ಈ ವಿಷಯವನ್ನು ಚರ್ಚೆ ಮಾಡುವುದು ಬಹಳ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಷಯ. 1966ನೇ ಇಸವಿ ಏಪ್ರಿಲ್ 7 ಮತ್ತು 8ನೇ ತಾರೀಖುಗಳಲ್ಲಿ ಇದೇ ತರಹ ನಿರ್ಣಯಗಳು ಬಂದಿವೆ. ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಕೃಷ್ಣಾ ನದಿ ನೀರನ್ನು ಉಪಯೋಗಿಸುವ ಬಗ್ಗೆ ಒಂದು ಸ್ಪೆಸರ್ ರಿಜಲ್ಯೂಷನ್ನನ್ನು ತೆಗೆದುಕೊಂಡು ಬಂದು ಅದು ಇಲ್ಲಿ ಚರ್ಚೆಯಾಯಿತು. ಏಪ್ರಿಲ್ 8ನೇ ತಾರೀಖಿನಲ್ಲಿ ಮಾನ್ಯ ಶ್ರೀ ಎಚ್. ಡಿ. ದೇವೇಗೌಡರು, ಇದೆ

ವಿಚಾರವಾಗಿ ಒಂದು ನಿರ್ಣಯವನ್ನು ತಂದಿದ್ದರು. ಈಗಾಗಲೇ ಆ ಚರ್ಚೆಗಳಾಗಿ ಮೂರು ವರ್ಷಗಳು ಗತಿಸಿ ಹೋದುವು. ಈ ಮೂರು ವರ್ಷಗಳಮೇಲೆ ಸರ್ಕಾರವು ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತಗೆದುಕೊಳ್ಳುವುದಕ್ಕೆ ಸಿದ್ಧವಿದ್ದಾರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಅಗತ್ಯ. ಮೈನೂರಿನಲ್ಲಿ ಅರ್ಧ ಭಾಗದ ಜನರಿಗೆ ಈ ನೀರಿನ ಅನುಕೂಲ ಸಿಗದೇ ಹೋದರೆ ಅವರಿಗೆ ಶಾಶ್ವತವಾಗಿ ತೊಂದರೆಯನ್ನು ತಂದಂತಾಗುತ್ತದೆ. ಇದಕ್ಕಾಗಿ ಸರ್ಕಾರದವರು ನಿರ್ದಿಷ್ಟವಾಗಿ ಉತ್ತರವನ್ನು ಏನು ಹೇಳುತ್ತಾರೋ ಅದನ್ನು ತಿಳಿದುಕೊಳ್ಳುವುದು ಆವಶ್ಯಕ. ತಾವು ಅವರಿಗೆ ಅವಕಾಶವನ್ನು ಈಗ ಕಲ್ಪಿಸಿಕೊಡಬೇಕು; ಮುಂದಿನ ವಾರದಲ್ಲಿ ತಾವು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಒಂದು ಸಲಹೆಮಾಡುತ್ತೇನೆ. ತಾವು ರೀಸೆಂಟ್ ಅಕ್ಕರೆನ್ಸ್ ವಿಚಾರ ಹೇಳಬೇಕೆಂದು ಹೇಳಿದ್ದಿರಿ. ಇತ್ತೀಚೆಗೆ ನಡೆದಿರುವಂಥಾದ್ದಕ್ಕಿಂತ ಹೆಚ್ಚಿಗೆ ಇದಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಕೇಳಿದ್ದಕ್ಕೆ ಹಿಂದೆ ಅವಕಾಶವನ್ನು ಒಂದು ಸಾರಿ ಕೊಟ್ಟಿದ್ದಿರಿ. ಅದೇ ರೀತಿಯ ಅವಕಾಶವನ್ನು ಮತ್ತು ಈಗಲೂ ಕಲ್ಪಿಸಿಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ತಮ್ಮನ್ನು ಪ್ರಾರ್ಥನೆಮಾಡುತ್ತೇನೆ.

Sri K. PUTTASWAMY.—I have again to say, Sir, that I shall be very happy to discuss this matter consistent with the work we are having before this House.

Mr. SPEAKER.—I have heard both the hon. Member Sri Hutchmasti Gowda and the hon. Minister for Parliamentary Affairs. I would like to bring to their notice that when that notice of motion was given, I pointed out that the matter was not of recent occurrence and further is has also come up before the House in some form or the other. If anything new happens or if it is of recent occurrence like the Report of the Committee on Technical Data or the Resources Committee and if a suitable motion is given notice of I shall certainly consider it. Since the matter is not of recent occurrence and nothing new has happened, I had to disallow it in accordance with rule 148 of the Rules of Procedure. If the matter comes before me in a suitable form, I will certainly consider, and there should be no difficulty in considering it because both sides agreed about it.

Misappropriation in the Sirsi Municipality

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್(ಸಿರ್ಸಿ).—ನುಮಾರು ಮೂರು ದಿವಸಗಳ ಹಿಂದೆ ಅತ್ಯಂತ ಪ್ರಾಮುಖ್ಯವಾದ ಮತ್ತು ಜರೂರಾದ ಒಂದು ವಿಚಾರ, ಅಂದರೆ—ಸಿರ್ಸಿ ಮುನಿಸಿಪಾಲಿಟಿಯಲ್ಲಿ 8 ಲಕ್ಷ ರೂಪಾಯಿ ದುರುಪಯೋಗವಾಗಿದೆ. ಆ ಬಗ್ಗೆ ಸರ್ಕಾರದವರು ವಿಜಿಲೆನ್ಸ್ ಕಮಿಶನ್ ಅಕೌಂಟ್ಸ್ ಕಮಿಟಿ ಮಾಡಿದ ವರದಿ ಮೇಲೆ, ಒಂದು ಆರ್ಡರ್ ಮಾಡಿದ್ದಾರೆ. ಡಿವಿಜನಲ್ ಕಮಿಶನರ್ ಕೊಟ್ಟಂತಹ ಆರ್ಡರನ್ನು ಇಂಪ್ಲಿಮೆಂಟ್ ಮಾಡುವ ಮೊದಲೇ ಅಲ್ಲಿರುವ ಆಡ್ಮಿನಿಸ್ಟ್ರೇಟರನ್ನು ವರ್ಗ ಮಾಡಿದ್ದಾರೆ. ಆದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಶನ್ ನೋಟೀಸ್ ಕಳಿಸಿದ್ದೆ. ಅದಕ್ಕೆ ತಾವು ಇದುವರೆಗೂ ಏನೂ ವರದಿ ಕಳಿಸಿಲ್ಲ. ಇದು ಅತ್ಯಂತ ಜರೂರಾದ ವಿಷಯ. ಅಲ್ಲಿ ಈ ದುರುಪಯೋಗವನ್ನು ತಡೆಯುವುದಕ್ಕೆ ಈಗ ಅಲ್ಲಿನ ತಾಲ್ಲೂಕು ಕಾಂಗ್ರೆಸ್ಸಿನ ಅಧ್ಯಕ್ಷರು ಬಂದು ಸರ್ಕಾರದವರಲ್ಲಿ ಹೇಳಿ ಅವರನ್ನು ವರ್ಗ ಮಾಡಿಸಿದ್ದಾರೆ. ಅವರು ಕೇವಲ 10 ತಿಂಗಳು ಮಾತ್ರ ಕೆಲಸ ಮಾಡಿದ್ದಾರೆ. ಅವರು ಅಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ಸರ್ಕಾರದವರು ಅವರನ್ನು ಅಲ್ಲಿಯೇ ನಿಲ್ಲಿಸಬೇಕು, ಇಲ್ಲದಿದ್ದರೆ, ಬೇರೆ ಒಳ್ಳೆಯವರನ್ನು ಅಲ್ಲಿ ಹಾಕಿ ಆ 8 ಲಕ್ಷ ರೂಪಾಯಿ ದುರುಪಯೋಗವಾಗಿದ್ದರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಆದಕ್ಕೆ ಉತ್ತರ ಕೊಡಬೇಕು.

Mr. SPEAKER.—For a Call Attention Notice, under Rule 63, the matter must be of urgent public importance. This alleged misappropriation happened months or years back. The hon. Member has not given the date of occurrence of the incident in his notice. Rule 63, is not the proper rule under which it can be raised. Hence. I have disallowed it. I do not know if the hon. Member has been informed of that ; if he has not been informed, he will be informed accordingly.

Sri B. B. SAYANAK (Belgaum).—Sir, I have given notice of a Call Attention and it has been admitted. But, it has not come up as yet. I think, intentionally, my questions are not taken up.

Mr. SPEAKER.—It will come up in due course.

Calling Attention to Matters of Urgent Public Importance

(i) *Re* :—Extension of Servcices to some Forest Officers

Sri H. SIDDAVEERAPPA.—Sir, I call the attention of the Minister of State for Forests to the second extension of sevice given to some Forest Officers contrary to the Judgment of the High Court of Mysore in a Writ Petition.

Sri ALUR HANUMANTHAPPA (Minister of State for Forests).—Sir, I wish to place the following facts before the House.

1. The State Government decided to participate in the scheme for the creation of All India Services in Forestry during 1964. In pursuance of this decision, Government of India appointed 42 Officers of the State Forest Service with the effect from 6th October 1966 in their Notification Nos. (1) 3/20/66-AIS (IV) dated 15th July 1967; (2) 3/47/67 AIS (IV) dated 29th May 1968 and (3) 3/24/68-AIS (IV) dated 30th April 1969. After the publication of the first two lists, some of the Officers who were not selected to the I. F. S. challenged the selections made by the Government of India and obtaiend orders of stay from the High Court of Mysore. During the pendency of the writ petition as also the stay order, 5 Officers selected to the I. F. S. Cadre, who were now virtually State Forest Officers, had attained the age of superannuation. Government, in exercise of its powers under rule 95 (a) of M. C. S. Rs. extended their services for a period of one year.

2. Subsequently, the High Court of Mysore vacated the stay order and the State Government implemented the I. F. S. Scheme by issuing posting orders to the 42 Officers who were selected by the Government of India. At this stage. a batch of officers from the State Forest Department again assalied the selection of Officers to the I. F. S. The High Court allowed these writ petitions by its orders dated 25th July 1969 following the decision of the Supreme Court in Kraipak's case on

the ground that the selection was vitiated in view of the participation of the Chief Conservator of Forests who was himself a candidate for selection, on the Selection Board and quashed the selection of all the Officers selected to the Indian Forest Service. The implication of the aforesaid order is that all the officers selected to I. F. S. are virtually State Forest Officers.

3. In the meantime 2 of the 5 Officers whose services were extended for a period of one year were to retire after the extended period. Clarification was sought from the Government of India as regards the future course of action to be taken in regard to the continuance or otherwise of the Officers selected from the State Service to the I. F. S. and who had attained the age of superannuation and continued beyond 55 years.

4. Government of India have informed that they have not so far received a copy of the judgment of the High Court from the Central Government Pleader to examine the legal implications and to take a final decision regarding the future course of action of implementation of the High Court's Judgment.

In the circumstances Government have considered the matter and further extended the services in respect of only two Officers until further orders under rule 95 (a) of M. C. S. Rs.

Sri H. SIDDAVEERAPPA.—Sir, from what the Hon'ble Minister just now read in his statement, will this not amount to a contempt of the order of Court, when contrary to the order of the High Court in a Writ Petition, they have again extended the period of service of two officers of their choice and at the same time giving a clean go-by to the seniority of others according to the old seniority cadre ?

Sri ALUR HANUMANTHAPPA.—Sir, I beg to submit that there is no question of contempt here, because the officers are of I. F. S. cadre and we have implemented the I. F. S. cadre here. In view of some technical difficulty, the High Court has quashed the list of I. F. S. We have made it clear to the Government of India as to what we should do, and Government of India have said that they have not yet received the judgement copy. So, we have continued their services.

Sri H. SIDDAVEERAPPA.—Is not the Government aware that the entire list of 42 to 44 officers has been quashed ? When such is the case, how can the Hon. Minister say that the I. F. S. list is there. The I. F. S. list is quashed by the High Court.

Sri ALUR HANUMANTHAPPA.—Government of India are also a party to this. When they have not yet received the judgement of the High Court, they have asked the State Government to maintain the *Status quo*.

Sri H. SIDDAVEERAPPA.—They had no right to do that. The officers were given extension on the plea that they are I. F. S. Officers. Is this the way to treat the High Court judgement ?

Sri M. S. KRISHNAN.—You were aware of the Supreme Court judgement quashing the selection to the Indian Forest Services in Jammu and Kashmir State. When that is the position why are you creating such a situation here ?

Sri ALUR HANUMANTHAPPA.—The list was quashed on some technical grounds. We have yet to receive the copy of the judgement of the High Court.

Sri M. S. KRISHNAN.—When there are more than 5 vacancies, why have you given extension to the older elements when there are younger elements available ?

Sri ALUR HANUMANTHAPPA.—The Government has decided to continue the services of the older elements since the list that was selected was quashed.

(ii) *re* : Hungerstrike by the workers of the Government Soap Factory, Bangalore.

Sri G. CHANDRAKANTH (Bidar).—I call the attention of Minister for Law, Labour and Parliamentary Affairs to the hunger strike undertaken by the workers of the Government Soap Factory, Bangalore.

Sri K. PUTTASWAMY.—The Hon. Members have given notice to call my attention to the hunger strike undertaken by the workers of the Government Soap Factory, Bangalore.

There are two Trade Unions in the Government Soap Factory :— The workers and staff Association and the Government Soap Factory Employees' Union. During 1967 the Workers and Staff Association of Government Soap Factory placed a charter of demands before the management of the Government Soap Factory. This charter of demands contained about eleven demands pertaining to revision of pay scales, production bonus, promotion, suspension wages, leave facilities, uniforms, etc. The Deputy Labour Commissioner took up these demands in conciliation and fixed up a conciliation meeting in November 1967. Meanwhile the conciliation officer received a representation from the Government Soap Factory Employees' Union, enclosing a copy of demands presented to the management of the Government Soap Factory. In this representation the Union claimed that it represents the majority of the employees. Since there had been no verification so far as to which Union enjoys the confidence of the workers and had membership of the majority of the workers and as the charter of demands submitted by the Employees' Union was more or less the same as submitted by the Workers and Staff Association, the conciliation Officer considered it necessary and desirable to make this Union also a party to the dispute.

During the conciliation proceedings, it was not possible to come to any agreement. The Conciliation proceedings therefore ended in a failure.

Even though the conciliation proceedings ended in failure, the management were carrying on negotiations with the workers for arriving

at some settlement in respect of all the outstanding demands. To enable the management to enter into some amicable settlement with the workers, the Government did not take a decision regarding reference of the dispute to adjudication.

The management of the Government Soap Factory informed the State Government on 18th August 1969 that they have signed a settlement on 16th August 1969 with the Government Soap Factory Employees' Union. This agreement is binding between the management and the workers who are members of this Union. On perusal of this agreement it is seen that the issues cover most of the demands raised by the Workers and Staff Association.

The Government is examining the desirability or otherwise of referring the pending dispute to adjudication in the light of the above agreement.

Sri G. CHANDRAKANTH.—It has been stated that there are two Associations. I want to know which of the Association is recognised.

Sri K. PUTTASWAMY.—I have made it clear that none of them is recognised.

ಶ್ರೀ ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಇವೆರಡು ಯೂನಿಯನ್‌ಗಳಲ್ಲಿ ಯಾವ ಯೂನಿಯನ್ನಿನಲ್ಲಿ ಮೆಜಾರಿಟಿ ಇದೆ ಮತ್ತು ಯಾವುದನ್ನು ಮುಂದುವರಿಸಬೇಕೆಂದು ಕೇಳುತ್ತಾರೆ ?

Sri K. PUTTASWAMY.—I cannot say which of the two unions commands majority. To the latter portion of the question I cannot give any answer.

Sri SIDDIAH KASHIMATH.—May I know to which of the political parties these two rival Unions are affiliated ?

Sri K. PUTTASWAMY.—I am not aware of that.

Eleventh Report of the Committee on Private Members' Bills and Resolution

(Presentation)

Sri D. MANJUNATH (Hiriyur).—I present the Eleventh Report of the Committee on Private Members' Bills and Resolutions.

Sri G. CHANDRAKANTH.—I beg to move :

"That this Assembly agrees with the Eleventh Report of the Committee on Private Members' Bills and Resolution."

Mr. SPEAKER.—The question is :

"That this Assembly agrees with the Eleventh Report of the Committee on Private Members' Bills and Resolutions."

The motion was adopted.

Mr. SPEAKER.—The report is adopted.

Business of the House

Sri K. PUTTASWAMY (Minister for Law, Labour and Parliamentary Affairs).—I do not know whether the Hon. Speaker was present in the House when we came to an understanding that we should complete the financial business and pass the High Court (Amendment) Bill before 4-30 P.M. to-day. It is a very simple Bill. According to me, it may not require more than half an hour. It is for the Leader of the Opposition to say what time he needs.

Sri S. SIVAPPA.—We have to give full scope for discussion, Sir.

2-30 P.M.

Mr. SPEAKER.—How many hon. Members want to speak on the Supplementary Grants ?

(Three hon. Members stood up)

Three Hon'ble Members have expressed their desire to speak. I will give them ten minutes each and the debate will be closed by 3 P.M. and then I will call upon the Hon. Minister to reply.

There is also private Members' business today and that should not be affected.

Sri H. M. CHANNABASAPPA.—I want to speak on the Supplementary Grants, Sir.

(a) Supplementary and additional Demands for grants for 1969-70 (First Instalment).

(b) Demands for grants to cover Expenditure incurred in excess of voted grants for the year 1964-65.

(c) Demands for grants to cover expenditure incurred excess of voted grants for the year 1965-66.

(Debate Continued)

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ಪೀಕರ್, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಇದರ ಅಭಿಪ್ರಾಯವನ್ನು ವ್ಯಕ್ತಪಡಿಸಲು 5 ನಿಮಿಷ ಕಾಲ ಕೊಟ್ಟಿದ್ದೀರಿ. 5 ನಿಮಿಷದಲ್ಲೇ ಮುಗಿಸುವುದು ಕಷ್ಟದ ಕೆಲಸ. ನಮ್ಮ ಅಭಿಪ್ರಾಯವನ್ನು ಹೇಳಲ ಹೇಳದೆ ಇರಲ ನಿಮಗೆ ತೋಚಿದಂತೆ ನೀವು ಮಾಡಿಕೊಂಡು ಹೋಗುತ್ತೀರಿ. ಆದರೂ ಊದುವ ಶಂಖ ಊದುವುದು ನಮ್ಮ ಕರ್ತವ್ಯ ಆದುದರಿಂದ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಸರ್ಕಾರ ಎಲ್ಲ ತಪ್ಪು ಮಾಡಿದೆ ಅದರ ಕಡೆಗೆ ಅವರ ಗಮನ ಸೆಳೆಯುವುದು ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಮುಖ್ಯವಾಗಿ ಮೂರು ವಿಷಯಗಳಮೇಲೆ ಸಂಕ್ಷಿಪ್ತವಾಗಿ ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಮೊದಲನೆಯದಾಗಿ ಶ್ರೀಮಾನ್ ಸಿ. ಕೆ. ರಾಜಯ್ಯಶೆಟ್ಟರು ಇದನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು. ಕರ್ನಾಟಕ ಪಬ್ಲಿಷ್‌ಂಗ್ ಹೌಸ್‌ಗೆ 9 ಲಕ್ಷ ರೂಪಾಯಿ ಸಾಲವನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಆದರ ಜೊತೆಗೆ 6 ವಾಲ್ಯೂಂ ಇರತಕ್ಕ ಪುಸ್ತಕಗಳನ್ನು ಪ್ರತಿಯೊಂದು ಸ್ಕೂಲೂ ಒಂದೊಂದು ಕಾಪಿಯನ್ನು ಕೊಂಡುಕೊಳ್ಳಬೇಕೆಂದು, ಇದಕ್ಕಾಗಿ ಲೈಬ್ರರಿ ಗ್ರಾಂಟ್‌ನಿಂದ 120 ರೂಪಾಯಿ ತೆಗೆದುಕೊಳ್ಳಬಹುದು ಎಂದು ಆದೇಶ ಕೊಟ್ಟಿದ್ದಾರೆ. ಅವರಿಗೆ ಕೊಟ್ಟಿರುವ ಹಣಕ್ಕೆ ಆ ಸಂಸ್ಥೆಯ ಬಿಲ್ಡಿಂಗ್ ಮೆಷಿನರೀಸ್ ಇವನ್ನೆಲ್ಲಾ ಮಾರ್ಟ್‌ಗೇಜ್ ಮಾಡಿಕೊಂಡಿದ್ದೇವೆ, ನಮ್ಮ ದುಡ್ಡಿಗೇನೂ ಮೋಸ ಇಲ್ಲ ಎಂದು ಹೇಳಿದ್ದಾರೆ. ಆದರೆ ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಈ ವಿಷಯವನ್ನು ಪರಿಗಣಿಸಬೇಕಾಗಿದೆ. ಏತಕ್ಕೆಂದರೆ ಒಂದು ಸಣ್ಣ ಉದಾಹರಣೆ ಹೇಳುವುದಾದರೆ ಸರ್ಕಾರದವರು ಮೊಟ್ಟಮೊದಲಬಾರಿಗೆ ಕನ್ನಡದ ವಿಶ್ವಕೋಶವನ್ನು ಪ್ರಾರಂಭ ಮಾಡಬೇಕೆಂದು ಕಲ್‌ಚರಲ್ ಅಂಡ್ ಲಿಟರೆರಿ ಅಸೋಸಿಯೇಷನ್ ಆಶ್ರಯದಲ್ಲಿ ವಿಪುಲವಾದ ದುಡ್ಡು ಖರ್ಚುಮಾಡಿದರು. ಕಡೆಗೆ ನಿಭಾಯಿಸಲಾರದೆ ಇದನ್ನು ವಿಶ್ವವಿದ್ಯಾನಿಲಯಕ್ಕೆ ರವಾನಿಸಿದ್ದಾರೆ. ಈಗ ಕೆಲಸ ಸಾಗುತ್ತಾ ಇದೆ. ಇದರ ಕಷ್ಟನಷ್ಟಗಳು ಏನೆಂಬುದು ನನಗೂ ಗೊತ್ತು. ಕನ್ನಡದ ವಿಶ್ವಕೋಶಕ್ಕೆ ನಾನೂ ಕೆಲವು ಲೇಖನಗಳನ್ನು ಕೊಟ್ಟಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಾಗಲಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಾಗಲೀ ಪರಿಣತರು ಇರಲಿಲ್ಲವೇ? ಅವರನ್ನು ಏತಕ್ಕೆ ಕೇಳಲಿಲ್ಲಾ? ಅವರಿಗೆ ಇದನ್ನು ಏತಕ್ಕೆ ವಹಿಸಲಿಲ್ಲಾ? ಈ ಸಂಸ್ಥೆಯಲ್ಲಿ ಈ ಕೆಲಸ ಮಾಡುವುದಕ್ಕೆ ಎಷ್ಟು ಜನ ಅನುಭವಸ್ಥರು ಇದ್ದಾರೆ? ಯಾವ ಅನುಭವ ಇಲ್ಲದಿದ್ದರೂ ಕೂಡ, ಯಾರನ್ನೂ ಕೇಳದೆ, ಈ ಸಂಸ್ಥೆ ಲಾಭ ಮಾಡಿಕೊಳ್ಳುವ ಉದ್ದೇಶದಿಂದ, ಇವನು ನಮ್ಮವ ಎಂದು ಅವರಿಗೆ 9 ಲಕ್ಷ ರೂಪಾಯಿ ಕೊಟ್ಟಿದ್ದೀರಲ್ಲಾ? ಯಾವ ಆಧಾರದ ಮೇರೆ 9 ಲಕ್ಷ ರೂಪಾಯಿ ಕೊಟ್ಟಿದ್ದೀರಿ.? 9 ಲಕ್ಷ ರೂಪಾಯಿ ಕೊಟ್ಟರೂ ಕೂಡ ಆ ಸಂಸ್ಥೆಯ ಸ್ಥಾನಮಾನಗಳೇನು? ಅದರ ಸಂಚಾಲಕರು ಯಾರು? ಅವರು ಮಾಡಿದರೆ ಅದು ಜೂನಿಯರ್ ವಿಶ್ವಕೋಶವಾಗುತ್ತದೆಯೇ? ಇದನ್ನು ಜಡ್ಜ್ ಮಾಡಿದವರು ಯಾರು? ಜೂನಿಯರ್ ವಿಶ್ವಕೋಶವನ್ನು ಮಾಡುವಂಥಾವರು ಮೊದಲು ಯಾವ ಯಾವುದನ್ನು ಪ್ರಕಟ ಮಾಡಿದ್ದಾರೆ? ಅವರು ತೆಗೆದುಕೊಂಡಿರುವ 9 ಲಕ್ಷ ರೂಪಾಯಿಗಳನ್ನು ತೀರಿಸುವುದಕ್ಕಾಗಿ ಅವರು ಏನು ಕಚಡದ ಪುಸ್ತಕ ಬರೆದುಕೊಟ್ಟರೂ ನಾವು ಅದನ್ನು ತೆಗೆದುಕೊಂಡು ಹೈಸ್ಕೂಲ್‌ಗಳಿಗೂ, ಮಿಡಲ್‌ಸ್ಕೂಲ್‌ಗಳಿಗೂ ತುಂಬಿಕೊಳ್ಳಬೇಕಾಗುತ್ತದೆ. ಇದನ್ನು ನಿರ್ಧಾರ ಮಾಡಿದವರು ಯಾರು? ಕೇವಲ ವಿದ್ಯಾ ಮಂತ್ರಿಗಳೇ, ಅಥವಾ ಹಣಕಾಸಿನ ಮಂತ್ರಿಗಳೇ ಅಥವಾ ಮಂತ್ರಿಮಂಡಲವೇ? ಕರ್ನಾಟಕ ಪಬ್ಲಿಷಿಂಗ್ ಹೌಸ್ ಜೂನಿಯರ್ ಎನ್‌ಸೈಕ್ಲೊಪೀಡಿಯಾ ತಯಾರು ಮಾಡುವುದಕ್ಕೆ ಸಮರ್ಥವಿದೆ ಎಂದು ಯಾರು ಹೇಳಿದವರು? ಅಲ್ಲಿ ಯಾರಾದರೂ ಪರಿಣತರಿದ್ದಾರೆಯೇ? ವಿಶ್ವವಿದ್ಯಾಲಯ ಅಥವಾ ಯಾವುದಾದರೂ ಪರಿಣತರ ಮಂಡಲ ಅವರಿಗೆ ಸರ್ಟಿಫಿಕೇಟನ್ನು ಕೊಟ್ಟಿದೆಯೇ? ದುಂದು ವೆಚ್ಚಕ್ಕೆ ಹೇಗೆ ದುಡ್ಡು ಹೋಗುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿರಲಾರದು. ಡಾಕ್ಟರ್ ಶಿವರಾಮ ಕಾರಂತ ಅವರು ಒಂದು ಗ್ರಂಥವನ್ನು ಬರೆದಿದ್ದಾರೆ. ಅವರಿಗೆ ಪರಿಹಾರ ಕೊಟ್ಟಿಲ್ಲ. ಇವರು ಬರೆದಿರುವ ಗ್ರಂಥವನ್ನೇ ಜೂನಿಯರ್ ಎನ್‌ಸೈಕ್ಲೊಪೀಡಿಯಾ ಆಗಿ ಪರಿವರ್ತಿಸಿ, ಬೇಕಾದ ಸಾಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದರೆ ಉತ್ತಮ ಗ್ರಂಥ ಬರುತ್ತಿತ್ತು. ಡಾಕ್ಟರ್ ಶಿವರಾಮ ಕಾರಂತ ಅವರು ಕಾಡಿನಲ್ಲಿರುವ ಪುತ್ತೂರು ಗ್ರಾಮದಲ್ಲಿ ಕುಳಿತು ಸ್ವಸಾರ್ಥ್ಯದಿಂದ ಇಂಥ ಒಂದು ಪುಸ್ತಕವನ್ನು ಹೊರಗೆಡಹಿದರು. ಅಂಥವರಿಗೆ ಏನೂ ಪುರಸ್ಕಾರವಿಲ್ಲದಾಗಿದೆ. ನಾವು ಒಂದು ಜೂನಿಯರ್ ಎನ್‌ಸೈಕ್ಲೊಪೀಡಿಯಾ ತರುತ್ತೇವೆಂದು ಯಾರೋ ಹೇಳಿದ್ದಕ್ಕೆ ಅವರಿಗೆ 9 ಲಕ್ಷ ರೂಪಾಯಿ ಕೊಟ್ಟಿರಲ್ಲಾ ಇದು ಎಂಥ ವರ್ತನೆ? ಇಂಥದೆಲ್ಲ ಒಂದು ರಾಕೆಟ್ ಆಗಿ ಪರಿಣಮಿಸಿದೆ. ಪಠ್ಯ ಪುಸ್ತಕಗಳ ಸಂಬಂಧದಲ್ಲಿ ಹೆಗ್ಗಣಗಳು ಸೇರಿಕೊಂಡು ಒಂದು ರಾಕೆಟ್ ಯಾವರೀತಿ ಆಗಿತ್ತೋ ಇಂಥದ್ದೂ ಈಗ ಮರುಕಳಿಸುವಾಗಿದೆ. ಸರ್ಕಾರದವರಿಗೆ 9 ಲಕ್ಷ ರೂಪಾಯಿಗಳು ಹೆಚ್ಚಾಗಿದ್ದ ಪಕ್ಷದಲ್ಲಿ ಅದನ್ನು ವಿಶ್ವವಿದ್ಯಾಲಯದವರಿಗೆ ಕೊಡಿ. ಅಲ್ಲಿ ಪರಿಣತರಿದ್ದಾರೆ, ಅಲ್ಲಿ ಒಂದು ಸ್ಟಾಂಡರ್ಡ್ ಇದೆ ಎನ್ನುವ ಧೈರ್ಯವಾದರೂ ಇದೆ. ಅದನ್ನೆಲ್ಲ ಬಿಟ್ಟು ಯಾವುದೋ ಒಂದು ಸಂಸ್ಥೆಗೆ ಹಣವನ್ನು ಕೊಡುವುದು ನ್ಯಾಯವೇ! ಒಂದು ಎನ್‌ಸೈಕ್ಲೊಪೀಡಿಯಾ ತಯಾರು ಮಾಡುವ ಕೆಲಸ ಸುಲಭವಾದುದಲ್ಲ. ಬ್ರಿಟಿಷ್ ಎನ್‌ಸೈಕ್ಲೊಪೀಡಿಯಾ ತಯಾರಿಸಬೇಕಾದರೆ 50-60 ವರ್ಷ ಹಿಡಿಯಿತು. ಸಣ್ಣ ಸಣ್ಣ ಆರ್ಟಿಕಲ್ಸ್ ಬರೆಯುವುದಕ್ಕೆ ಮನೆ ಮನೆಗೆ ಹೋಗಿ ತಿರುಹೆ ಬೇಡಶಕ್ಕ ಸಂದರ್ಭ ಬಂದಿದೆ. ಯಾರು ಯಾರೇ ಬರೆದುದನ್ನು ಸಂಪಾದನೆ ಮಾಡಿ ಒಂದು ಪುಸ್ತಕವನ್ನು ತಯಾರು ಮಾಡಿ ಕೊಟ್ಟರೆ ಆಗ ಏನು ಮಾಡುವವರಿದ್ದೀರಿ? ಯಾರ ಸಲಹೆಯನ್ನೂ ತೆಗೆದುಕೊಳ್ಳದೆ 9 ಲಕ್ಷ ರೂಪಾಯಿಗಳನ್ನು ಈ ಸಂಸ್ಥೆಗೆ ಕೊಟ್ಟಿರುವುದು ದುಂದು ವೆಚ್ಚದ ಪರಮಾವಧಿ ಎಂದು ನಾನು ಹೇಳಬೇಕಾಗಿದೆ. ಈಗಾಗಲೇ ಆರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಮಿಕ್ಕುದನ್ನು ಕೊಡುವುದರಲ್ಲಿದ್ದಾರೆ.

(ಶ್ರೀ ಎಲ್. ಶ್ರೀಕಂಠಯ್ಯ)

ನಾನು ಮಾನ್ಯ ಹಣಕಾಸು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಕಷ್ಟಕಾಲದಲ್ಲಿ ದುಡ್ಡನ್ನು ಈ ರೀತಿ ವ್ಯಯ ಮಾಡಬೇಡಿ, ಕೊಟ್ಟಮೇಲೆ ದುಡ್ಡು ಹಿಂದಕ್ಕೆ ಬರುವುದಿಲ್ಲ, ಸರ್ಕಾರ ರೈಟ್ ಆಫ್ ಮಾಡಬೇಕಾಗುತ್ತದೆ. ನಿಮ್ಮ ಹತ್ತಿರ ದುಡ್ಡಿದ್ದರೆ ಮೈಸೂರು ವಿಶ್ವವಿದ್ಯಾಲಯಕ್ಕೋ, ಬೆಂಗಳೂರು ವಿಶ್ವವಿದ್ಯಾಲಯಕ್ಕೋ, ಕರ್ನಾಟಕ ವಿಶ್ವವಿದ್ಯಾಲಯಕ್ಕೋ ಕೊಟ್ಟರೆ ಅಲ್ಲಿ ಕನ್ನಡ ಪ್ರೊಫೆಸರುಗಳಿರುವುದರಿಂದ ಜೂನಿಯರ್ ಎನ್‌ಸೈಕ್ಲೋಪೀಡಿಯಾ ಅವರು ಮಾಡಿ ಕೊಡುತ್ತಾರೆ. ಆದರೆ ಸರ್ಕಾರ ಈ ಹಣವನ್ನು ವ್ಯಯ ಮಾಡಿ, ಎಲ್ಲಾ ಆದನಂತರ ನಮ್ಮ ಒಪ್ಪಿಗೆಯನ್ನು ಕೊಡಿ ಎಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಎಂದು ಘಂಟಾಘೋಷವಾಗಿ ತಮ್ಮ ಮುಂದೆ ಹೇಳಬೇಕಾಗಿದೆ.

ಕಿತ್ತೂರು ಚನ್ನಮ್ಮ ಮೆಮೋರಿಯಲ್ ಫಂಡಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಒಂದು ನಣ್ಣ ಉದಾಹರಣೆಯನ್ನು ಕೊಡಬೇಕಾಗುತ್ತದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮುಂದುರಿಸಬೇಕು ಎನ್ನುವ ಆಶೆಯನ್ನು ಉಳ್ಳವರಾಗಿದ್ದೇವೆ ಎಂದು ತಿಳಿದುಕೊಳ್ಳೋಣ. ಮೈಸೂರಿನಲ್ಲಿ ಮಹಾರಾಣಿ ಕಾಲೇಜಿದೆ. ಅಲ್ಲಿ ಸುಮಾರು ಮೂರು ಸಾವಿರ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲಿ ಹಾಸ್ಟಲ್ ಎಂದು ಇದೆ. ಅಲ್ಲಿ 130 ಜನರಿಗೆ ಅವಕಾಶವಿದೆ. ಆದರೆ 700 ಅರ್ಜಿಗಳು ಬಂದಿವೆ. ಹಾಸ್ಟಲಿನಲ್ಲಿರುವುದಕ್ಕೆ ಜಾಗವಿಲ್ಲ. ಹತ್ತು ವರ್ಷದಿಂದ ಒತ್ತಾಯ ಮಾಡುತ್ತಿದ್ದರೂ ಅದನ್ನು ನೋಡುವವರಿಲ್ಲ. ಆ ಹಾಸ್ಟಲಿನಲ್ಲಿ ಇರುವವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಲು ಒಂದು ಕಟ್ಟಡವಾಗಬೇಕು ಎಂದರೆ ಆಗಿಲ್ಲ. ಹೀಗಿರುವಾಗ ಕಿತ್ತೂರು ರಾಣಿ ಚನ್ನಮ್ಮನ ಹೆಸರಿನಲ್ಲಿ ಸ್ಥಾಪಿತವಾಗಲಿರುವ ವಿದ್ಯಾ ಸಂಸ್ಥೆಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಹಾರಾಣಿ ಕಾಲೇಜು ಹಾಸ್ಟಲಿನಲ್ಲಿ ರೂಮುಗಳ ಸೌಕರ್ಯ ಸಾಲದೆ ಒಂದೊಂದು ರೂಮಿನಲ್ಲಿ 5 ಹುಡುಗಿಯರಿರಬೇಕಾಗಿದೆ, ಅಲ್ಲಿ ಹೆಚ್ಚು ಸೌಕರ್ಯ ಮಾಡಿಕೊಡಲು ಹಣವಿಲ್ಲ, ಕಾರಿಗಳಂತೆ ಇರುವ ಅಲ್ಪ ಜಾಗದಲ್ಲಿ ಹುಡುಗಿಯರು ಇರಬೇಕಾಗಿದೆ. ಹಾಗಿರುವಾಗ ಕಿತ್ತೂರು ಚನ್ನಮ್ಮನವರ ಸ್ಮಾರಕಕ್ಕಾಗಿ ಹಣ ಖರ್ಚುಮಾಡಲು ಹೊರಟಿದ್ದಾರೆ, ಇದರಲ್ಲಿ ಶ್ರೀ ಕಂಠಿಯವರಿಗೆ ಬಹಳ ಆಸಕ್ತಿ. ಆಕೆ ವೀರ ರಾಣಿ ಇರಬಹುದು, ಬೇಕಾದರೆ ಇನ್ನೂ 10 ಲಕ್ಷ ತೆಗೆದುಕೊಳ್ಳಲಿ. ಅದರೆ ಅಕೌಂಟ್ ಅಲ್ಲದಿರೋ ಇಲ್ಲವೋ ಗೊತ್ತಿಲ್ಲ. ಅಲ್ಲಿ ಕೂಡ ಖಾದಿ ಬೋರ್ಡಿನಲ್ಲಾಗಿರುವಂತೆ ಅವ್ಯವಸ್ಥೆಯಾಗಬಹುದು. ಮಹಾರಾಣಿ ಕಾಲೇಜ್ ಹಾಸ್ಟಲಿಗೆ 10 ಸಾವಿರ ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯ ಹೆಸರು ಬರುವುದು ಶ್ರೀ ರಾಮಕೃಷ್ಣ ಹೆಗಡೆಯವರು ಬಹಳ ಕಾಲ ಹಣಕಾಸಿನ ಮಂತ್ರಿಗಳಾಗಿರಲಿ ಎಂದು ಹಾಸ್ಟಲಿನ ವಾಸಿಗಳು ಹರಸುತ್ತಾರೆ. 20 ಲಕ್ಷ ಕೊಟ್ಟು ಒಂದು ಹಾಸ್ಟಲ್ ಕಟ್ಟಿಸಿದರೆ ಹೆಣ್ಣುಮಕ್ಕಳು ಒಳ್ಳೆಯ ರೀತಿಯಿಂದ ವಿದ್ಯಾಭ್ಯಾಸ ಮಾಡಲು ಅವಕಾಶವಾಗುತ್ತದೆ, ಹಾಗೆ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಈಗ ಹಣಕಾಸಿನ ಸಚಿವರು ಹೆಚ್ಚುವರಿ ಬೇಡಿಕೆಯನ್ನು ಮಂಡಿಸಿ 39 ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಅವರಿಗೆ ಇದು ಬಹಳ ಚಿಕ್ಕ ಮೊಬಲಗು ಎಂದು ಕಾಣುತ್ತದೆ. ನಿನ್ನೆಯಿಂದ ಅನೇಕ ಸದಸ್ಯರು ಬಜೆಟ್ ಸರಿಯಾಗಿ ಖರ್ಚಾಗುತ್ತಿಲ್ಲ ಎಂದು ಹೇಳಿದ್ದಾರೆ. ಅದು ಸರಿಯೇ ಎಂದು ನೋಡಬಹುದು. ಮಂತ್ರಿಗಳು ನಿಶ್ಚಿಂತೆಯಿಂದ ಇದ್ದಾರೆ. ಆದರೆ ಹಣ ಯಾರದು ? ನಾವು ಹೇಳುವುದು ಪ್ರಾಮಾಣಿಕವಾದುದೆಂದು ನಂಬಲೋಪದೋಷಗಳನ್ನು ಸರಿಪಡಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

33ನೆಯ ಡಿಪ್ಯಾಂಡಿನಲ್ಲಿ ಕ್ಷಾಮ ಪರಿಹಾರ ನಿಧಿಗೆ ಬೇಡಿಕೆ ಇವೆ, ಇದರಲ್ಲಿ ಬಹಳ ತಾರತಮ್ಯವಿದೆ. ತುಮಕೂರು ಡಿವಿಜನ್ನಿಗೆ ಸುಮಾರು 5 ಲಕ್ಷ ಮಾತ್ರ ಕೊಡಲಾಗಿದೆ, ಅಲ್ಲಿ ಇರಿಗೇಷನ್‌ಗೆ ಬಾವಿಗಳ ಅವಶ್ಯಕತೆ ಹೆಚ್ಚಾಗಿದೆ, ಆದರೆ ಅವಕ್ಕೆ ಸಾಕಷ್ಟು ಹಣ ಒದಗಿಸಿಲ್ಲ. ಅದೇ ಬೆಳಗೂರು ಮತ್ತು ಬೆಳಗಾಂ ಡಿವಿಜನ್ನುಗಳಿಗೆ 30 ಲಕ್ಷ ಕೊಡಲಾಗಿದೆ, ಇರಿಗೇಷನ್ ವೆಲ್ಸ್‌ಗೆ ಮೈಸೂರು ಡಿವಿಜನ್ನಿನಲ್ಲಿ 6 ಲಕ್ಷ ಕೊಡಲಾಗಿದೆ. ಹೋದ ವರ್ಷ ಸುಮಾರು 8—10 ಕೋಟಿ 64 ಫ್ಯಾಮಿನ್ ಫಂಡಿನಿಂದ ಖರ್ಚುಮಾಡಿದೆ, ಸುಮಾರು ನೂರು ಬಾವಿಗಳಿಗೆ ಹೋದ ವರ ಅವಕಾಶ ಮಾಡಿರಬಹುದು. ಕಮ್ಯೂನಿಕೇಷನ್ ಮತ್ತು ಇತರ ಬಾಬಿಗೆ ಹಣ ಒದಗಿಸಿದರೆ ಅದರಲ್ಲಿ ಕಂಟ್ರಾಕ್ಟರ್‌ಗಳಿಗೇ ಹೆಚ್ಚು ಅನುಕೂಲವಾಗುವುದು, ದಿನವೂ ಕೆಲಸ ಮಾಡುವ ಕೂಲಿಗಳಿಗೆ ಕೂಲಿ ದೊರೆಯುಂತೆ ಮಾಡುತ್ತೇವೆಂದು ಹೇಳುವುದು ಕಾಗದದಲ್ಲಿ ಮಾತ್ರ ಇದೆ. ಇದು ಸರಿಯಿಲ್ಲ. ಬಾವಿಗಳಿಗೆ ಹೆಚ್ಚು ಹಣ ಒದಗಿಸಬೇಕಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಕ್ಷಾಮ ಬರುವುದು ಖಾಸ್ತಿ, ಅಲ್ಲಿ ಯಾವ ಪ್ರಾಜೆಕ್ಟು

ಗಳನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ, ಇರಿಗೇಷನ್ ವೆಲ್ಸ್‌ಗೆ ಅನುಕೂಲಮಾಡಿಕೊಟ್ಟರೆ ಜನರಿಗೆ ಸಹಾಯವಾಗುತ್ತದೆ. ಹಾಗೆ ಮಾಡುವುದು ಒಳ್ಳೆಯದು. ಮೊದಲು ಕೊಟ್ಟಿದ್ದರ ಜೊತೆಗೆ ರೈತರಿಗೆ ಪುನಃ 5 ಸಾವಿರ ರೂಪಾಯಿ ಒದಗಿಸುತ್ತಾರೆ. ಈ ರೀತಿ ಸುಮಾರು ಒಟ್ಟು ಹತ್ತು ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಜನರಿಗೆ ಕೂಲಿ ಜಾಸ್ತಿ ಸಿಕ್ಕುತ್ತದೆ. ಸಾಲದ ವಿತರಣೆ ಯಾವ ರೀತಿ ಮಾಡಿಕೊಂಡಿದ್ದೀರಿ ಎಂದರೆ ಅದನ್ನು ವಾಪಸು ಕೊಡಬೇಕಾದರೆ ಇಷ್ಟು ಬಡ್ಡಿ ಮತ್ತು ಇಷ್ಟು ಇನ್‌ಸ್ಟಾಲ್‌ಮೆಂಟ್ ಪ್ರಕಾರ ಕೊಡಬೇಕೆಂದು ಮಾಡಿದ್ದೀರಿ. ಕ್ಷಾಮ ಪರಿಹಾರದ ಹಣದಲ್ಲಿ ತಾವು ಸಾಲ ಕೊಡುವಾಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ನವರು ಕೊಡತಕ್ಕ ಸಾಲದ ಬಡ್ಡಿಗಿಂತ ಕಡಿಮೆ ಬಡ್ಡಿ ದರದಲ್ಲಿ ಕೊಡಬೇಕು. ಕಮ್ಯೂನಿಕೇಷನ್ ಮುಂತಾದ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ, ಹಾಗಿರುವಾಗ ತಾವು ಬಡ್ಡಿ ಇಲ್ಲದೆ ಈ ಸಾಲಗಳನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. 30 ಲಕ್ಷ ರೂಪಾಯಿಗಳನ್ನು ತಾವು ಒದಗಿಸಿದರೆ 60 ಲಕ್ಷ ರೂಪಾಯಿಗಳ ಕೆಲಸವಾಗುತ್ತದೆ. ಇದೇ ರೀತಿ ಇರಿಗೇಷನ್ ವೆಲ್ಸ್. ತುಮಕೂರು ಜಿಲ್ಲೆಯಲ್ಲಿ ತಾವು ಸೃಷ್ಟಿಸಿದುದಕ್ಕಿಂತಲೂ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಈ ಕೆಲಸಗಳನ್ನೆಲ್ಲಾ ಪ್ರಾಮುಖ್ಯವಾಗಿ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಾವು ಅಪ್ಪಣೆ ಮಾಡಬೇಕು.

ಕೋ-ಆಪರೇಟಿವ್ ಸೊಸೈಟಿಗಳ ವಿಚಾರದಲ್ಲಿ ತಾವು ತೀವ್ರ ಗಮನ ಹರಿಸದಿದ್ದರೆ ಈ ದೇಶದ ಹಣ ಪೋಲಾಗುತ್ತದೆ, ಕೊನೆಗೆ ಈ ಸಹಕಾರ ಪದ್ಧತಿಯೇ ಬೇಡ, ಇದನ್ನು ವಾಪಸು ತೆಗೆದು ಕೊಂಡು ಬಿಡಿ ಎಂದು ಹೇಳಬೇಕಾಗುತ್ತದೆ. ಡಿಮ್ಯಾಂಡ್ ನಂಬರ್ 44ರಲ್ಲಿ 65 ಲಕ್ಷ ರೂಪಾಯಿ ಸ್ಪೆಷ್ ಮಾರ್ಕೆಟಿಂಗ್ ಸೊಸೈಟಿಗೆ ಕೊಟ್ಟಿದ್ದೀರಿ, ಇದುವರೆಗೂ ಇದಕ್ಕೆ ಎಷ್ಟು ನಬ್ಬಿಡಿ ಕೊಟ್ಟಿದ್ದೀರಿ ? ಎಷ್ಟು ಹಣ ಷೇರ್ ಕ್ಯಾಪಿಟಲ್ ಕೊಟ್ಟಿದ್ದೀರಿ ? ಈಗ ಎಷ್ಟು ಹಣ ಸಂಪಾದನೆ ಮಾಡಿದೆ ? ಯಾವ ಸ್ಥಿತಿಯಲ್ಲಿದೆ ? 65 ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್‌ಗೆ ಕೊಡುತ್ತೇವೆ ಎಂದರೆ ಹಿಂದೆ ನಾಮಿನೇಷನ್ ಪದ್ಧತಿ ಇತ್ತು, ಅದರಂತೆಯೇ ಇವತ್ತೂ ಕೂಡ ನಾಮಿನೇಟ್ ಆಗಿರತಕ್ಕ ಅಧ್ಯಕ್ಷರು ಇದ್ದಾರೆ. ಅವರು ಯಾವ ರಾಜಕಾರಣ ಮಾಡುತ್ತ ಇದ್ದಾರೋ ಗೊತ್ತಿಲ್ಲ. ಅನೇಕ ಸಾರಿ ಹೇಳಿದ್ದೇನೆ. ಈ ನಿಮ್ಮ ಸಹಕಾರ ಪದ್ಧತಿ ಎಷ್ಟೆಷ್ಟು ಕೇಂದ್ರಸರ್ಕಾರದವರು ನಿಮಗೆ ಹಣ ಕೊಡುತ್ತಾರೆಯೋ ಅದರಮೇಲೆ ಅವಲಂಬಿಸಿದೆ, ಇದನ್ನು ಡೆವಲಪ್ ಮಾಡುತ್ತಾ ಇದ್ದೀರಿ. ಆದರೆ ಇದರಿಂದ ಅನುಕೂಲವಾಗುತ್ತಾ ಇಲ್ಲ, ಹಣ ಹಾಳಾಗುತ್ತಾ ಇದೆ. ಚುನಾವಣೆಗಳಲ್ಲಿ ಮತ್ತು ನಿಮ್ಮ ಸಂಸ್ಥೆಯ ಪರವಾಗಿ ಕೆಲಸ ಮಾಡತಕ್ಕ ಜನರಿಗೆ ದಾನದತ್ತವಾಗಿ ಈ ಹಣವನ್ನು ಹರಿಸುತ್ತಾ ಇದ್ದೀರಿ ಎಂದ ಹೇಳಬೇಕಾಗಿದೆ.

ಈಗ ಅಪೆಕ್ಸ್ ಬ್ಯಾಂಕ್‌ಗೆ ರಿಸರ್ವ್ ಬ್ಯಾಂಕಿನವರು ಕೊಟ್ಟಿರತಕ್ಕ ಸುಮಾರು 30 ಕೋಟಿ ರೂಪಾಯಿ ವಸೂಲಾಗಿಲ್ಲ. ಅದನ್ನು ವಸೂಲು ಮಾಡದೇ ಇವ್ವ ಪಕ್ಷದಲ್ಲಿ ರಿಸರ್ವ್ ಬ್ಯಾಂಕಿನವರು ಹಣ ಕೊಡುವುದಿಲ್ಲ. ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಈ ಮೂರು ಜಿಲ್ಲೆಗಳಿಂದ ಸುಮಾರು 8 ಲಕ್ಷ ರೂಪಾಯಿ ಅಪೆಕ್ಸ್ ಬ್ಯಾಂಕಿಗೆ ಕೊಡಬೇಕಾದ ಹಣ ಬಾಕಿ ಇದೆ. ಅದನ್ನು ವಾಪಸು ಕೊಟ್ಟಿಲ್ಲ, ಕೊಡುವ ಪದ್ಧತಿಯನ್ನು ಅವರು ಇಟ್ಟುಕೊಂಡಿಲ್ಲ ಎಂದು ಕೇಳಿದ್ದೇನೆ. ಈ ರೀತಿ ಬಹಳ ಹಣ ಅಪವ್ಯಯವಾಗುತ್ತಾ ಇದೆ. ಕರ್ನಾಟಕ ಎರಡು ಆಗಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಾ ಇಲ್ಲ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಜನಗಳಿಗೆ ಕೊಟ್ಟಿದ್ದಾರೆ, ರೀಪೇಮೆಂಟ್ ಆಗುತ್ತಾ ಇಲ್ಲ. ರಿಸರ್ವ್ ಬ್ಯಾಂಕಿನವರು 90 ಪರ್ಸೆಂಟ್‌ನಷ್ಟು ಹಣವನ್ನು ವಾಪಸು ಕೊಟ್ಟರೆ ಪುನಃ ಕೊಡುತ್ತೇವೆ, ಇಲ್ಲದೇ ಇದ್ದರೆ ಕೊಡುವುದಿಲ್ಲ ಎಂದು ಹೇಳುತ್ತಾರೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೋರೇಷನ್‌ನವರು ಕೊಡತಕ್ಕ ಒಂದು ಕೋಟಿ 20 ಲಕ್ಷ ರೂಪಾಯಿಗೇ ಆಗಲಿ ಮತ್ತೆ ಬೇರೆ ಯಾವ ಸಾಲಗಳಿಗೇ ಆಗಲಿ ಅವಕಾಶ ವಾಗುತ್ತಾ ಇಲ್ಲ. ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ತಾವು ಇದನ್ನು ಖಂಡಿತ ಬದಲಾವಣೆ ಮಾಡಬೇಕು. ಹಾಗೆ ಬದಲಾವಣೆ ಮಾಡದಿದ್ದರೆ ಹತ್ತಾರು ಕೋಟಿ ರೂಪಾಯಿಗಳು ಈಗ ಹೊಸದಾಗಿ ಬಂದಿರತಕ್ಕ ಭಾಗದ ಕಡೆಗೆ ಹರಿದುಹೋಗುತ್ತದೆ. ಶೇಕಡ 80 ರಷ್ಟು ವ್ಯವಸಾಯ ದಲ್ಲಿ ತೊಡಗಿರತಕ್ಕ ಹಳೇ ಮೈಸೂರು ಪ್ರದೇಶದ ಜನರಿಗೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ಇದನ್ನು ಬದಲಾವಣೆ ಮಾಡದಿದ್ದರೆ ನಮ್ಮ ಭಾಗದ ಜನಕ್ಕೇನೂ ಅನುಕೂಲವಾಗುವುದಿಲ್ಲ. ಇದನ್ನು ಸರ್ಕಾರದವರು ಕೂಡಲೆ ಬದಲಾವಣೆ ಮಾಡದಿದ್ದರೆ ಮುಂದೆ ಇದರಿಂದ ದೊಡ್ಡ ಬೆಂಕಿ ಹತ್ತುತ್ತದೆ. ಆಗ ಇದನ್ನು ಆರಿಸುವುದಕ್ಕೆ ಬಹಳ ಕಷ್ಟವಾಗುತ್ತದೆ.

ಸ್ಯಾಮಿ, ಇನ್ನು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಸರ್ಕಾರದವರು ಸಬ್‌ವೆನ್‌ಷನ್ ಮೂಲಕ ಹಾಗೂ ಸಾಲದ ರೂಪದಲ್ಲಿ ಬಹಳ ಹಣವನ್ನು ಕೊಡುತ್ತಿದ್ದಾರೆ. ಈ ಹಣ ಮತ್ತು ಬೇರೆ

(ಶ್ರೀ ಎ. ಎಲ್. ಶಿವಪ್ಪ)

ಬ್ಯಾಂಕುಗಳಲ್ಲಿ ಸಾಲಮಾಡಿದ ಹಣ ಮತ್ತು ಸ್ಪೇಟ್ ಮಾರ್ಕೆಟಿಂಗ್ ಸೊಸೈಟಿಯಿಂದ ಗೊಬ್ಬರ ವನ್ನು ತಂದು ಅದನ್ನು ಮಾರಾಟ ಮಾಡಿ ಅದರಿಂದ ಬಂದ ಹಣ ಇಷ್ಟೆಲ್ಲವನ್ನೂ ಅವು ಹಾಳು ಮಾಡಿವೆ. ಹೀಗೆ ದೇಶದಲ್ಲಲ್ಲ ಕೋಟಿಗಟ್ಟಲೆ ಹಣ ಹಾಳಾಗುತ್ತಿದೆ. ಸರ್ಕಾರದವರು ಅತ್ತಕಡೆಗೆ ತಮ್ಮ ಗಮನವನ್ನೇ ಕೊಡುತ್ತಿಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ಕಾಂಗ್ರೆಸ್‌ನವರು ಈ ಸಹಕಾರ ಸಂಸ್ಥೆ ಗಳನ್ನು ನಡೆಸುತ್ತಿದ್ದಾರೆ ಅಂಥ ಕಡೆ ಅಲ್ಲಿ ಲಕ್ಷಗಟ್ಟಲೆ ಹಣ ದುರುಪಯೋಗವಾಗಿದ್ದರೂ ಅದನ್ನು ಕಣ್ಣುಬಿಟ್ಟು ನೋಡುತ್ತಿಲ್ಲ, ಆ ಬಗ್ಗೆ ವಿಚಾರಣೆ ಕೂಡ ನಡೆಸುತ್ತಿಲ್ಲ ಇನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಈ ಸಹಕಾರ ಸಂಸ್ಥೆಗಳನ್ನು ಕಾಂಗ್ರೆಸ್ಸೇತರರು ನಡೆಸುತ್ತಿದ್ದಾರೋ ಅಂಥ ಕಡೆಗಳಲ್ಲಿ ಅಡಳಿತ ಚೆನ್ನಾಗಿದ್ದರೂ ಅವುಗಳನ್ನು ಮುಂದುವರಿಯುವುದಕ್ಕೆ ಬಿಡುವುದಿಲ್ಲ. ನಾನೇ ಒಂದು ಸೊಸೈಟಿಗೆ ಅಧ್ಯಕ್ಷನಾಗಿ ಕೆಲಸಮಾಡುತ್ತಿದ್ದೆ. ಅಲ್ಲಿ ಒಂದು ವರ್ಷದಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳ ನಷ್ಟೆಯಲ್ಲಿ ಸುಮಾರು 85 ಸಾವಿರ ರೂಪಾಯಿಗಳ ನಿವ್ವಳ ನಷ್ಟೆಯನ್ನು ನಮ್ಮ ಸಹಕಾರ ಸಂಸ್ಥೆ ಗಳಿಸಿತು. ಅದು ಅಷ್ಟು ಚೆನ್ನಾಗಿ ನಡೆಯುತ್ತಿದ್ದರೂ ಸರ್ಕಾರದವರು ಜನರ ಹೇಳಿಕೆ ಮಾತುಗಳನ್ನು ಕೇಳಿ ನಮಗೆ ಬಹಳ ಕಿರುಕುಳ ಕೊಟ್ಟರು. ಸ್ಪೆಷಲ್ ಆಡಿಟರ್‌ಮೇಲೆ ಸ್ಪೆಷಲ್ ಆಡಿಟರನ್ನು ಕಳುಹಿಸಿಕೊಟ್ಟರು. ಆದರೇನೂ ಅಲ್ಲಿ ತಪ್ಪುಗಳನ್ನು ಕಂಡುಹಿಡಿಯುವುದ ಕ್ಕಾಗಲಲ್ಲ; ಅಲ್ಲಿ ತಪ್ಪುಗಳನ್ನು ಮಾಡಿದ್ದರಲ್ಲವೆ ಅವರು ಕಂಡುಹಿಡಿಯುವುದು? ಹೀಗೆ ಯೋಗ್ಯ ವಾಗಿ ಕೆಲಸಮಾಡತಕ್ಕ ಸಂಸ್ಥೆಗಳಿಗೆ ಕಿರುಕುಳವನ್ನು ಕೊಟ್ಟರೆ ಅವುಗಳು ಕೆಲಸ ಮಾಡುವುದಾದರೂ ಹೇಗೆ? ಲಕ್ಷಗಟ್ಟಲೆ ಹಣವನ್ನು ಪೋಲುಮಾಡತಕ್ಕ ಸಂಸ್ಥೆಗಳ ಕಡೆಗೆ ಇವರು ತಿರುಗಿ ನೋಡುವುದಿಲ್ಲ. ಚೆನ್ನಾಗಿ ಯೋಗ್ಯವಾಗಿ ಕೆಲಸಮಾಡತಕ್ಕ ಸಂಸ್ಥೆಗಳನ್ನು ಕೆಲಸಮಾಡುವುದಕ್ಕೆ ಬಿಡುವುದಿಲ್ಲ, ಅಂತೂ ಒಟ್ಟಿನಲ್ಲಿ ಈ ಸಹಕಾರ ಬಾಬು ಹಾಳಾಗುತ್ತಿದೆ. ಇದರಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗುತ್ತಿದೆ. ಈ ಸಂಸ್ಥೆಗಳ ಆಡಿಟ್ಟಿಗಾಗಿ ನೇಮಕ ಮಾಡಿಕೊಂಡಿರುವ ಸ್ಪೆಷಲ್ ಸೆಲ್‌ಗಳ ಬಗ್ಗೆ ನಾನು ಒಂದು ಪ್ರಶ್ನಾವಳಿ ಸಹಾ ಕಳುಹಿಸಿಕೊಟ್ಟಿದ್ದೆ. ಈ ಆಡಿಟ್ ಬಾಬಿನಲ್ಲೂ ಕೂಡ ಬಹಳ ಅನ್ಯಾಯಗಳು ನಡೆಯುತ್ತಿವೆ. ಬಡಜನರಿಂದ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸರ್ಕಾರದವರು ತೆರಿಗೆಯ ರೂಪದಲ್ಲಿ ವಸೂಲ್ಮಾಡಿಕೊಂಡು ತಂದ ಹಣವನ್ನು ಹೀಗೆ ಪೋಲು ಮಾಡುವುದಕ್ಕೆ ಅವಕಾಶ ಕೊಡುವಾರದು. ತಪ್ಪಿತಸ್ಥರು ಅವರು ಯಾರೇ ಆಗಿರಲಿ, ಸರ್ಕಾರದ ವರು ಅವರ ಬಗ್ಗೆ ಉಗ್ರಕಾರ್ಯಕ್ರಮಗಳನ್ನು ಕೈಗೊಳ್ಳದಿದ್ದರೆ ಈ ಸಹಕಾರ ಸಂಸ್ಥೆಗಳೆಲ್ಲಾ ಹಾಳಾಗಿಹೋಗುತ್ತವೆ. ಇವು ಇರಲೇಬೇಕು ಅನ್ನುವುದಾದರೆ ಇವುಗಳನ್ನು ಅಡ್ಮಿನಿಸ್ಟ್ರೇಷನ್ ನರಿಯಾಗಿ ಮಾಡಿ, ಇಲ್ಲವೇ ಇವುಗಳನ್ನು ಕೂಡಲೆ ಮುಚ್ಚಿಬಿಡಿ ಎಂದು ಹೇಳುತ್ತೇನೆ. ಈ ಸಹಕಾರ ಇಲಾಖೆಯಲ್ಲಾದರೂ ಇರತಕ್ಕ ಅಧಿಕಾರಿಗಳ ಸಂಖ್ಯೆ ಎಷ್ಟು? ಅದಕ್ಕೆ ಕೊನೆಮೊದಲಿದ್ದ ಹಾಗೆ ಕಾಣುವುದಿಲ್ಲ. ಇಂಥ ಒಂದು ಅಧಿಕಾರಿಗಳ ಸೈನ್ಯವಾದರೂ ಏತಕ್ಕಿರಬೇಕು? ಹತ್ತು ವರ್ಷ ಗಳಾದರೂ ಜನರಲ್‌ಬಾಡಿ ನಡೆಸದೆ ಇರತಕ್ಕಂಥ ಸಂಸ್ಥೆಗಳು ರಾಜ್ಯದಲ್ಲಿ ಅನೇಕ ಇರುತ್ತವೆ. ಇಂಥ ಸಂಸ್ಥೆಗಳಲ್ಲಿ ಹಾಳಾಗತಕ್ಕ ಹಣ ಅಷ್ಟಿಷ್ಟಲ್ಲ. ಹೀಗೆ ದೇಶದ ಹಣ ಪೋಲಾಗುತ್ತಿದ್ದರೆ ಇವರು ಸಮಾಜವಾದ ಸಮಾಜವನ್ನು ಜಾರಿಗೆ ತರುವುದು ಎಂದು? ಇದರಿಂದ ಜನಗಳಿಗೆ ಅನುಕೂಲ ವಾಗುವುದಿಲ್ಲ. ಸರ್ಕಾರ ದುಷ್ಟಪದ್ಧತಿಯನ್ನು ಬೆಳೆಸಿದಂತಾಗುತ್ತದೆ. ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಇಡೀ ದೇಶವೇ ಹಾಳಾಗುತ್ತದೆ. ಕೋಆಪರೇಟಿವ್ ಪದ್ಧತಿಯನ್ನು ಸರಿಯಾಗಿ ಆರ್ಗನೈಜ್ ಮಾಡದಿದ್ದರೆ ಬಹಳ ಅನ್ಯಾಯಗಳು ಆಗುತ್ತವೆ. ದೇಶದ ಕಲ್ಯಾಣಕ್ಕೋಸ್ಕರ ಸಮಾಜವಾದವನ್ನು ತರಬೇಕೆಂಬ ಆಶೆ ಇದ್ದರೆ, ಅದಕ್ಕಾಗಿ ಯಾವುದು ಮಾಡಿದರೆ ಸಾಧ್ಯವಾಗುತ್ತದೆಂದು ಯೋಚಿಸಿ ಮಾಡಬೇಕು. ಅದರಲ್ಲಿ ನಂಬಿಕೆ ಇರುವವರ ಪೈಕಿ ನಾನೂ ಒಬ್ಬ. ಈಗ ಇರತಕ್ಕ ಕೋಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಸಹಕಾರ ಸಚಿವರಾಗಿದ್ದರು. ಈಗ ಹಣಕಾಸಿನ ಸಚಿವರಾಗಿದ್ದಾರೆ. ಆದ್ದರಿಂದ ಹಣಕಾಸಿನ ಸಚಿವರಾಗಿರುವವರು ಈ ಕೋಆಪರೇಟಿವ್ ಡಿಪಾರ್ಟ್‌ಮೆಂಟ್ ಏನಿದೆ ಅದನ್ನು ಅವರೇ ವಹಿಸಿಕೊಂಡರೆ ದೇಶದಲ್ಲಿ ಬಹಳವಾಗಿ ಅಭಿವೃದ್ಧಿ ಕಾರ್ಯಗಳು ಆಗುತ್ತವೆ. ಜನರಿಗೂ ಹೆಚ್ಚಿಗೆ ಅನುಕೂಲವಾಗುತ್ತದೆ. ಏಕೆಂದರೆ ಸರ್ಕಾರದವರು ಕೊಡತಕ್ಕ ಹಣದಲ್ಲಿ ಶೇಕಡ 10 ರಷ್ಟೂ ಕೂಡ ಉಪಯೋಗವಾಗುತ್ತಾ ಇಲ್ಲ. ಅದ್ದರಿಂದ ಇದರ ಬಗ್ಗೆ ಸರ್ಕಾರದವರು ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅಧ್ಯಕ್ಷರೇ, ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ವೈಯಕ್ತಿಕವಾಗಿ ನನಗೂ ವಿಶ್ವಾಸ ಇದೆ. ನಾನು ಈಗ ಯಾವ ವಿಷಯದ ಬಗ್ಗೆಯೂ ಜಾಸ್ತಿ ಕಾರಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ನಾವು ಮತ್ತು ಶ್ರೀಮಾನ್

ರಾಮಕೃಷ್ಣ ಹೆಗಡೆಯವರು ಹಾಗೂ ಈ ದೇಶದ ಜನ ಈ ವರ್ಷ ಗಾಂಧಿ ಶತಮಾನೋತ್ಸವ ವರ್ಷವೆಂದು ತೀರ್ಮಾನ ಮಾಡಿಕೊಂಡು ಈ ವರ್ಷದೊಳಗೆ ಅವರ ಉತ್ಸವವನ್ನು ಆಚರಣೆ ಮಾಡತ್ತಿನ್ನೇವೆಂದು ಇಲ್ಲಿ ಒಂದು ಕಡೆ ತೋರಿಸಿದ್ದಾರೆ. ಇಲ್ಲಿ ರಾಜ್ಯಪಾಲರಿಗೆ ಒಂದು ರಾಜಭವನ ಇದೆ. ಅದು ಒಂದು ದೊಡ್ಡ ಬಿಳೀ ಆನೆಯ ಹಾಗೆ ಇದೆ. ಇವರು ರಾಜಭವನಕ್ಕಾಗಿ ಖರ್ಚು ಮಾಡಿರುವುದನ್ನು ನೋಡಿದರೆ, ಅದು ಒಂದು ಪ್ರಜಾತಂತ್ರವೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಸ್ವಲ್ಪ ಮಹಾತ್ಮ ಗಾಂಧಿಯವರ ಫೋಟೋ ಕಡೆ ತಿರುಗಿ ಅವರು ಹಾಕಿಕೊಂಡಿರತಕ್ಕ ಬಟ್ಟೆಯನ್ನು ನೋಡಲಿ. ಮಹಾತ್ಮ ಗಾಂಧಿಯವರನ್ನು ತಾವು ಮರೆತಿದ್ದೀರೆಂದು ನನಗೆ ಕಾಣುತ್ತದೆ ರಾಜಭವನದಲ್ಲಿ ಯಾವುದೋ ಒಂದು ಮಹಡಿಯ ರಿಪೇರಿ ಮಾಡುವುದಕ್ಕೊಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಇಂತಹ ಅನ್ಯಾಯ ಆಗಬಾರದು. ನೀವು ಈ ರೀತಿ ಮಾಡುತ್ತೀರೆಂದು ನಾನು ಕಂಡಿರಲಿಲ್ಲ. ಹೋಗುತ್ತಾ ಹೋಗುತ್ತಾ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಬೇಕು. ಗಾಂಧಿ ಶತಮಾನೋತ್ಸವದಲ್ಲಿ ಗಾಂಧಿಯವರು ಹಾಕಿದಂಥ ಹಾದಿಯನ್ನು ತಾವು ಮರೆತು ನಾವು ಆಡಳಿತ ಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದವರು ಎಂಬುದಾಗಿ ತಿಳಿದು ಲಕ್ಷಾಂತರ ರೂಪಾಯಿಗಳನ್ನು ಈ ಒಂದು ರಾಜಭವನದ ರಿಪೇರಿಗಾಗಿ ಖರ್ಚುಮಾಡುತ್ತಿದ್ದೀರಿ. ಆದರೆ ಇವತ್ತು ತುಕೋಳ್ ಕಮಿಷನ್ನಿನ ವರದಿಯನ್ನು ಇಂಪ್ಲಿಮೆಂಟ್ ಮಾಡಿ ಅಂದರೆ ಅದು ಆಗುವುದಿಲ್ಲವೆಂದು ಹೇಳುತ್ತೀರಿ. ರಾಜಭವನದ ರಿಪೇರಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಇದರಿಂದ ನಾನು ಒಂದು ಮಾತನ್ನು ಹೇಳುವುದಾದರೆ ಮಂತ್ರಿಗಳಿಗೆ ಭೋಗಭವನ, ಅಧಿಕಾರಿಗಳಿಗೆ ಯೋಗಭವನ, ಜನತೆಗೆ ನರಕಭವನ ಮತ್ತೆ ರಾಜ್ಯಪಾಲರಿಗೆ ಈ ಗಾಂಧಿ ಶತಮಾನೋತ್ಸವದಲ್ಲಿ ರಾಜಭವನ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಸದಸ್ಯರುಗಳಿಗೆ ಯಾವ ಭವನ ?

ಶ್ರೀ ವಾಟಾಳ್ ನಾಗರಾಜ್.—ಸದಸ್ಯರುಗಳಿಗೆ ಬೀದಿಭವನ.

ಒಬ್ಬ ಮಾನ್ಯ ಸದಸ್ಯರು.—ಶಾಸಕರ ಭವನವೆಂದು ಇದೆಯೆಲ್ಲಾ.

ಶ್ರೀ ವಾಟಾಳ್ ನಾಗರಾಜ್.—ಅದು ಶಾಸಕರ ಭವನವೇ, ಅದು ಟಿರಿಸ್ಟ್ ಹೋಟ್ಲ್ ಇದ್ದ ಹಾಗೆ ಇದೆ. ಅಲ್ಲಿ ಶಾಸಕರು ಯಾರೋ ಶಾಸಕರಲ್ಲದವರು ಯಾರೋ ಏನೂ ಗೊತ್ತಾಗುವುದಿಲ್ಲ. ಯಾರಾದರೂ ನಮ್ಮ ರಾಜ್ಯಕ್ಕೆ ಬಂದರೆ, ಅವರು ಅಲ್ಲಿಯೇ ಇರುವುದು ಶಾಸಕರ ಭವನದ ಗೌರವ ಈಗಾಗಲೇ ಹೋಗಿದೆ. ಆ ಭವನ ನೋಡಿ ಅದರ ಮುಂದೆ ನಿಂತು ನಾವು ತಲೆ ಚಚ್ಚಿಕೊಳ್ಳಬೇಕು.

3-00 P.M.

ಇದು ಒಳ್ಳೆಯದಲ್ಲ. ನೀವು ಇವತ್ತಿನ ದಿವಸ ದೇಶದಲ್ಲಿ ಒಂದು ಸನ್ಮಾರ್ಗದಲ್ಲಿ ಹೋಗಬೇಕು ದೇಶದಲ್ಲಿ ಸತ್ಯವಾದ ಆಡಳಿತವನ್ನು ನಡೆಸಬೇಕು ಎನ್ನುವಂತಹದನ್ನು ಮರೆತಿದ್ದೀರಿ. ಇವತ್ತಿನ ದಿವಸ ಬಡ ನೌಕರರು ಎಷ್ಟು ಹೋರಾಟವನ್ನು ನಡೆಸಿದರೂ ಕೂಡ ಅವರ ಬಗ್ಗೆ, ಅವರ ಬೇಡಿಕೆಗಳ ಬಗ್ಗೆ ಯಾವುದನ್ನೂ ಮಾಡುತ್ತಾ ಇಲ್ಲ. ಇವತ್ತು ನೀವು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಮೊನ್ನೆ ಮುದ್ರಣ ಕೆಲಸಗಾರರ ಸಂಘದವರು ಸತ್ಯಾಗ್ರಹ ಮಾಡಿದರು. ಅವರಿಗೆ ಸರ್ಕಾರದವರು ಕೊಟ್ಟಿರತಕ್ಕ ಬಟ್ಟೆ ನೋಡಿದರೆ, ಹೇಸಿಕೆಯಾಗುತ್ತದೆ. ಇವತ್ತು ರಾಜಭವನದ ರಿಪೇರಿಗೆ, ಕೇವಲ ನುಣ್ಣಗೆ ಹೊಡೆಸುವುದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಆದರೆ ಇಂತಹ ನಿಮ್ಮ ನೌಕರರಿಗೆ ಒಂದು ಒಳ್ಳೆಯ ಬಟ್ಟೆ ಕೊಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಮುದ್ರಣಕಾರು ಸಂಘದವರು ಆ ಬಟ್ಟೆಯನ್ನು ನನಗೆ ಕಳಿಸಿದ್ದಾರೆ. ನೋಡಿ ಇಲ್ಲಿದೆ ಆ ಬಟ್ಟೆ ಇದನ್ನು ಹಾಕಿಕೊಂಡರೆ ನಾಯಿಗಳು ಅಟ್ಟಿಸಿಕೊಂಡು ಬರುತ್ತವೆಯಂತೆ. ಇದು ಹರಿಶ್ಚಂದ್ರ ಘಾಟಿಗೆ ಹೋಗುವಾಗ ಹೆಣಕ್ಕೆ ಹಾಕುವಂತ ಬಟ್ಟೆಯಾಗಿದೆ. ಸಾಮಾನ್ಯ ಬಡನೌಕರರು ವರ್ಷಗಟ್ಟಲೆಯಿಂದ ಇದನ್ನು ಕೇಳುತ್ತಿದ್ದಾರೆ. ಇವತ್ತು ಈ ವಿಚಾರಗಳನ್ನು ನೀವು ಗಮನಕ್ಕೇನೆ ತೆಗೆದುಕೊಳ್ಳುವುದಿಲ್ಲ ? ಆದರೆ, ನಿಮ್ಮ ರಾಜಭವನಕ್ಕೆ ಏನು ಸಿಂಗಾರ ? ಅದು ಪ್ರಜಾಪ್ರಭುತ್ವದ ಸುಂಪರಿ. ಆದಕ್ಕೆ ಸಿಂಗಾರ ಮಾಡುತ್ತಿದ್ದೀರಿ-ಸ್ನೋ ಪೌಡರ್ ಹಾಕಿದ ಹಾಗೆ. ನಿಮಗೆ ನಿಜವಾಗಿಯೂ ದೇಶವನ್ನು ಧರ್ಮದ ತಳಹದಿಯಲ್ಲಿ, ನಡೆಸಿಕೊಂಡು ಹೋಗಬೇಕೆನ್ನುವ ದೃಷ್ಟಿ ಇರುವುದಾದರೆ, ಈ ಯೋಗ, ಭೋಗ, ನೌಲಭ್ಯಗಳನ್ನು ನಿಲ್ಲಿಸಿ, ಮಹಾತ್ಮ ಗಾಂಧೀಜಿಯವರು, ಯಾವ ರೀತಿ ಹೋದರು, ಆ ರೀತಿ ನಡೆಸಿಕೊಂಡು ಹೋಗಿ. ನನಗೆ ಅನಿಸುತ್ತದೆ, ಅವರು ಬದುಕಿದ್ದರೆ, ಅವರು ಖಂಡಿತವಾಗಿಯೂ ಸತ್ಯಾಗ್ರಹ ಮಾಡಿ ಅಸು ನೀಗುತ್ತಿದ್ದರು. ಇವತ್ತಿನ ದಿವಸ ಬಹಳ ಕಠಿಣವಾದಂತಹ ಪರಿಸ್ಥಿತಿಗೆ ಬಂದಿದ್ದೀರಿ. ಒಂದು ಕಡೆ ಲೆಕ್ಕವಿಲ್ಲದಂತೆ ಎಲ್ಲಾ ಹೋಗುತ್ತಿದೆ. ಶ್ರೀಮಾನ್ ಜಿ. ವಿ. ಹಳ್ಳಿಕೇರಿ

(ಶ್ರೀ ವಾಟಾಳ್ ನಾಗರಾಜ್)

ಯಾರು ಖಾದಿ ಬೋರ್ಡಿನ ಅಧ್ಯಕ್ಷರಾಗಿದ್ದಾಗ ಲಕ್ಷಾಂತರ ರೂಪಾಯಿ ಲೆಕ್ಕವಿಲ್ಲದಾಗಿದೆ. ಇವತ್ತು ಬೆಕಾದವರಿಗೆ ಒಂದು ರೀತಿ, ಬೇಡವಾದವರಿಗೆ ಇನ್ನೊಂದು ರೀತಿ ಮಾಡುತ್ತಿದ್ದೀರಿ. ಆಗ ಆದಂತಹ ದುರಂತ, ಅಕ್ರಮ, ಕರ್ಮಕಾಂಡ ಏನಾಯಿತು ?

ಆಲ್ಲ ಹಳೆಯ ಲೆಕ್ಕವನ್ನು ಬಿಟ್ಟು ಹೊಸ ಲೆಕ್ಕವನ್ನು ಪ್ರಾರಂಭ ಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಂತ್ರಿಗಳನ್ನು ಹಿಡಿಯುವಕಾಲ ಬರುತ್ತದೆ. ಅವರನ್ನು ಬಿಡಿಸಿಕೊಳ್ಳುವುದಕ್ಕೆ ಕೈಮುಗಿದು ಕೇಳಿಕೊಂಡರೂ ಅವರನ್ನು ಬಿಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲದೇ ಇರುವ ಕಾಲ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಏನೇನೋ ನಡೆಯುತ್ತದೆ. ಜನತಾ ರಾಜ್ಯದಲ್ಲಿ ಯಾರಿಗೂ ಯಾವುದೂ ಶಾಶ್ವತ ಇಲ್ಲ. ಈಗ ನಮ್ಮಲ್ಲಿ ಇಂಡಿಕೇಟ್ ಮತ್ತು ಸಿಂಡಿಕೇಟ್ ಬೇರೆ ಹುಟ್ಟಿಕೊಂಡಿವೆ. ಅದರಲ್ಲಿ ಯಾರು ಯಾರು ಯಾವ ಕಡೆ ಇದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ದೇಶದ ಅಭಿವೃದ್ಧಿಯ ಕಡೆ ಗಮನ ಕೊಟ್ಟು ಕೆಲಸ ಮಾಡಬೇಕು. ಅವರು ಹೇಳಿದ್ದು ಮಾಡುತ್ತೇವೆ, ಇವರು ಹೇಳಿದ್ದು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಮಾಡತಕ್ಕ ಕೆಲಸವನ್ನು ಸರಿಯಾಗಿ ಮಾಡದೆ ಸರ್ಕಾರದವರು ತಮ್ಮ ಮನಸ್ಸಿಗೆ ಬಂದಹಾಗೆ ಕೆಲಸವನ್ನು ಮಾಡುವುದಾದರೆ ಅದನ್ನು ಪ್ರತಿಭಟನೆ ಮಾಡತಕ್ಕ ಕಾಲ ನಿನ್ನಿಹತವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ಸಪ್ಲಿಮೆಂಟರಿ ಡಿಮ್ಯಾಂಡಿನ ಬಗ್ಗೆ ಅದರಲ್ಲೂ ಕೂಡ ವ್ಯವಸಾಯ ಇಲಾಖೆಯ ಬೇಡಿಕೆಗಾಗಿ 1,53,34,475 ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಅದು ಯಾವ ರೀತಿ ವಿನಿಯೋಗವಾಗುತ್ತಿದೆ ಎನ್ನತಕ್ಕಂಥಾದ್ದನ್ನು ನಾವು ವಿಚಾರ ಮಾಡಬೇಕಾಗಿದೆ. ಇವೊತ್ತಿನ ದಿವಸ ವ್ಯವಸಾಯ ಇಲಾಖೆಗೆ ಸರ್ಕಾರದವರು ಏನು ಹಣವನ್ನು ಖರ್ಚು ಮಾಡುತ್ತಿದ್ದಾರೆಯೋ ಅದು ಸರಿಯಾದ ಮಾರ್ಗದಲ್ಲಿ ಖರ್ಚಾಗುತ್ತಿಲ್ಲ. ಯಾವ ಇಲಾಖೆ ಈ ಕೆಲಸವನ್ನು ಮಾಡಬೇಕೋ ಆ ಇಲಾಖೆ ಕೆಲಸವನ್ನು ಮಾಡದೆ ಎನ್.ಇ.ಎಸ್ ಇಲಾಖೆಯ ಮುಖಾಂತರ ಈ ಇಲಾಖೆಯ ಕೆಲಸಕಾರ್ಯಗಳು ನಡೆಯುತ್ತಿವೆ. ಇದರಲ್ಲಿ ಎಂದರೆ ಎನ್.ಇ.ಎಸ್ ಇಲಾಖೆಯಲ್ಲಿರತಕ್ಕ ವಿಲೇಜ್ ಲೆವೆಲ್ ವರ್ಕರುಗಳು ರೈತರಲ್ಲಿ ನೇರವಾದ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಅದರು ಯಾವರೀತಿ ಹೊಸ ಬೆಳೆಗಳನ್ನು ಬೆಳೆಯಬೇಕು, ಯಾವ ಕಾಲದಲ್ಲಿ ಬೆಳೆಗೆ ಗೊಬ್ಬರ ಹಾಕಬೇಕು ಎನ್ನುವುದನ್ನು ರೈತರಿಗೆ ಈ ವಿಲೇಜ್ ಲೆವೆಲ್ ವರ್ಕರುಗಳು ಮಾರ್ಗದರ್ಶನ ಮಾಡಿಕೊಡುತ್ತಿದ್ದಾರೆ. ಈ ವಿಲೇಜ್ ಲೆವೆಲ್ ವರ್ಕರುಗಳು ಜಮೀನಿನಲ್ಲಿ ಯಾವರೀತಿ ಹೊಸ ಮಾದರಿಯಲ್ಲಿ ಬೆಳೆಯನ್ನು ಬೆಳೆಯಬೇಕು ಎನ್ನುವುದರ ಬಗ್ಗೆ ಅನುಭವ ಪಡೆದುಕೊಂಡಿರುವುದಿಲ್ಲ. ಈ ರೀತಿ ಅನುಭವವನ್ನು ಪಡೆದುಕೊಳ್ಳದೇ ಇರುವ ವಿಲೇಜ್ ಲೆವೆಲ್ ವರ್ಕರುಗಳು ರೈತರಿಗೆ ಕೊಡತಕ್ಕ ಸಲಹೆಯಿಂದ ಅಘಾತಗಳಾಗುತ್ತವೆ. ಇದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ. ವ್ಯವಸಾಯ ಇಲಾಖೆಯಲ್ಲಿರತಕ್ಕ ತಜ್ಞರು ಏನಿದ್ದಾರೆ ಆ ತಜ್ಞರ ಮುಖಾಂತರ ರೈತರಿಗೆ ಇದ್ದಂಥಹ ನೇರವಾದ ಸಂಪರ್ಕವನ್ನು ತಪ್ಪಿಸಿದ್ದಾರೆ. ಇದರಿಂದಾಗಿ ಈಗ ವ್ಯವಸಾಯ ಇಲಾಖೆಯಲ್ಲಿರತಕ್ಕ ತಜ್ಞರು ಹೋಗಿ ರೈತರಿಗೆ ಸಲಹೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸಿಂದಿನ ರೀತಿಯಲ್ಲಯೇ ವ್ಯವಸಾಯ ಇಲಾಖೆಯ ತಜ್ಞರು ರೈತರಿಗೆ ಸಲಹೆಗಳನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಎನ್.ಇ.ಎಸ್. ಇಲಾಖೆಯನ್ನು ಆದಷ್ಟು ಜಾಗ್ರತೆ ವಹಿಸಿ ಮಾಡಬೇಕು. ಈ ಎನ್.ಇ.ಎಸ್. ಇಲಾಖೆಗೆ ಖರ್ಚಾಗತಕ್ಕಂಥ ಕೋಟ್ಯಾಂತರ ರೂಪಾಯಿಗಳನ್ನು ಮಿಗಿಸಿ ಅದನ್ನು ವ್ಯವಸಾಯ ಇಲಾಖೆಗೆ ಖರ್ಚು ಮಾಡಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎನ್.ಇ.ಎಸ್. ಇಲಾಖೆಯಲ್ಲಿರತಕ್ಕ ವಾಹನಗಳು ರೈತರಿಗೆ ಉಪಯೋಗವಾಗುತ್ತಿಲ್ಲ. ಅಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳ ಸ್ವಂತ ಕೆಲಸಕಾರ್ಯಗಳಿಗೋಸ್ಕರ ಈ ವಾಹನಗಳು ಉಪಯೋಗವಾಗುತ್ತವೆ. ಅದನ್ನು ತಪ್ಪಿಸಬೇಕು.

ವ್ಯವಸಾಯ ಇಲಾಖೆಯವರು ರೈತರ ಸಂಖ್ಯೆಗನುಗುಣವಾಗಿ ತಜ್ಞರ ಸಂಖ್ಯೆಯನ್ನು ಹೆಚ್ಚಿಸಿ ರೈತರಿಗೆ ತಜ್ಞರ ಸಂಪರ್ಕ ಕಚ್ಚು ಇರುವಂತೆ ಏರ್ಪಾಡು ಮಾಡಬೇಕು. ಇದರಿಂದ ರೈತರಿಗೆ ಒಳ್ಳೆಯ ಸಲಹೆ ಸಿಗುತ್ತದೆಂದು ತಿಳಿದುಕೊಂಡಿದ್ದೇನೆ. ಸರ್ಕಾರದವರು ರೈತರಿಗೆ ಒಳ್ಳೆಯ ಬೆಳೆ ಬೆಳೆಯಬೇಕಾದರೆ ಸುಧಾರಿಸಿದ ಬೀಜಗಳನ್ನು ಮತ್ತು ಒಳ್ಳೆಯ ಗೊಬ್ಬರವನ್ನು ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ರೈತರು ಇವುಗಳನ್ನು ಉಪಯೋಗ ಮಾಡುವ ಮೊದಲು ಅವರ

ಜಮೀನಿನ ಮಣ್ಣಿನ ಪರೀಕ್ಷೆ ನಡೆಯಬೇಕಾಗಿದೆ. ಎಲ್ಲಾ ಕಡೆಗಳಲ್ಲಿಯೂ ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ಇಡುವುದರಿಂದ ಈ ವಿಚಾರದಲ್ಲಿ ರೈತರಿಗೆ ಯಾವ ಅನುಕೂಲವೂ ಆಗುತ್ತಿಲ್ಲವೆಂದು ಹೇಳಬಹುದು. ಪ್ರತಿಯೊಂದು ಹೋಬಳಿಗೂ ಕೂಡ ಒಂದೊಂದು ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ನೇಮಕ ಮಾಡಿದರೆ ರೈತರಿಗೆ ಸರಿಯಾದ ಮಾರ್ಗದರ್ಶನ ಸಿಗುತ್ತದೆಂದು ತಿಳಿದುಕೊಂಡಿದ್ದೇನೆ. ಪ್ರತಿಯೊಂದು ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ಪ್ರತಿ ಹೋಬಳಿಗೂ ಮಂಜೂರು ಮಾಡಬೇಕು ಮತ್ತು ಪ್ರತಿ ಕೇಂದ್ರಕ್ಕೂ ಒಂದೊಂದು ಮೊಬೈಲ್ ವ್ಯಾನನ್ನು ಒದಗಿಸಬೇಕು. ಆ ರೀತಿ ಒದಗಿಸಿದರೆ ಆ ವ್ಯಾನು ಎಲ್ಲಾ ಕಡೆಗೂ ಹೋಗಿ ಎಲ್ಲಾ ಜಮೀನಿನ ಮಣ್ಣನ್ನು ತೆಗೆದುಕೊಂಡು ಬಂದು ಪರೀಕ್ಷೆ ಮಾಡಿ ಸಂಬಂಧಪಟ್ಟ ರೈತರಿಗೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಅದೇ ರೀತಿ ಬೆಳೆಗಳಿಗೆ ರೋಗರುಜಿನಗಳು ಬರದಂತೆ ನೋಡಿಕೊಳ್ಳಬೇಕಾದುದು ಅತಿಮುಖ್ಯವಾದುದು. ಮೊದಲು ರೈತರು ತಮ್ಮ ಜಮೀನಿನಲ್ಲಿ ಬೆಳೆಗೆ ರೋಗ ಬಂದರೆ ಕ್ರಿಮಿನಾಶಕ ಔಷಧ ಕೊಳ್ಳಲು 50 ಭಾಗವನ್ನು ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದರು. ಈಗ ಅದನ್ನು 25 ಪರ್‌ಸೆಂಟ್‌ಗೆ ಇಳಿಸಿದ್ದಾರೆ. ರೈತರು 75 ಭಾಗದ ಖರ್ಚನ್ನು ವಹಿಸಿಕೊಳ್ಳಬೇಕಾಗಿದೆ. ಇದು ಸರಿಯಲ್ಲ. ಮೊದಲಿನಂತೆ 50 ಪರ್‌ಸೆಂಟ್ ಸಬ್ಸಿಡಿ ಕೊಡುವುದನ್ನು ಜಾರಿಗೆ ತರಬೇಕು. ಮತ್ತು ಬೆಳೆಗೆ ರೋಗ ಬಂದಾಗ ಔಷಧವನ್ನು ಸ್ಪ್ರೇ ಮಾಡಲು ಒಂದು ಮೂವಿಂಗ್ ಸ್ಕ್ಯಾಡನ್ನು ಇಡಬೇಕು. ಇದಕ್ಕೆ ಆಗುವ ಖರ್ಚಿನಲ್ಲಿ ಒಂದು ಭಾಗವನ್ನು ಬೇಕಾದರೆ ರೈತರಿಂದ ವಸೂಲಿ ಮಾಡಬಹುದು. ಈಗ ಹೈಬ್ರಿಡ್ ಬೀಜದ ವಿತರಣೆ ಸರಿಯಾಗಿ ಆಗುತ್ತಿಲ್ಲ. ಈಗ ಈ ಬೀಜಗಳನ್ನು ಸುಸಜ್ಜಿತ ಗೋಡೌನ್‌ಗಳಲ್ಲಿ ದಾಸ್ತಾನು ಇಟ್ಟು ಕಾಲಕ್ಕೆ ಸರಿಯಾಗಿ ರೈತರಿಗೆ ವಿತರಣೆ ಮಾಡುತ್ತಿಲ್ಲ. ಸರಿಯಾದ ಬೀಜಗಳನ್ನು ರೈತರಿಗೆ ವಿತರಣೆ ಮಾಡುವುದರಿಂದ ಅವರು ಒಳ್ಳೆಯ ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈ ಕಾರಣದಿಂದ ಹೈಬ್ರಿಡ್ ಬೀಜದ ಬಗ್ಗೆ ಇರುವ ನಂಬಿಕೆ ರೈತರಲ್ಲಿ ಹೊರಟು ಹೋಗುತ್ತಿದೆ. ಇನ್ನು ಮುಂದೆಯಾದರೂ ಕೂಡ ರೈತರಿಗೆ ಸರಿಯಾದ ಹೈಬ್ರಿಡ್ ಬೀಜಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಒಳ್ಳೆಯ ಗೊಬ್ಬರವನ್ನು ರೈತರಿಗೆ ಉಪಯೋಗ ಮಾಡಬೇಕು ಎಂದು ಸರ್ಕಾರದವರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ಒಂದು ಟನ್ ಗೊಬ್ಬರದ ಬೆಲೆ 500ರಿಂದ 600 ರೂಪಾಯಿಗಳ ಮಧ್ಯೆ ಇರುವುದರಿಂದ ರೈತರು ಗೊಬ್ಬರವನ್ನು ಮುಟ್ಟುವ ಸ್ಥಿತಿಯಲ್ಲಿ ಇಲ್ಲ. ಗೊಬ್ಬರದ ಬೆಲೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ಈಚೆಗೆ ಶೇಕಡಾ ಹತ್ತರಷ್ಟು ಜಾಸ್ತಿ ಎಕ್ಸೈಸು ಡ್ಯೂಟಿ ಹಾಕಿದುದರಿಂದ ಹೀಗಾಗಿದೆ. ಇದರಿಂದ ಬಡ ರೈತ ಗೊಬ್ಬರವನ್ನು ಕೊಂಡು ಉಪಯೋಗಿಸಲು ಆಗುತ್ತಿಲ್ಲ. ಈಗಿರತಕ್ಕ ಗೊಬ್ಬರದ ಬೆಲೆಯನ್ನು ಕಡಿಮೆ ಮಾಡಬೇಕು. ಇಲ್ಲದೆ ಇದ್ದರೆ ಬಡ ರೈತ ಉಪಯೋಗ ಮಾಡರಾಗುವುದಿಲ್ಲ. ಈಗ ಕಡಿಮೆ ಬೆಲೆಯಲ್ಲಿ ಗೊಬ್ಬರ ಬಡ ರೈತರಿಗೆ ಎಲ್ಲೂ ಸಿಗುತ್ತಿಲ್ಲ. ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿರುವ ಸಹಕಾರಿ ಸಂಸ್ಥೆಗಳಲ್ಲಿ ಬೇಕಾದಷ್ಟು ಗೊಬ್ಬರದ ಸ್ಟಾಕ್ ಇದೆ. ಇದನ್ನು ಸೊಸೈಟಿಗಳವರು ಹಾಗೂ ವ್ಯವಸಾಯ ಇಲಾಖೆಯವರು ಎಲ್ಲ ರೈತರು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಆದರೆ ಈಗ ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಇದರ ಬೆಲೆ ಒಂದು ಟನ್ನಿಗೆ 200 ರೂಪಾಯಿಗಳಂತೆಯಾದರೂ ನಿಗದಿ ಮಾಡಿದರೆ ಆಗ ರೈತರು ಕೊಳ್ಳಬಹುದು ಮತ್ತು ತಮ್ಮ ಜಮೀನಿಗೆ ಉಪಯೋಗಿಸಿಕೊಳ್ಳಬಹುದು. ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಈಗ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಯ ಗೊಬ್ಬರ ಖರ್ಚಾಗದೆ ಕೊಳೆಯುತ್ತಿದೆ. ಇದು ಖರ್ಚಾಗದೇ ಇರಲು ಕಾರಣ ಇದರ ಬೆಲೆ ಬಹಳ ಹೆಚ್ಚಾಗಿರುವುದರಿಂದ. ಇದಕ್ಕಾಗಿ ಸರಕಾರ ಮುಂದೆ ಬೆಲೆ ಕಡಿಮೆ ಮಾಡಿ ಕೊಡುವಾಗ ಈ ಗೊಬ್ಬರವನ್ನು ಪರೀಕ್ಷೆ ಮಾಡಿ ನಂತರ ಕೊಡಬೇಕು, ಇಲ್ಲದೆ ಇದ್ದರೆ ರೈತರು ಕೊಳೆತ ಗೊಬ್ಬರವನ್ನು ಪ್ರಯೋಗಿಸಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರ ದಾಸ್ತಾನು ಆಗಿ ಕೊಳೆಯುತ್ತಿರುವ ಗೊಬ್ಬರವನ್ನು ಸರಿಯಾಗಿ ಪರೀಕ್ಷೆ ಮಾಡಿ ರೈತರಿಗೆ ಕೊಡಬೇಕು. ಇನ್ನು ಕೆಲವು ದಿನಗಳು ಗೊಬ್ಬರದ ಸ್ಟಾಕ್ ಹಾಗೇ ಉಳಿದರೆ ಅದು ಯಾರಿಗೂ ಉಪಯೋಗವಾಗುವುದಿಲ್ಲ. ಇದರ ಕಡೆಗೆ ಸರಕಾರ ವಿಚಾರ ಮಾಡಬೇಕು.

ಇನ್ನು ಡಿಮ್ಯಾಂಡು 54ರಲ್ಲಿ ಮೈನೂರು ಎರೆಕ್ಟ್ರಿಸಿಟಿ ಬೋರ್ಡಿನಿಂದ ಸರಕಾರಕ್ಕೆ ಬರಬೇಕಾದ ಹಣ ಸುಮಾರು 7,32,26,082 ಎಂದು ಇದೆ. ಇದನ್ನು ಅವರು ಕೊಡುವುದಕ್ಕೆ ಆಗಲಲ್ಲ ಎಂದು ಬೋರ್ಡಿನವರಿಗೆ ಇದನ್ನು ಐದು ವಾರ್ಷಿಕ ಕಂತುಗಳಲ್ಲಿ ಕೊಡಬೇಕೆಂದು ಮಾಡಿದ್ದಾರೆ. ಇದೇ ರೀತಿ ರೈತರು ಏನಾದರೂ ಪಂಪು ಸೆಟ್ಟುಗಳನ್ನು ಸಾಲದಮೇಲೆ ತೆಗೆದುಕೊಂಡು ಉಪಯೋಗಿಸುವಾಗ ಅವರಿಗೆ ಪವರು ಕನ್‌ನಂಪ್ಷನ್ ಚಾರ್ಜು ಕೊಡಲು ಕಷ್ಟವಾಗಿರುವಾಗ ಅವರಿಗೂ ಇಂತಹ ಸೌಕರ್ಯಗಳನ್ನು ಬೋರ್ಡಿನವರು ಏಕೆ ಒದಗಿಸಿಕೊಡಬಾರದು ಎಂದು ನಾನು ಇಲ್ಲಿ ಕೇಳುತ್ತೇನೆ. ಎರೆಕ್ಟ್ರಿಸಿಟಿ ಬೋರ್ಡಿನವರಿಗೆ ಐದು ವರ್ಷಗಳ ಅವಕಾಶ ಕೊಡಬೇಕು ಎಂದು ಮಾಡಿರುವಂತೆ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ರೈತರಿಗೂ ಕೂಡ ಅವರ ಸಾಲಗಳನ್ನು ವಾಪಸ್ಸು ಕೊಡುವಾಗ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಈಚೆಗೆ ಕನ್‌ಸಂಪ್‌ಷನ್ ಚಾರ್ಜುಗಳನ್ನು ಜಾಸ್ತಿ ಮಾಡಿದ್ದಾರೆ. ಇದರ ಕಡೆಗೆ ಸರಕಾರ ವಿಚಾರ ಮಾಡಬೇಕು.

ಮಾನ್ಯ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ಗಳ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಇಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಮಾರ್ಚ್ ತಿಂಗಳಲ್ಲಿ ಬಡ್ಜೆಟ್ ಮಂಡಿಸಿದಾಗ ಈ ಹೆಚ್ಚುವರಿ ಬೇಡಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಸೇರಿಸಿಲ್ಲ. ಅಲ್ಲದೆ ಮಾರ್ಚ್ ತಿಂಗಳ ಆಖೈರಿನಲ್ಲಿ ಕೂಡ ಇಂತಹ ಸಪ್ಲಿಮೆಂಟರಿ ಎಸ್ಟಿಮೆಂಟ್ಸ್‌ಗಳು ಬಂದಿದ್ದುವು. ಆದರಲ್ಲಿ ಕೂಡ ಕೆಲ ಕೆಲವು ಐಟಂಗಳಿಗಾಗಿ ಕೆಲವು ಡಿಮ್ಯಾಂಡುಗಳನ್ನು ನಮ್ಮ ಮುಂದೆ ಇಟ್ಟಿದ್ದರು.

ಇದನ್ನು ಪ್ರಜಾಪ್ರತಿನಿಧಿಗಳ ಗಮನಕ್ಕೆ ತರಿಯಾದ ಕಾಲದಲ್ಲಿ ತರುವುದಕ್ಕೆ ಇಷ್ಟ ಇಲ್ಲದೆ ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ಕುಹಕ ನೀತಿಮಾರ್ಗ ಅನುಸರಿಸುವುದು ಸರಿಯಾದುದಲ್ಲ ಎಂದು ನಾನು ಕಟುವಾಗಿ ಹೇಳುತ್ತೇನೆ. ಅನೇಕ ನ್ಯೂನತೆಗಳನ್ನು ಈ ಸಭೆಯ ಮುಂದೆ ತರದೆ ಯಾವು ಯಾವುದೋ ಬಾಬುಗಳಿಗೆ ಈ ಹೆಚ್ಚುವರಿ ಬೇಡಿಕೆ ತರುವುದು ಸರಿಯಾದುದಲ್ಲ. ಅನಿರೀಕ್ಷಿತವಾಗಿ ಬರತಕ್ಕಂಥ ಬಾಬುಗಳಿಗೆ ಮಾತ್ರ ಈ ಹೆಚ್ಚುವರಿ ಬೇಡಿಕೆ ತರಬೇಕು. ಮೊದಲೇ ಸಭೆಯ ಗಮನಕ್ಕೆ ತರದೆ ಈ ರೀತಿ ಖರ್ಚು ಮಾಡಿದರೆ ಅದನ್ನು ತಡೆಗಟ್ಟಬೇಕು. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎನ್ನುವ ವಿವೇಚನೆ ಸರ್ಕಾರಕ್ಕೆ ಇಲ್ಲ ಎಂದು ನಾನು ಭಾವಿಸುತ್ತೇನೆ. ನಮಗೆ ನ್ಯಾಯವಾಗಿ ಸಲ್ಲಬೇಕಾದಂಥ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಹಣ ಇಲ್ಲ ಎಂದು ಒಂದು ಕಡೆ ಹೇಳುವುದು, ಮತ್ತೊಂದು ಕಡೆ ಆತುರಾತುರವಾಗಿ ಕೆಲಸಗಳನ್ನು ತಗೆದುಕೊಂಡು ಸಪ್ಲಿಮೆಂಟರಿ ಗ್ರಾಂಟ್ ರೂಪದಲ್ಲಿ ತಂದು ಮಂಜೂರು ಮಾಡಿಸಿಕೊಳ್ಳುವುದು, ಈ ರೀತಿ ಒಂದಕ್ಕೊಂದಕ್ಕೆ ಅರ್ಥಾಥ್ ಸಂಬಂಧವಿಲ್ಲ ಎಂದು ಹೇಳುತ್ತೇನೆ. ಕಸ್ತೂರು ರಾಣಿ ಚೆನ್ನಮ್ಮ ಮೆಮೋರಿಯಲ್ ಹೆಸರಿನಲ್ಲಿ 5 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ನಿಮಗೆ ಪ್ರಾಮುಖ್ಯವಾದಂಥ ಬಾಬುಗಳಿಗೆ ಅಂದರೆ ನೀರಾವರಿ ಬಾಬಿಗೆ ಹಣ ಒದಗಿಸುವುದಿಲ್ಲ. ನಣ್ಣ ನೀರಾವರಿ ಕೆಲಸಕ್ಕೆ 30 ಲಕ್ಷ ರೂಪಾಯಿ ಒದಗಿಸಿದ್ದೀರಿ. ಇದಕ್ಕೆ ಇನ್ನೂ 10 ಲಕ್ಷವಲ್ಲ, 20 ಲಕ್ಷವಲ್ಲ, ಒಂದು ಕೋಟಿ ರೂಪಾಯಿ ಹೆಚ್ಚಾಗಿ ಒದಗಿಸಿದ್ದರೂ ಕೂಡ ಪ್ರಯೋಜನ ವಾಗುತ್ತಿತ್ತು. ಹೆಚ್ಚಿನ ಆಹಾರೋತ್ಪತ್ತಿಗೆ ಅನುಕೂಲವಾಗುತ್ತಿತ್ತು. ಇದಕ್ಕೆ ಹಣ ಒದಗಿಸುವುವುಕ್ಕೆ ತಮ್ಮ ಹತ್ತಿರ ಹಣ ಇಲ್ಲ, ಈ ದೃಷ್ಟಿಯಿಂದ ಕಸ್ತೂರು ರಾಣಿ ಚೆನ್ನಮ್ಮ ಮೆಮೋರಿಯಲ್‌ಗೆ 5 ಲಕ್ಷ ರೂಪಾಯಿ ತಾವು ಕೊಟ್ಟಿರುವುದು ಒಂದು ದೋಷ.

ಇನ್ನೊಂದು ವಿಷಯ ಹೇಳಬೇಕಾದರೆ ಒಂದು ರಿಜಿಸ್ಟರ್ಡ್ ಇನ್‌ಸ್ಟಿಟ್ಯೂಷನ್‌ಗೆ ಮೊದಲು ಹಣ ಕೊಟ್ಟು ಬಿಡುವುದು ಅನಂತರ ಅದನ್ನು ಕೈಬಿಟ್ಟುಬಿಡುವುದು, ಈ ರೀತಿ ಮಾಡುವುದು ಸರಿಯಾದುದಲ್ಲ. ಇದರಲ್ಲಿ ಏನು ಉದ್ದೇಶ ಇದೆಯೋ ಏನೋ ಗೊತ್ತಾಗುವುದಿಲ್ಲ.

ಈ ಸಂದರ್ಭದಲ್ಲಿ ನಾನು ಒಂದು ವಿಚಾರ ಒತ್ತಾಯಪೂರ್ವಕವಾಗಿ ಮಾನ್ಯ ಹಣಕಾಸಿನ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಪಕ್ಷ ಆದರಮೇಲೆ ಹಣ ಕೊಡುವುದು ತುಂಬ ಅವಶ್ಯಕತೆ ಎಂದು ಕಂಡುಬಂದಿದ್ದರೆ ಹಣ ಕೊಟ್ಟಮೇಲೆ ಅದರ ಮೇಲೆ ಸರ್ಕಾರದ ಪೂರ್ಣ ಹತೋಟಿ ಇರಬೇಕು. ಅದು ಬಿಟ್ಟು ಹಣ ಪಡೆದಮೇಲೆ ಬೇರೆಯವರಿಗೆ ಒಪ್ಪಿನತಕ್ಕಂಥ ನೀತಿ ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಕ್ಷಾಮಪರಿಹಾರ ಕಾರ್ಯಕ್ರಮ ಕೈಗೊಳ್ಳುವುದರಲ್ಲಿ 5 ವರ್ಷದಿಂದಲೂ ಒಂದೇ ಸಮನೆ ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡುತ್ತಿದ್ದಾರೆ. ಎಷ್ಟು ಹಣ ಖರ್ಚು ಮಾಡಿದ್ದಾರೋ ಅಷ್ಟೇ ಹಣ ದುರುಪಯೋಗವಾಗಿದೆ. ಎಷ್ಟು ಹಣ ಶಾಶ್ವತ ಪರಿಹಾರಕ್ಕೆ ಸಿಕ್ಕಿಲ್ಲ ಎನ್ನುವುದು ನಾವು ಕಣ್ಣಾರೆ ನೋಡುತ್ತಿದ್ದೇವೆ. ಒಂದು ಉದಾಹರಣೆ ಹೇಳುವುದಾದರೆ ನನ್ನ ಭಾಗದಲ್ಲಿ ನಾಗಮಂಗಲ ತಾಲ್ಲೂಕಿಗೆ 18—20 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ ಹೋಗಿ ನೋಡಿದರೆ ನೂರಾರು ಗೋಕಟ್ಟೆಗಳಿಗೆ ಹಣ ಖರ್ಚು ಮಾಡಿದ್ದಾರೆ. ಆದರಲ್ಲಿ ಶೇಕಡ 10 ರಷ್ಟೂ ಕೂಡ ಮಳೆಗಾಲದಲ್ಲಿ ನಿಲ್ಲುವುದಿಲ್ಲ. ಎಲ್ಲಿ ಗೋಕಟ್ಟೆ ಕಟ್ಟಿದರೆ ನಿಲ್ಲುತ್ತದೋ ಅಲ್ಲಿ ಕೆಲಸ ಮಾಡುವು

ದಿಲ್ಲ, ಇದನ್ನು ನಿರ್ಧರಿಸಿ ಹೇಳುವವರು ಯಾರೂ ಇಲ್ಲ. ಏತಕ್ಕೆಂದರೆ ಅಲ್ಲಿ ಒಬ್ಬ ಬಿ.ಡಿ.ಓ. ಹತ್ತಿರ ಒಬ್ಬ ಸೂಪರ್‌ವೈಸರ್ ಇದ್ದಾರೆ ಅವರಿಗೆ ಅವನೇ ಚೀಫ್ ಇಂಜಿನೀಯರ್, ಅವನೇ ಸೂಪರಿಂಟೆಂಡಿಂಗ್ ಇಂಜಿನಿಯರಿಂಗ್. ಅವನು ಏನು ತಿರ್ಮಾನ ಮಾಡುತ್ತಾನೋ ಆ ರೀತಿ ಕೆಲಸ ಮಾಡುತ್ತಾರೆ. ಯಾವ ಕಡೆ ಗೋಕಟ್ಟೆ ಕಟ್ಟಬೇಕು ಎಂದು ಹೇಳುತ್ತಾನೋ ಆಕಡೆ ಕಟ್ಟುತ್ತಾರೆ. ಯಾವ ಕಡೆ ಗೋಕಟ್ಟೆ ಒಡೆಯಬೇಕು ಎಂದು ಹೇಳುತ್ತಾನೋ ಆಕಡೆ ಒಡೆಯುತ್ತಾರೆ. ಒಂದು ರಸ್ತೆ ಮಾಡಬೇಕಾದರೂ ಎಲ್ಲಿ ರಸ್ತೆ ಮಾಡಿದರೆ ಜನಗಳಿಗೆ ಉಪಯೋಗವಾಗುತ್ತದೆ, ಅಲ್ಲಿ ರಸ್ತೆ ಕೆಲಸಗಳನ್ನು ಕೈಗೊಳ್ಳುವುದಿಲ್ಲ. ಅವನು ಯಾವ ರಸ್ತೆಯನ್ನು ಮಾಡಿಸಬೇಕು ಎಂದು ಹೇಳುತ್ತಾನೋ ಅದನ್ನು ಮಾಡಿಸುತ್ತಾರೆ. ಇದರಿಂದ ಆ ರಸ್ತೆಗಳು ಒಂದುಸಾರಿ ಮಳೆಗಾಲ ಬಂದರೆ ಸಾಕು ಎಲ್ಲಾಕೊಚ್ಚಿ ಕೊಂಡು ಹೊರಟು ಹೋಗುತ್ತದೆ. ಪುನಃ ರಸ್ತೆಯ ಗುರುತೇ ಸಿಕ್ಕುವುದಿಲ್ಲ. ಇಂಥಾದಕ್ಕೆಲ್ಲಾ ಈ ರೀತಿಯಾಗಿ ಹಣ ಖರ್ಚು ಮಾಡಿದರೆ ಈ ಕಡೆ ರೈತರಿಗೂ ಪ್ರಯೋಜನವಾಗುವುದಿಲ್ಲ, ಆ ಕಡೆ ಸರ್ಕಾರದ ಬೊಕ್ಕಸದಲ್ಲಿ ಹಣವೂ ಕೂಡ ಉಳಿಯುವುದಿಲ್ಲ. ಇಂಥ ಹಣವನ್ನು ನೇರವಾಗಿ ರೈತರಿಗೆ ಕೊಟ್ಟರೆ ಶಾಶ್ವತ ಪರಿಹಾರವಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ. ಈ ರೀತಿ ಪ್ರಯೋಜನವಿಲ್ಲದ ಕೆಲಸ ಮಾಡುವ ಬದಲಾಗಿ ಅದನ್ನು ನಿಲ್ಲಿಸುವುದು ಒಳ್ಳೆಯದು ಎಂದು ನನ್ನ ಅಪೇಕ್ಷೆ. ನನ್ನ ಭಾಗದ ನಾಗಮಂಗಲ ತಾಲ್ಲೂಕಿಗೆ ಕೊಟ್ಟಿರುವ 18-20 ಲಕ್ಷ ರೂಪಾಯಿನಲ್ಲಿ 5 ಲಕ್ಷ ರೂಪಾಯಿನ ಕೆಲಸವೂ ಕೂಡ ಆಗಿಲ್ಲ. ಅಲ್ಲ ಒಬ್ಬ ಬಿ.ಡಿ.ಓ. ಅವರ ಅಧಿಕಾರ ವ್ಯಾಪ್ತಿಯಲ್ಲಿ ಈ ಕೆಲಸಗಳಿಗೋಸ್ಕರ ಒದಗಿಸಿದ್ದಂಥ ಹಣದಲ್ಲಿ ಅವನು ಒಂದು ಲಕ್ಷ ರೂಪಾಯಿಯನ್ನು ಬಚ್ಚಿಟ್ಟಿದ್ದಾ ಎಂದು ನನಗೆ ವರ್ತಮಾನ ಬಂದಿದೆ. ಅಷ್ಟೇ ಏಕೆ ? ಲೆಕ್ಕ ಕೂಡ ಇದೆ. ಅವನು ನ್ಯಾಯವಾಗಿ ಕೆಲಸ ಮಾಡುತ್ತಿದ್ದಾನೆಯೇ ಎಂದು ನೋಡುತ್ತಿದ್ದೀರಾ ? ಇಲ್ಲ. ಯಾರು ಯಾರು ಎಷ್ಟೆಷ್ಟು ಹಣವನ್ನು ಹೊಡೆಯಬೇಕೋ ಅವರಿಗೆಲ್ಲರಿಗೂ ಈ ಸರ್ಕಾರದಲ್ಲಿ ಸಾಕಾದಷ್ಟು ಅವಕಾಶ ಇದೆ ಎಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಕೂಡ ಇಂಥವು ನಡೆದಿವೆ. ಪ್ರತಿ ಸಲ ಕ್ಷಾಮ ನಿವಾರಣಾ ಕಾರ್ಯಗಳು ಪ್ರಾರಂಭವಾಗಿ ನಡೆಯುತ್ತಿವೆ. ಇದಕ್ಕೆ ಅವಕಾಶ ನಾವು ಕೊಡುತ್ತಲೇ ಬಂದಿದ್ದೇವೆ. ಕೊಂದರೆಯಲ್ಲಿರುವ ನಹೆಸ್ಸಾರು ಜನರಿಗೆ ಪರಿಹಾರ ಕೊಡುವುದಕ್ಕೆ ನಾವು ಕೊಡುವಂಥ ಹಣ ಯಾರಿಗೋ ಕೆಲವರಿಗೆ ಪರಿಹಾರಕ್ಕಾಗಿ ಕೊಟ್ಟಂತಾಗಿದೆ. ಸರ್ಕಾರ ಇದನ್ನು ತೀವ್ರ ರೀತಿಯಲ್ಲಿ ಗಮನಕ್ಕೆ ತೆಗೆದು ಕೊಳ್ಳಬೇಕು. ಪರಿಹಾರ ಕಾರ್ಯಗಳನ್ನು ಬಿ.ಡಿ.ಓ. ಮುಖಾಂತರ ನಡೆಸುವುದಕ್ಕೆ ಬದಲಾಗಿ ರೋಕೋಪಯೋಗಿ ಇಲಾಖೆಯವರಿಗೆ ವಹಿಸುವುದು ಒಳ್ಳೆಯದು. ಆ ಇಲಾಖೆಯಲ್ಲಿ ಲಂಚ ಕೋರತನವಿದೆ, ಅಕ್ರಮಗಳು ನಡೆಯುತ್ತವೆ ಎನ್ನುವ ಸಾಮಾನ್ಯ ಆಪಾದನೆ ಇದ್ದರೂ ಕೂಡ ಅವರು ಒಂದು ಲೆಕ್ಕವನ್ನಾದರೂ ಇಟ್ಟು, ಅಳತೆ ಮಾಡಿ, ಅಂದಾಜುಗಳನ್ನು ತಯಾರು ಮಾಡಿ ಕೆಲಸ ಮಾಡುವುದಾದರೂ ಅಲ್ಲಿದೆ. ಈಗ ನಡೆಯುತ್ತಿರುವುದರಲ್ಲಿ ಅಂದಾಜಿಲ್ಲ, ಲೆಕ್ಕವಿಲ್ಲ, ಯಾರು ಹೇಳುವವರು ಕೇಳುವವರು ಇಲ್ಲ. ಒಬ್ಬ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿರುವವನೇ ಅಲ್ಲಿ ಚೀಫ್ ಇಂಜಿನಿಯರಾಗುತ್ತಾನೆ. ಅವನ ಕೈಕೆಳಗೆ ಈ ಕೆಲಸವೆಲ್ಲ ನಡೆಯುತ್ತದೆ. ಇಂಥದ್ದನ್ನು ಕಂಡೂ ಕಂಡೂ ಈ ಕ್ಷಾಮ ನಿವಾರಣಾ ಕಾರ್ಯಗಳನ್ನು ನಡೆಸತಕ್ಕ ರೆವೆನ್ಯೂ ಮಂತ್ರಿಗಳು ಯಾವುದಾದರೂ ನರಿಯಾಗಿದೆಯೋ ಇಲ್ಲವೊ ಎಂದು ನೋಡಬೇಕು. ಅಷ್ಟಿಲ್ಲ. ಈ ರೀತಿ ದಿಕ್ಕೆಟ್ಟು ಹೋಗಿದೆ, ಮೂಗುದಾರ ಹಾಕುವವರು ಯಾರೂ ಇಲ್ಲ. 90 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಾಗ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ಇಂಜಿನಿಯರಿಂಗ್ ಇಲಾಖೆಯ ಮುಖಾಂತರ ಕೆಲಸ ನಡೆಸುವಂತೆ ಮಾಡಬೇಕು. ಅಂದಾಜು ತಯಾರು ಮಾಡದೆ ಏನೂ ಇಲ್ಲದೆ ಕೆಲಸ ಮಾಡಿ ದುಡ್ಡನ್ನು ವ್ಯರ್ಥಾ ವ್ಯಯ ಮಾಡುವುದು ಸರ್ಕಾರದ ಬೊಕ್ಕಸಕ್ಕೆ ಹಾನಿಯನ್ನುಂಟು ಮಾಡಿದಂತಾಗುತ್ತದೆ. ಇದನ್ನು ತಪ್ಪಿಸಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮ್ಮ ಅರ್ಥ ಮಂತ್ರಿಗಳು ಅನುಸರಿಸುವ ನೀತಿ ಸರಿಯಾದುದಲ್ಲ. ಯಾವುದೇ ಹಣವನ್ನು ಖರ್ಚು ಮಾಡಬೇಕಾದರೂ ತೀರ ಅನಿವಾರ್ಯವಾದ ಪ್ರಸಂಗಗಳನ್ನು ಬಿಟ್ಟು, ಉಳಿದ ಪ್ರಸಂಗಗಳಲ್ಲಿ ಸಭೆಯ ಗಮನಕ್ಕೆ ತಂದು ಪಡೆದು ಹಣವನ್ನು ಖರ್ಚು ಮಾಡತಕ್ಕ ನೀತಿಯನ್ನು ಅನುಸರಿಸದೆ ಆಂಗಿದಾಗ್ಗೆ ಕಾನೂನು ಪ್ರಕಾರವಾಗಿ ಅಧಿಕಾರವಿದೆ ಎಂದು ಸಪ್ಲಿಮೆಂಟರಿ ಗ್ರಾಂಟ್ ರೂಪದಲ್ಲಿ ಹಣವನ್ನು ಪಡೆಯತಕ್ಕ ನೀತಿಯನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ನದನದಲ್ಲಿ ಮಂಡಿಸಿರತಕ್ಕ ಹೆಚ್ಚುವರಿ ಬೇಡಿಕೆಗಳ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಸೆ ಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಕೆಲವು ನಿಯಮಗಳನ್ನು

(ಶ್ರೀ ಎಸ್. ಬಂಗಾರಪ್ಪ)

ಅನುಸರಿಸಬೇಕಾಗುತ್ತದೆ. ಅದು ಸಪ್ಲಿಮೆಂಟರಿ ಡಿಮಾಂಡನ್ನು ಯಾವಾಗ ಇಡಬೇಕು ಎನ್ನುವ ವಿಷಯಕ್ಕೆ ಯಾವಾಗ ಕೇಳಬೇಕು ಎನ್ನುವ ವಿಷಯಕ್ಕೆ ಸಂಬಂಧಪಟ್ಟುದು. ಈಗಾಗಲೇ ಈ ಸದನದ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚೇಗೌಡ್ರು ಗೌಡರು ಅದರ ಬಗ್ಗೆ ಸ್ಪಷ್ಟ ವಿವರಗಳನ್ನು ಕೊಟ್ಟಿದ್ದಾರೆ. ಇನ್ನು ಹೆಚ್ಚು ಅದರ ಬಗ್ಗೆ ಹೇಳುವುದಕ್ಕೆ ನಾನು ಆಸೆ ಪಡುವುದಿಲ್ಲ. ಆದರೆ ಮೂಲತಃ ಪ್ರಜಾಪ್ರಭುತ್ವಕ್ಕೆ ಬದ್ಧರಾಗಿರತಕ್ಕ ಜನ ನಾವು ಕೆಲವೊಂದು ತಪ್ಪನ್ನು ಮಾಡಿದ್ದೇವೆ, ಮಾಡುತ್ತಿದ್ದೇವೆ. ಅದೇನೆಂದರೆ ಇನ್ನೂ ಕೂಡ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಹೀಗೆ ಬೇಡಿಕೆಗಳನ್ನು ಯಾವುದೇ ನಮೂನೆಯಲ್ಲಿ ಇಟ್ಟಿದ್ದರೂ ಕೂಡ, ಅದನ್ನು ಪಾಸ್ ಮಾಡಿಕೊಂಡು ಖರ್ಚು ಮಾಡುವುದಕ್ಕೆ ಹಣವನ್ನು ತೆಗೆದಿಟ್ಟಿದ್ದರೂ ಕೂಡ, ಅದರ ಬಗ್ಗೆ ಪ್ರಶ್ನೆ ಮಾಡತಕ್ಕ ಅಧಿಕಾರ ಜನತೆಗೆ ಆಗ ಇರಲಿಲ್ಲ. ಆದರೆ ಸ್ವಾತಂತ್ರ್ಯಾನಂತರ ಕೆಲವೊಂದು ಮೂಲ ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಾವು ಇನ್ನೂ ಕೂಡ ಪ್ರಜಾರಾಜ್ಯ ಪದ್ಧತಿ ಸರಿ ಎಂದು ಹೇಳತಕ್ಕ ವಿಚಾರವನ್ನು ತೀರ್ಮಾನ ಮಾಡಬೇಕಾಗಿದೆ.

3-30 P.M.

ಕಷ್ಟದಲ್ಲಿರುವ ದೇಶ ಇದು, ಹಣಕಾಸಿನ ತೊಂದರೆ ವಿಪರೀತವಾಗಿರುವ ದೇಶ ಇದು, ಭಾರತದ ಸಾಲವು ಹೊರೆ 15 ಸಾವಿರ ಕೋಟಿಗಿಂತ ಹೆಚ್ಚಾಗಿದೆ, ಬಡತನ ಮೂರ್ತಿವೆತ್ತಿದೆ, ಹಲವಾರು ಸಮಸ್ಯೆಗಳಿವೆ, ದಿವಸಕ್ಕೆ 24 ಗಂಟೆಗಳಕಾಲ ಗಮನಕೊಟ್ಟರೂ ಅವು ಬಗೆ ಹರಿಯುವುದಿಲ್ಲ. ಇಂಥ ಪ್ರಶ್ನೆಯಿದೆ, ಎಲ್ಲರಿಗೂ ಇದು ಗೊತ್ತಿದೆ. ಹೀಗಿರುವಾಗ ಮೂಲತಃ ಯೋಚನೆಮಾಡಿ ಆರ್ಥಿಕವಾಗಿ ಕಷ್ಟದಲ್ಲಿರುವಾಗ ಯಾವ ರೀತಿ ಹಣ ಖರ್ಚುಮಾಡಬೇಕು ಎಂಬುದನ್ನು ಮನಗಂಡು ಒಂದು ಸರಿಯಾದ ವ್ಯವಸ್ಥೆಯನ್ನು ರೂಢಿಸಬೇಕು. ಈಗ ಹಲವಾರು ಬೇಡಿಕೆಗಳಿವೆ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ, ರಾಜಭವನಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕಕ್ಕೆ ಹಲವಾರು ಲಕ್ಷ ಕೊಟ್ಟಿದ್ದಾರೆ, ಆಯವ್ಯಯ ಪಟ್ಟಿ ಚರ್ಚೆಯಾದಾಗ ಮತ್ತು ಇತರ ಸಂದರ್ಭಗಳಲ್ಲಿ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ, ಈಗಲೂ ಅದನ್ನೇ ಹೇಳುತ್ತಿದ್ದಾರೆ. ಈ ಕಷ್ಟ ಪರಿಸ್ಥಿತಿಯಲ್ಲಿ ಹಣ ಯಾವುದಕ್ಕೆ ಖರ್ಚುಮಾಡಬೇಕು, ಯಾವುದಕ್ಕೆ ಮಾಡಬಾರದು ಎಂಬ ವಿಚಾರದಲ್ಲಿ ವಿವೇಚನೆ ಇರಬೇಕು. ನನ್ನ ಪ್ರಕಾರ ಮೂಲತಃ ತಪ್ಪಿದೆ. ಕಿತ್ತೂರು ರಾಣಿಯವರ ಸಾಹಸವನ್ನು ತೋರಿಸಿರಬಹುದು, ರಾಜಭವನಕ್ಕೆ ಖರ್ಚು ಮಾಡಿದ್ದಾರೆ, ಆ ವಿಚಾರ ಇಲ್ಲಿ ಬರುವುದಕ್ಕೆ ಮುಂದೆ ಭವನ ನಿರ್ಮಾಣವಾಗಿದೆ. ಚನ್ನಮ್ಮನವರ ವಿಚಾರ ಸ್ವಾತಂತ್ರ್ಯಪೂರ್ವಕ್ಕೆ ಸಂಬಂಧಪಟ್ಟಿದ್ದು, ಹಣಕಾಸಿನ ಕೊರತೆಯಿಲ್ಲದಿದ್ದಾಗ, ಕ್ಷಾಮ ಡಾಮರ ಮುಂತಾದುವುಗಳಿಲ್ಲದಿರುವಾಗ ಚನ್ನಮ್ಮ ಸ್ಮಾರಕಕ್ಕೆ, ರಾಜಭವನ ಮುಂತಾದುವುಗಳಿಗೆ ಖರ್ಚುಮಾಡಬಹುದು, ಅಡ್ಡಿಯಿಲ್ಲ. ಆಗ ದುಂದುವೆಚ್ಚ ಸಹ ಮಾಡಬಹುದು. ಆದರೆ ಮುಂದೆ ಏನಾಗಬಹುದೆಂಬುದನ್ನು ಯೋಚನೆ ಮಾಡಬೇಕು. ಜನರು ಮಂತ್ರಿಗಳನ್ನು ನುತ್ತುಗಟ್ಟಿ ವಿಚಾರ ಮಾಡುವ ಕಾಲ ಬರಬಹುದು. 22 ವರ್ಷಗಳಿಂದ ದುರಾಡಳಿತ ನಡೆದಿದೆ, ಇಲ್ಲಿಯವರೆಗೂ ಯಾವುದಕ್ಕೆ ಅವಶ್ಯಕವಾಗಿ ಖರ್ಚುಮಾಡಬೇಕೆಂಬುದನ್ನು ಇನ್ನೂ ಮನಗಂಡಿಲ್ಲ. ಹಲವಾರು ಉದಾಹರಣೆಗಳಿವೆ. ನಮ್ಮ ಮುಂದಿರುವ ಬೇಡಿಕೆಗಳನ್ನು ನಾವು ಒಪ್ಪಿದರೆ ದುಂದುಗಾರಿಕೆಗೆ, ದುರಾಡಳಿತಕ್ಕೆ ಒಪ್ಪಿಗೆ ನೀಡಿದಂತಾಗುವುದು. ಇವನ್ನು ಒಪ್ಪುವುದಕ್ಕಾಗುವುದಿಲ್ಲ. ಸ್ವಾತಂತ್ರ್ಯ ಬಂದಮೇಲೆ 22 ವರ್ಷಗಳಿಂದ ದುರಾಡಳಿತದ ಬಗ್ಗೆ ಉದಾಹರಣೆಗಳನ್ನು ಬೇಕಾದಷ್ಟು ಸದಸ್ಯರು ಸಾವಿರಾರುಸಲ ಹೇಳಿದ್ದಾರೆ. ಈಗ ಮೊನ್ನೆ ನಡೆದಿರುವ ಒಂದು ಉದಾಹರಣೆ ಕೊಡುತ್ತೇನೆ. ಶಿವಮೊಗ್ಗ ಜಿಲ್ಲೆಯ ಷಿಕಾರಿಪುರ ತಾಲ್ಲೂಕು ಬೋರ್ಡ್ ಬಿ.ಡಿ.ಓ.ಗೆ ಉಪಸಚಿವರಾದ ಶ್ರೀ ಬನವಣ್ಣಪ್ಪನವರು ಬೇಕಾದಷ್ಟು ಕುಮ್ಮಕ್ಕು ಮಾಡಿದ್ದಾರೆಂದು ಗೊತ್ತಾಗಿದೆ. ಅಲ್ಲಿ ಕಾಂಗ್ರೆಸ್ ಆಡಳಿತ ಯಾವ ರೀತಿ ಇದೆ ಎಂಬುದನ್ನು ಹೇಳುತ್ತೇನೆ. ಆ ತಾಲ್ಲೂಕು ಬೋರ್ಡಿನಲ್ಲಿ 48 ಸಾವಿರ ರೂಪಾಯಿಗಳ ಮೊಸ ನಡೆದಿದೆ. ಹೇಗಾಯಿತೆಂದರೆ ತಾಲ್ಲೂಕು ಬೋರ್ಡಿಗೆ ಸುಮಾರು 20-22 ಕೆರೆಗಳು ಸೇರಿವೆ. ಈ ಕೆರೆಗಳಿಗೆ ಹಣ ಮಂಜೂರುಮಾಡಿ ಕೊಟ್ಟಿದ್ದಾರೆ, ಆದರೆ ಅಲ್ಲಿ ಒಂದು ತಟ್ಟೆ ಮಣ್ಣು ಕೂಡ ಎತ್ತಿ ಆಚೆಗೆ ಹಾಕಿಲ್ಲ, ನಾನು ಸ್ವತಃ 4-5 ಕೆರೆ ನೋಡಿದ್ದೇನೆ ಆಮೇಲೆ ಸಾಲ ವಿತರಣೆ ಮಾಡಿರುವುದನ್ನು ನೋಡಿದರೆ ಸುಮಾರು 4-5 ವರ್ಷಹಿಂದೆ ನತ್ತವರು ಯಾರೋ ಸಾಲದ ಅರ್ಜಿ ಕೊಟ್ಟಿರುವಂತೆ ರಿಕಾರ್ಡ್ ಬಿಲ್ಡಪ್ ಮಾಡಿ ಹಣ ತಿಂದುಹಾಕಿದ್ದಾರೆ, ಯಾರಿಗೂ ಕೊಟ್ಟಿಲ್ಲ. ವಿಷಯ ಗೊತ್ತಾದ ಕೂಡಲೆ ಯಾರ ಹೆಸರಿನಲ್ಲಿ ಮಂಜೂರು ಮಾಡಿದ್ದಾರೋ ಅವರ ಮನೆಯವರು ನಮ್ಮ ಹತ್ತಿರ ಬಂದರು,

ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ, ಇನ್ನೂ ಅನೇಕ ಅಧಿಕಾರಿಗಳಿಗೆ ತಿಳಿಸಿದ್ದಾರೆ, ಆದರೂ ಕೂಡ ಇಂದಿನವರೆಗೆ ವಿಚಾರಣೆಮಾಡಿಲ್ಲ. ಇನ್ನೊಬ್ಬ ವ್ಯಕ್ತಿ, ಹೆನರು ಹೇಳುವುದಿಲ್ಲ ತನ್ನ ಜಮೀನನ್ನು 3 ವರ್ಷಗಳ ಹಿಂದೆ ಮಾರಿದ್ದಾನೆ, ನಂತರ ಅವನ್ನೇ ಸೊಸೈಟಿಗೆ ದೀಡು ಮಾಡಿದ್ದಾನೆ. ಸಬ್ ರಿಜಸ್ಟ್ರಾರ್ ಆಫೀಸಿನಲ್ಲಿ, ತಾಲ್ಲೂಕು ಆಫೀಸಿನಲ್ಲಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟಿನ ಪ್ರಕಾರ ಸರ್ಟಿಫಿಕೇಟ್ ಕೊಡುವುದರಲ್ಲಿ ನಮೂದು ಮಾಡಿಲ್ಲ. ಜಮೀನು ಮಾರಿ ಒಂದೂವರೆ ವರ್ಷವಾದ ಮೇಲೆ ಸೊಸೈಟಿಗೆ ದೀಡುಮಾಡಿ ಸಾಲ ತೆಗೆದುಕೊಂಡಿದ್ದಾರೆ. ಪುನಃ ಅದೇ ಸರ್ವೆ ನಂಬರು ಮೂವತ್ತನಾಲ್ಕನೆಯ ಒಂದನ್ನು ಪಿಕಾರಿಪುರ ತಾಲ್ಲೂಕಿನ ಬೆ.ಡರ್ಡಿಗೆ ಆಧಾರಮಾಡಿ ಸಾಲ ತೆಗೆದು ಕೊಂಡಿದ್ದಾರೆ. ಇನ್ನೂ ಬೇರೆ ಬೇರೆ ಜನರ ಹೆಸರಿಗೆ ಸಾಲದ ಅರ್ಜಿಗಳನ್ನು ಕೊಟ್ಟು ಸುಳ್ಳು ಜನರನ್ನು ಸೃಷ್ಟಿಮಾಡಿ ಅವರ ಹೆಸರಿನಲ್ಲಿ ಬೇಕಾದಷ್ಟು ಸಾಲ ತೆಗೆದುಕೊಂಡಿದ್ದಾರೆ. ಕೆರೆಯಲ್ಲಿ ಮಣ್ಣು ಸಹ ತೆಗೆಯದೆ ರಿಪೇರಿಗೆಂದು 48 ಸಾವಿರ ರೂಪಾಯಿ ತಾಲ್ಲೂಕು ಬೋರ್ಡಿನಲ್ಲಿ ಖರ್ಚು ಹಾಕಿದ್ದಾರೆ, ಈ ಸಂಬಂಧದಲ್ಲಿ ಎಜಿಟೇಷನ್ಸ್ ಕಮಿಷನ್ನಿಗೆ ಪತ್ರ ಬರೆಯಲಾಗಿದೆ, ಆದರೆ ಪರಿಶೀಲನೆ ಯಾಗುವುದರಲ್ಲಿ ತಡವಾಗಿದೆ. ಬಿ. ಡಿ. ಓ. ಸಂಬಂಧಪಟ್ಟವರು ರಜ ತೆಗೆದುಕೊಂಡು ಕಾರಿಪುರದಲ್ಲಿದ್ದಾರೆ. ಗಲಾಟೆಯಾದ ಮೇಲೆ 4–5 ಸಾವಿರ ರೂಪಾಯಿಗಳನ್ನು ಕಂಟ್ರಾಕ್ಟರುಗಳಿಂದ ತಂದು ಜಮಾಮಾಡಿಸಿದ್ದಾರೆ, ಜಾಗೃತ ಅಯೋಗಕ್ಕೆ ಕಣ್ಣುಮುಚ್ಚಾಲೆ ಆಟ ಆಡಿಸುತ್ತಿದ್ದಾರೆ, ಆಗಿರುವ ದುರಾಡಳಿತವನ್ನು ಮುಚ್ಚಿಡುವುದಕ್ಕೆ ಏನೇನೊ ಮಾಡುತ್ತಿದ್ದಾರೆ. ಜಾಗೃತ ಆಯೋಗದಲ್ಲಿ ರೆಗ್ಯುಲರ್ ಪೋಲೀಸು ದಳದವರು, ಪಿ.ಡಬ್ಲ್ಯು. ಇಲಾಖೆಯವರು ಮುಂತಾದವರನ್ನು ತೆಗೆದು ಕೊಂಡಿದ್ದಾರೆ, ಅವರೆಲ್ಲಾ ಲಂಚಕೋರರಾಗಿದ್ದಾರೆ. ಹಣ ದುರುಪಯೋಗಮಾಡಿ, ದುರಾಡಳಿತ ನಡೆಸುವವರ ಕೈಗೆ ಅಧಿಕಾರ ಕೊಟ್ಟು, ಬಡವರಿಗೆ ಜಮೀನನ್ನು ಹಂಚಿನೆ, ಸಾಲದ ಹಣವನ್ನು ಹಾಳುಮಾಡಿ ಎಕ್ಸೆಸ್ ಗ್ರಾಂಟಿಗೆ ಬೇಡಿಕೆ ಇಟ್ಟರೆ ಅದನ್ನು ಹೇಗೆ ತಾನೆ ಒಪ್ಪಲು ಸಾಧ್ಯ ?

ಅದಕ್ಕೆ ನಾನು ಮಾನ್ಯ ನದನದ ಪಾಟಾಳ್ ನಾಗರಾಜ್‌ರವರು ಮಾತನಾಡಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರು ಬರೇ ಸುತ್ತುಗಟ್ಟತಕ್ಕ ವಿಷಯ ಹೇಳಿದರು, ನನ್ನದು ಹಾಗಲ್ಲ, ನಿಮ್ಮನ್ನು ಸಾರ್ವಜನಿಕ ನ್ಯಳದಲ್ಲಿ ಚೌಕದಲ್ಲಿ ನಿಲ್ಲಿಸಿ ವಿಚಾರಣೆ ಮಾಡಿ ಈ 22 ವರ್ಷಗಳ ದುರಾಡಳಿತಕ್ಕಾಗಿ ತಕ್ಕ ಶಿಕ್ಷೆ ಕೊಟ್ಟರೆ ಅದು ಸಂತೋಷಪಡತಕ್ಕ ಕಾಲ ಎಂದು ಭಾವಿಸುತ್ತೇನೆ. ಈ ಹೆಚ್ಚುವರಿ ಬೇಡಿಕೆಮೇಲೆ ನಮ್ಮ ಒಪ್ಪಿಗೆ ಕೊಡುವುದಕ್ಕೆ ನಾನು ತಯಾರಾಗಿಲ್ಲ, ಅವರಿಗೆ ಕೋಟಗಟ್ಟಲೆ ಅಲ್ಲ ಎಷ್ಟೇ ಹಣ ಕೊಟ್ಟರೂ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದು ನನ್ನ ಮನಸ್ಸಿನಲ್ಲಿ ಹೆದರಿಕೆ ಇದೆ. ಆ ದೃಷ್ಟಿಯಿಂದ ಅವರು ಬಡವರಮೇಲೆ ಅನೇಕ ವಿಧದಲ್ಲಿ ತೆರಿಗೆಗಳನ್ನು ಹಾಕಿ ಜನರಲು ಪೀಡಿಸುತ್ತಾರೆ. ಅವರ ನೈತಿಕ ಅಧಃಪತನ ಎಷ್ಟುಮಟ್ಟಿಗೆ ಆಗಿದೆ ಎಂದರೆ ಆಡಳಿತ ನಡೆಸತಕ್ಕವರಿಗೆ ಫೈನಾನ್ಸ್ ಕಮಿಷನಿನಿಂದ ನಮಗೆ ಬರಬೇಕಾದ ಹಣವನ್ನು ಕ್ಲೈಮ್ ಮಾಡುವುದಕ್ಕೂ ಕೂಡ ಎಷ್ಟು ರೈಟ್‌ಪುರ್ ಆಗಿ ತೆಗೆದುಕೊಳ್ಳಬೇಕಾಗಿತ್ತೋ ಅದನ್ನೂ ತೆಗೆದು ಕೊಳ್ಳುವುದಕ್ಕೂ ಕೂಡ ಶಕ್ತಿಹೀನರಾಗಿದ್ದಾರೆ. ಅವರ ಕೈಯಲ್ಲಿ ಮತ್ತೆ ಇಷ್ಟೊಂದು ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಬಕಾಸುರ ಸರ್ಕಾರ, ಬಕಾಸುರ ಭೀಮನನ್ನು ತಿಂದು, ಪಾಂಡವರನ್ನು ತಿನ್ನುವ ಮಟ್ಟಕ್ಕೂ ಹೋಗಿದ್ದಂತೆ, ಆ ರೀತಿ ಈ ಸರ್ಕಾರಕ್ಕೆ ಎಷ್ಟು ತೆರಿಗೆ ಗಳನ್ನು ಕೊಟ್ಟರೂ ಸಾಲದು, ಎಷ್ಟು ಹಣವನ್ನು ಕೊಟ್ಟರೂ ಸಾಲದು ಎಂದು ಹೇಳಿ ಈ ಹೆಚ್ಚುವರಿ ಬೇಡಿಕೆಯನ್ನು ವಿರೋಧಿಸುತ್ತೇನೆ. ಈ ಹಣ ಮುಂಜೂರು ಮಾಡಬಾರದು, ಹಣ ಹಾಳು ಮಾಡುತ್ತಾ ಇದ್ದಾರೆ ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬಾರದು ಎಂಬ ಮಾತನ್ನು ಪುನಃ ತಪ್ಪು ಅವಗಾಹನೆಗೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA.—Sir, I oppose the supplementary estimates that have been placed before this House by the Hon'ble Finance Minister. While doing so, I am really pained to see the sad and miserable plight of this unfortunate State. This unenviable position is due to mismanagement of the public finance of the State during the last one decade. Sir, I was pondering yesterday night as to why the Finance Commission has given such a very disappointing report so far as the Mysore State is concerned. In a way I feel what they have done, may be after all for the good of this country, though not for the state. Because give any money to this Government, give them as big a quantity as the size of Nandi hills, you may be rest assured that they

(SRI H. SIDDAVEERAPPA)

will spend it away. There is no limit and there is no method in spending the money. The only thing you know is, getting as much money as you can, and spending it.

So far as the public finances are concerned, I gave a picture once during the Budget Session when this new State was formed. We had only Rs. 23 crores of public debts. But to-day our public debts have swelled up to an astronomical figure, Rs. 500 crores. If you just analyse how much of it has been given to production purposes and how much has been given to irrigation purposes, you will find that most of the amount has been squandered without any return and without any purpose. I know the Finance Minister very well. I know what his difficulties are. If the Finance Minister puts a brake for any demand, immediately the concerned Minister pounces upon him. I will give one instance from which you can judge how the expenditure has been swelled. Take this Text Book Committee business. The text books were nationalised. They did not include this in the Budget Estimates. They want to have this extravagant expenditure in this connection regularised as a new service. They have simply said that only Rs. 100 is required since there is every possibility of finding the amount of Rs. 2,35,650 by re-appropriation. This is how they are doing things. You are spending huge sums of money in the Food Department and creating new posts. Unless you adopt economy measures, the financial position of the State will never improve. Every pie you save is as good as earning 2 pies. If you follow up that line, you will be in a position to husband our resources and see they are usefully spent, I know the Finance Minister will never agree for the creation of new service. Where is the need to create new service and spend lakhs and lakhs of rupees.

With regard to the special staff for Krishna and Godavari schemes, I do not know whether there is need for it when a Committee has been appointed to determine the water position. I do not know what would be the opinion of the Committee. So far, there is no policy laid down by the Central Government with regard to the distribution of waters of Inter State Rivers. What is the basis on which you are going ahead to appoint the staff for this purpose. The Mysore Government has been neglected in almost all fields, just because these people are not taking proper action at proper time. These people will only open their eyes when their request is turned down by the Centre. Our industries are in a miserable plight. We are sinking crores and crores of rupees and the return is very negligable and in some cases nil. You have spent Rs. 460 crores on the New Government Electrical Factory, Old Electrical Factory and on the Electricity Board. Nobody cares to see whether they are working properly or not. They do not know what is happening there. If you husband your resources, you will be able to earn annually at least Rs. 10 crores from our industries. To-day what is

happending? You have no control over the administration of the industries. I am reminded of a famous passage from our esteemed literature Sri D. V. Gundappa in "MANKU THIMMANA KAGGA." What he has said therein fits in completely with the Government. What he says is. ಈ ದಿವನ ನಮ್ಮ ಸರ್ಕಾರದ ಸ್ಥಿತಿ ಏನಾಗಿದೆಯೆಂದರೆ—

"ಹೊಳೆ ಬಂದಿದೆ, ಬರುಗಾಳಿ ಬೀಸುತ್ತಿದೆ, ದೋಣಿಯಲ್ಲಿ ಹತ್ತಿಕುಳಿತು ನಾವು ಹೋಗುತ್ತಿದ್ದೇವೆ, ಸಾರಾಯಿ ಕುಡಿದವನು ಹುಟ್ಟುಹಾಕುತ್ತಿದ್ದಾನೆ, ದೇವರೇ ಗತಿ ನಮ್ಮನ್ನು ಈ ದೋಣಿ ಎಲ್ಲಿಗೆ ಕೊಂಡೊಯ್ಯುತ್ತದೋ?...

ಆ ಸ್ಥಿತಿಯಲ್ಲಿದೆ ನಮ್ಮ ಸರ್ಕಾರ.

I know what is going to happen. Tomorrow a stage will come for this Government. When what they collect from sales-tax and various other sources would be just sufficient to meet the expenditure on salaries, T.A. and D.A. including Members salaries and nothing would be left for any development work. That will be your unfortunate position. Where is the Krishna Project, where is the Cauvery project? I therefore plead with you not to squander away public mon y on M.S.K. Mills and various other industries, because people connected with those concerns are your favourites. You have wasted crores and crores of public money without any hope of recovery. If you had properly husbanded the State's resources, we could have had Krishna and Cauvery and other projects.

Sir, I am not going to take much time. I can only say that unless and until you cry a halt to the extravagant spending of the Department of Co-operation under the aegis of Mr. Jamkhandimath, the Registrar and our Hon'ble friend Sri Nad Gowda, this State will be reduced to pauperism. Because, you can see in the month of March, you have given to 29 societies at the rate of Rs. 10,000 per society and spent about Rs. 2,90,000. With that money you could have serviced not less than 50 irrigation pump sets. I am sure you have given most of this money to men of your choice. I am asking you to place all these facts before this House. In this Co-operative Department, in the National Marketing Co-operative Society, you have squandered money. That is how the Co-operative Department becomes enemy No. I of our State. How many types of corruption are taking place? I can give you one case. In one case an Assistant Registrar of Co operative Societies had knocked away Rs. 40,000 in a marketing co-operative society. There was a test audit and it was established that he was the culprit. The Co-operative Department has promoted him and made him the Secretary and Deputy-Registrar and posted him to a bigger place which they call JANATHA BAZAR where transactions to the tune of lakhs of rupees take place, so that he could fatten himself. I actually wrote letters to the Chief Minister and Co-operation Minister. Beyond giving me a reply stating "we have received your letter and the matter is engaging attention," nothing was done. I have got so many letters of that type. I can

(SRI H. SIDDAVEERAPPA)

show you. Where is your enquiry ? Show me even one case. You want us to give money for all kinds of things. Why should we give it ? Time will come when we will have to go to villages and tell the people not to pay taxes, because Government is wasting and squandaring away public money. We will tell them. For what you do here, the whole party will have to take the blame, and friends who are blindly supporting the Government, at least in their Party meeting, must take care to bring these facts to the notice of the Government. Some time, we will have to examine every aspect of it. At this rate, we cannot get any money for nation-building activities. Therefore, I have been requesting you as the custodian of this House, to kindly see that a Committee is constituted. The Minister for Parliamentary Affairs said that a Committee would be constituted to examine the work of various industrial undertakings. That they have not done. I do not know, why they seem to feel Hunku - Punky of any suggestions that come from us. Therefore, for these reasons I feel that any moneys that may be given to the Government, will be ill-spent and we are not in a position to agree to this. I am really surprised at this and I am requesting the Minister for Finance that he should keep the key of the treasury very safe and never pass any item of expenditure beyond what is provided in the Budget. Whatever is included in the Budget, you spend. Then only you will be safe. What was the position in the olden days ? We had very eminent men as Finance Ministers. Once, our esteemed Dewan, Sri N. Madhava Rao, told us, "Look here, we had kept 18 crores of rupees liquid cash in the treasury. You have spent away all that money and what is more, you have made the State a debtor and not only our children and even grand children have to bear the debt service charges, because even the interest we have to pay on t ese debts runs into huge figures." I think the interest charges come to about Rs. 15 crores per annum. They have brought the State to this pass by their mal-administration. The time for taking stock of these things will not be far off. Then the whole lot of them—there are many friends of mine also there; I cannot brand every one of them with the same brush have to bear the responsibility for mal-administration that has gone on for ten years; responsibilities will lie on the head-man and that head-man will have to answer one day for all the misdeeds as a result of which, the State is made to suffer.

With these few words, I oppose the grants, Sir.

MR. SPEAKER.—What was the agreement yesterday ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ನಮ್ಮ ಕಡೆ ಶ್ರೀ ಗೋಪಾಲಗೌಡರು ಮತ್ತು ಶ್ರೀಜ್ ಸೇಟರು ಇಬ್ಬರು ಮಾತ್ರ ಮಾತನಾಡತಕ್ಕವರಿದ್ದಾರೆ. ಅವರಿಬ್ಬರಿಗೂ ಐವೈದು ನಿಮಿಷ ಅವಕಾಶ ಕೊಟ್ಟರೆ ಸಾಕು. ಹಾಗೂ ಒಂದು ವೇಳೆ ನಿಗದಿಯಾದ ವೇಳೆಯಲ್ಲಿ ಇದು ಮುಗಿಯದಿದ್ದರೆ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಯರು ಇನ್ನೂ ಅರ್ಧಗಂಟೆಯಕಾಲ ಹೆಚ್ಚಾಗಿ ಕುಳಿತು ಅದನ್ನು ಮುಗಿಸಿಕೊಡುತ್ತೇವೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಅನುಪೂರಕ ಅನುದಾನಗಳನ್ನು ನಾನು ವಿರೋಧಿಸುತ್ತೇನೆ. ಈಗ ಕೇಳಿರತಕ್ಕ 39 ಕೋಟಿ 43 ಲಕ್ಷ ರೂಪಾಯಿಗಳಲ್ಲಿ ಸುಮಾರು 34 ಕೋಟಿ ರೂಪಾಯಿಗಳು ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ ಎಂಬುದಾಗಿ ಹೇಳಿದ್ದಾರೆ. 1 ಕೋಟಿ 90 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಹೊಸ ಕಮಿಟ್‌ಮೆಂಟ್ ಬರುತ್ತದೆಂದು ಹೇಳಿದ್ದಾರೆ. ಆದ್ದರಿಂದ ನಾನು ವಿಶೇಷವಾಗಿ ಪ್ರತಿಯೊಂದು ಬೇಡಿಕೆಯನ್ನೂ ಕೂಡ ಕುರಿತು ಹೇಳುವುದಿಲ್ಲ. ಸಮಯವೂ ಇಲ್ಲ. ಮುಖ್ಯವಾಗಿ ಮಾನ್ಯ ಸಿದ್ದವೀರಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಆದರಲ್ಲಿ ಸಹಕಾರಿ ಸಂಸ್ಥೆ ಎನ್ನುವ ಹೆಸರಿನಲ್ಲಿ ಏನು ಸರ್ಕಾರದಿಂದ ಹಣವನ್ನು ಅವರು ಪಡೆದುಕೊಂಡಿದ್ದಾರೋ ಅದರಲ್ಲಿ ಆಗತಕ್ಕ ದುರುಪಯೋಗವನ್ನು ತಡೆಗಟ್ಟಿದ್ದರೆ ಈಗಾಗಲೇ ದಿವಾಳಿಯಾಗಿರತಕ್ಕ ರಾಜ್ಯ ಇನ್ನೂ ದಿವಾಳಿ ಆಗುತ್ತದೆಂದು ಅವರು ಹೇಳಿದ್ದಾರೆ. ಈಗ ಸುಮಾರು 31 ಕೋಟಿ ರೂಪಾಯಿಗಳ ಖೋತಾ ಈ ವರ್ಷದ ಆಯವ್ಯಯದಲ್ಲಿದೆ. ಈಗ ತುಕೋಳ್ ಕಮಿಷನ್ ಅಯೋಗದವರು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದವರು ಕಾರ್ಯಗತ ಮಾಡಿದ್ದರೆ ಸುಮಾರು 7 ರಿಂದ 12 ಕೋಟಿ ರೂಪಾಯಿಗಳವರೆಗೂ ಖರ್ಚು ಬರುತ್ತಿತ್ತು. ಅವಕ್ಕೆ ಏನು ಮಾರ್ಗವನ್ನೂ ಇವರಿಗೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಆಯೋಗವನ್ನೂ ಇವರಿಗೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಅಯೋಗವನ್ನು ರಚಿಸಿದಮೇಲೆ ಅವರ ವರದಿ ಬಂದ ಮೇಲೆ ಮುರುಮಾತನಾಡದೆ ತಿದ್ದು ಪಡಿಗಳೊಂದಿಗೆ ಅದನ್ನು ಅಂಗೀಕಾರಮಾಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಒತ್ತಿ ಹೇಳುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಆದರ ಬಗ್ಗೆ ಕೆಲವು ಹಾರಿಕೊಳ್ಳುವ ಉತ್ತರ ಕೊಟ್ಟದ್ದು ನೋಡಿದರೆ, ಅದು ಅವರ ಜವಾಬ್ದಾರಿಯುತ ವರ್ತನೆಯಲ್ಲವೆಂದು ನಾನು ಹೇಳುತ್ತೇನೆ. ಈ ಬೇಡಿಕೆಯನ್ನು ಮೊದಲನೆಯ ಕಮಿಟ್‌ಮೆಂಟ್ ಆಗಿ ಸೇರಿಸಬೇಕಾಗುತ್ತದೆ. ದುರದೃಷ್ಟವಶಾತ್ ನಿನ್ನೆ ಹಣಕಾಸಿನ ಮಂತ್ರಿಗಳು ಇದನೆಯ ಹಣಕಾಸಿನ ಆಯೋಗದ ವರದಿ ಇನ್ನೂ ಬಂದಿಲ್ಲವೆಂದು ಹೇಳಿದ್ದಾರೆ. ಆದರಲ್ಲಿ ಅವರ ಕಳವಳ ನಮಗೆ ಅರಿವಾಗಿದೆ, ಹೆಚ್ಚಿಗೆ ಅವರು ನಮಗೆ ಹಣವನ್ನು ಕೊಟ್ಟಲ್ಲವೆಂಬ ಅವರ ಕಳವಳದ ಬಗ್ಗೆ ನಮಗೆ ಸಹಾನುಭೂತಿ ಇದೆ. ಅವರು ಕರ್ತವ್ಯಗಳನ್ನು ಎಷ್ಟರಮಟ್ಟಿಗೆ ನಡೆಸಿದ್ದಾರೆಂಬ ಬಗ್ಗೆ ವಿಷಾದ ಇದೆ. ಬಹಳ ಸಾರಿ ಸಾಕಷ್ಟು ಅಸ್ಥೆ ವಹಿಸಿ ಅಂತಹ ಅಯೋಗದವರು ಇಲ್ಲಿಗೆ ಬಂದಾಗ ಏನೊಂದು ವಾಸ್ತವ ಚಿತ್ರವನ್ನು ಇಟ್ಟು ನಮ್ಮ ಬೇಡಿಕೆ, ಹಣಕಾಸಿನ ಚಿತ್ರವೇನೆಂಬುದನ್ನು ಹೇಳಿದಮೇಲೆ ಅವರು ಆದರ ಬಗ್ಗೆ ಒಂದು ವರದಿಯನ್ನು ನಮಗೆ ಕೊಟ್ಟಮೇಲೆ ನಾವು ಟೀಕೆ ಮಾಡುವುದು ಅನುಚಿತವೆಂದು ನನಗನ್ನಿಸುತ್ತದೆ. There are States which have abolished land revenue : There are States which have introduced food subsidies ಉತ್ತರ ಪ್ರದೇಶದಲ್ಲಿ, ಮಧ್ಯ ಪ್ರದೇಶದಲ್ಲಿ, ಬಿಹಾರದಲ್ಲಿ ಕಂದಾಯ ಮಾಫಿ ಮಾಡಿದ್ದಾರೆ ಮದ್ರಾಸಿನಲ್ಲಿ ಸಬ್ಸಿಡಿ ಕೊಟ್ಟಿದ್ದಾರೆ. They have followed the path of cheap popularity ಎಂದು ಹೇಳಿದರು. ಆ ಮಾತನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಅಕ್ಕಸಕ್ಕದ ರಾಜ್ಯಗಳ ಜನರ ಹಿತ ಸಾಧನೆಗಾಗಿ ತೆಗೆದುಕೊಂಡಂಥ ಕಾರ್ಯಕ್ರಮವನ್ನು ನಮ್ಮ ಹಣಕಾಸಿನ ಮಂತ್ರಿಗಳು ಉದ್ವೇಗದಲ್ಲಿ ಅಲ್ಲಗಳೆದಿರುವುದನ್ನು ನಾನು ವಿರೋಧಿಸುತ್ತೇನೆ. ಅದಕ್ಕಾಗಿ ಅವರು ವಿಷಾದವನ್ನು ವ್ಯಕ್ತಪಡಿಸಿದರೆ ಒಳ್ಳೆಯದು. ಇದು ನಮಗೆ ಗೌರವವಲ್ಲ. ನೀವು ರ್ಯಾಂಡ್ ರೆವಿನ್ಯೂ ಅಬಾಲಿಷ್ ಮಾಡಬೇಕಾಗುತ್ತದೆ,ನಮಯ ಬಿದ್ದರೆ ಫುಡ್ ಸಬ್ಸಿಡಿ ಕೊಡಬೇಕಾಗುತ್ತದೆ, ನಮಯಬಿದ್ದರೆ, ಪಂಪುಸೆಟ್ಟಿಗೆ ಒದಗಿಸುವ ವಿದ್ಯುಚ್ಛಕ್ತಿಗೋಸ್ಕರ ಸಬ್ಸಿಡಿ ಕೊಡಬೇಕಾಗುತ್ತದೆ. ಇದು ಕಲ್ಯಾಣ ರಾಜ್ಯವೆಂದು ಹೇಳಿದಮೇಲೆ ಎಲ್ಲರನ್ನೂ ಒಂದೇ ನಮಾನ ನೋಡಬೇಕು. ತೆರಿಗೆ ಕೊಡುವ ಶಕ್ತಿ ಇರಲಿ, ಇಲ್ಲವೆ ಇರಲಿ ಹೆಚ್ಚಿಗೆ ಅದನ್ನು ಹಾಕುವುದು ನೀತಿನಿಯಮವಲ್ಲವೆಂದು ನಾನು ಹೇಳುತ್ತೇನೆ. ಇನ್ನು ರಾಜ್ಯದ ಹಿತ ನಮಗೂ ಇದೆ. ಕೇಂದ್ರ ಸರ್ಕಾರದವರು ಹೆಚ್ಚಿಗೆ ಹಣ ಕೊಡಬೇಕೆಂದು ನಮಗೂ ಆಸಕ್ತಿ ಇದೆ. ಒಂದುಕಡೆ ಶಿಫಾರಸು ಪಡೆಯುವುದಕ್ಕಾಗಿ ಯಾವುದೋ ಅಂಕಿಅಂಶಗಳನ್ನು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡು ನಮಗೆ ಬರತಕ್ಕ ಆದಾಯ ಜಾಸ್ತಿ ಇದೆಯೆಂದು ದೇಶದಮುಂದೆ ಇಡುವುದು, ಇನ್ನೊಂದು ಭಾಗದಲ್ಲಿ ನಮ್ಮ ಕೈಗಾರಿಕೆಗಳು ಬೆಳೆಯುತ್ತಾ ಇಲ್ಲ, ನಮ್ಮ ದೇಶವಲ್ಲಿ ನೀರಾವರಿ ಕೆಲಸಕಾರ್ಯಗಳಿಗೆ, ಮತ್ತು ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಹಣವಿಲ್ಲ, ನಮಗೆ ಹಣದ ಕೊರತೆ ಇದೆ, ಸಿಬ್ಬಂದಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲವೆಂದು ಹೇಳುವುದು. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯ. ನಮ್ಮ ರಾಜ್ಯದ ಪರ್‌ಕ್ಯಾಪಿಟಾ ಇನಕಂ ಜಾಸ್ತಿ ಕೊಟ್ಟು ನಮ್ಮ ದೇಶಕ್ಕೆ ಮೋಸಮಾಡಿದ್ದಾರೆ. ತಪ್ಪುಮಾಡಿದ್ದಾರೆ, ಈಗ ಶ್ರೀಮತಿ ಇಂದಿರಾ ಗಾಂಧಿಯವರಿಗೆ, ಶ್ರೀ ತ್ಯಾಗಿಯವರಿಗೆ ಬುದ್ಧಿ ಕಲಿಸುತ್ತೇವೆ, ಗತಜಲ ಸೇತುಬಂಧನ ಮಾಡುತ್ತೇವೆಂದು ಹೇಳುತ್ತಾರೆ. ನಮ್ಮನ್ನು ಒಪ್ಪಿಸುವುದಕ್ಕೆ ಆ ರೀತಿಯಾಗಿ ಮಾತನಾಡಬಾರದು. ಈ ರಾಜ್ಯದ ಜನರನ್ನು ಒಪ್ಪಿಸುವುದಕ್ಕೆ ಆ ರೀತಿ ಮಾತನಾಡಬಾರದು. ನೀವು ಮಾಡಿದಂಥ

(ಶ್ರೀ ಎಸ್. ಗೋಪಾಲಗೌಡ)

ಎಲ್ಲಾ ಕಾರ್ಯಗಳನ್ನು ಹೇಳಿದರೆ ಅದು ಪುನಃ ತಪ್ಪಾಗುತ್ತದೆ. ಈ ರಾಜ್ಯದ ಹಿತದೃಷ್ಟಿಯಿಂದ ಎಲ್ಲವನ್ನೂ ಈಗ ಹೇಳುವುದಕ್ಕಾಗುವುದಿಲ್ಲ. ಬೇರೆ ರಾಜ್ಯಸರ್ಕಾರದವರು ಪ್ರೊಹಿಬಿಷನ್ ವಿಚಾರದಲ್ಲಿ ಏನು ಮಾಡುತ್ತಾ ಇದ್ದಾರೆಂಬುದನ್ನು ನೋಡಬೇಕು. ಆದರೆ ಇಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮಹಾತ್ಮ ಗಾಂಧಿಯವರ ಶತಮಾನೋತ್ಸವದಲ್ಲಿ ಎಲ್ಲರಿಗೂ ಹೆಂಡ ಕುಡಿಸುವುದಕ್ಕೆ ಹೊರಟಿದ್ದಾರೆ. ಇದು ಚೀಪ್ ಪಾಪ್ಯುಲಾರಿಟಿ ಅಲ್ಲದೆ ಮತ್ತೇನು! ಆದ್ದರಿಂದ ಕಾಂಗ್ರೆಸ್ಸಿನವರಿಗೆ ಒಂದು ನೀತಿ ಇಲ್ಲ, ಒಂದು ನಿಯಮವಿಲ್ಲ. ಎಲ್ಲರೂ ಕಳ್ಳಬಟ್ಟಿ ಸಾರಾಯಿ ಕುಡಿದು ಹಾಳಾಗಲಿ ಎಂದು ಮಾಡಿದ್ದಾರೆ. ಇದರಲ್ಲಿ ರ್ಯಾಷನೇಲ್ ಇರಬಹುದು. ತಮ್ಮ ಹೇಳಿಕೆಯಲ್ಲಿ ಈ ರಾಜ್ಯಕ್ಕೆ ಅಯೋಗದವರಿಂದ ಹೆಚ್ಚು ಸಹಾಯ ಬರಬೇಕಾಗಿತ್ತು ಕೊರತೆ ಮಾಡಿದ್ದಾರೆ ಎಂದು ಹೇಳಿದ್ದೀರಿ. 18 ಕೋಟಿ ರೂಪಾಯಿಗಳಷ್ಟು ಕೊರತೆ ಮಾಡಿದರೆ ನಮಗೆ ಕಷ್ಟವಾಗುತ್ತದೆಂಬುದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದವರಿಗೂ ಮತ್ತು ರಾಜ್ಯ ಸರ್ಕಾರದವರಿಗೂ ಒಂದು ಹೊಂದಾಣಿಕೆ ಬರಲಿ ಎಂದು ಹೇಳುತ್ತೇನೆ. ಇವತ್ತು ಕೆಲವು ರಾಜ್ಯಗಳಲ್ಲಿನ ಕಾಂಗ್ರೆಸ್ಸೇತರ ಸರ್ಕಾರಗಳು ಏನಿವೆಯೋ ಅವುಗಳಿಗೆ ಕೇಂದ್ರ ಸರ್ಕಾರದಿಂದ ಎಷ್ಟರಮಟ್ಟಿಗೆ ತೊಂದರೆಯಾಗಬಹುದು ಎಂಬುದನ್ನು ನೋಡಬೇಕು. ಬೇರೆ ಕಡೆಗಳಲ್ಲಿ ಹಣಕಾಸಿನ ಇರಾಖೆಯಾಗಲೀ, ಪೋಲೀಸ್ ಇರಾಖೆಯಾಗಲೀ, ಅಥವಾ ಇತರೇ ಯಾವ ಇಲಾಖೆ ಆಗಲಿ, ಈ ಸರ್ಕಾರ ಹೋದರೆ ಸಾಕು ಎನ್ನುವ ರೀತಿಯಲ್ಲಿ ಅವರು ವರ್ತಿಸುತ್ತಾರೆ. ಅದಕ್ಕಾಗಿ ಮಾನ್ಯ ಶ್ರೀ ನಂಬೂದ್ರಿಪಾದ್ ಅವರಾಗಲೀ, ಅಥವಾ ಶ್ರೀ ಅಣ್ಣಾಡೊರೆ ಅವರಾಗಲೀ ಬಗ್ಗುವುದಿಲ್ಲ. ಅದು ಬೇರೆ ಪ್ರಶ್ನೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ 10 ಕೋಟಿ ರೂಪಾಯಿಗಳಷ್ಟು ಪೆಟ್ಟು ತಗಲುತಕ್ಕ ನೀರಾವರಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದವರು ಹಣಕಾಸಿನ ಸಹಾಯ ಮಾಡಬೇಕೆಂದು ಹೇಳಿದ್ದರು. ಅದು ಕಾರ್ಯಗತವಾಗಲಿಲ್ಲ. ಸಣ್ಣ ಕೆರೆಗಳನ್ನು ತಯಾರುಮಾಡುವುದಕ್ಕೆ ಅವಕಾಶಮಾಡಿ ಎಂದು ಹೇಳಿದರೂ ಅದೂ ಆಗಿಲ್ಲ. ನೂರಾರು ಬೇಡಿಕೆಗಳನ್ನು ನಾವು ಕೇಂದ್ರಸರ್ಕಾರದ ಮುಂದೆ ಇಡುತ್ತಿದ್ದರೂ ಇವರು ಅವರನ್ನು ಒಪ್ಪಿಸುವುದಕ್ಕೆ ಆಗಲಿಲ್ಲ. ನೀರಾವರಿಗೆ ಇಷ್ಟು ದುಡ್ಡು ಬೇಕು, ನಮ್ಮ ಪೋಟೆನ್ಷಿಯಾಲಿಟಿ ಇಷ್ಟು, ನೀವು ಸಾಲಸಾದರೂ ಕೊಡಿ, ಸಬ್ಸಿಡಿಯಾದರೂ ಕೊಡಿ, ನಮ್ಮಲ್ಲಿ ಎಕ್ಸ್‌ಪೋರ್ಟ್‌ಗೆ ಅವಕಾಶ ಮಾಡಿಕೊಡಿ ಎಂದು ಕೇಳಬೇಕು. ಇವತ್ತು 5 ಲಕ್ಷ ರೂಪಾಯಿಗಳಷ್ಟು ಎಕ್ಸ್‌ಪೋರ್ಟ್ ಜಾಸ್ತಿಯಾಯಿತು ಎಂದು ತಾವೇ ಹೇಳಿದಿರಿ.

ನಿಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದರ ಜೊತಗೆ ಕೇಂದ್ರಸರ್ಕಾರದವರಲ್ಲಿ ಕರ್ನಾಟಕದಲ್ಲಿರತಕ್ಕಂತಹ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ವರ್ಷೇ ವರ್ಷೇ ಕ್ಷಾಮ ಪರಿಸ್ಥಿತಿ ಉಂಟಾಗತಕ್ಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ನಮಗೆ ಕೊಟ್ಟಿರತಕ್ಕ ಶರಾವತಿಯನ್ನು ಗಮನದಲ್ಲಿಟ್ಟುಕೊಂಡು, ವಿದ್ಯುಚ್ಛಕ್ತಿಯ ಹಂಚಿಕೆಯನ್ನು ಗಮನದಲ್ಲಿಟ್ಟುಕೊಂಡು ನೀವು ನಮಗೆ ಅನುದಾನದ ಹಣಕಾಸಿನ ವಿಷಯದಲ್ಲಿ ಪಾಲು ಕೊಡಬೇಕೆಂದು ಕೇಳಬೇಕು. ಅಲ್ಲದೆ ನಾವು ಯಾವಾಗಲೂ ಒಂದೇ ರಾಗವನ್ನು ಹಾಡುತ್ತಾ ನಮಗೆ ಕೊರತೆ ಇದೆ, ಆಗಾಗ್ಗೆ ಆಗುತ್ತದೆ ಎಂದು ಹೇಳುವುದಲ್ಲ. ಅದಲ್ಲದೆ, ಇಲ್ಲಿ ಕೇಂದ್ರದ ಕೈಗಾರಿಕೆಗಳನ್ನು ಹಾಕಿ, ನಮ್ಮಲ್ಲಿರತಕ್ಕ ನಿರುದ್ಯೋಗವನ್ನು ಹೋಗಲಾಡಿಸಿ, ನೀರಾವರಿ ಸೌಕರ್ಯಗಳನ್ನು ಒಂದು ಕಾರ್ಪೊರೇಷನ್ ಮಾಡಿ ನೀವು ಎಲ್ಲಿಂದಾದರೂ ತಂದು ಕೊಡಿ, ನಮಗೆ ಹಣ ಬೇಕು, ನಮ್ಮಲ್ಲಿ ಬೇಕಾದಷ್ಟು ಅಭಿವೃದ್ಧಿ ಮಾಡತಕ್ಕ ಕೆಲಸಗಳು ಇವೆ ಎಂದು ಕೇಳಬೇಕು. ಇವಕ್ಕೆಲ್ಲಾ ಹಣವನ್ನು ಕೇಳೋಣ. ಈ ಹಣ ಕಾಸಿನ ಅಯೋಗದವರು ಯಾವ ಬೇಸಿಸ್ ಮೇಲೆ ದುಡ್ಡನ್ನು ಹಂಚುತ್ತಾರೆ- ಆ ಆಧಾರವನ್ನು ತಪ್ಪಿಸಿ, ಯಾವರೀತಿಯಲ್ಲಿ ಎಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆಯೋ, ಅಂಥ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದರಿಂದ ರಾಷ್ಟ್ರದ ಅಭಿವೃದ್ಧಿಗೆ ಹೆಚ್ಚು ಸಹಾಯವಾಗುತ್ತದೆ, ರಾಷ್ಟ್ರದ ಆದಾಯ ತುಂಬಿ ಬರುತ್ತದೆ. ರಾಷ್ಟ್ರದಲ್ಲಿ ಬೆಳೆ ಹೆಚ್ಚಾದರೆ, ಆಹಾರದ ಸರಬರಾಜು ಹೆಚ್ಚಾಗುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಅಲ್ಲಗೆ ಹೋಗಿದ್ದಾರೆ. ಈ ವಿಚಾರ ಮಾತನಾಡುವುದಕ್ಕೆ ಹೋಗಿದ್ದಾರೋ, ಏನೆಂದು ಗೊತ್ತಿಲ್ಲ. ಈ ರೀತಿ ರಾಜ್ಯದ ಜನರನ್ನು ಒಪ್ಪಿಸುವುದಕ್ಕೆ ಒಂದು ಮಾತು, ಕೇಂದ್ರಸರ್ಕಾರ ಮತ್ತು ಕೇಂದ್ರದ ಜನರನ್ನು ಒಪ್ಪಿಸುವುದಕ್ಕೆ ಒಂದು ಮಾತು, ವಿಧಾನ ಸಭೆಯನ್ನು ಒಪ್ಪಿಸುವುದಕ್ಕೆ ಇನ್ನೊಂದು ಮಾತು. ಹೀಗೆ ಮೂರು ನಾಲ್ಕು ನಾಲಗೆಯಲ್ಲಿ ಒಂದು ವಿಷಯವನ್ನು ವ್ಯಾಖ್ಯಾನ ಮಾಡಿದರೆ ಹೇಗೆ? ನಮ್ಮ ಅಕ್ಕೋಷ್ಠ ಭಾಷಣಗಳಲ್ಲಿ ಯಾವ ಮಾವಿನಕಾಯಿಯೂ ಉದುರುವುದಿಲ್ಲ. ಕರ್ನಾಟಕದ ಬಗ್ಗೆ ಎಷ್ಟು ಕೇಂದ್ರ ಸರ್ಕಾರದಿಂದ [illegible]ಕೊಳ್ಳಲು ಸಾಮರ್ಥ್ಯ ಇದೆ ಅಷ್ಟನ್ನು ತೆಗೆದುಕೊಳ್ಳ

ಬೇಕೆಂಬುದನ್ನು ನಾನು ಕಳಕಳಿಯಿಂದ ಹೇಳುತ್ತೇನೆ. ತಾವು ತಮ್ಮ ಕಂಟೆಂಜೆನ್ಸಿ ಫಂಡಿಂದ ನ್ಯೂ ಸರ್ವಿಸ್ ಎಂದು ಏನು ಹೇಳಿ ಅನೇಕ ಸೊಸೈಟಿಗಳಿಗೆ ಹಣ ಕೊಟ್ಟಿದ್ದೀರಿ, ಅದನ್ನು ಈಗ ವಿಚಾರ ಮಾಡಬೇಕಾದ ಸಂದರ್ಭ ಬಂದಿದೆ. ಮೇಲಾಗಿ ಈ ರಾಜಭವನಕ್ಕೆ ಕಳ್ಳತನದಿಂದ ಪ್ರತೀ ಸಲ ಲಕ್ಷಾನುಗಟ್ಟಲೆ ಹಣ ತೆಗೆದುಕೊಂಡು ಕೊಡತಕ್ಕದ್ದು ರಾಜ್ಯಸರ್ಕಾರಕ್ಕೆ ಯಾವ ಶೋಭೆಯನ್ನು ತರತಕ್ಕದ್ದಲ್ಲ. ನೀವು ರಿಸರ್ವ್ ಹೆಸರಿನಲ್ಲಿ ಇದನ್ನು ತೆಗೆದುಕೊಳ್ಳುವುದು ನ್ಯಾಯವಲ್ಲ. ಶ್ರೀಮಾನ್ ಚನ್ನಬಸಪ್ಪನವರು ಕೃಷ್ಣಾ ಹಂಚಿಕೆಯ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ, ಅವಕ್ಕೆ ರಾಜಕೀಯ ತಂದೊಡ್ಡಿ, ಭಿನ್ನಾಭಿಪ್ರಾಯಗಳನ್ನು ತಂದು ರಾಷ್ಟ್ರಕ್ಕೆ ಇವತ್ತು ಕುಂದು ತಂದಿದ್ದೀರಿ. ಇವತ್ತು ಅವುಗಳಿಗೆ ಎಷ್ಟೋ ಪಕ್ಷಾಲರನ್ನು ಇಟ್ಟಿದ್ದೀರಿ ದಿವಸಕ್ಕೆ ಅವರಿಗೆ ಎಷ್ಟೋ ಸಾವಿರ ಸಂಬಳಗಳನ್ನು ಕೊಡುತ್ತಿದ್ದೀರಿ. ಇದನ್ನು ನೋಡಿದರೆ, ಮತ್ತೊಂದು ಗತಜಲ ಸೇತು ಬಂಧನವಾಗಿದೆ. ಯಾವಾಗಲೂ ವಿವೇಚನೆ ಇಲ್ಲದೆ, ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳದೆ, ಕೆಲಸ ಮಾಡಿಕೊಂಡು ಕೊನೆಯಲ್ಲಿ ಪ್ರಾಣ ಹೋಗುವಾಗ ಕೋರಮೆನ್ ಇಂಜೆಕ್ಷನ್ ಕೊಟ್ಟು ಎರಡು ಮಾತು ಆಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಈ ರಾಜ್ಯ ಬಾಗಲಾದಿಂದ ಪಾರಾಗುವ ಹಾಗೆ ಇಲ್ಲ. ಕರ್ನಾಟಕದವರು ಬಾಂಬ್ಗೆ ಅಥವಾ ಬೇರೆ ಕಡೆಗೆ ಕೋಗುವ ಪರಿಸ್ಥಿತಿ ಬರುತ್ತದೆ. ನಾವು ಮಾತ್ರ ಇಲ್ಲೆ ಇರುತ್ತೇವೆ, ಏಕೆಂದರೆ, ನಾವು ವಿಧಾನಸಭೆಯವರು ಎಂದು. ಆದರೆ ಬಡ ಜನರು ಮಾತ್ರ ಸಾಯುವ ಮೊದಲು ಎಲ್ಲಾದರೂ ಹೋಗುತ್ತಾರೆ. ತಮ್ಮ ಬೇಡಿಕೆ ಏನಿದೆ, ಅದಕ್ಕೆ ರಾಜ್ಯದ ಹಿತದೃಷ್ಟಿಯಿಂದ ಸಹಾನುಭೂತಿ ಬೆಂಬಲ ನೀಡುತ್ತೇನೆ. ಅದೇ ಕಾಲಕ್ಕೆ ತಮ್ಮ ರೀತಿ ನೀತಿಗಳನ್ನು ನಿಜವಾಗಿಯೂ ಬದಲಾಯಿಸದೆ ಇದ್ದರೆ, ದುರಂತ ದೂರವಾಗಿರುವುದು ಬಹಳ ಹತ್ತಿರಕ್ಕೆ ಬರುತ್ತದೆ. ಆಗ ನಿಮ್ಮ ರಾಜ್ಯವನ್ನು ನೀವು ರಕ್ಷಣೆ ಮಾಡುವುದಿಲ್ಲ, ಮುಂದೆ ಬರುವವರೂ ರಕ್ಷಣೆ ಮಾಡಪ್ಪದಿಲ್ಲ, ಕೇಂದ್ರ ಸರ್ಕಾರದವರೂ ಮಾಡುವುದಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ತಾವು ಏನು ಒಂದು ರಿಸೋರ್ಸಸ್ ಕಮಿಟಿ ನೇಮಕ ಮಾಡಿಕೊಂಡಿದ್ದೀರಿ, ಅದರಲ್ಲಿ ಸಾಕಷ್ಟು ಈ ವಿಚಾರವನ್ನು ಚರ್ಚೆ ಮಾಡಿ, ಆ ಆಯೋಗದವರಲ್ಲಿ ಸಾಕಷ್ಟು ಮನವೊಲಿಸಿಕೊಂಡು, ಮನವಿ ಮಾಡಿಕೊಂಡು ಅವರಿಂದ ಬೇರೆ ವಿಧಾನದಿಂದ ರಾಜ್ಯಕ್ಕೆ ತರುವ ಹಣವನ್ನು ತರಬೇಕೆಂದು ಹೇಳಿ ನನ ಮಾತುಗಳನ್ನು ಮುಗಿಸುತ್ತೇನೆ.

† Sri H. M. CHANNABASAPPA (Periyapatna).—Sir, I would like to stress that while on the one hand we are speaking of economy to find funds for the development works, on the other there is squander. How can these two be reconciled, is the question. The other day when the Krishna-Cauvery waters utilisation question came up, they said, "Show us money; we are anxious to build reservoirs and boost production". The demands that are put before us are for fanciful projects. In the name of ideology they want to throw money into the gutters. I ask the Finance Minister whether they honestly feel justified in squandering so much of money by way of subsidies to these co-operatives. Let him be fair to his conscience. I am sure he feels as much as I do when he has to give so much of money by way of subsidies to these institutions. The Government will not be helping them and helping the country. They will only be helping them to become more and more incompetent and to practise more mal-practices. Nowhere in this world there is such a hierarchy in the Co-operative Department as we have in India and in Mysore. In Scandinavian countries where co-operatives have done very well, you know there is no Department of Co-operation of the stature and structure that we have here, you are maintaining this hierarchy because they come and tell you that this department is very necessary and that it must grow more and more, and you are not in a position to tell them, "Look here, we shall do without you".

You have a scheme for subsidising co-operative farming societies and putting so much of money to form societies. Co-operative societies

(SRI H. M. CHANNABASAPPA)

are voluntary organisations organised by the people concerned in order to develop their bargaining power. Now, co operative institutions have become part and parcel of Government. They are being run as Government institutions and the easy money you give in lakhs and crores is all going down the drain. I would only quote the Reserve Bank of India Report and I am sure no better authority is necessary.

> " There is no doubt whatsoever that the co-operatives have become institutions to capture economic and political power. It is therefore not surprising to find that the domination by vested interests sometimes adversely affects the performance of co-operative societies in almost all the districts. Thus, in spite of substantial increase in the loan, the shortfall in achievements can only be explained by the fact that the forces of transformation were not as powerful as those which were sought to be counteracted."

This statement by the Reserve Bank of India should be sufficient to guide you in regard to the functioning of co-operative societies. Co-operative farming societies have been a miserable failure all over India. Why are you harping on that ? For the sake of ideological consideration, you have absolute'y no value for practical utility. I can quote Sri Gadgil who headed the panel for the Study of Co-operative Farming Societies. He himself has admitted that nearly 40 to 50 per cent of co-operative societies need re-vitalisation. It is an honourable word which he has used. Most of these societies are formed only because there is easy money forthcoming which need not be paid back. Co-operative societies must function in competition with others in a business like manner, There is no denying the fact that the Government is spoon feeding them at every stage and wasting precious public money. I am opposed to the demands which you have brought under the head "Co-operation". Unless and until you revise your policy in regard to co-operatives, they will never improve. Whenever monies are given to co-operatives, people are anxious to share it amongst themselves. I can quote instances after instances, but I have no time.

Coming to the appointment of legal advisers in regard to the Krishna-Godavari Waters dispute, what a colossal waste it is ! In a socialist State where the earning capacity of a poor man is not more than annas 8 or 10 or at the most a rupee per day, here is a case where a former Judge of the Bombay High Court is to be paid Rs. 3,500 per month for a period of one year from the date of report to duty as if there is no retired High Court Judge in Mysore who can advise. A retired Commissioner of the Indus Water Treaty, New Delhi, has been engaged as a Technical Consultant on a retention fee of Rs. 1,500 per mensem plus Rs. 250 per day of actual work. A Legal Counsel is to be paid Rs. 25,000 as reading fee and Rs. 2,500 for every day he is out of Head-quarters. And to help him another Advocate of the Supreme

Court has also been engaged on payment of a fee of Rs 400 per day of appearance before the Tribunal and also an Advocate of Madras has been engaged to assist the Legal Counsel on payment of a fee of Rs.2,000 for reading and a fee of Rs. 500 per day he is out of station. Are you giving them pebbles or are you giving them money ? It is the precious hard earned money of the people of Mysore. There are competent men who will do the job for the love of the State and in the interest of the State. Our High Court judges I do not want to name them-many of them have capacities to give a better performance than any one of these people. You have been importing retired men and giving Rs. 3,500 per month. For what purpose ? If you had only made an appeal, there are legal luminaries in this State, retired or otherwise, who have functioned as High Court Judges or are functioning as members of the bar and who would be willing to help you. You could have made selection from them and at least if you pay Rs. 3,500 per month, they will be grateful to you and work for twanty-four hours. Where is the fun in importing Bombay people and Madras people ?

Krishna water dispute is a technical matter and as Mr. Siddaveerappa put it, what are the guidelines for those people to argue out the case? Nagarjunasagar is completely built up and you cannot deny water; it has become a fait accompli. The Government of India has not enunciated its water policy in the matter of apportionment of this inter-State River waters and it is something like a blind man moving in a dark room. There are no guidelines upon which our arguments are to be based. In the reply of the Hon'ble Minister let me know whether these legal luminaries who have been appointed have made any suggestion to first move the Government of India to lay down the guidelines in regard to the utilisation of inter-State river waters. Without that I am sure any arguments that might be put forward will only be to please you because you are the pay-masters. Therefore I do not want to say much on that, but I have got to condemn with all the vehemence at my command the approach you have made in importing intelligence from outside Mysore where men capable of dealing with the subject are rotting in our State. We have legal luminaries in our High Court who have dealt with the problems of Krishna-Godavari water. Did you ever make any attempt to consult them and see if there is anybody in this State who is competent enough to do that ? Who advised you to pick up that gentleman from Bombay ? What are the special qualifications he has in regard to Krishna Godavari water or any other inter-State river water dispute ? Absolutely none that I know of. I expect the Finance Minister to convince us saying here is the man who has such and such knowledge of inter-State river water and he has dealt with such and such a case. If I am convinced, I do not mind your paying him Rs. 3,500, but I would say that you should have the love for the people of the State first. Without that if you have made a selection I would say it is a political appointment and not an appointment made on merits.

(SRI H. M. CHANNABASAPPA)

4-30 P.M.

I was telling you about your investment in some of the dying Industries. When we have absolutely no mony to construct even small projects in the Cauvery basin, what is the point in your investing huge amounts in these dying industries ? If you want to distribute patronage, say so. But please for heaven's sake, do not squander away public money in this matter. I will take another opportunity to deal with this at length. I have already tabled a motion to discuss the report of the Technical Committee on Cauvery waters and I am sure the Speaker who is interested much more than I will admit it and give ample time for discussion. On that occasion I will take opportunity to show you how monies are being squandered at the cost of real development of the State.

With these few words I oppose these demands unless the Finance Minister can convince me that all the monies that he has asked for are going for a right cause.

Sri RAMAKRISHNA HEGDE (Minister for Finance, Planning and Youth Welfare).—Mr. Speaker, Sir, before I deal with the supplementary demands I would like to say a word about the demands for excess grants for the years 1964-65 and 1965-66. I would like members to appreciate one thing and that is this. Demands for excess grants can come before this House only under a certain procedure and after completing certain formalities and requirements. Unless the accounts are reconciled in the Accountant General's Office and the reconciliation reveals that there are certain items of expenditure where the expenditure was more than what was voted in the L gislature and the Public Accounts Committee has thoroughly scritunized them and recommended to Government that they should be regularised, the demands for excess grants cannot come b fore the House. So before these demands are placed before the House, it is necessary to appreciate that all these formalities have been fulfilled.

Sri H. B. JWALANAIAH.—You have allowed your officers to expend.

Sri RAMAKRISHNA HEGDE.—Under what circumstances ? Mostly they are items of expenditure that were incurred either to pay decretal amounts of certain other inevitable charges during the course of that year. It is not with a view to justify any negligence on the part of Government that I am saying this, but it is with a view to unable the House to appreciate this under the proper perspective.

In regard to supplementary demands, there was criticism particularly on 3 or 4 important matters. Many Hon'ble Members referred to the long list of items of expenditure in respect of which monies were advanced out of the Contingency Fund. There are in all 63 items of expenditure. Out of these 63, 39 or so relate to items of expenditure in respect of which money was drawn on 31st March 1969. This has

caused a certain amount of suspicion in the minds of Hon'ble Members. Their suspicion is when monies were drawn on 31st March of the preceding year why that was not envisaged and why proper provision was not made in the new budget. These are, practically all of them, schemes that are called Centrally sponsored schemes and most of them relate to co-operative development. These Centrally sponsored schemes carry with them a certain pattern of financial assistance. Mostly the co-operative schems have a certain amount of subsidy, a certain amount of matching share capital and a certain provision for certain other financial assistance like construction of godowns, etc., and we are not intimated well in advance at the beginning of the year so that we could make the necessary provision in our budget.

Sri H. B. JWALANAIAH.—You could have taken token grants.

Sri RAMAKRISHNA HEGDE.—In respect of how many schemes ? If there is any change in the nomenclature of the scheme, suddenly it becomes a new service. Therefore I would appeal to Hon'ble Members that in all these 39 items they are not schemes for which expenditure could have been provided in the previous year.

Sri L. SRIKANTAIAH.—So you are only toeing the line shown by the Centre.

Sri RAMAKRISHNA HEGDE.—I beg to differ from the Hon'ble Member. The annual plan is discussed and finalised sometime in the month of November or December of the previous year. For instance, the annual plan for Mysore for the current year was discussed and finalised in November or December of 1968. At that time no doubt sectoral allocations were also made, but it is not certain what exactly are the various schemes in various departments and what exactly is the quantum of assistance in respect of the various schemes and programmes. The result is when we prepare our budget sometime in January or February we have to prepare not on certainties, but on probabilities and these probabilities sometimes may come true or may not come true, and there is bound to be a certain amount of variation. It is only because of that the necessary provision could not be made for these 39 items of co-operative development schemes and other schemes and, therefore, we had to come before the Legislature for approval.

Sri K. H. PATIL.—It is not correct that in all the Co-operative institutions the amounts were expended on development schemes. They were sometimes expended contrary to the advice of the Public Accounts Committee knowing full well that the investment in some of the old Co-operative mills would go waste.

May I know why the loan was advanced to a greater extent ?

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳು ನಮಗೆ ಒದಗಿಸಿರುವ ಎಕ್ಸೆಸ್ ಗ್ರಾಂಟ್ ಎನ್ನುವ ಪಟ್ಟಿಯಲ್ಲೇ ಒಂದು ವಾಕ್ಯ ಇದೆ. ಅದು ಹೀಗಿದೆ :

"The Public Accounts Committee have recommended the regularisation of this real excess."

ಹೀಗಿರುವಾಗ ಅಡಿಷನರ್ ಫಂಡ್ಸ್ ಎಂದು ಏಕೆ ಹೆಚ್ಚು ಕೇಳಬೇಕು ?

Sri RAMAKRISHNA HEGDE.—The P. A. C. have commented that the Department has obtained additional funds to cover the anticipated expenditure. Then, they recommend that this may be placed before the Legislature for approval. Sri S. Gopala Gowda is a more experienced member than I. I would like to draw the attention of the Hon. Members to the various schemes, which do not include the type of scheme which Sri K. H. Patil mentioned. These are all new schemes, continuing schemes, in respect of which Central assistance was communicated much later.

ಶ್ರೀ ಎಂ. ನಾಗಪ್ಪ.—27 ನೇ ಮಾರ್ಚ್ 1969ರಲ್ಲಿ ತಾವು ಇಲ್ಲಿ ಒಂದು ಸಪ್ಲಿಮೆಂಟರಿ ಗ್ರಾಂಟ್ಸ್ ಒಂದು ಪಟ್ಟಿ ಕೊಟ್ಟಿದ್ದೀರಿ. ಆಗ ಕೂಡ ಇದನ್ನೂ ಅಲ್ಲೇ ಸೇರಿಸಿ ಕೇಳಬಹುದಾಗಿತ್ತಲ್ಲವೇ? ಈ ಡಿಮ್ಯಾಂಡುಗಳು 31ನೇ ಮಾರ್ಚ್ 1969 ರಲ್ಲೇ ಪಾಸಾಗಿವೆ. ಇದು ಮಾನ್ಯ ನಚಿವರ ಗಮನಕ್ಕೆ ಬಂದಿರಲಿಲ್ಲವೇ?

Sri RAMAKRISHNA HEGDE.—When it is to come in the Supplementary Demands, whether it is No. 1 or 2, it does not make much difference.

In regard to the observations made by certain Hon. Members, about co-operative societies, I would like to say only this much: even the Minister for Co-operation does not claim that everything is well in the co-operative field. It is well-known that certain vested interest has developed in this field also, and certain people have deliberately and with a definite purpose entered into this field to serve their own ends. But, at the same time, we cannot denounce the co-operative movement wholesale saying that all co-operatives are bad, all people who work in co-operatives are corrupt and dishonest. Sometimes, even a few men in a society bring bad name to the whole Society. One thing, I entirely agree with the Hon. Members who participated in this discussion, and that is this: as long as the various types of subsidy continue, there is bound to be some sort of dishonesty in the movement. For instance, there are co-operatives; there are many urban co-operative Banks in the State, and I don't think any criticism was ever made either on the floor of this House or outside against any urban co-operative Bank, because these co-operative institutions are not eligible either to subsidy or to share capital or to any type of loan. They have to stand on their own legs; they have mobilise their own resources and they have to depend upon their own means. It is only in such co-operative institutions where large quantum of subsidy is given and, more than the share capital collected by the members, Government share capital is given and very huge loans are advanced to these societies, that we find there is some sort of lack of responsibility among the management of the institution concerned. This subsidy scheme is not going to be permanent, and I for one would like to withdraw it forthwith if it is only possible. But the Government of India and the Planning Commission are very fond of certain schematic budget and certain patterns. If they are fond of particular pattern, a certain scheme, they would like to introduce them, whether local conditions warrant or not, all over the country. So, we have

to have a second thought in regard to these various patterns evolved by the Government of India and the Planning Commission.

One or two Hon. Members very vehemently criticised the provision that has been made for the payment of fees to the Advocates and legal Counsels, who are going to appear on behalf of the Government of Mysore before the Tribunal. It is very easy to say that there were local people, may be more able and eminent available, and why do you spend so much money on this, why should they take Rs. 2,500 per day, and why the reading fee should be Rs. 25,000. You must not foreget one very vital question, that is, the judgment of this Tribunal is going to determine the future destiny of nearly 10 million people of this State. Therefore, it is necessary in the interest of the people that we engage the best of lawyers, we engage the best of legal counsels, so that our case is not lost by default. The Andhra Government—may be in Andhra also there are great luminaries, there are great people who retired from the Judiciary—has engaged not an Andhra person, but a Bengali, who is known for his legal ability, *i.e.*, Sri A. K. Sen. When this question has been taken at a forum, where it is a battle of wits and legal knowledge, we must not hesitate, irrespective of the expenditure it may entail, to engage the best qualified person to fight the case.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಮಂತ್ರಿಗಳು ದಕ್ಷತೆಯ ವಿಷಯವಾಗಿ ಹೇಳಿದರು. ದಕ್ಷತೆ ವಿಷಯ ಪ್ರಾಧಾನ್ಯವಾಗಿ ಇರಬೇಕೆಂದು ನಾನೂ ಒಪ್ಪುತ್ತೇನೆ. ಅವರಿಗೆ ಕೊಡತಕ್ಕಂಥ ಹಣ ಮುಖ್ಯವಲ್ಲ, ಅದನ್ನೂ ಒಪ್ಪುತ್ತೇನೆ. ಅವರಿಗೆ ಬೇಕಾದಂಥ ಒಬ್ಬರನ್ನು ನೇಮಕ ಮಾಡಿಕೊಂಡು ಇದ್ದಾರೆ. ಅವರ ಹೆಸರು ಎಸ್. ಎಸ್. ಜವಳಿ ಎಂದು. ಅವರಿಗೆ ಸುಪ್ರೀಂ ಕೋರ್ಟ್ ಪ್ರಾಕ್ಟೀಸ್ ಏನು ಇದೆ! ಅಥವಾ ದಕ್ಷತೆ ಏನು ಇದೆ! ಇಲ್ಲವೇ ಬೇರೆ ವಿಚಾರ ಏನಿದೆ? ತಿಳಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ಜವಳಿ ಯಾರು ಏನು ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಯಾರಾದರೂ ಆಗಬಹುದೇ? ಯಾರು ತೀರ್ಮಾನ ಮಾಡಿದರು?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಅಸಿಸ್ಟ್ ಮಾಡುವುದಕ್ಕೆ ಯಾರಾದರೂ ಜೂನಿಯರ್ ಕೌನ್ಸಿಲ್ ತೆಗೆದುಕೊಳ್ಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಾದರೆ ಒಂದು ದಿವಸಕ್ಕೆ ಅವರಿಗೆ 400 ರೂಪಾಯಿ ಕೊಡುವುದು ಜಾಸ್ತಿಯಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಸುಪ್ರೀಂ ಕೋರ್ಟ್ ಪ್ರಾಕ್ಟೀಸ್ ಮಾಡುವವರು ಒಂದು ದಿವಸಕ್ಕೆ 400 ರೂಪಾಯಿಗಿಂತ ಕಡಿಮೆಗೆ ಬರುವುದಿಲ್ಲ. ನಾವು ನಂಬಿಯಾರ್ ಹತ್ತಿರ ಮೊದಲು ಯೋಚನೆ ಮಾಡಿದೆವು. ಬಾಕಿಯವರು ಯಾರು ಇರಬೇಕು ಎನ್ನುವುದನ್ನೂ ಕೂಡ ಅವರ ಸಲಹೆಯನ್ನು ತೆಗೆದುಕೊಳ್ಳುವುದು ಒಳ್ಳೆಯದು. ದಾತಾರ್‌ರವರು ಮುಂಬೈ ವಾಸವಾಗಿದ್ದರೂ ಕೂಡ, ಕರ್ನಾಟಕಕ್ಕೆ ಹೊರಗಿನವರಲ್ಲ. ಅವರು ಒಳ್ಳೆಯ ಮೇಧಾವಿ, ಅವರ ಕಾಯಿದೆ ಅನುಭವ ಅತ್ಯಂತ ಹೆಸರಾದುದು.

ಇನ್ನು ರಾಜ್ಯಭವನದ ಬಗ್ಗೆ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ನಾನು ಒಪ್ಪುತ್ತೇನೆ. ಕಳೆದ 2-3 ವರ್ಷದ ಅವಧಿಯಲ್ಲಿ ನುಮಾರು 2-3 ಲಕ್ಷ ರೂಪಾಯಿಗಳಷ್ಟು ರಾಜಭವನದ ರಿಪೇರಿಗೆ ಮತ್ತು ಅದರ ವಿಸ್ತರಣೆಗೆ ಖರ್ಚಾಗಿದೆ. ಮಾನ್ಯ ಸದಸ್ಯರಲ್ಲಿ ನಾನು ಹಿಂದೆಯೇ ಮನವಿಮಾಡಿಕೊಂಡಿದ್ದೆ. ಕೆಲವು ಅನಿವಾರ್ಯವಾದಂಥ ಪ್ರಸಂಗಗಳು ಇರುತ್ತವೆ ಎಂದು. ಒಂದೆ ಒಂದು ಅಳತೆ ಗೋಲು ಹಿಡಿದು ಅಳೆಯುವುದು ಸಾಧ್ಯವಿಲ್ಲ. ಮಂತ್ರಿಗಳ ನಂಬಿಕೆ ಕಡಿಮೆ ಮಾಡಿಕೊಳ್ಳಿ ಎಂದರೆ ಅದಕ್ಕೆ ನಾನು ಒಪ್ಪುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ನ್ಯಾಮಿ, ನಾನು ಹೇಳುವುದು ತಾವು ರಾಜಭವನವನ್ನು ಯಾವ ರೂಪದಲ್ಲಿ ಇರಬೇಕು ಎಂದು ಮೊದಲೇ ಒಂದು ಅಂದಾಜು ಮಾಡಿಸಿ ಅದಕ್ಕೆ ಎಷ್ಟು ಖರ್ಚಾಗುತ್ತದೆ ಎಂದು ಮಾಡಿಬಿಟ್ಟಿದ್ದರೆ, ಅಷ್ಟಕ್ಕೆ ಒಪ್ಪಿಗೆ ಕೊಡುವರೋ, ಕೊಡುತ್ತಾ ಇರಲಿಲ್ಲವೋ ? ಅದು ಬೇರೆ ವಿಚಾರ. ಆದರೆ ಈ ರೀತಿ ಮುಂದುಗಡೆ ಬಾಗಿಲು ಬಿಟ್ಟು ಹಿಂದುಗಡೆ ಬಾಗಿಲಿನಿಂದ ಬಂದಹಾಗೆ ಮಾಡುವುದು ಅಂದರೆ ದಿನ ಎಸ್ಟಿಮೇಟ್, ದಿನ ರಿಪೇರಿ ಇದು ಮಾಡುವುದು ಬಳ್ಳಿಯದಲ್ಲ ವೆಂದು ಹೇಳಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತುಂಟು. ಕೆಲವೊಂದು ಕಾರಣ ದಿಂದ ಇಲ್ಲಿ ರಾಜಭವನ ಇರಲಿಲ್ಲ. ಹೊಸದಾಗಿ ರಾಜಭವನ ಕಟ್ಟಬೇಕೆಂದು ಯೋಚನೆ ಮಾಡಿದಾಗ ಅದರ ಬಗ್ಗೆ ಇದೇ ನಥೆಯಲ್ಲಿ ಟೀಕೆಗಳು ಪ್ರಾರಂಭವಾಯಿತು. ಇನ್ನೂ ಇತರ ಬೇಡಿಕೆಗಳಮೇಲೂ ಟೀಕೆಗಳೂ ಆಯಿತು. ಆವಾಗ ಪ್ಲಾನ್; ಎಸ್ಟಿಮೇಟ್ ಏನೂ ಮಾಡಿರಲಿಲ್ಲ. ಇತ್ತೀಚೆಗೆ ನಮ್ಮ ತಲೆಯಲ್ಲಿ ಇದ್ದೊಂದು ರಾಜಭವನ ಇರಬೇಕೆಂದು ಯೋಚನೆ ಬಂತು. ಆಗ ಮೈಸೂರು ಮಹಾ ರಾಜರ ಅರಮನೆ ಸಿಕ್ಕುವುದು ಅಷ್ಟು ಸುಲಭವಲ್ಲ ಎಂದು ತಿಳಿದು ಈಗ ಇರತಕ್ಕಂಥ ಗೌರ್ನಮೆಂಟ್ ಗೆಸ್ಟ್ ಹೌಸನ್ನು ರಾಜಭವನವನ್ನಾಗಿ ಮಾಡಬೇಕಾಯಿತು. ಕಾರಣ President, Vice-President ಮತ್ತು Head of States ಇಂಥವರುಗಳೆಲ್ಲಾ ಬರಬಹುದು. ಆದುದರಿಂದ ಅವರಿಗೆ ಯೋಗ್ಯವಾದಂಥ ಸೌಕರ್ಯ ಸಿಕ್ಕಬೇಕು ಎಂದು ಈ ಗೌರ್ನಮೆಂಟ್ ಗೆಸ್ಟ್ ಹೌಸನ್ನು ಉತ್ತಮಗೊಳಿಸುವುದು ಯೋಗ್ಯ ಎಂದು ತೀರ್ಮಾನ ಮಾಡಿದೆವು.

ಇನ್ನೊಂದು ವಿಷಯ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು 200 ಕೋಟಿ ರೂಪಾಯಿ ಬಜೆಟ್ ಇರತಕ್ಕಂಥ ಸ್ಟೇಟಿನಲ್ಲಿ ಒಂದು ಲಕ್ಷ ರೂಪಾಯಿ ವೆಚ್ಚವನ್ನು ಇದಕ್ಕೆ ಮಾಡು ವುದು ಹೆಚ್ಚೇನೂ ಅಲ್ಲ. ಆದುದರಿಂದ ರಾಜಭವನದ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವ ರೀತಿ ಯಾದ ಟೀಕೆಯನ್ನೂ ಮಾಡಕೂಡದೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಕೊನೆಯದಾಗಿ ಶ್ರೀಮಾನ್ ಗೋಪಾಲಗೌಡರು 5ನೇ ಆರ್ಥಿಕ ಆಯೋಗದ ವಿಚಾರವಾಗಿ ಏನು ಮಾತನಾಡಿದರು ಅದರ ಬಗ್ಗೆ ಎರಡು ಮಾತುಗಳನ್ನು ಹೇಳದೇ ಇದ್ದರೆ ಅದು ತಪ್ಪು ತಿಳು ವಳಿಕೆಗೆ ಆಸ್ಪದವಾಗಬಹುದು ಎಂದು ನನಗೆ ಅನಿಸುತ್ತದೆ. ನಾನು ನಿರೀಕ್ಷಿಸಿದಂತೆಯೇ, ನಾನು ಹೇಳಿದ ಒಂದು ವಾಕ್ಯದ ಶಬ್ದಕ್ಕೆ ಅವರು ತೀಪ್ಷ್ಣವಾದ ಪ್ರತಿಭಟನೆ ಮಾಡಿದರು. ಆದು ಯಾವುದು ಎಂದರೆ ಫುಡ್ ಸಬ್ಸಿಡಿ ಅಂಡ್ ಲ್ಯಾಂಡ್ ರೆವಿನ್ಯೂ ಬಗ್ಗೆ.

ಭೂಕಂದಾಯವನ್ನು ವಜಾ ಮಾಡುವ ಬಗ್ಗೆ ಎರ್ನಾಗ್ಯಾಮಗಳ ಜನಪ್ರಿಯತೆ ಕ್ರಮಗಳನ್ನು ಅನುಸರಿಸುತ್ತಾ ಇರತಕ್ಕಂಥ ಕೆಲವು ಸ್ಟೇಟ್ಸ್ ಎಚಾರದಲ್ಲಿ ಅವರಕೂಡ ನಾನು ಹೇಳಿದೆ. ಮಾನ್ಯ ಶ್ರೀಮಾನ್ ಗೋಪಾಲಗೌಡರಿಗೆ ನಾನು ಹೇಳಬೇಕಾದ್ದು ನಾನು ಮಾತನಾಡುವ ಶಬ್ದಗಳು 5ನೇ ಆರ್ಥಿಕ ಆಯೋಗದ ಸದಸ್ಯರು ಏನು ಹೇಳಿದ್ದಾರೆ ಆ ಶಬ್ದಗಳನ್ನೇ ಹೇಳುತ್ತೇನೆ. 5ನೇ ಆರ್ಥಿಕ ಆಯೋಗದವರು ನಮ್ಮ ಜೊತೆಗೆ ಎರಡು ದಿವಸ ಬಂದು ಚರ್ಚೆ ಮಾಡಿದಾಗ ನಾವು ಸಂಪನ್ಮೂಲ ಗಳನ್ನು ಹೆಚ್ಚಿಸುವುದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದೆವೋ ಅದರ ಬಗ್ಗೆ ಪ್ರಶಂಸಿಸಿದರು. ಮತ್ತು ಕೆಲವು ರಾಜ್ಯಗಳಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದನ್ನು ಕೈಬಿಡುವಂಥ ಟೀಕೆಗಳ ಬಗ್ಗೆ ಅವರು ಹೇಳಿದ್ದುದರಿಂದ ನಾನು ಇದನ್ನು ಹೇಳಬೇಕಾಯಿತು. ಅದಕ್ಕೆ ಅವರು ರಾಜಕೀಯ ಉದ್ದೇಶಗಳಿಗಾಗಿ ಈ ಆರ್ಥಿಕ ಕ್ರಮಗಳನ್ನು ಕೈಗೊಳ್ಳದೆ ಇರುವುದು ನಾವು ಸರ್ವಥಾ ಒಪ್ಪುವುದಿಲ್ಲ ಎಂದು ನಮ್ಮ ಹತ್ತಿರ ಹೇಳಿದರು. ಮತ್ತೆ ಅವರಲ್ಲಿ ನಾನು ಚರ್ಚೆ ಮಾಡಿ ದ್ದೇನೆ. ಕಳೆದ 4–5 ವರ್ಷಗಳಿಂದಲೂ ಮೈಸೂರು ದೇಶ ತನ್ನ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಂಡ ಉದ್ದೇಶ ಅದರಿಂದ ನಮ್ಮ ಪಂಚವಾರ್ಷಿಕ ಯೋಜನೆಗೆ ಹೆಚ್ಚು ಹಣ ಒದಗಿ, ನಮ್ಮ ರಾಜ್ಯದ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳು ಪರಿಹಾರವಾಗಬಹುದು ಎಂದು. ಆದ್ದರಿಂದ ನಾವು ಜನಪ್ರಿಯತೆ ಕಡೆ ನಾವು ಹೆಚ್ಚು ನಿಗಾ ಕೊಡದೆ ಕಟುವಾಗಿ ಕೆಲವು ಕ್ರಮಗಳನ್ನು ತೆಗೆದುಕೊಂಡಿ ದ್ದೇವೆ. ಜನರಿಗೆ ಒಳ್ಳೆಯದು ಮಾಡಬೇಕೆಂಬುದೇ ಇದರ ಉದ್ದೇಶ. ಯಾವ ರಾಜ್ಯದಲ್ಲಿ ಈ ತರಹ ಕ್ರಮಗಳನ್ನು ತೆಗೆದುಕೊಂಡಿದ್ದಾರೋ ಅಲ್ಲಿ ಈ ಆಯೋಗದ ಶಿಫಾರಸ್ಸಿನಿಂದ ದೊಡ್ಡ ಹೆಟ್ಟು ಬಿದ್ದಿದೆ ಎಂದು ಹೇಳಿದರೆ ಅಭ್ಯಂತರವಿಲ್ಲ. ಇದರ ಬಗ್ಗೆ ವಿಸ್ತಾರವಾಗಿ ಹೇಳುವುದಕ್ಕೆ ಬಯಸುವು ದಿಲ್ಲ. ಈ ಆಯೋಗದವರು ಏನು ಒಂದು ತತ್ತ್ವವನ್ನು ಹಾಕಿಕೊಂಡಿದ್ದಾರೋ ಆ ತತ್ತ್ವ ಹುರುಳಿ ಲ್ಲದ ತತ್ತ್ವ ಮತ್ತು ಈ ತತ್ತ್ವದಿಂದ ಸರಿಯಾದಂಥ ನ್ಯಾಯ ನಮ್ಮ ದೇಶ ಒಂದಕ್ಕೆ ಅಲ್ಲ, ಇತರ ಎಲ್ಲಾ ರಾಜ್ಯಗಳಿಗೂ ಆಗಲಾರದು, ಆಗಲೂ ಸಾಧ್ಯವೂ ಇಲ್ಲ, ಇದು ನನ್ನ ಸ್ಪಷ್ಟ ಅಭಿಪ್ರಾಯ. ಇದನ್ನು ಪ್ರತಿಭಟನೆ ಮಾಡಿ ಯಾವರೀತಿ ನ್ಯಾಯವನ್ನು ನಾವು ದೊರಕಿಸಿಕೊಳ್ಳಬೇಕು ಅದರ ಬಗ್ಗೆ

ನಾವು ನಕಲ ಪ್ರಯತ್ನ ಮಾಡುತ್ತೇವೆ ಮತ್ತು ಇದಕ್ಕೆ ಮಾನ್ಯ ಸದಸ್ಯರ ಸಹಕಾರವನ್ನೂ ಕೋರುತ್ತೇನೆ. ಇಷ್ಟು ಹೇಳಿ ಈ ಸಭೆಯು ಮುಂದಿರತಕ್ಕಂಥ ಎಸ್ಟಿಮೇಟ್ಸ್ ಬೇತಿಕೆಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

5-00 P.M.

Mr. SPEAKER.—I put the motion to the vote of the House. The question is :

> "That further sums not exceeding the amounts as shown in respect of demands No. 4, 10, 17, 20, 23, 24, 27, 33, 39, 41, 44, 47, 48 and 54 be granted to Government to defray the charges which will come in course of payment during the year ending with 31st Day of March 1970."

(*The House divided.*)

Mr. SPEAKER.—Now, those who are sitting in the first line may please stand up. Now I will come to the left side. There may be some members who are in favour of 'Ayes'. I will count them.

SOME HON.MEMBERS.—The Procedure adopted for counting is no correct.

Mr. SPEAKER.—The procedure that I have adopted is allright and here is nothing wrong.

Sri V. N. PATIL.—The convention is to count them all when all sf them are standing. The procedure now the Chair is adopting will lead to confusion.

Mr. SPEAKER.—There is no such convention. I shall ask all the members on the right side to stand First and then. Some members be sitting on the left side. I must know the number of members who are in favour of 'Ayes'. There is nothing wrong in adopting this mtehod. All the sides are equal to me. If the hon members agree, I will have to ask all the members to stand, wherever they are.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ತಾವೇನೂ ಈಗ ಯೋಜನೆ ಮಾಡಿ ಅಪ್ಪಣೆ ಕೊಡಿಸಿದಿರಿ ಪ್ರಜಾಪ್ರಭುತ್ವದಲ್ಲಿ ಅದು ಒಳ್ಳೆಯು ಪದ್ಧತಿ. ಸಭೆಯಲ್ಲರುವವರೆಲ್ಲರೂ ತಮ್ಮ ಅತ್ಮ ಸಾಕ್ಷಿಯಾಗಿ ಓಟು ಕೊಡುವುದು ಬಹಳಷ್ಟೆಒಳ್ಳೆಯದು. ಚೈರಿ ಬೆಂಚಿನವರು ಇಲ್ಲೂ ಕೂಡಬಹುದು, ಅಲ್ಲೂ ಕೂಡಬಹುದು, ಅವರು ಎಲ್ಲಿ ಬೇಕಾದರೂ ಕೂಡಲು ತಾವು ಅವಕಾಶ ಕೊಡುಬಹುದು. ನಾನು ಇನ್ನೂ ಮುಂದುವರೆದು ಹೇಳುತ್ತೇನೆ. ಗ್ಯಾಲರಿಯಲ್ಲಿರುವವರೂ ಓಟು ಮಾಡಬಹುದು, ಅದು ಒಳ್ಳೆಯದು.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ, ಕ್ಲೀಯರ್ ಕಟ್ ಆಗಬೇಕಾದರೆ ರೂಲ್ ಇರುವುದನು ಸಸ್ಪೆಂಡ್‌ಮಾಡಿ ಓಟಿಗೆ ಹಾಕಿ. ಹಾಗಿಲ್ಲದೆ ಇದ್ದರೆ ಸರಕಾರ ಉಳಿಯುವುದರ ಸಲುವಾಗಿ ನಿಯಮ ವಿರುದ್ಧ ತಪ್ಪುದಾರಿಗೆ ಹೋದರು ಎಂಬ ಆಪಾದನೆ ಬರಬಹುದು ಎಂದು ವಿನಂತಿಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಫಸ್ಟ್ ಲೈನ್ ಎಂದರೆ ಯಾರು ಎಲ್ಲಿ ಬೇಕಾದರೂ ಇರಲಿ ಅದು ಫಸ್ಟ್ ಲೈನ್ ಆಗುತ್ತದೆ, ಈ ಪಕ್ಕದಲ್ಲಿ ಆ ಪಕ್ಕದಲ್ಲಿ ಅಂತ ಅಲ್ಲ. ಈ ಸೆಷನ್‌ನಲ್ಲೇ ಡಿವಿಜನ್ ನಡೆದಾಗ ಹಿಂದೆ ಫಸ್ಟ್ ಲೈನ್ ಅಂದರೆ ಈ ಕಡೆಯವರೂ ಇರುತ್ತಾ ಇದ್ದರು, ಆ ಕಡೆ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರೂ ಇರುತ್ತಾ ಇದ್ದರು. ಈಗ ತಾವು ನಡೆಸಿರುವುದು ಹೊಸ ಪದ್ಧತಿ, ತಮ್ಮ ಈ ಕ್ರಮ ಸರಿಯಾದ್ದಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪೀಕರ್ ಅವರೇ, ತಾವು ಮೊದಲನಿಂದಲೂ ಅನೂಚಾನವಾಗಿ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೀರಿ. ಅದೇನೆಂದರೆ ಮೊದಲನೆ ಬೆಂಚಿನಲ್ಲಿ ಇರತಕ್ಕವರೆಲ್ಲರೂ ಎದ್ದುನಿಂತುಕೊಳ್ಳಬೇಕೆಂದು ಹೇಳಿದಾಗ ಈ ಕಡೆಯವರು ಆ ಕಡೆಯವರು ಎಲ್ಲರೂ ನಿಂತುಕೊಳ್ಳುತ್ತಾ ಇದ್ದರು. ಯಾರು ಎಲ್ಲ ಬೇಕಾದರೂ ಇರಬಹುದಾಗಿತ್ತು, ಯಾವ ಪ್ರತಿಬಂಧಕವೂ ಇರಲಿಲ್ಲ. ಇವತ್ತಿನದಿವಸ ಮೊದಲು ಆ ಕಡೆಯವರಿಗೆ ಮೊದಲನೆ ಬೆಂಚಿನಲ್ಲಿರುವವರು ನಿಂತುಕೊಳ್ಳಬೇಕೆಂದು ಹೇಳಿದಿರಿ, ಆಗ ನಾವು ಯಾರೂ ನಿಂತುಕೊಳ್ಳಲಿಲ್ಲ, ಕೊನೆ ಲೈನ್‌ಗೆ ಬಂದಾಗ ಅಲ್ಲಿ ಓಟು ಮಾಡುವುದಕ್ಕೆ ಎಷ್ಟು ಜನ ಇರಬೇಕಾಗಿತ್ತೋ ಅಷ್ಟು ಜನ ಇರಲಿಲ್ಲ, ಓಟು ಮಾಡಲಿಲ್ಲ. ಆಮೇಲೆ ಈ ಕಡೆ ಯಾರಾದರೂ ಇದ್ದೀರಾ ಅಂತ ಪ್ರಚೋದನೆ ಮಾಡಿದಿರಿ, ಆಗ ಕೆಲವರು ಅವರ ಇಚ್ಛೆಗೆ ವಿರುದ್ಧವಾಗಿ ನಿಂತುಕೊಳ್ಳಬೇಕಾಯಿತು.

Mr. SPEAKER.—Please withdraw that word.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಚೋದನೆ ಅಲ್ಲದಿದ್ದರೆ ಬೇರೆ ಒಂದು ಪದವನ್ನು ಉಪಯೋಗಿಸೋಣ, ಅದು ತಮಗೆ ಬೇಜಾರು ಆಗುವುದಾದರೆ ಅದನ್ನು ವಿತ್‌ಡ್ರಾ ಮಾಡೋಣ, ಆದ್ದರಿಂದ ಆ ಪದದ ಮೇಲೆ ವ್ಯಾಖ್ಯಾನ ಮಾಡುವುದು ಬೇಕಾಗಿಲ್ಲ. ತಾವು ಈಗ ಮಾಡಿದ ಪದ್ಧತಿ, ಯಾವಾಗ ಇದು ಬದ್ದುಹೋಗುತ್ತದೆ ಎಂದು ಕಂಡುಬಂತೋ ಆಗ ಈ ಕಡೆಯವರು ಯಾರಾದರೂ ಇದ್ದೀರಾ ಅಂತ ಕೇಳಿದಿರಿ, ಇದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

Sri K. PUTTASWAMY.—I have not been able to understand the difficulty that is being experienced. The Speaker called the members who are in favour to stand up row by row and similarly he called the members who are against to stand up row by row so that it may be easy to count. If by mistake any Members of the opposition stood up, we will not take advantage of it.

ಶ್ರೀ ಎಸ್. ಗೋಪಾಲಗೌಡ.—ಈಗ ಫ್ರೀ ಓಟು ಅಂತ ತಾವು ತೀರ್ಮಾನ ಮಾಡಿದ್ದೀರಿ, ಆ ಪ್ರಶ್ನೆ ಬೇರೆ. ಸರ್ಕಾರ ಉರುಳಿಹೋಗತಕ್ಕ ಈ ಒಂದು ಸಮಸ್ಯೆಯ ವಿಷಯದಲ್ಲಿ ನಾವು ಡಿವಿಜನ್ ಕೇಳಿದ್ದೇವೆ, ಇದು ಸಭೆಯ ನಿಯಮಾವಳಿಗಳಲ್ಲಿ ನಮೂದಾಗಿದೆ. ಮತ್ತು ಸಂಪ್ರದಾಯ ಏನು ಅನ್ನುವುದು ತಮಗೆ ಗೊತ್ತಿದೆ, ತಾವು ಹೊಸದಾಗಿ ಈ ಸಭೆಗೆ ಬಂದವರಲ್ಲ, ಇವತ್ತು ಅಧ್ಯಕ್ಷರಾಗಿಲ್ಲ, ತಾವು ಓಟು ಯಾರಿಗೆ ಕೊಡುತ್ತೀರಿ ಅನ್ನುವುದು ಗೊತ್ತಿಲ್ಲ.

ಅಧ್ಯಕ್ಷರು.—ನಾವು ಕೊಡುವುದೇ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಆ ವಿಚಾರ ಈಗ ಬೇಡ, ಆದರೆ ಇವತ್ತು ತಾವು ಅನುಸರಿಸಿರತಕ್ಕ ಕ್ರಮ, ಕೇಳಿದ ರೀತಿ ಆಶ್ಚರ್ಯಕರವಾಗಿದೆ.

ಅಧ್ಯಕ್ಷರು.—ಅದು ಹೇಗೆ ?

ಶ್ರೀ ಎಸ್. ಗೋಪಾಲಗೌಡ.—ಫಸ್ಟ್ ರೋ ಅಂದರೆ ಯಾವುದು ? ಮೇಲಾಗಿ ಯಾವ ಸದಸ್ಯ ಎಲ್ಲ ಕೂತುಕೊಳ್ಳಬೇಕು ಅನ್ನುವುದು ನಿಯಮಾವಳಿಯಲ್ಲಿ ಇದೆ. ತಾವು ಅಧ್ಯಕ್ಷರು ಒಂದು ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಮೊದಲು ಈ ಸಭೆಯ ಸದಸ್ಯರನ್ನು ಕೇಳಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಅದಕ್ಕನುಸಾರವಾಗಿ ಜಾರಿಯಲ್ಲಿರತಕ್ಕ ಶಾಸನ ಸಭೆಯ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಇಂಥ ಸಂಪ್ರದಾಯವನ್ನು ಜಾರಿಗೆ ತರಬೇಕೇ ವಿನಾ ಏಕಾ ಏಕೀ ತರುವುದಕ್ಕಾಗುವುದಿಲ್ಲ. ಹಾಗೆ ಮಾಡದಿದ್ದರೆ ಇದು ಬಹಳ ಅನರ್ಥಕಾರಿಯಾಗುತ್ತದೆ.

Mr. SPEAKER.—The Hon. Member is creating unnecessary confusion. ಇಲ್ಲಿ ಹೊಸ ಸಂಪ್ರದಾಯ ಯಾವುದೂ ಇಲ್ಲ.

Sri K. H. PATIL.—Please do not create Uttar Pradesh situation here. I am on my legs to say something on what has been wrongly done by the Chair. ತಾವು ಮೊದಲು ಮೊದಲನೆಯ ಸಾಲಿನಲ್ಲಿರತಕ್ಕವರು ಎದ್ದುನಿಲ್ಲಿ ಬೇಕೆಂದು ಹೇಳಿದಾಗ, ತಾವು ಮತ್ತು ತಮ್ಮ ಆ ಸ್ಥಾನದಲ್ಲಿ ಹಿಂದೆ ಇದ್ದವರು ಮತ್ತು ತಮ್ಮ ಉಪ ಸಭಾಧ್ಯಕ್ಷರು ಎಲ್ಲರೂ ಏಕಮುಖವಾಗಿ ಅನುಸರಿಸುತ್ತಿದ್ದ ಒಂದು ನೀತಿಯೆಂದರೆ— ಮೊದಲನೆಯ ಸಾಲಿನಲ್ಲಿರುವವರು ಎಂದರೆ—ಈ ಕಡೆ ಪಕ್ಷದಲ್ಲಿರತಕ್ಕ ಮೊದಲನೆಯ ಸಾಲಿನವರೂ

ಮತ್ತು ಆಡಳಿತ ಪಕ್ಷದಲ್ಲಿ ಮೊದಲನೆಯ ಸಾಲಿನಲ್ಲಿರತಕ್ಕವರು ಎಂದೂ, ಎರಡನೆಯ ಸಾಲಿನಲ್ಲಿರ ತಕ್ಕವರು—ಎಂದಾಗ ಇತ್ತಕಡೆ ಎರಡನೇ ಸಾಲಿನಲ್ಲಿರತಕ್ಕವರು ಮತ್ತು ಅತ್ತಕಡೆಯಲ್ಲಿ ಎರಡನೇ ಸಾಲಿನಲ್ಲಿರತಕ್ಕವರು ಎಂದೂ ಲೆಕ್ಕವಿತ್ತು. ಈ ದಿವನ ತಾವು ಮನಸ್ಸಿನಲ್ಲಿ ಇನ್ನೇನೋ ಇಟ್ಟುಕೊಂಡು ಕೆಲಸಮಾಡಿದರೆ ಅದೇನೋ ಗಾದೆ ಹೇಳುತ್ತಾರಲ್ಲಾ, ಮನಸ್ಸಿನಲ್ಲಿ ಮಂಡಿಗೆಯನ್ನು ತಿಂದರೆ ದುಡ್ಡು ಕೊಡತಕ್ಕವರು ಯಾರು, ಎಂದಹಾಗೆ ನೀವು ಮಾಡತಕ್ಕದ್ದು ಸರಿಯಲ್ಲ. ಈ ದಿವನ ಸರ್ಕಾರ ಇಲ್ಲಿ ಉರುಳಿಹೋಗುತ್ತಿರುವಾಗ ತಾವು ಅದಕ್ಕೆ ರಕ್ಷಣೆಯನ್ನು ಕೊಡುವುದಕ್ಕೆ ತಮಗೆ ಅಧಿಕಾರವಿದೆಯೇ ಎಂಬುದನ್ನು ನಾವು ಕೇಳುತ್ತಿದ್ದೇವೆ. ತಾವು ಇಲ್ಲಿ ಅಧ್ಯಕ್ಷರಾಗಿ ಮೈನಾರಿಟಿ ಪಕ್ಷಗಳ ಹಿತವನ್ನು ರಕ್ಷಣೆ ಮಾಡುತ್ತಿಲ್ಲ. ಈದಿವಸ ಇಲ್ಲಿ ಸರ್ಕಾರದ ಅಧಃ ಪತನ ಒಂದು ರೀತಿಯಲ್ಲಿ ನಡೆದುಹೋಗಿದೆ. ಅಧ್ಯಕ್ಷರು ರಾಜ್ಯದ ಹಿತದೃಷ್ಟಿಯನ್ನಿಟ್ಟುಕೊಂಡು ಒಂದು ಅಂಕಿತ ದಿಂದ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I take objection to the hon. Member's remarks that the Chair is protecting anybody. The Chair is not at all protecting anybody.

Sri K. H. PATIL.—Kindly look to the proceedings and ascertain if I have stated so. I will have to raise a privilege. I never stated like that.

Sri K. PUTTASWAMY.—I have no objection to the Members rising in their seats and count being taken.

Mr. SPEAKER.—The result of the division is ;

Ayes : 42

Noes : 33

The motion was adopted.

Mr. SPEAKER.—The question is :

"That the further sums shown in the list of demands for grants to cover expenditure incurred in excess of voted grants, circulated to members, for the year 1964-65 be granted to the Government in respect of Demands Nos. 6, 12, 13, 14, 17, 28 31, 32, 33, 34, 36, 42, 45 and 46."

The motion was adopted.

Mr. SPEAKER.—The question is :

"That the further sums shown in the list of Demands for grants to cover expenditure incurred in excess of voted grants, circulated to members, for the year 1965-66 be ganted to the Government in respect of Demands Nos. 6, 13, 15, 17, 20, 30, 31, 33, 36, 41, 45, 46, 47, 53, and 54"

The motion was adopted.

(*As directed by the Chair the list of Supplementary and Additional Demands for grant and the Excess Demands as adopted by the House are reproduced below*) ;—

(MR. SPEAKER)

DEMAND NO. 4. – TAXES ON VEHICLES

11. Taxes on Vehicles.

"That a further sum not exceeding Rs. 4,00,000 be granted to the Government to defray the charges which will come in course of payment during the financial year for the period ending 31st day of March 1970, in respect of 'Taxes on Vehicles'."

DEMAND NO. 10.—GENERAL ADMINISTRATION

19. General Administration.

"That a further sum not exceeding Rs. 8,50,000 be granted to the Government to defray the charges which will come in course of payment during the financial year for the period ending 31st day of March 1970, in respect of 'General Administration'."

DEMAND NO. 17.—EDUCATION

28. Education.

"That a further sum not exceeding Rs. 400 be granted to the Government to defray the charges which will come in course of payment during the financial year for the period ending 31st day of March 1970, in respect of 'Education'."

DEMAND NO. 20.—AGRICULTURE, HORTICULTURE AND FISHERIES

31. Agriculture.

"That a further sum not exceeding Rs. 1,53,34,475 be granted to the Government to defray the charges which will come in course of payment during the financial year for the period ending 31st day of March 1970, in respect of 'Agriculture'."

DEMAND NO. 23.—CO-OPERATION

34. Co-operation.

"That a further sum not exceeding Rs. 15,74,966 be granted to the Government to defray the charges which will cone in course of payment during the financial year for the period ending 31st day of March 1970, in respect of 'Co-operation'."

DEMAND NO. 24.—INDUSTRIES INCLUDING SERICULTURE

35. Industries.

"That a further sum not exceeding Rs. 100 be granted to Government to the defray the charges which will come in

course of payment during the financial year for the period ending 31st day of March 1970, in respect of 'Industries'."

DEMAND No. 27.—MISCELLANEOUS SOCIAL AND DEVELOPMENTAL ORGANISATIONS

39. Miscellaneous Social and Developmental Organisations.

"That a further sum not exceeding Rs. 6,24,600 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous Social and Developmental Organisations'."

DEMAND No. 33.—FAMINE

64. Famine Relief

"That a further sum not exceeding Rs. 94,80,000 be granted to the Government to defray the charges which will come in course of payment during the financial year for the period ending 31st day of March 1970, in respect of 'Famine Relief'."

DEMAND No. 39.—MISCELLANEOUS

71. Miscellaneous.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1970, in respect of 'Miscellaneous'."

DEMAND No. 41.—MISCELLANEOUS COMPENSATIONS AND ASSIGNMENTS

76. Other Miscellaneous Compensations and Assignments.

"That a further sum not exceeding Rs. 1,00,000 be granted to the Government to defray the charges which will come in course of payment during the financial year for the period ending 31st day of March 1970, in respect of 'Other Miscellaneous Compensations and Assignments'."

DEMAND No. 44.—INDUSTRIAL AND ECONOMIC DEVELOPMENT

96. Capital Outlay on Industrial and Economic Development.

"That a further sum not exceeding Rs. 6,18,53,200 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Industrial and Economic Development'."

(MR. SPEAKER)

DEMAND No. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT

101. Capital Outlay on Electricity Schemes.

"That a further sum not exceeding Rs. 15,81,92,653 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Electricity Schemes'."

DEMAND No. 48.—CAPITAL OUTLAY ON PUBLIC WORKS.

103. Capital Outlay on Public Works.

"That a further sum not exceeding Rs. 800 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Public Works'."

DEMAND No. 54.—ADVANCES AND LOANS.

Q. Loans and Advances by State/Union Territory Governments.

"That a further sum not exceeding Rs. 14,68,16,509 be granted to the Government to defray the charges which will come in course of payment during the financial year for the period ending 31st day of March 1970, in respect of 'Loans and Advances by State/Union Territory Governments'."

Motions for Demands for Grant to cover Expenditure incurred in excess of voted grants for the year 1964-65

DEMAND No. 6.—OTHER TAXES—ADMINISTRATION

13. Other Taxes and Duties.

"That a sum of Rs. 2,939 be granted to the Government to cover the excess expenditure incurred over the voted grants for the year 1964-65 in respect of 'Other Taxes and Duties'."

DEMAND No. 12.—JAILS

22. Jails.

"That a sum of Rs. 13,803 be granted to the Government to cover the excess expenditure incurred over the voted grants for the year 1964-65 in respect of 'Jails'."

DEMAND No. 28.—CAPITAL OUTLAY ON INDUSTRIAL DEVELOPMENT

40. Capital Outlay on Industrial Development.

"That a sum of Rs. 48 be granted to the Government to cover the excess expenditure incurred over the voted grants for the year 1964–65 in respect of 'Capital Outlay on Industrial Development'."

DEMAND No. 31.—PUBLIC WORKS

50. Public Works.

"That a sum of Rs. 1,74,01,685 be granted to the Government to cover the excess expenditure incurred over the voted grants for year 1964–65 in respect of 'Public Works'."

DEMAND No. 32.—PORTS AND PILOTAGE

53. Ports and Pilotage.

"That a sum of Rs. 34,342 be granted to the Government to cover the excess expenditure incurred over the voted grants for the year 1964–65 in respect of 'Ports and Pilotage'."

DEMAND No. 34.—PENSIONS AND OTHER RETIREMENT BENEFITS

65. Pensions and Other Retirement Benefits.

"That a sum of Rs. 77,161 be granted to the Government to cover the excess expenditure incurred over the voted grants for the year 1964–65 in respect of 'Pensions and Other Retirement Benefits'."

DEMAND No. 36.—PRIVY PURSES AND ALLOWANCES

67. Privy Purses and Allowances of Indian Rulers.

"That a sum of Rs. 70 be granted to the Government to cover the excess expenditure incurred over the voted grants for the year 1964-65 in respect of 'Privy Purses and Allowances on Indian Rulers'."

DEMAND No. 45.—CAPITAL OUTLAY ON IRRIGATION (COMMERCIAL)

99. Capital Outlay on Irrigation, Navigation, Embankment and Drainage Works (Commercial).

"That a sum of Rs. 10,98 615 be granted to the Government to cover the excess expenditure incurred over the voted grants for the year 1964–65 in respect of 'Capital Outlay on Irrigation (Commercial).'."

(MR. SPEAKER)

Motions for Demands for Grants to cover Expenditure incurred in excess of voted grants for the year 1965-66.

DEMAND NO. 6.—OTHER TAXES-ADMINISTRATION.

13. Other Taxes and Duties.

"That a sum of Rs. 61,41 1 be granted to the Government to cover the excess expenditure incurred over the voted grants for the year 1965-66 in respect of 'Other Taxes and Duties'."

DEMAND NO. 13.—POLICE

23. Police.

"That a sum of Rs. 14,60,733 be granted to the Government to cover the excess expenditure incurred over the voted grants for the year 1965-66 in respect of 'Police'."

DEMAND NO. 15.—MISCELLANEOUS DEPARTMENTS

26. Miscellaneous Departments.

"That a sum of Rs. 5,54,909 be granted to the Government to cover the excess expenditure incurred over the voted grants for the year 1965-66 in respect of 'Miscellaneous Departments'."

DEMAND NO. 30.—IRRIGATION—(NON-COMMERCIAL)

44. Irrigation, Navigation, Embankment and Drainage Works (Non-Commercial.)

"That a sum of Rs. 2,34,001 be granted to the Government to cover the excess expenditure incurred over the voted grants for the year 1965-66 in respect of 'Irrigation Works (Non-Commercial)'."

DEMAND NO. 31.—PUBLIC WORKS

50. Public Works.

"That a sum of Rs. 1,74,55,233 be granted to the Government to cover the excess expenditure incurred over the voted grants for the year 1965-66 in respect of 'Puble Works'."

DEMAND NO. 36.—PRIVY PURSES AND ALLOWANCES

67. Privy Purses and Allowances of Indian Rulers.

"That a sum of Rs. 90 be granted to the Government to cover the excess expenditure incurred over the voted grants for

the year 1965-66 in respect of 'Privy Purses and Allowances of Indian Rulers'."

DEMAND NO. 41 —MISCELLANEOUS COMPENSATIONS AND ASSIGNMENTS

76. Other Miscellaneous Compensations and Assignments.

"That a sum of Rs. 31,591 be granted to the Government to cover the excess expenditure incurred over the voted grants for the year 1965-66 in respect of 'Miscellaneous Compensations and Assignments'."

DEMAND NO. 45.—CAPITAL OUTLAY ON IRRIGATION (COMMERCIAL)

99. Capital Outlay on Irrigation, Navigatian, Embankment and Drainage Works (Commercial).

"That a sum of Rs. 78,82,745 be granted to the Government to cover the excess expenditure incurred over the voted grants for the year 1965-66 in respect of 'Capital Outlay on Irrigation (Commercial)'."

DEMAND NO. 46.—CAPITAL OUTLAY ON IRRIGATION (NON-COMMERCIAL)

100. Capital Outlay on Irrigation, Navigation, Embankment and Drainage Works (Non-Commercial).

"That a sum of Rs. 33,86,159 be granted to the Government to cover the excess expenditure incurred over the voted grants for the year 1965-66 in respect of 'Capital Outlay on Irrigation (Non-Commercial)'."

DEMAND NO. 47.——CAPITAL ACCOUNT ON ELECTRICITY SCHEMES OUTSIDE THE REVENUE ACCOUNT

101. Capital Outlay on Electricity Schemes.

"That a sum of Rs. 1,92,93,040 be granted to the Government to cover the excess expenditure incurred over the voted grants for the year 1965-66 in respect of 'Capital Outlay on Electricity Schemes'."

DEMAND NO. 53.—CAPITAL OUTLAY ON SCHEMES OF GOVERNMENT TRADING

124. Capital Outlay on Schemes of Government Trading.

"That a sum of Rs. 1,73,2,605 be granted to the Government to cover the excess expenditure incurred over the voted grants for the year 1965-66 in respect of 'Capital Outlay on Schemes of Government Trading'."

(MR. SPEAKER)

DEMAND No. 54.—ADVANCES AND LOANS

Q. Loans and Advances by State Government.

"That a sum of Rs. 44,40,784 be granted to the Government to cover the excess expenditure incurred over the voted grants for the year 1965-66 in respect of 'Loans and Advances by State Government'."

The Mysore High Court (Amendment) Bill, 1969.— Motion to Suspend Rule 73

Sri K. PUTTASWAMY.—Sir, under Rule 322 of the Rules of Procedure and Conduct of Business, I make a motion for suspension of proviso to Rule 73 and to permit me to move the motion for consideration of The Mysore High Court (Amendment) Bill, 1969.

Mr. SPEAKER.—Permission is granted. Hon. Minister may move the consideration motion.

Sri K. PUTTASWAMY.—I move :

"That the Mysore High Court (Amendment) Bill, 1969, be taken into consideration."

Mr. SPEAKER.—Motion moved :

"That the Mysore High Court (Amendment) Bill, 1969, be taken into consideration."

Sri K. PUTTASWAMY.—Sir, the existing provision relating to the appointment of Registrar and Deputy Registrar is that the High Court shall have a Registrar and as many Deputy Registrars as may be determined by the Governor in consultation with the High Court. Now at the request of the High Court, the Governor has been pleased to agree for the appointment of Joint Registrars and Assistant Registrars. The Hon. Chief Justice will not be able to assign duties statutorily to the Joint Registrar and Assistant Registrar without an amendment to Section 3. The amendment to the Section will read like this :

"The High Court may also have as many Additional Registrars, Joint Registrars and Assistant Registrars as may be determined by the Governor in consultation with the High Court."

I request the House kindly to agree to this amendment.

Mr. SPEAKER.—I will put it to the House. The question is :

"That the Mysore High Court (Amendment) Bill, 1969, be taken into consideration."

The motion was adopted.

CLAUSES

Mr. SPEAKER.—Since there are no amendments, I will put the clauses to vote :

The question is :

"That clause 2 do stand part of the Bill."

The motion was adopted.

Clause 2 was added to the Bill.

Mr. SPEAKER.—The question is :

"That clause 1, the long title and the enacting formula do stand part of the Bill."

The motion was adopted.

Clause 1, the long title and the enacting formula were added to the Bill.

Motion to pass

Sri K. PUTTASWAMY.—Sir, I move :

"That the Mysore High Court (Amendment) Bill, 1969, be passed."

Mr. SPEAKER.—The question is :

"That the Mysore High Court (Amendment) Bill, 1969, be passed."

The motion uas adopted.

Private Member's Business

(A) University of Technical Education Bill, 1969

Introduction.

Mr. SPEAKER.—Sri H. B. Jwalaniah to move for leave to introduce the University of Technical Education Bill, 1969.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿಧೇಯಕ, 1969—ಇದನ್ನು ಮಂಡಿಸಲು ನಾನು ಈ ಸಭೆಯ ಅನುಮತಿಯನ್ನು ಬೇಡುತ್ತೇನೆ.

5-30 P.M.

Mr. SPEAKER.—The question is :

"That leave be granted to introduce the University Technical Education Bill, 1969."

Hon. Members :—Yes.

Mr. SPEAKER.—The leave is granted.

ಶ್ರೀ ಎಚ್. ಬಿ. ಹ್ಯಾಳನಯ್ಯ.—ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿಧೇಯಕ, 1969 ಮಸೂದೆಯನ್ನು ನಾನು ಮಂಡಿಸುತ್ತೇನೆ.

Mr. SPEAKER.—The Bill is introduced.

(B) Mysore Agricultural Produce Market Committee (Amendment) Bill, 1969

Consideration postponed

Sri K. H. PATIL.—Before submiting my Bill to the House I want to submit one thing. Since I am feeling that the President's assent is necessary for my amendment Bill, I request the Chair to withhold the consideration of it. I am moving the Government to obtain the consent of the President for my amendment Bill.

Mr. SPEAKER.—Yes.

Mysore Sales Tax (Amendment) Bill, 1969.

Motion to consider

ಶ್ರೀ ಎಚ್. ಬಿ. ಹ್ಯಾಳನಯ್ಯ.—ಸ್ಪೀಕರ್, ಮೈಸೂರು ರಾಜ್ಯದ ಮಾರಾಟ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿಯ ವಿಧೇಯಕ, 1969ನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—Motion moved :

"That the Mysore Sales Tax (Amendment) Bill, 1969, be taken into consideration."

† ಶ್ರೀ ಎಚ್. ಬಿ. ಹ್ಯಾಳನಯ್ಯ.—ಸ್ಪೀಕರ್, 1969ನೇ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ಇಲ್ಲಿ ತರುವುದಕ್ಕೆ ಮುಂಚೆ, ಮೈಸೂರು ಸಂಸ್ಥಾನದಲ್ಲಿ ಪಾನನಿರೋಧವನ್ನು ಜಾರಿಗೆ ತರುವುದರಿಂದ ನಷ್ಟವಾಗುತ್ತದೆ, ಆ ನಷ್ಟವನ್ನು ತುಂಬಿಕೊಳ್ಳುವುದಕ್ಕೋಸ್ಕರ ಈ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾವು ತರುತ್ತೇವೆಂದು ಸರ್ಕಾರದವರು ಈ ಸಭೆಯಲ್ಲಿ ಹಿಂದೆ ಹೇಳಿದ್ದು, ಆಗ ಆ ನಷ್ಟವನ್ನು ತುಂಬಿಕೊಳ್ಳುವದಕ್ಕೋಸ್ಕರವಾಗಿ ಈ ಸಭೆಯು ಅನುಮತಿಯನ್ನು ಕೊಟ್ಟಿದ್ದು ಈಗ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವದ ಸವಿನೆನಪಿಗಾಗಿ ಪಾನನಿರೋಧವನ್ನು ರದ್ದುಗೊಳಿಸಿ ಅದರಲ್ಲಯೂ ಕೂಡ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಬರುವಂಥ ವ್ಯವಸ್ಥೆ ಆಗಿರುವುದು ನಮಗೆ ಗೊತ್ತಿದೆ. ಮೈಸೂರು ಸೇಲ್ಸ್ ಟ್ಯಾಕ್ಸ್ ಆಕ್ಟ್ 1957ನೇ 10ನೇ ನಿಯಮದ ಉಪನಿಯಮ (1)ರಲ್ಲಿ ಪ್ರತಿಯೊಬ್ಬ ಡೀಲರ್‌ಗೆ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಎಂಬುದಾಗಿ ಇದೆ. ಇದಕ್ಕೆ ನಾನು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಈ ವಿಧಿಯಲ್ಲಿ 10 ಸಾವಿರ ರೂಪಾಯಿಗಳು ಎನ್ನುವುದಕ್ಕೆ ಬದಲಾಗಿ 25 ಸಾವಿರ ರೂಪಾಯಿಗಳೆಂದು ಸೇರಿಸಬೇಕೆಂದು ಹೇಳಿದ್ದೇನೆ. ಈಗ ಮಹಾರಾಷ್ಟ್ರ, ರಾಜಾಸ್ಥಾನ, ಒರಿಸ್ಸಾ, ಮತ್ತು ಗುಜರಾತ್—ಈ ರಾಜ್ಯಗಳಲ್ಲಿ ಈ ಒಂದು ಮಾರಾಟ ತೆರಿಗೆಯ ನಿಯಮವನ್ನು ಬದಲಾಯಿಸಿ ಟರ್ನ್‌ಓವರ್ ಲಿಮಿಟ್ಟನ್ನು ಬಹಳವಾಗಿ ವ್ಯತ್ಯಾಸಪಡಿಸಿದ್ದಾರೆ. 1948ನೇ ಇಸವಿಯಲ್ಲಿ ಈ ಮಸೂದೆಯನ್ನು ತರುವ ಸಂದರ್ಭದಲ್ಲಿ ದೇಶದಲ್ಲಿರತಕ್ಕ ಎಲ್ಲಾ ಪದಾರ್ಥಗಳ ಬೆಲೆಯನ್ನು ಈಗಿನ ಕಾಲಕ್ಕೆ ಹೋಲಿಸಿ ನೋಡಿದರೆ ಸುಮಾರು ನಾಲ್ಕೈದು ಪಟ್ಟು ಜಾಸ್ತಿಯಾಗಿದೆ. ಹಿಂದೆ 1968ನೇ ಇಸವಿಯಲ್ಲಿ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಮಾಡಿಕೊಂಡಿದ್ದರು. ಈಗ ಸಾಮಾನುಗಳ ಮೌಲ್ಯ 40—50 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ಈಗಿರುವ ಕಾನೂನು ಪ್ರಕಾರ 10 ಸಾವಿರ

ರೂಪಾಯಿಗಳಷ್ಟು ಟರ್ನ್‌ಓವರ್ ಮಾಡುವಂತಹವನಿಗೆ ಈ ದೇಶದಲ್ಲಿರುವ ಒಂದು ಬೀಡಿ ಅಂಗಡಿಯಲ್ಲಿ ಅದರಲ್ಲಿಯೂ ಸಣ್ಣಪುಟ್ಟ ವರ್ತಕರ ಅಂಗಡಿಯಲ್ಲಿ ಇದಕ್ಕಿಂತಲೂ ಬಹಳವಾಗಿ ಟರ್ನ್‌ಓವರ್ ಈಗ ಆಗುತ್ತಿದೆ. ಅವರು ರೆಕ್ಕಪತ್ರಗಳನ್ನು ಇಡುವುದು, ತೆರಿಗೆಗಳನ್ನು ವಸೂಲು ಮಾಡತಕ್ಕ ವಿಚಾರದಲ್ಲಿ ಕಿರುಕುಳಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ ರಾಜ್ಯದಲ್ಲಿರತಕ್ಕ ಸಣ್ಣಪುಟ್ಟ ವರ್ತಕರಿಗೆ ಬಹಳ ಕಿರುಕುಳ ಆಗುತ್ತಿದೆ. ಟರ್ನ್‌ಓವರ್ ಲಿಮಿಟ್ಟನ್ನು 10 ಸಾವಿರ ರೂಪಾಯಿಗಳಿಂದ 25 ಸಾವಿರ ರೂಪಾಯಿಗಳವರೆಗೆ ಏರಿಸಿದಾಗ ಸರ್ಕಾರಕ್ಕೆ ಕೇವಲ ಒಂದು ಕೋಟಿ ರೂಪಾಯಿಗಳಷ್ಟು ಖೋತಾ ಬರಬಹುದೆಂದು ಅಂದಾಜು ಮಾಡರಾಗಿದೆ. ಮಹಾರಾಷ್ಟ್ರದಲ್ಲಿ ಮ್ಯಾನುಫ್ಯಾಕ್ಚರರುಗಳಿಗೆ ಮತ್ತು ಇಂಪೋರ್ಟರ್ಸ್ ಅವರಿಗೆ ಟರ್ನ್‌ಓವರ್ 10 ಸಾವಿರ ರೂಪಾಯಿಗಳು, ಇತರ ವರ್ತಕರಿಗೆ 30 ಸಾವಿರ ರೂಪಾಯಿಗಳು ಎಂಬುದಾಗಿ ಇಟ್ಟಿದ್ದಾರೆ. ಗುಜರಾತಿನಲ್ಲಿ 20 ಸಾವಿರ ರೂಪಾಯಿಗಳ ಲಿಮಿಟ್ಟನ್ನು ಇಟ್ಟಿದ್ದಾರೆ. ಇತರ ವರ್ತಕರಿಗೆ 30 ಸಾವಿರ ರೂಪಾಯಿಗಳೆಂದು ಇಟ್ಟಿದ್ದಾರೆ. ರಾಜಸ್ಥಾನದಲ್ಲಿ 15 ಸಾವಿರ ರೂಪಾಯಿಗಳ ಲಿಮಿಟ್ ಇಟ್ಟಿದ್ದಾರೆ. ಕೊ-ಆಪರೇಟಿವ್ ಸೊಸೈಟಿಗಳಿಗೆ 25 ಸಾವಿರ ರೂಪಾಯಿಗಳವರೆಗೆ ಲಿಮಿಟ್ ಇಟ್ಟಿದ್ದಾರೆ. ನಮ್ಮಲ್ಲಿ ಸಾರ್ವಜನಿಕ ವರ್ತಕರು ಮತ್ತು ಸರಕಾರ ಸಂಸ್ಥೆಗಳೇನಿವೆಯೋ ಅವುಗಳು ಈ ಸೇಲ್ಸ್‌ಟ್ಯಾಕ್ಸ್ ನಿಯಮುಕ್ಕೊಳಪಟ್ಟಿವೆ. ಈಗ ನಮ್ಮಲ್ಲಿ ನುಮಾರು ಸಣ್ಣ ವರ್ತಕರು ಅನೇಕ ಐಟಂಗಳ ಸಾಮಗ್ರಿಗಳನ್ನು ಮಾರಾಟಮಾಡುತ್ತಿದ್ದಾರೆ. ಅದಕ್ಕೆ ನಾನಾ ರೀತಿಯ ತೆರಿಗೆಗಳನ್ನು ಈ ಸೇಲ್ಸ್‌ಟ್ಯಾಕ್ಸ್ ಆಕ್ಟ್ ಪ್ರಕಾರ ವಿಧಿಸಬೇಕಾಗಿದೆ. ಒಬ್ಬ ಸಣ್ಣ ವರ್ತಕ 30—40 ಐಟಂಗಳನ್ನು ಮಾರಾಟಮಾಡುತ್ತಾನೆ. ಒಂದೊಂದು ಐಟಂಗೆ ಒಂದೊಂದು ತೆರಿಗೆಯನ್ನು ರೆಕ್ಕಮಾಡುವುದಕ್ಕೋಸ್ಕರವಾಗಿ ರೆಕ್ಕವನ್ನು ಇಡುವುದು, ಅದಕ್ಕೆ ಒಂದು ಸ್ಟೆನ್ಯ ಇಡಬೇಕಾಗುತ್ತದೆ. ಇದರಿಂದ ಅವನಿಗೆ ಬಹಳವಾಗಿ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕು. ಇದರಿಂದ ಒಂದು ಕೋಟಿ ರೂಪಾಯಿಗಳಷ್ಟು ಖೋತಾ ಬರುತ್ತದೆ. 10 ಸಾವಿರ ರೂಪಾಯಿಗಳ ಲಿಮಿಟ್‌ನಿಂದ 25 ಸಾವಿರ ರೂಪಾಯಿಗಳವರೆಗೆ ಏರಿಸಿ, ಈಗಿರುವ ಸೇಲ್ಸ್ ಟ್ಯಾಕ್ಸ್ ವಸೂಲಿಕ್ರಮ ಸರಿಯಾದಂಥ ರೀತಿಯಲ್ಲಿ ಮಾಡಿದರೆ ಇಲ್ಲಿ 6—8 ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಬರುವ ಅವಕಾಶವಿರುತ್ತದೆ. ಸಣ್ಣಪುಟ್ಟ ವರ್ತಕರಿಗೆ ಕಿರುಕುಳ ಕೊಡುವುದನ್ನು ಕಡಿಮೆಮಾಡಬೇಕು. ನಾವು ಈ ನಥೆಯ ಮುಂದೆ ಮಂಡಿಸಿರುವ ತಿದ್ದುಪಡಿಯನ್ನು ಒಪ್ಪಿದರೆ ನಮ್ಮ ರಾಜ್ಯಕ್ಕೆ ಸರಿಯಾದಂಥ ರೀತಿಯಲ್ಲಿ ವಸೂಲಾಗಿ ಹೆಚ್ಚು ಆದಾಯ ಬರುತ್ತದೆ. ಈಗಿರುವ ಖೋತಾವನ್ನು ತುಂಬಿಸಿಕೊಳ್ಳುವುದಕ್ಕೆ ಅವಕಾಶವಿದೆ. ಅದರ ಜೊತೆಗೆ ನಮ್ಮ ದೇಶದ ನಾನಾ ಕಡೆಗಳಿಂದ ಚಿಕ್ಕಪುಟ್ಟ ವರ್ತಕರು ದೇಶದಲ್ಲಿ ನಿಜವಾದ ಸೇವೆಯನ್ನು ಮಾಡುತ್ತಿದ್ದಾರೆ. ಈ ಸೇವೆಯನ್ನು ಮಾಡುವುದು ಈಗ ಬಹಳ ಕಷ್ಟ. 8—10 ಸಾವಿರ ರೂಪಾಯಿಗಳಷ್ಟು ಸಣ್ಣ ಬಂಡವಾಳವನ್ನು ಹಾಕಿಕೊಂಡು ಎಲ್ಲೆಲ್ಲೋ ಸಾಲಸೋಲಮಾಡಿಕೊಂಡು ಹಣವನ್ನು ತಂದು ವ್ಯಾಪಾರಮಾಡುತ್ತಿದ್ದರೂ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳು ಈ ರೀತಿ ರೆಕ್ಕ ಇಡಬೇಕು, ಈ ರೀತಿ ರೆಕ್ಕ ಇಡಬಾರದು ಎಂಬುದಾಗಿ ಕಿರುಕುಳ ಕೊಡುವುದು ದಿನನಿತ್ಯ ಸಮಸ್ಯೆಯಾಗಿದೆ. ದೇಶದ ನಾನಾ ಕಡೆಗಳಿಂದ ಈ ತಿದ್ದುಪಡಿ ಈ ನಥೆಯಲ್ಲಿ ಬಂದಮೇಲೆ ನೂರಾರು ಪತ್ರಗಳು ನನಗೆ ಬರುತ್ತಿದೆ. ಸಣ್ಣ ವರ್ತಕರಿಗೆ ಈಗ ಆಲ್ಲಿ ಆಗುತ್ತಿರುವ ಕಿರುಕುಳದ ಬಗ್ಗೆ ಅವರು ನನಗೆ ಬರೆದು ತಿಳಿಸುತ್ತಿದ್ದಾರೆ. 10 ಸಾವಿರ ರೂಪಾಯಿಗಳ ಟರ್ನ್‌ಓವರ್ ಲಿಮಿಟ್ ಏನಿದೆ ಅದನ್ನು 25 ಸಾವಿರ ರೂಪಾಯಿಗಳವರೆಗೆ ಏರಿಸಿದರೆ ಸರ್ಕಾರಕ್ಕೆ ನಷ್ಟವಾಗುವುದಿಲ್ಲ. ದೇಶದಲ್ಲಿರತಕ್ಕ ಸಣ್ಣಪುಟ್ಟ ವರ್ತಕರಿಗೆ ಒಂದು ರೀತಿಯಲ್ಲಿ ಸಹಾಯವಾಗುತ್ತದೆಂದು ಅನೇಕರು ನನಗೆ ಬರೆದು ತಿಳಿಸಿದ್ದಾರೆ. ಯಾವ ತೆರಿಗೆಯಾಗಲ, ತೆರಿಗೆಯನ್ನು ವಿಧಿಸುವಂತಹ ಸಂದರ್ಭದಲ್ಲಿ ತೆರಿಗೆ ವಸೂಲಿ ಕ್ರಮದ ಬಗ್ಗೆ ಕೂಡ ಯೋಚಿಸಬೇಕಾಗಿದೆ. ಸಣ್ಣಪುಟ್ಟ ವರ್ತಕರು ಈಗಿರತಕ್ಕ ಕ್ರಮದ ಪ್ರಕಾರ ರೆಕ್ಕಪತ್ರಗಳನ್ನು ಇಡಬೇಕಾದರೆ, ಅವಕ್ಕೆ ಒಬ್ಬ ಚಾರ್ಟರ್ಡ್ ಅಕೌಂಟೆಂಟನ್ನೇ ಇಡಬೇಕಾಗಿದೆ. ಇಲ್ಲದಿದ್ದರೆ ಅವನಿಗೆ ಅದನ್ನು ಪೂರೈಸುವುದಕ್ಕಾಗುವುದಿಲ್ಲ. ಇಂತಿಥಂಹನಾಮಾನುಗಳಿಗೆ ಇಂತಿಂಥ ಟಾಕ್ಸ್ ಲಗ್ಸುರಿ ಗೂಡ್ಸ್‌ಗೆ 11-12 ಪರ್‌ಸೆಂಟ್ ಇದೆ. ಒಂದು ಸ್ಟೋ ಪೌಡರ್ ಮಾರಬೇಕಾದರೆ ಒಂದು ರೆಕ್ಕ ಬೇರೆ. ಇತರ ಸಾಮಾನುಗಳಿಗೆ ಬೇರೆ ರೆಕ್ಕ. ಆದ್ದರಿಂದ ಅತನಿಗೆ ಬೆಳಿಗ್ಗೆಯಿಂದ ಸಂಜೆಯ ತನಕ ಅಂಗಡಿಗೆ ಬೇಕಾದ ಸಾಮಾನುಗಳನ್ನು ತರುವುದೇ ಕಷ್ಟಕರವಾಗಿರುವಾಗ, ಈ ರೀತಿಯ ತೊಂದರೆಗಳು ಬಂದರೆ, ಅವನು ಹೇಗೆ ತನ್ನ ವ್ಯಾಪಾರವನ್ನು ಮಾಡಬಲ್ಲನು ? ನಾನು ಅನೇಕಸಾರಿ ಮಾನ್ಯ ಮಂತ್ರಿಯವರಿಗೆ ಇದನ್ನು ಹೇಳಿದ್ದೇನೆ. ಇವತ್ತಿನ ಸೇಲ್ಸ್ ಟ್ಯಾಕ್ಸ್ ಸಿಬ್ಬಂದಿವರ್ಗ ಏನಿದೆ, ಅವರು ಇವತ್ತು ಒಂದು ಕಿರುಕುಳದ ಧಾಳಿಯನ್ನೇ ಮಾಡುತ್ತಿದ್ದಾರೆ. ಯಾವ ಕಾನೂನಿನ ಚೌಕಟ್ಟಿನೊಳಗೂ ಬರದ ರೀತಿಯಲ್ಲಿ ಅವರು ಸರ್ಕಾರಕ್ಕೆ ಬರತಕ್ಕ ಹಣವನ್ನು ಬೇರೆಕಡೆಗೆ ತೆಗೆದು

(ಶ್ರೀ ಎಚ್. ಬಿ. ಜ್ವಾಲನಯ್ಯ)

ಕೊಂಡು ಹೋಗುತ್ತಿದ್ದಾರೆ. ಇವತ್ತು ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಒಂದು ಕೊನೆಯ ದರ್ಜೆಯ ಹುದ್ದೆಯನ್ನು ಪಡೆಯುವುದಕ್ಕೋಸ್ಕರ ಸಾವಿರಾರು ರೂಪಾಯಿ ಕೊಟ್ಟು ಮುಂದೆ ಬರುವವರಿದ್ದಾರೆ. ಇಂಥ ಇಲಾಖೆಯಲ್ಲಿ ಇವತ್ತು ಲಂಚರುಷುವತ್ತು ತಾಂಡವವಾಡುತ್ತಿದೆ. ಅವನ್ನು ಯಾರಾದರೂ ತಡೆಗಟ್ಟುವವರಿದ್ದಾರೆಯೇ? ಸರ್ಕಾರ ನರಿಯಾದ ಕ್ರಮ ತೆಗೆದುಕೊಳ್ಳುತ್ತದೆಯೇ? ಅದೂ ಇಲ್ಲ. ಇವತ್ತು ಕಾನೂನನ್ನು ನರಿಯಾಗಿ ತಿಳಿದುಕೊಳ್ಳಲು ಸಮರ್ಥರಲ್ಲದೆ ಇರುವಂತಹ ವರ್ತಕ ಜನ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇಂಥ ಜನರಿಗೆ ಈ ಅಧಿಕಾರಿಗಳು ಕಿರುಕುಳವನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ತಿದ್ದುಪಡಿ ಏನು ಇದೆ, ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಗುಜರಾತಿನಲ್ಲೂ ಕೂಡ ಸಣ್ಣ ವರ್ತಕರಿಗೆ 30 ಸಾವಿರದವರೆಗೆ ಟರ್ನ್ ಓವರ್‌ಗೆ ಅವಕಾಶ ಇದೆ. ಅದೇ ರೀತಿ ಇತರ ರಾಜ್ಯಗಳಲ್ಲೂ ಮಾಡಿದ್ದಾರೆ. ಅದೇ ರೀತಿ ಮೈಸೂರು ರಾಜ್ಯಲ್ಲೂ ಕೂಡ ಮಾಡಬೇಕು, ಮತ್ತು ಸರ್ಕಾರದವರು ಇದನ್ನು ಸ್ವಾಗತಿಸುವುದರಲ್ಲಿ ಏನೂ ತೊಂದರೆಯಿಲ್ಲ. ಈ ಖೋತಾವನ್ನು ಬೇರೆ ರೀತಿಯಲ್ಲಿ ಸರಿದೂಗಿಸಬಹುದು. ಈ ರೀತಿ ಲೆಕ್ಕಪತ್ರಗಳನ್ನು ಇಡುವುದು ಬಹಳ ಕಷ್ಟ. ಇವತ್ತು ಸರ್ಕಾರಕ್ಕೆ ಬರತಕ್ಕ ಹಣ ಅನೇಕ ಕಡೆಗಳಲ್ಲಿ ತೂತುಬಿದ್ದು ಹೋಗುತ್ತಿದೆ. ಇದನ್ನು ಮಾಡಿದರೆ, ನಿಜವಾಗಿಯೂ ಲಂಚರುಷುವತ್ತು ತಪ್ಪುತ್ತದೆ, ಮತ್ತು ಎಲ್ಲರೂ ಸರಿಯಾದ ಮಾರ್ಗವನ್ನು ಅನುಸರಿಸುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ, ಈ ಸಭೆ ಈ ತಿದ್ದುಪಡಿಯನ್ನು ಅನುಮೋದಿಸಬೇಕು, ಮತ್ತು ಸಹಾನುಭೂತಿಯಿಂದ ಪರಿಶೀಲಿಸಬೇಕು ಎಂದು ಈ ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಆರ್ಥಿಕ ಮಂತ್ರಿಯವರು ಕೂಡ ಭೂತಲಿಂಗಮ್ಮ ಕಮಿಟಿ ಏನು ಮಾಡಿದ್ದಾರೆ, ಅವರ ಮುಂದೆ ನನ್ನ ಸಲಹೆಯನ್ನು ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕಡಮೆ ಮಾಡಬೇಕೆಂದು ಏನೂ ಇಲ್ಲ. ಎಷ್ಟೋ ಸಣ್ಣ ಪುಟ್ಟ ವರ್ತಕರಿಗೆ ನಿಮ್ಮ ಸೇಲ್ಸ್ ಟಾಕ್ಸ್ ಇಲಾಖೆಯವರು ಬರುವುದು, ಯಮನ ದರ್ಶನವೂ ಆಗುವುದು ಒಂದೇ ಆಗಿದೆ. ಅವೆರಡಕ್ಕೂ ವ್ಯತ್ಯಾಸವಿಲ್ಲ, ಇವತ್ತು ದೇಶದ ಜನರು ದೇಶದ ಪ್ರಗತಿಗಾಗಿ ಟ್ಯಾಕ್ಸ್ ಕೊಡಲು ಹಿಂಜರಿಯುತ್ತಾ ಇಲ್ಲ. ಆದರೆ ವಸೂಲು ಮಾಡತಕ್ಕಂತಹ ರೀತಿ ಏನಿದೆ, ಅದು ಸರಿಯಿಲ್ಲ, ಅವರ ಕಿರುಕುಳ ಜನರನ್ನು ನೋಯಿಸುತ್ತಾ ಇದೆ. ನಮ್ಮ ಆರ್ಥಿಕ ಮಂತ್ರಿಯವರಿಗೂ ಅದು ಗೊತ್ತಿದೆ. ಈ ಅಧಿಕಾರಿಗಳು ಕಿರುಕುಳ ಕೊಡುವುದರಿಂದ ಅದರಲ್ಲಿ ರಾಜ್ಯಕ್ಕೂ ಒಳ್ಳೆಯದಿಲ್ಲ. ದೇಶದಲ್ಲಿರುವಂತಹ ಸಣ್ಣ ವರ್ತಕರಿಗೆ ನ್ಯಾಯವಾದ ರೀತಿಯಲ್ಲಿ ಸೌಲಭ್ಯ ಕಲ್ಪಿಸಿಕೊಡಬೇಕು ಮತ್ತು ಹಾಗೆ ಮಾಡಿದರೆ, ಅವರ ಸಂಸಾರದವರು ನಿಮ್ಮನ್ನು ಹಾರೈಸುತ್ತಾರೆ, ನಿಮ್ಮನ್ನು ನೆನೆಸುತ್ತಾರೆ. ಆದ್ದರಿಂದ ನನ್ನ ವಾದವನ್ನು ಮಾನ್ಯ ಸಭೆ ಒಪ್ಪಬೇಕು, ಮತ್ತು ಸರ್ಕಾರದವರು ಸ್ವಾಗತಿಸುತ್ತಾರೆ ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

†ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಇವತ್ತು ಜ್ವಾಲನಯ್ಯನವರು ತಂದಿರುವಂತಹ ಸೇಲ್ಸ್ ಟಾಕ್ಸ್ ಅಮೆಂಡ್‌ಮೆಂಟ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈಗ ಮಾನ್ಯ ಭೂತಲಿಂಗಂನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ. ನಮ್ಮ ನೆರೆ ಸಂಸ್ಥಾನದಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿರುವ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಏಕತೆ ಇಲ್ಲ. ಪ್ರತಿಯೊಂದು ರಾಜ್ಯದಲ್ಲಿ, ಅಂದರೆ ಕೇರಳದಲ್ಲಾಗಲೀ ಮದರಾಸಿನಲ್ಲಾಗಲೀ ವಿವಿಧ ರೀತಿಯ ಸೇಲ್ಸ್ ಟ್ಯಾಕ್ಸ್ ಇದೆ. ಮೈಸೂರಿನಲ್ಲಿ ಸಮರ್ಪಕವಾಗಿದೆ ಎಂದು ನನಗನಿಸುವುದಿಲ್ಲ. ಅದಕ್ಕೋಸ್ಕರ ಶಾಸ್ತ್ರೀಯವಾದ ರೀತಿಯಲ್ಲಿ ಸಮಿತಿಯನ್ನು ನೇಮಿಸಿ ಈಗಾಗಲೇ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಹಿಂದೆ ಮೈಸೂರು ಸಂಸ್ಥಾನದ ಆದಾಯ 18 ಕೋಟಿ ರೂಪಾಯಿ ಇತ್ತು, ಆಗ ನಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಮಾಡಿಕೊಂಡು ಸುಖ ಸಮೃದ್ಧಿ ಇತ್ತು. ಆದರೆ ಈಗ 200 ಕೋಟಿ ರೂಪಾಯಿ ಆದಾಯ ಇದ್ದರೂ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲ. ಅದೇನು ತೋರಿಸುತ್ತದೆ ಅಂದರೆ, ದೇಶದಲ್ಲಾಗುವ ಅಭಿವೃದ್ಧಿ ಕಾರ್ಯಗಳಿಗಾಗಿ ಕರ ಭಾರವನ್ನು ಹೇರಲೇಬೇಕಾಗುತ್ತದೆ. ಅದನ್ನು ದೇಶದ ಅಭಿವೃದ್ಧಿಗೋಸ್ಕರ ಖರ್ಚು ಮಾಡಬೇಕಾಗಿದೆ. ಅದೇ ರೀತಿ ಈಗ ನಾವು ಪ್ರೊಹಿಬಿಷನ್ನು ತೆಗೆದು ನಾವು ಏನು ಎಕ್ಸೈಸ್ ಡ್ಯೂಟಿ ಹಾಕಿದರೂ ಕೂಡ ಮೈಸೂರು ಸಂಸ್ಥಾನದ ಆರ್ಥಿಕ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಮೈಸೂರು ಸಂಸ್ಥಾನದ ಆದಾಯ ಮತ್ತಷ್ಟು ಹೆಚ್ಚಬೇಕಾಗಿದೆ. ಮೈಸೂರು ಸಂಸ್ಥಾನ ಇನ್ನೂ ಅನೇಕ ರೀತಿಯ ವಿಧಾಯಕಗಳನ್ನು ತರಬೇಕಾಗಿದೆ.

ನಮ್ಮ ನೀರಾವರಿ ಯೋಜನೆಯಾಗಲೀ, ಬೃಹತ್ ಪ್ರಮಾಣದ ದೇಶದ ಅಭಿವೃದ್ಧಿಯಾಗಲೀ, ಇವುಗಳಿಗೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ ಎನ್ನುವ ಮಾತನ್ನು ಒಪ್ಪಬೇಕಾಗಿದೆ. ಈಗ ಶ್ರೀಮಾನ್ ಜ್ಯಾಲನಯ್ಯನವರ ವಾದ ಏನಿದೆ ಎಂದರೆ ಚಿಕ್ಕ ವ್ಯಾಪಾರಿಗಳಿಗೆ ಟರ್ನ್ ಓವರನ ಮಿತಿ 10 ಸಾವಿರ ರೂಪಾಯಿಗಳು ಇರುವುದನ್ನು ತೆಗೆದುಹಾಕಿ ಅದನ್ನು 25 ಸಾವಿರ ರೂಪಾಯಿಗಳಿಗೆ ಏರಿಸಬೇಕು ಎಂದು ಹೇಳಿದ್ದಾರೆ. ಬೀಡಿ ಸಿಗರೇಟುಗಳನ್ನು ಇಟ್ಟುಕೊಂಡು ಯಾರು ವ್ಯಾಪಾರ ಮಾಡುತ್ತಾರೆ, ಅವರನ್ನು ಚಿಕ್ಕವ್ಯಾಪಾರಿಗಳೆಂದು ಹೇಳುತ್ತಾರೆ. ಅವರು 10 ಸಾವಿರ ರೂಪಾಯಿಗಳ ಮಿತಿಯನ್ನು ಮೀರಿ ಹೋಗುವುದಿಲ್ಲ. ಆದರೆ ಯಾರು ವ್ಯಾಪಾರದ ಅಂಗಡಿಗಳನ್ನು ಇಟ್ಟುಕೊಂಡು ಅನೇಕ ರೀತಿಯ ಸಾಮಾನುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಮತ್ತು ಬೋರ್ಡುಗಳನ್ನು ಹಾಕಿಕೊಂಡು ಲೆಕ್ಕಪತ್ರಗಳನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಾರೆ ಅವರನ್ನು ಚಿಕ್ಕ ವ್ಯಾಪಾರಿಗಳೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಜ್ಯಾಲನಯ್ಯನವರು ಈಗ ಚಿಕ್ಕವ್ಯಾಪಾರಿಗಳಿಗೆ ಸರ್ಕಾರದವರು ಏನೊಂದು ವಿನಾಯ್ತಿಯನ್ನು ಕೊಡಬೇಕೆಂದು ಸಲಹೆ ಮಾಡಿದ್ದಾರೆ ಅದರ ಬಗ್ಗೆ ಭೂತಲಿಂಗಂ ಕಮಿಟಿಯವರು ಒಂದು ನಿರ್ಧಾರಕ್ಕೆ ಬರುವುದಕ್ಕೆ ಮುಂಚೆಯೇ ಅದರ ಬಗ್ಗೆ ಒಂದು ನಿರ್ಧಾರವನ್ನು ಸರ್ಕಾರದವರು ಕೈಗೊಂಡರೆ ಸರ್ಕಾರದವರು ಆ ಸಮಿತಿಗೆ ಒಪ್ಪಿಸಿದ ಕಾರ್ಯವನ್ನು ಕುಂಠಿತ ಮಾಡಿದಂತಾಗುತ್ತದೆ. ಆದ್ದರಿಂದ ಈ ವಿಷಯವನ್ನು ಕೈ ಬಿಡಬೇಕೆಂದು ಶ್ರೀಮಾನ್ ಜ್ಯಾಲನಯ್ಯನವರಿಗೆ ಹೇಳುತ್ತೇನೆ. ಸೇಲ್ಸ್ ಟ್ಯಾಕ್ಸ್‌ನ್ನು ಬಹಳ ಅನ್ಯಾಯ ಮಾಡುತ್ತಿದ್ದಾರೆ, ಸೇಲ್ಸ್ ಟ್ಯಾಕ್ಸ್ ಆಫೀಸರು ಹಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಅನೇಕರು ಹೇಳುತ್ತಿದ್ದಾರೆ. ಆದರೆ ಅದನ್ನು ಯಾರೂ ಯಾವ ಕಾಲಕ್ಕೂ ರುಜುವಾತು ಪಡಿಸಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತಂದಿಲ್ಲ. ಮಾನ್ಯ ಮಂತ್ರಿಗಳು ಹಲವಾರು ಸಾರಿ ಹೇಳಿದ್ದಾರೆ ಯಾವ ಸೇಲ್ಸ್‌ಟ್ಯಾಕ್ಸ್ ಆಫೀಸರು ಹಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆಯೋ ಅಂಥವರ ಹೆಸರನ್ನು ಸರ್ಕಾರಕ್ಕೆ ತಿಳಿಸಿದರೆ ಅವರಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು. ಸೇಲ್ಸ್ ಟ್ಯಾಕ್ಸ್‌ನ್ನು ತಿನ್ನುವ ವಿಷಯದಲ್ಲಾಗಲೀ, ಸೇಲ್ಸ್ ಟ್ಯಾಕ್ಸ್ ಇಲಾಖೆಯ ಸಿಬ್ಬಂದಿಯವರ ವಿಷಯದಲ್ಲಾಗಲೆ ದೂರು ಸರ್ಕಾರಕ್ಕೆ ಇದುವರೆಗೆ ನಿರ್ದಿಷ್ಟವಾಗಿ ಬಂದಹಾಗೆ ಕಾಣುವುದಿಲ್ಲ. ಆದ್ದರಿಂದ ಈ ಒಂದು ಮಾತನ್ನು ನಾವು ಸ್ವಾಭಾವಿಕವಾಗಿ ಕೇಳುತ್ತಿದ್ದೇವೆ, ಇದರಲ್ಲಿ ಯಾವ ಸತ್ಯಾಂಶವೂ ಇಲ್ಲ ಎಂಬುದನ್ನು ಮನಗಾಣಬಹುದು. ಆದ್ದರಿಂದ ಶ್ರೀಮಾನ್ ಜ್ಯಾಲನಯ್ಯನವರು ಹೇಳಿದಂತೆ ಚಿಕ್ಕ ವ್ಯಾಪಾರಿಗಳಿಗೆ 25 ಸಾವಿರ ರೂಪಾಯಿಗಳ ವಿನಾಯ್ತಿಯನ್ನು ಕೊಡುವ ಬಗ್ಗೆ ಈಗ ಸರ್ಕಾರದವರು ಒಂದು ಕಮಿಟಿಯನ್ನು ಏನು ನೇಮಕಮಾಡಿದ್ದಾರೆ ಅವರು ನಿರ್ಧಾರ ಕೊಡುವಾಗ ಜನಸಾಮಾನ್ಯರು, ಚಿಕ್ಕವ್ಯಾಪಾರಿಗಳು ಪ್ರತಿಯೊಬ್ಬರೂ ಆ ಕಮಿಟಿಯ ಮುಂದೆ ಹೋಗಿ ಅವರು ತಮ್ಮ ಅಭಿಪ್ರಾಯವನ್ನು ಕೊಡುವ ಅಧಿಕಾರ ಇರುವುದರಿಂದ ಸಮಿತಿಯವರು ಎಲ್ಲಾ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅವರು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶ ಇದೆ. ಈ ದೃಷ್ಟಿಯಿಂದ ಶ್ರೀಮಾನ್ ಜ್ಯಾಲನಯ್ಯನವರು ತಮ್ಮ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತ. ಮತ್ತು ಸಕಾಲಿಕ. ಭೂತಲಿಂಗಂ ಸಮಿತಿಯವರು ಏನು ಅಭಿಪ್ರಾಯವನ್ನು ಕೊಡುತ್ತಾರೆ ಎಂಬುದನ್ನು ನೋಡಿಕೊಂಡು, ಅದರಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗದೇ ಇದ್ದ ಪಕ್ಷದಲ್ಲಿ ಆಗ ಇನ್ನೊಂದು ವಿಧೇಯಕವನ್ನು ಈ ಸಭೆಯಮುಂದೆ ತರಬಹುದು ಎಂದು ಮಾನ್ಯ ಸದಸ್ಯರಿಗೆ ನನ್ನ ಅಭಿಪ್ರಾಯವನ್ನು ತಿಳಿಸಿ ಶ್ರೀಮಾನ್ ಜ್ಯಾಲನಯ್ಯನವರು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅವರನ್ನು ವಿನಯಪೂರ್ವಕವಾಗಿ ಕೇಳಿಕೊಂಡು ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಪಿ. ವಿ. ಐತಾಳ್ (ಸುರತ್‌ಕರ್).—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಶ್ರೀಮಾನ್ ಜ್ಯಾಲನಯ್ಯನವರು ಈ ಸಭೆಯಮುಂದೆ ತಂದಿರತಕ್ಕಂಥ ಮೈಸೂರು ರಾಜ್ಯದ ಮಾರಾಟ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿ ಮಸೂದೆಯನ್ನು ನಾನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಪ್ರಥಮವಾಗಿ ಸೇಲ್ಸ್ ಟ್ಯಾಕ್ಸ್‌ಅನ್ನು ಜಾರಿಗೆ ತಂದದ್ದು ಮದ್ರಾಸಿನಲ್ಲಿ ಎಂದು ನಾನು ತಿಳಿಯುತ್ತೇನೆ. ಶ್ರೀಮಾನ್ ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಅದು ಜಾರಿಯಲ್ಲಿ ಬಂತು. ಆ ಸಮಯದಲ್ಲಿ ಟ್ಯಾಕ್ಸ್ ಹಾಕುವುದರ ಮಿತಿ ಎಂದರೆ ಟರ್ನ್‌ಓವರ್ ಮಿತಿ 7½ ಸಾವಿರ ರೂಪಾಯಿಗಳು ಇತ್ತು. ಆ ಸಮಯದಲ್ಲಿ ಎಂದರೆ 1939ನೇ ಇಸವಿಯಲ್ಲಿ ಒಂದು ಮುಡಿ ಅಕ್ಕಿಗೆ 2½ ರೂಪಾಯಿ 3 ರೂಪಾಯಿಗಳು ಇತ್ತು. ಇವೊತ್ತು ನಮ್ಮ ಮಂಗಳೂರಿನಲ್ಲಿ ಜೀವನಾವಶ್ಯಕ ವಸ್ತುಗಳ ಕ್ರಯ ಹಿಂದೆ ಇದ್ದುದಕ್ಕಿಂತ 15-16ರಷ್ಟು ಪಾಲು ಜಾಸ್ತಿಯಾಗಿದೆ. ಇಷ್ಟು ಬೆಲೆಗಳು ಜಾಸ್ತಿ ಆಗಿರುವಾಗ ಸೇಲ್ಸ್ ಟ್ಯಾಕ್ಸ್‌ನ ಕನಿಷ್ಠ ಪರಿಮಿತಿಯನ್ನು 7½ ಸಾವಿರ ರೂಪಾಯಿಗಳಿಂದ 10 ಸಾವಿರ ರೂಪಾಯಿಗಳಿಗೆ ಮಾತ್ರ

(ಶ್ರೀ ಪಿ. ಎ. ಐತಾಳ್)

ತಂದಿದ್ದಾರೆ. ಇದರಿಂದ ಏನಾಯಿತು ಎಂದರೆ ಸೇರ್ಸ್‌ಟ್ಯಾಕ್ಸ್‌ನ್ನು ಹಾಕುವ ಪರಿಮಿತಿಯನ್ನು $\frac{1}{8}$ ಭಾಗದಷ್ಟು ಮಾತ್ರ ಜಾಸ್ತಿ ಮಾಡಿದರು. 15–16ರಷ್ಟು ಪಾಲು ಬೆರೆಗಳು ಜಾಸ್ತಿಯಾಗಿರು ವಾಗ $\frac{1}{8}$ ಭಾಗದಷ್ಟು ಮಾತ್ರ ಪರಿಮಿತಿಯನ್ನು ಜಾಸ್ತಿ ಮಾಡಿರುವುದು ಏನೇನೂ ಸರಿಯಿಲ್ಲ. 10 ಸಾವಿರ ರೂಪಾಯಿಗಳು ಟರ್ನ್‌ಓವರ್ ಆಗಬೇಕಾದರೆ ವ್ಯಾಪಾರಿಗೆ ಒಂದು ದಿವಸಕ್ಕೆ 33 ರೂಪಾಯಿಗಳ ವ್ಯಾಪಾರ ಆಗಬೇಕು. 33 ರೂಪಾಯಿಗಳಿಗೆ ಸೇಲ್ಸ್ ಡಿಪಾರ್ಟ್‌ಮೆಂಟಿನವರ ಅಸೆಸ್‌ಮೆಂಟ್ ಪ್ರಕಾರ 10 ಪರ್ಸೆಂಟ್ ರಾಫ ಇದೆ ಎಂದು ಹೇಳುತ್ತಾರೆ. ಅದರ ಪ್ರಕಾರ 33 ರೂಪಾಯಿಗಳ ವ್ಯಾಪಾರ ಆಗಬೇಕಾದರೆ 3 ರೂಪಾಯಿ 33 ಪೈಸಾ ಗ್ಯಾಸ್ ಪ್ರಾಫಿಟ್ ಒಂದು ದಿವಸಕ್ಕೆ ಬರುತ್ತದೆ ಎಂದಾಯಿತು. ಇಡೀ ದಿವಸದ 3 ರೂಪಾಯಿ 33 ಪೈಸಾ ಗ್ಯಾಸ್ ಪ್ರಾಫಿಟ್‌ನಲ್ಲಿ ಅಂಗಡಿ ಬಾಡಿಗೆ ಕೊಡಬೇಕು. ಲೈಟ್ ಚಾರ್ಜ್ ಕೊಡಬೇಕು, ಆ ವ್ಯಾಪಾರಿಗೆ ಊಟ, ಕಾಫಿಗೆ ಮನೆಗೆ ಹೋಗಿ ಬರುವ ಚಾರ್ಜ್ ಇವೆಲ್ಲಾ ಹೋಗಿ ಒಂದು ದಿವಸಕ್ಕೆ ಅವನಿಗೆ ಒಂದು ರೂಪಾಯಿ ಉಳಿಯುತ್ತದೆಯೇ? ಒಂದು ದಿವಸಕ್ಕೆ ಒಂದು ರೂಪಾಯಿ ಉಳಿಯತಕ್ಕ ಮನುಷ್ಯನಿಗೆ ಟ್ಯಾಕ್ಸ್ ಹಾಕಬಹುದೇ? ಸ್ವಲ್ಪ ಯೋಚನೆ ಮಾಡಿ ನೋಡಿ. ಇಷ್ಟಕಂ ಟ್ಯಾಕ್ಸ್ ಹಾಕುವಾಗ 3 ಸಾವಿರ ರೂಪಾಯಿಗಳ ಆದಾಯದವರೆಗೂ ಹಾಕುವುದಿಲ್ಲ. ಒಬ್ಬ ಬಡ ಕೂಲಿ ಬೆಂಗಳೂರಿನಲ್ಲಿ ಒಂದು ದಿವಸಕ್ಕೆ ಕನಿಷ್ಠ 5 ರೂಪಾಯಿಗಳನ್ನು ಸಂಪಾದನೆ ಮಾಡುತ್ತಾನೆ. ಅವನಿಗೆ ತೆರಿಗೆಯನ್ನು ಹಾಕುವುದಕ್ಕೆ ಆಗುತ್ತದೆಯೇ? ಒಬ್ಬ ವ್ಯಾಪಾರಿ ಒಂದು ಅಂಗಡಿಯನ್ನು ಇಟ್ಟುಕೊಂಡು ಇಡೀ ದಿವಸಕ್ಕೆ 3 ರೂಪಾಯಿ 33 ಪೈಸಾ ಸಂಪಾದನೆ ಮಾಡುವಲ್ಲಿ ಅವನು ತನ್ನ ದಿವಸದ ಖರ್ಚೆಲ್ಲಾ ಕಳೆದು ಒಂದು ದಿವಸಕ್ಕೆ ಒಂದು ರೂಪಾಯಿ ಉಳಿಸುವಾಗ ಅಂಥ ಡೀಲರಿಗೆ ತೆರಿಗೆಯನ್ನು ಹಾಕಿ ನೀವು ಅಡ್ಮಿನಿಸ್ಟ್ರೇಷನ್ ಮಾಡಬೇಕಾಗಿದೆ. ಇದನ್ನು ಸ್ವಲ್ಪ ಆಲೋಚನೆ ಮಾಡಿ. ಸಣ್ಣ ಸಣ್ಣ ವ್ಯಾಪಾರಸ್ಥರಿಂದ ತೆರಿಗೆಯನ್ನು ವಸೂಲು ಮಾಡುವುದಕ್ಕಾಗಿ ಅಸಿಸ್ಟೆಂಟ್ ಕಮರ್ಷಿಯಲ್ ಆಫೀಸರನ್ನು ನೇಮಕ ಮಾಡಬೇಕಾಗುತ್ತದೆ. ಅವರಿಗೆ 500 ರೂಪಾಯಿಗಳ ಸ್ಕೇಲು. ಅವರಿಗೆ ಬೇಕಾದಂತಹ ಸಿಬ್ಬಂದಿ ಇತ್ಯಾದಿಗಳಿಗೆ ಸಂಬಳ, ಅಲೋಯನ್ಸ್ ಇವುಗಳನ್ನೆಲ್ಲಾ ಲೆಕ್ಕ ಹಾಕಿದರೆ ಅವರಿಂದ ಬರತಕ್ಕ ಉತ್ಪತ್ತಿಗೂ ಈ ಸಿಬ್ಬಂದಿವರ್ಗದವರ ಖರ್ಚಿಗೂ ಜಮಾ ಆಗುತ್ತದೆ. ಸರಿಹೋಗುತ್ತದೆ ಅದಕಾರಣ ಟಾಕ್ಸ್ ಹಾಕುವ ಪರಿಮಿತಿಯನ್ನು, ಟರ್ನ್‌ಓವರನ್ನು 25 ಸಾವಿರ ರೂಪಾಯಿಗಳಿಗೆ ಏರಿಸಿದರೆ ಖರ್ಚಿನಲ್ಲೂ ಕಡಿಮೆಯಾಗುತ್ತದೆ ಸರ್ಕಾರದ ಅಡ್ಮಿನಿಸ್ಟ್ರೇಷನ್ನಲ್ಲಿಯೂ ಖರ್ಚು ಕಡಿಮೆಯಾಗುತ್ತದೆ. ಆದಕಾರಣ ಕನಿಷ್ಠ ಪರಿಮಿತಿಯನ್ನು 25 ಸಾವಿರ ರೂಪಾಯಿಗಳಿಗೆ ಏರಿಸಬೇಕು ಎಂದು ಹೇಳತಕ್ಕಂಥ ವಾದ ಅಗತ್ಯ ಮತ್ತು ಜರೂರಾಗಿದೆ. ಅದನ್ನು ಸರ್ಕಾರದವರು ಮಾಡಲೇಬೇಕು.

6-00 P.M.

ಇನ್ನು ಎರಡನೆಯದಾಗಿ ನಮ್ಮ ಸರ್ಕಾರದವರು ಹೇಳಬಹುದು, ಏನೆಂದರೆ ಈಗ ಮಾನ್ಯ ಸದಸ್ಯರು ತಂದಿರುವ ಬಿಲ್ಲನ್ನು ಒಪ್ಪಿಕೊಂಡರೂ ಕೂಡ 10 ಸಾವಿರದಮೇಲೆ ಟರ್ನ್‌ಓವರ್ ಆದರೆ ಟ್ಯಾಕ್ಸ್ ಕೊಡಲೇಬೇಕಾಗುತ್ತದೆ ಎಂದು. ಆದರೆ ಸರ್ಕಾರದವರು ಏನನ್ನು ಮಾಡಿದರೆ ಸೆಕ್ಷನ್ಸ್ 5 (5)ಕ್ಕೆ ಒಂದು ತಿದ್ದುಪಡಿಯನ್ನು ತಂದು 25 ಸಾವಿರದವರೆಗೆ ಟರ್ನ್‌ಓವರ್ ಆದರೆ ಟ್ಯಾಕ್ಸ್ ಕೊಡಬೇಕಾಗಿಲ್ಲ ಎಂದು ಮಾಡಬಹುದು. ಮಾನ್ಯ ಜ್ಯಾಲನಯ್ಯನವರು ತಂದಿರುವ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡರೆ ಸಣ್ಣ ವ್ಯಾಪಾರಸ್ಥರಿಗೆ ಅನುಕೂಲ ಮಾಡಿದಂತಾಗುತ್ತದೆ. ಇವತ್ತಿನ ದಿವಸ ವ್ಯಾಪಾರ ಮಾಡುವವರು ಲೆಕ್ಕಪತ್ರಗಳನ್ನು ಇಡಬೇಕೆಂದು ಹೇಳಿದ್ದೀರಿ. ಆದರೆ ವ್ಯಾಪಾರ ಮಾಡುವವರು ಯಾವ ರೀತಿ ಲೆಕ್ಕ ಪತ್ರಗಳನ್ನು ಇಟ್ಟರೂ ಕೂಡ ತಮ್ಮ ಅಧಿಕಾರಿಗಳಿಗೆ ಸರಿಕಾಣುವುದಿಲ್ಲ. ನಮ್ಮ ಕಡೆ ಕಬ್ಬಿನರಸ ತೆಗೆಯುವ ಸಣ್ಣ ಸಣ್ಣ ಅಂಗಡಿಗಳು ಇವೆ. ಕಾಫಿ ಮಾರಾಟದಮೇಲೆ 3 ಪರ್‌ಸೆಂಟ್ ಟ್ಯಾಕ್ಸ್ ಇದ್ದರೆ ಕಬ್ಬಿನಕಾಲಿನ ಮೇಲೆ 15 ಪರ್‌ಸೆಂಟ್ ಟ್ಯಾಕ್ಸ್ ಇದೆ. ಈಗ 10 ಪರ್‌ಸೆಂಟ್‌ಗೆ ಇಳಿಸಿದ್ದೀರಿ. ಕೈಯಿಂದ ಆಡಿಸಿ ಕಬ್ಬಿನಕಾಲನ್ನು ತೆಗೆದು ಮಾರಾಟ ಮಾಡುವ ಸಣ್ಣ ಸಣ್ಣ ವ್ಯಾಪಾರಿಗಳು ಸಹ ಈ 10 ಪರ್‌ಸೆಂಟ್ ಟ್ಯಾಕ್ಸ್ ಕೊಡಬೇಕಾಗಿದೆ. ನಿಮ್ಮ ಅಧಿಕಾರಿಗಳು ಮ್ಯಾನುಫ್ಯಾಕ್ಚರಿಂಗ್ ಲೆಕ್ಕ ಬೇರೆ ಇಡಬೇಕು ಎಂದು ಹೇಳುತ್ತಾರೆ. ಆ ರೀತಿ ಇಡದಿದ್ದರೆ " Your accounts are rejected because you have not kept manufacturing accounts "— ಎಂದು ಹೇಳುತ್ತಾರೆ. " your case is liable for best of judgement " ಎಂದು ಕಾನೂನಿನಲ್ಲಿ ಇರುವುದರಿಂದ ವ್ಯಾಪಾರಿಯಾದವನು ಯಾವ

ರೀತಿ ಲೆಕ್ಕ ಇಟ್ಟರೂ ಕೂಡ ಅಧಿಕಾರಿಗಳಿಗೆ ಸರಿಕಾಣುವುದಿಲ್ಲ. "every dealer liable for registration is liable for maintenance of accounts also as prescribed under the Act" ಇಷ್ಟೆಲ್ಲಾ ಕಾನೂನಿನಲ್ಲಿ ಮಾಡಿ ಇಟ್ಟಿದ್ದೀರಿ. ಯಾವ ರೀತಿ ಲೆಕ್ಕವನ್ನು ಇಡಬೇಕು ಎಂಬ ಬಗ್ಗೆ ಯಾವ ಕಾನೂನಿನಲ್ಲಿಯಾಗಲೀ, ಯಾವ ನೋಟಿಫಿಕೇಷನ್‌ನಲ್ಲಿ ಆಗಲೀ ಹೇಳಿಲ್ಲ. ಈ ಕಾರಣದಿಂದ ವ್ಯಾಪಾರಿಗಳು ಯಾವ ರೀತಿ ಲೆಕ್ಕ ಇಟ್ಟರೂ ಕೂಡ ಅಧಿಕಾರಿಗಳಿಗೆ ತಪ್ಪಾಗಿಯೇ ಕಾಣುತ್ತದೆ. ರಿಟರ್ನ್ಸ್ ಕೊಡಬೇಕು ಎಂದು ಹೇಳಿದ್ದೀರಿ. ಆದರೆ ಲೆಕ್ಕ ಯಾವ ರೀತಿ ಇಡಬೇಕು ಎಂದು ಹೇಳಿಲ್ಲ. ವರ್ಷದ ಮೊದಲಲ್ಲಿ ಸ್ಟಾಕ್ ಎಷ್ಟು ಇತ್ತು ಎಂಬ ಬಗ್ಗೆ ಲೆಕ್ಕ ಇಡಬೇಕು. ಮತ್ತು ತೂಕ ಮಾಡಿ ಇಡಬೇಕು ಎಂದು ಕಾನೂನಿನಲ್ಲಿ ಹೇಳಲಾಗಿದೆ. ಇದು ಸಣ್ಣ ಸಣ್ಣ ಡೀಲರ್ಸ್‌ಗೆ ಬಹಳ ಕಷ್ಟವಾಗುತ್ತದೆ. ವರ್ಷದ ಮೊದಲಲ್ಲಿ ಮೂರು ಸಾವಿರ ರೂಪಾಯಿನಷ್ಟು ಸ್ಟಾಕ್ ಇತ್ತು ಎಂದು ವ್ಯಾಪಾರಗಾರರು ನಿಜ ಹೇಳಿದರೂ ಕೂಡ, "every case is liable for best of judgement"—ಎಂದು ಕಾನೂನಿನಲ್ಲಿ ಹೇಳಿರುವುದರಿಂದ ಅಧಿಕಾರಿಗಳು ಒಪ್ಪುವುದಿಲ್ಲ. "you have not kept the inventory details of your stock"—ಎಂದು ಹೇಳುತ್ತಾರೆ. ಒಬ್ಬ ವ್ಯಾಪಾರಿ ಒಂದು ಅಂಗಡಿ ಇಟ್ಟು ರಿಜಿಸ್ಟ್ರೇಷನ್ ಮಾಡಿಸಿಕೊಂಡರೆ ಅದನ್ನು ಮತ್ತೆ ಕ್ಯಾನ್ಸೆಲ್ ಮಾಡಿಸುವುದು ಬಹಳ ಕಷ್ಟವಿದೆ. "A dealer, who is once registered should go on renewing his registration. Until it is cancelled, he must go on paying the registration fee". ಒಂದು ಸಾರಿ ರಿಜಿಸ್ಟ್ರೇಷನ್‌ಗೆ ಹೋದರೆ ಗಾಣಕ್ಕೆ ಕೈಕೊಟ್ಟಹಾಗೆ ಆಗುತ್ತದೆ.

ಶ್ರೀಮತಿ ಕೆ. ಲೀಲಾವತಿ ರೈ.—ಲಾಯರ್ ಬಳಿ ಯಾರಾದರು ಕೇಸ್ ತೆಗೆದುಕೊಂಡು ಹೋದರೂ ಕೂಡ ಅದೇ ರೀತಿ ಆಗುತ್ತದೆ!

ಶ್ರೀ ಪಿ. ವಿ. ಐತಾಳ.—ಲಾಯರ್ ಒಬ್ಬರೇ ಅಲ್ಲ, ಡಾಕ್ಟರ ಬಳಿ ಯಾರಾದರೂ ಹೋದರೆ ಅವರೂ ಸಹ ಅಷ್ಟು ಸುಲಭವಾಗಿ ಬರುವುದಕ್ಕಾಗುವುದಿಲ್ಲ. ಒಂದು ಪಕ್ಷ ರಿಜಿಸ್ಟ್ರೇಷನನ್ನು ಕ್ಯಾನ್ಸಲ್ ಮಾಡಿಸಬೇಕಾದರೆ ಸಂಬಂಧಪಟ್ಟ ಅಧಿಕಾರಿ ಎರಡು ವರ್ಷದಿಂದ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ವ್ಯಾಪಾರವಾಗುತ್ತಿದೆ ಎಂದು ಸರ್ಟಿಫೈ ಮಾಡಬೇಕು. ಟರ್ನ್‌ಓವರ್ ಕಡಿಮೆಯಾಗಿದೆ ಎಂದು ಅಧಿಕಾರಿ ರುಜುವಾತು ಮಾಡಿದಮೇಲೆ ಕ್ಯಾನ್ಸಲ್ ಆಗುತ್ತದೆ. ಅಲ್ಲಿಯವರೆಗೂ ಆ ವ್ಯಾಪಾರಿ ರಿಜಿಸ್ಟ್ರೇಷನ್ ಫೀಯನ್ನು ಕಟ್ಟುತ್ತಲೇ ಇರಬೇಕು. ಈ ಕಷ್ಟವನ್ನು ತಪ್ಪಿಸಿಕೊಳ್ಳಲು ಕೆಲವು ವ್ಯಾಪಾರಿಗಳು ತಮ್ಮ ಹೆಸರಿನಲ್ಲಿದ್ದ ರಿಜಿಸ್ಟ್ರೇಷನನ್ನು ತಮ್ಮ ತಮ್ಮ ಮನೆಯವರ ಹೆಸರಿಗೆ ಬದಲಾವಣೆ ಮಾಡಿಸಿಬಿಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಶ್ರೀಮಾನ್ ಜ್ಯೋತಿಯವರು ತಂದಿರುವ ತಿದ್ದುಪಡಿಯನ್ನು ಪಾಸ್ ಮಾಡುವುದು ಅಗತ್ಯವಾಗಿದೆ. ಈಗಾಗಲೇ ನಮ್ಮ ಪಕ್ಕದ ರಾಜ್ಯಗಳಾದ ಒರಿಸ್ಸಾ ಮತ್ತು ಮಹಾರಾಷ್ಟ್ರ ಸರ್ಕಾರಗಳು ಟರ್ನ್ ಓವರ್ ಟ್ಯಾಕ್ಸ್ ಕೊಡುವುದನ್ನು 30 ಸಾವಿರ ಮತ್ತು 25 ಸಾವಿರ ರೂಪಾಯಿಗಳವರೆಗೆ ಕನಿಷ್ಠ ಪ್ರಮಾಣವನ್ನು ಏರಿಸಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಕನಿಷ್ಠ ಪ್ರಮಾಣವನ್ನು 10 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಬೇಕು. ಇಲ್ಲದಿದ್ದರೆ ಸಣ್ಣ ಪ್ರಮಾಣದಲ್ಲಿ ಅಂಗಡಿ ಇಟ್ಟುಕೊಂಡಿರುವವರಿಗೆ ಬಹಳ ತೊಂದರೆಯಾಗುತ್ತಿದೆ. ಈಗ ಕೆಲವರು ವರ್ತಕರು ತಮ್ಮ ಭಾಗದ ಟ್ಯಾಕ್ಸ್‌ನ್ನು ಕ್ರಮವಾಗಿ ಕಟ್ಟಿದ್ದರೂ ಕೂಡ ಅವರಮೇಲೆ ಕೆಲವು ಆಫೆನ್ಸ್ ಬರುತ್ತವೆ. ರಿಟರ್ನ್ಸ್ ಕಳಿಸಿಲ್ಲ, ಕಳಿಸಬೇಕು ಎಂದು ನೋಟೀಸ್ ಕೊಡುತ್ತಾರೆ. ತಪ್ಪಿಲ್ಲದಿದ್ದರೂ ಕೂಡ ನೋಟೀಸ್ ಕೊಡುತ್ತಿರುತ್ತಾರೆ. ಇಂತಹ ಸಮಯದಲ್ಲಿ ಸಂಬಂಧಪಟ್ಟ ವ್ಯಾಪಾರಿಗಳು ಕೋರ್ಟ್‌ಗೆ ಹೋಗುವುದಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿಲ್ಲ.

> "The legality or propriety of any assessment cannot be questioned in a Civil Court. The legality or propriety cannot also be questioned in a Criminal Court."

ಈ ಪ್ರಕಾರ ಕ್ರಿಮಿನಲ್ ಕೋರ್ಟ್‌ಗೆ ಹೋಗುವುದಕ್ಕೂ ಕೂಡ ಅವಕಾಶವಿಲ್ಲ. ಒಂದು ಪಕ್ಷ ರಾಮಕೃಷ್ಣ ಹೆಗಡೆಯವರೇ ವ್ಯಾಪಾರಗಾರರಾಗಿದ್ದರೆ, ಎರಡು ಲಕ್ಷ ರೂಪಾಯಿಗಳ ಟರ್ನ್ ಓವರ್ ಇದೆ, 20 ಸಾವಿರ ರೂಪಾಯಿ ಟ್ಯಾಕ್ಸ್ ಕಟ್ಟಬೇಕು ಎಂದು ನೋಟೀಸ್ ಕಳಿಸಿಬಿಡುತ್ತಾರೆ. ಟ್ಯಾಕ್ಸ್ ಹಾಕಿರುವುದು ಜಾಸ್ತಿಯಾಗಿದೆ ಎಂದು ಕೋರ್ಟ್‌ಗೆ ಏನಾದರೂ ಹೋಗಬೇಕಾದರೆ 20 ಸಾವಿರ ರೂಪಾಯಿಗಳನ್ನು ಕೋರ್ಟ್‌ಗೆ ಕಟ್ಟಿ ನಂತರ ಅಪೀಲ್ ಮಾಡಬೇಕು. 20 ಸಾವಿರ ರೂಪಾಯಿಗಳನ್ನು ಕಟ್ಟದಿದ್ದರೆ ಕೋರ್ಟ್‌ಗೆ ಹೋಗುವ ರೈಟ್ ಇರುವುದಿಲ್ಲ. "your case is

(ಶ್ರೀ ಪಿ. ವಿ. ಪಿತೆಗೌಳ್)

liable for best of judgement" ಎಂದು ಇರುವುದರಿಂದ ಅಧಿಕಾರಿಗಳು ಹೇಳಿದ್ದೇ ನರಿ ಎಂಬಂತೆ ಆಗಿದೆ. ಮೊನ್ನೆ ತಾನೇ ಸೇರ್ಸ್ ಟ್ಯಾಕ್ಸ್ ಬಗ್ಗೆ ಒಂದು ತಿದ್ದುಪಡಿಯನ್ನು ತಂದು ಪಾಸ್ ಮಾಡಿದಿರಿ. ಅದರ ಪ್ರಕಾರ ತಪ್ಪಿತಸ್ಥ ವ್ಯಾಪಾರಿ ಸೆಕ್ಷನ್ 29(1)ರ ಪ್ರಕಾರ ಮನೆಯಲ್ಲಿಯೇ ಇದ್ದು ಫೈನ್ ಹಣವನ್ನು ಕೋರ್ಟಿಗೆ ಕಳಿಸಬಹುದು. ಕೋರ್ಟಿಗೆ ಹೋಗಲೇಬೇಕಾಗಿಲ್ಲ. ಒಂದು ಸಾರಿ ದಂಡವನ್ನು ಕಟ್ಟಿದರೆ 15 ದಿವಸದ ಬಳಿಕ ಆತನ ಮೇಲೆ ಮತ್ತೆ ಕೇಸ್ ಹಾಕುತ್ತಾರೆ :

> "you have admitted that you have failed to keep proper and correct accounts and therefore you are liable for prosecution under section 29 (2)."

ಸೆಕ್ಷನ್ 29 (2) ರ ಪ್ರಕಾರ ಜೈಲಿಗೆ ಬೇಕಾದರೂ ಕಳಿಸಬಹುದು. ಬಡ ವ್ಯಾಪಾರಿಗಾರಿಗೆ ಇಷ್ಟೆಲ್ಲಾ ತೊಂದರೆಗಳು ಇವೆ. ಈ ಕಾರಣದಿಂದ ಮಾನ್ಯ ಜ್ಯಾಲಯ್ಯನವರು ತಂದಿರುವ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡರೆ ಬಡ ವ್ಯಾಪಾರಸ್ಥರಿಗೆ ಅನುಕೂಲ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಇವತ್ತಿನ ದಿವಸ ಯಾರಾದರೂ ಒಬ್ಬರು ಒಂದು ಅಂಗಡಿಯನ್ನು ತೆರೆದರೆ ಸಾಕು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಂದ :

> " You have opened a shop on such and such a date, I estimate your turn over at Rs. 20,000, you pay at the monthly rate of Rs. 40 ".

ಎಂದು ನೋಟೀಸ್ ಬಂದು ಬಿಡುತ್ತದೆ. ಇದರ ಜೊತೆಗೆ ಮತ್ತೊಂದು ಕಂಡೀಷನ್ ಹಾಕುತ್ತಾರೆ ಏನೆಂದರೆ :

> " In addition to monthly payment of provisional advance tax, he has to deposit 6 months tax as security tax."

ಪ್ರತಿ ತಿಂಗಳು ಟ್ಯಾಕ್ಸ್ ಕಟ್ಟುವುದಲ್ಲದೆ 6 ತಿಂಗಳ ಟ್ಯಾಕ್ಸ್‌ನ್ನು ಸೆಕ್ಯುರಿಟಿಯಾಗಿ ಬೇರೆ ಇಡಬೇಕು ವ್ಯಾಪಾರಸ್ಥರಿಗೆ ಇಷ್ಟೊಂದು ತೊಂದರೆಗಳು ಇವತ್ತಿನ ದಿವಸ ಇವೆ. ಸರ್ಕಾರದವರು ಇವತ್ತಿನ ದಿವಸ ಸೆಕ್ಷನ್ 32ರ ಪ್ರಕಾರ ವ್ಯಾಪಾರಸ್ಥನ ಕೈಕಟ್ಟಿ ಹಾಕಿದ್ದಾರೆ, ಸೆಕ್ಷನ್ 35ರ ಪ್ರಕಾರ ಕಾಲು ಕಟ್ಟಿಹಾಕಿದ್ದಾರೆ, ಇದರ ಜೊತೆಗೆ ಮೊನ್ನೆ ತಂದ ತಿದ್ದುಪಡಿಯ ಪ್ರಕಾರ ಆತನ ನಾಲಿಗೆಗೂ ಕೂಡ ಬೀಗ ಹಾಕಿದ್ದಾಯಿತು. ವ್ಯಾಪಾರಸ್ಥನ ಅವಸ್ಥೆ ಇನ್ನು ಮುಗಿಯಿತು. ಕ್ರಿಮಿನರ್ ಕೋರ್ಟ್ ಹಾಗೂ ಸಿವಿರ್ ಕೋರ್ಟುಗಳಿಗೆ ಹೋಗಿ ಹೀಗೆ ಟ್ಯಾಕ್ಸ್ ಹಾಕುವುದು ಸರಿಯಲ್ಲ ಎಂದು ಅಪೀಲು ಹೋಗುವಂತೆ ಏಕೆ ಮಾಡುತ್ತೀರಿ ? ಹೀಗೆ ಇದರ ಮೇಲೆ ರಿಸ್ಟ್ರಿಕ್ಷನ್ ತರಬಾರದು. ಆದುದರಿಂದ ಮಾನ್ಯ ಸದಸ್ಯರಾದ ಶ್ರೀ ಜ್ಯಾಲಯ್ಯನವರು ಇಲ್ಲಿ ತಂದಿರುವ ಅಮೆಂಡುಮೆಂಟನ್ನು ಸರಕಾರದವರು ಒಪ್ಪಿದರೆ ಒಂದು ರೀತಿಯಾದ ಹೆಚ್ಚು ಲಾಭ ದೊರೆಯುತ್ತದೆ ಎಂದು ನಾನು ಇಲ್ಲಿ ಒತ್ತಿ ಹೇಳುತ್ತೇನೆ. ಇದರಲ್ಲಿ ಮಿಡಲ್ ಕ್ಲಾಸ್ ವರ್ಗದವರೂ ಬರುತ್ತಾರೆ. ಕನಿಷ್ಠ ಪಕ್ಷ ಒಬ್ಬ ವರ್ತಕನಿಗೆ ಒಂದು ಲಕ್ಷ ರೂಪಾಯಿ ಟರ್ನ್ ಓವರು ಇದ್ದರೆ ಅವನಿಗೆ ಸುಮಾರು ಹತ್ತು ಸಾವಿರದಷ್ಟು ಗ್ರಾಸ್ ಪ್ರಾಫಿಟ್ ಆಗುತ್ತದೆ ಮತ್ತು ಇದರಲ್ಲಿ ಕೊನೆಗೆ ನೆಟ್‌ಪ್ರಾಫಿಟ್ ಆಗಿ ಸುಮಾರು ಐದು ಸಾವಿರ ರೂಪಾಯಿಗಳಾಗಬಹುದು. ನಮ್ಮಂತಹ ಎಂ.ಎಲ್.ಎ ಗಳಿಗೆ ತಿಂಗಳಿಗೆ ನಾನೂರು ರೂಪಾಯಿ ಸಂಬಳ ಎಂದರೆ ವರ್ಷಕ್ಕೆ ಸುಮಾರು 4,800 ರೂಪಾಯಿಗಳು ಬರುತ್ತದೆ. ನಮ್ಮ ಬೆಂಗಳೂರು ಸಿಟಿಯಲ್ಲಿ ವರ್ಷಕ್ಕೆ ಪೂರೆಸ್ಟ್ ಕ್ಲಾಸು ಒಬ್ಬರು ಗಂಡ ಮತ್ತು ಹೆಂಡತಿ ಸಂಸಾರ ಮಾಡಬೇಕಾದರೆ ಒಂದು ತಿಂಗಳಿಗೆ 500 ರೂಪಾಯಿಗಳಾದರೂ ಬೇಕಾಗುತ್ತದೆ. ಇದಕ್ಕಿಂತ ಕಡಿಮೆ ಇದ್ದರೆ ಅವನು ಜೀವನ ನಡೆಸುವುದು ಕಷ್ಟ. ಈಗಾಗಲೇ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಎಂದು ಸರಕಾರ ಬೇರೆ ಹಾಕಿದೆ ಮತ್ತು ಇದೂ ಅಲ್ಲದೆ ನಮ್ಮ ಮಾನ್ಯ ಮಂತ್ರಿಗಳವರು ಹತ್ತು ಸಾವಿರವಿಂದ ಇಪ್ಪತ್ತು ಸಾವಿರದವರೆಗೆ ಇದ್ದರೆ ಅವರಿಗಾಗಿ ಒಂದು ರೀತಿಯ ಸ್ಲಾಬ್ ರೇಟು ಎಂದು ತಿಂಗಳಿಗೆ 10, 15, 20 ಅಥವಾ 25 ರೂಪಾಯಿಗಳಷ್ಟು ಟ್ಯಾಕ್ಸ್ ಪಡೆಯಬೇಕು ಎಂದು ಮಾಡಿದ್ದಾರೆ. ಇದರಲ್ಲಿ ಕೆಲವು ಗುಡ್ಸ್‌ಗಳ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕು ಎಂದು ಹೇಳಿದ್ದಾರೆ. ಆದರೆ ಇವು ಯಾವ ಯಾವ ವಸ್ತುಗಳು ಎನ್ನುವುದರ ವಿವರಗಳನ್ನು ಪೂರ್ತಿ ಹೇಳಲಿಲ್ಲ. ಇದರಲ್ಲಿ ಲೆಕ್ಕಪತ್ರಗಳು ಸರಿಯಾಗಿದ್ದರೆ ಸರಿಯಾಗಿರುತ್ತದೆ ಇಲ್ಲದಿದ್ದರೆ ಕಷ್ಟವಾಗುತ್ತದೆ. ಸೆಕ್ಷನ್ 17 (ಇ) ಪ್ರಕಾರ ಒಂದು ಲಕ್ಷದೊಳಗೆ ವಹಿವಾಟು ಇರತಕ್ಕ ವ್ಯಾಪಾರಸ್ಥರಿಗೆ ಇದರಿಂದ ತುಂಬಾ ಅನನು

ಕೂಲವಾಗುತ್ತದೆ. ನಮ್ಮ ಮಂಗಳೂರಿಗೆ ಈಗ್ಗೆ ಕೆಲವು ದಿನಗಳ ಹಿಂದೆ ಗುಜರಾತ್ ರಾಜ್ಯದ ಫೈನಾನ್ಸ್ ಮಿನಿಸ್ಟರವರು ಬಂದಿದ್ದರು. ಅವರು ಇಲ್ಲಿ ಬಂದಿದ್ದಾಗ ಸೇಲ್ಸ್‌ಟ್ಯಾಕ್ಸ್ ಎಚಾರವಾಗಿ ಮಾತನಾಡುತ್ತಾ ಅವರು ಬಹಳ ಸುಲಭ ರೀತಿಯ ಟ್ಯಾಕ್ಸ್ ಸ್ಟ್ರಕ್ಚರು ಮಾಡಬೇಕೆಂದು ಇದ್ದೇವೆ, ಇದನ್ನು ದೇಶದ ಎಲ್ಲಾ ಕಡೆಗಳಲ್ಲಿಯೂ ಅನುಸರಿಸಿದರೆ ಕನ್‌ಸ್ಯೂಮರ್ ಗುಡ್ಸ್ ತೆಗೆದು ಕೊಳ್ಳುವವರಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿದರು. ಟ್ಯಾಕ್ಸ್ ಹೇಗೆ ಹಾಕಬೇಕು ಎನ್ನುವುದರ ಬಗ್ಗೆ ಅವರು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. The consumer should not feel that any tax is collected from him. ಇದು ಟ್ಯಾಕ್ಸ್‌ನ ತತ್ವಕ್ಕೇ ವಿರೋಧವಾಗುತ್ತದೆ. ಇದರಲ್ಲಿ ಹತ್ತು ಸಾವಿರದೊಳಗೆ ಒಬ್ಬರ ಟರ್ನ್ ಓವರು ಇದ್ದರೆ ಅವರಿಗೆ ವರ್ಷಕ್ಕೆ ನೂರಾರು 33 ರೂಪಾಯಿಗಳಷ್ಟು ಟ್ಯಾಕ್ಸ್ ಬೀಳುತ್ತದೆ. ಇದರ ಬಗ್ಗೆ ಸರಕಾರ ನಿರ್ದಿಷ್ಟವಾದ ನಿಯಮವನ್ನು ಮಾಡಬೇಕಾಗಿತ್ತು. ಪರಿಮಿತಿಯನ್ನು ನೂರಾರು 25 ಸಾವಿರ ಎಂದು ಇಟ್ಟರೆ ಆಗ ವರ್ತಕರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಈಗ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ಒಂದು ಸಾವಿರ ರೂಪಾಯಿ ವ್ಯಾಪಾರ ಮಾಡುವವನನ್ನು ಅವನ ಪರ್ಚೇಸ್ಸು ಬಿಲ್ಲುಗಳೆಲ್ಲಿ ಎಂದು ಕೇಳುತ್ತಾರೆ. ಒಬ್ಬ ಸಣ್ಣ ತರಕಾರಿ ವ್ಯಾಪಾರ ಮಾಡುವವನು ಬಿಲ್ಲುಗಳನ್ನು ಹೇಗೆ ತಾನೆ ತಂದು ಇಡಲು ಸಾಧ್ಯ ? ಅಲ್ಲದೆ ಬೋರ್ಡಿಂಗ್ ಹಾಗೂ ಲಾಡ್ಜಿಂಗು ಹೋಟೆಲು ಮಾಲೀಕನಿಗೆ ಹತ್ತು ಸಾವಿರ ಟರ್ನ್ ಓವರ್ ಇದೆ ಎಂದು ಇಟ್ಟುಕೊಳ್ಳೋಣ. ಅವನು ತರಕಾರಿ ಹಾಗೂ ಕಟ್ಟಿಗೆಗಳಿಗೆ ಬಿಲ್ಲುಗಳನ್ನು ಎಲ್ಲಿಂದ ತಾನೇ ತರುತ್ತಾನೆ ? ಅವನಲ್ಲಿ ಬಿಲ್ಲುಗಳಿಲ್ಲದಿದ್ದರೆ ಅವನ ರೆಕ್ಕ ತಪ್ಪು ಎಂದು ಹೇಳುತ್ತಾರೆ. ತರಕಾರಿ ಮಾರುವವನೇ ಆಗಲೀ ಹೋಟೆಲು ಇಟ್ಟುಕೊಂಡು ಸಣ್ಣ ವ್ಯವಹಾರ ಮಾಡುವವರು ಕಟ್ಟಿಗೆ, ತರಕಾರಿ ಇತ್ಯಾದಿ ಸಾಮಾನುಗಳಿಗೆ ಬಿಲ್ಲುಗಳನ್ನು ಹೇಗೆ ತಾನೇ ತರಲು ಸಾಧ್ಯ ? ಇದನ್ನು ಸರಕಾರ ಎಚಾರಮಾಡಬೇಕು. ಪಾನ್‌ಬೀಡಾ ಅಂಗಡಿ ಇಟ್ಟುಕೊಂಡಿರುವ ಒಬ್ಬ ಸಣ್ಣ ವರ್ತಕನೂ ಕೂಡ ನಿಮ್ಮ ಕಾನೂನು ಪ್ರಕಾರ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕು. Otherwise ' at any time he is liable to be sent to the jail '. ಯಾರೋ ಒಬ್ಬರು ಒಂದು ಬೀಡಾ ಅಥವಾ ಒಂದು ಸಿಗರೇಟನ್ನು ಕೇಳಿದರೆ ಅವನಿಗೆ ಅವನು ಬಿಲ್ ಕೊಡಬೇಕು ಎಂದು ಹೇಳಿದರೆ ಹೇಗೆ ?

ಹೋಗಿ ಅಲ್ಲಿ ವಿಚಾರಣೆ ಆಗಬೇಕು ಎಂಬುದು ನನ್ನ ಇಷ್ಟ ಇದೆ. ಅಲ್ಲಿ ನಾನು ಕೊಡುವ ವಿವರಣೆ ಯಿಂದ ಮುಂದೆ ಉಪಯೋಗವಾಗಬಹುದು. ಒಬ್ಬ ಮಾನ್ಯ ಸದಸ್ಯರು ಮತ್ತೊಬ್ಬ ಮಾನ್ಯ ಸದಸ್ಯರಿಗೆ ಈ ಮನೆಯ ಒಳಗೆ ಮತ್ತು ಹೊರಗೆ ಬೆದರಿಕೆ ಹಾಕಬಾರದು ಅವಹೇಳನ ಮಾಡ ಬಾರದು, ಇತ್ಯಾದಿ, ಇತ್ಯಾದಿ, ಅವರೊಂದಿಗೆ ವರ್ತಿಸಬಾರದು ಎಂಬುದನ್ನು ನಾನು ಬಲ್ಲೆ. ಆ ರೀತಿ ಮಾಡಿದವರಿಗೆ ಏನು ಶಿಕ್ಷೆ ಇದೆ ಎಂಬುದು ನನಗೆ ಗೊತ್ತಿಲ್ಲ. ಪ್ರಿವಿಲೇಜ್ ಕಮಿಟಿ ಇಂತಹ ಘಟನೆಗಳ ಬಗ್ಗೆ ಏನು ಶಿಕ್ಷೆ ಕೊಟ್ಟಿದೆ ಎಂಬುದು ಸಹ ನನಗೆ ಗೊತ್ತಿಲ್ಲ. ಬರ್ಮಾದ ಅಂಗ್‌ಸೌನ್‌ಗೆ ಗುಂಡುಹಾಕಿದವನಿಗೆ ಏನು ಶಿಕ್ಷೆ ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ. ಇಂತಹ ಸಣ್ಣ ಪುಟ್ಟ ವಿಷಯಗಳ ಬಗ್ಗೆ ಮಾತನಾಡಬಾರದು. ಈ ಶಾಸನ ಸಭೆಯಲ್ಲಿ ವ್ಯವಹಾರ ಹೇಗಿದೆ ಎಂದರೆ ಪ್ರೈಮರಿ ಶಾಲೆಗಳ ಮಕ್ಕಳು ಶಾಲೆಗಳಲ್ಲಿ ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು ನನ್ನ ಪೆನ್ಸಿಲ್ ಕದ್ದರು, ನನ್ನನ್ನು ಇವರು ಹಿಗುಟಿದರು ಎನ್ನುವಂತೆ ಇಲ್ಲಿ ಆಗುತ್ತಿದೆ ಎಂದು ನನಗನಿಸು ತ್ತಿದೆ. ಏಕೆಂದರೆ ನಾವು ಇಲ್ಲಿ ವಾದ ವಿವಾದಗಳನ್ನು ಮಾಡುವಾಗ ಕೆಲವು ಶಬ್ದಗಳನ್ನು ಈ ಸಭೆಯ ಒಳಗಡೆ ಉಪಯೋಗಿಸಬಾರದು. ಆದರೆ ಇದನ್ನು ಸಭೆಯ ಅಧ್ಯಕ್ಷರ ಕಿವಿಗೆ ಕೇಳದಂತೆ ಇನ್ನೊಬ್ಬ ಸದಸ್ಯರಿಗೆ ಕಿವಿಯಲ್ಲಿ ಇಲ್ಲಿ ಹೇಳಬಹುದು ಎಂದು ನಾನು ಅಂದುಕೊಂಡಿದ್ದೇನೆ. ಮತ್ತು ಇಂತಹ ಶಬ್ದಗಳು ರಿಕಾರ್ಡಿಗೂ ಹೋಗಬಾರದು ಮತ್ತು ಕಾರ್ಯಕಲಾಪಗಳಿಗೆ ಅಡ್ಡಿ ಯಾಗುವಂತೆ ಇಲ್ಲಿ ವಾದ ಮಾಡಬಾರದು. ಆದರೆ ಯಾರಾದರೂ ಒಂದು ನಿರ್ಣಯ ತಂದು ಅದನ್ನು ಒಪ್ಪಿಕೊಳ್ಳಬೇಕು ಎಂದು ಸದಸ್ಯರಿಗೆ ಅವಮಾನವಾಗುವಂತಹ ಪ್ರಯತ್ನ ಮಾಡಬಾರದು. ಇದನ್ನು ಕಮಿಟಿಯಲ್ಲಿ ವಿಚಾರ ಮಾಡಿ ಈ ಬಗ್ಗೆ ಶಿಕ್ಷೆ ಕೊಡುವುದು ಬಿಡುವುದು ಅವರಿಗೆ ಸೇರಿದ್ದು ಎಂದು ನಾನು ಹೇಳುವುದು ಇಷ್ಟು.

4-00 P.M.

Sri M. RAMAPPA.—Sir, it is not necessary to put it to the House. Sri S. Gopala Gowda has no objection for the matter to go before the Privileges Committee.

Mr. SPEAKER.—The Hon. Member Sri Hegde has asked for leave to make his motion.

HON. MEMBERS.—We are opposed to it.

Mr. SPEAKER.—Does the House permit Sri Hegde to raise a privilege motion ?

Sri M. S. KRISHNAN.—No.

Mr. SPEAKER.—It is for the House to decide. If 10 members rise in their seats permission will have to be granted.

(*More than 10 Hon. Members stood up*)

Mr. SPEAKER.—Leave is granted I will read rule 181 :

> "If leave under rule 180 is granted, the Assembly may consider the question and come to a decision or refer it to a Committee of Privileges on a motion made either by the member who has raised the question of privilege or by any other member".

Now two courses are open. The House may consider this and dispose it of or the motion may be referred to a Privileges Committee.

Sri S. SIVAPPA.—I suggest that this be discussed in the House.

Sri K. H. SRINIVASA.—I move that this matter be referred to the Privileges Committee.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, ಪ್ರಿವಿಲೇಜು ಕಮಿಟಿಗೆ ರೆಫರು ಮಾಡುವುದಕ್ಕೆ ಇಂದು ಸಭೆಯಲ್ಲಿ ಅಂತಹ ಅಸಾಧಾರಣವಾದ ಪರಿಸ್ಥಿತಿಗೆ ಸಂಬಂಧಿಸಿದ ವಿಷಯವೇನೂ ಇಲ್ಲ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದನ್ನು ಈಗ ಪ್ರಿವಿಲೇಜು ಕಮಿಟಿಗೆ ಕಳುಹಿಸುವ ಅವಶ್ಯಕತೆ ಇದೆ ಎಂದು ನನಗೆ ತಿಳಿಯುವುದಿಲ್ಲ. ಇದನ್ನು ಈ ಸಭೆಯಲ್ಲಿಯೇ ತೀರ್ಮಾನಿಸಬೇಕು. ಅಲ್ಲದೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಹೆಗ್ಗಡೆಯವರು ಕೊಟ್ಟಿರುವ ನೋಟೀಸನ್ನು ವಿತ್‌ಡ್ರಾ ಮಾಡಬೇಕೆಂದು ನಾನು ಅವರಲ್ಲಿ ಕೇಳುತ್ತೇನೆ.

Mr. SPEAKER.—I shall put the motion to the House.

Sri S. SIVAPPA.—Sir, there is a suggestion from the Hon. Member Sri H. B. Jwalaniah.

ಶ್ರೀ ಪಾಟಾಳ್ ನಾಗರಾಜ್.—ಸ್ವಾಮಿ, ಇಷ್ಟು ಅವಸರವಾಗಿ ಏಕೆ ತೆಗೆದುಕೊಳ್ಳಬೇಕು. ಇದನ್ನು ಮಾನ್ಯ ಸದಸ್ಯರು ವಿತ್‌ಡ್ರಾ ಮಾಡುತ್ತಾರೆ. ಇದಕ್ಕಾಗಿ ತಾವು ಒಂದು ದಿನ ಅವಕಾಶ ಕೊಡಿ.

Sri B. BHASKAR SHETTY.—I request the Chair to take up this tomorrow.

Mr. SPEAKER.—Please read rule 181.

I shall give five minutes. In the meanwhile, we shall take up the next item.

Sri K. H. SRINIVASA.—I am on a point of order. I have moved the motion that this be referred to the Privileges Committee. Under the Rules of Procedure my motion should be given precedence.

Sri M. RAMAPPA.—The Chair is pleased to give some time. I request all those members who are trying to pursuade the Hon. Member to go outside to pursuade him.

Calling Attention to matters of Urgent Public Importance

(*i*) *re* : Cholera Epidemic in Hubli-Dharwar Area

Sri B. B. SAYANAK (Belgaum).—I call the Attention of the Minister for Health to the Cholera epidemic in Hubli Dharwar Area.

Sri K. PUTTASWAMY (Minister for Law, Labour and Parliamentary Affairs).—Sir in reply to this calling attention notice. there were 11 attacks and 6 deaths due to cholera and 192 attacks and 10 deaths due to Gastroenteritis in Hubli-Dharwar Municipal Corporation from 14-7-1969 to 18-8-1969 as per reports received from the Medica Officer of Health, Hubli-Dharwar Municipal Corporation.

The last case of cholera was reported on 11-8-1969 and the last death due to cholera was reported on 5-8-1969.

(SRI K. PUTTASWAMY)

As regards preventive measures undertaken there, 84,477 anti-cholera inoculations were performed and 1,735 houses were disinfected and the cases were treated in Karnatak Medical College Hospital and other dispensaries.

As regards the rural areas of Dharwar district, 6 villages in 5 taluks of Dharwar district were infected by cholera. There were 19 attacks and 10 deaths due to cholera. The last attack and last death reported occurred on 12-8-1969. 9,779 anti-cholera inoculations have been carried out.

All the necessary preventive measures have been undertaken and are being continued. All the Medical Officers of Health and the Para Medical personnel have been instructed to keep a vigilant watch on the occurrence of the cases and to take immediate preventive measures.

(*ii*) *re*: Srlae by Workers of the Gokak Mills Limited

SRI L. S. NAIK (Gokak).—Sir, I call the attention of the Minister for Law, Labour and Parliamentary Affairs to the strike by the workers of the Gokak Mills Limited from 16-1-1969.

SRI K. PUTTASWAMY.—The Hon'ble Member wishes to call my attention to the strike by the labourers of Gokak Mills Limited. Gokak Falls, Belgaum District from 16-8-1969.

For the year 1968, the management declared a bonus of 4 per cent and had also made arrangements to disburse the same. In addition to this normal bonus (which was at the minimum rate required by law) the management also declared an *Ex-Gratia* Bonus equivalent to 1/12th of the basic wages to all workers in connection with the Golden Jubilee Celebrations of the Mills. It is pertinent to note that the normal bonus is based on calculations prescribed by the Payment of Bonus Act itself, subject however, to a minimum of 4 per cent and a maximum of 20 per cent. It may be stated also that the management had supplied copies of the Balance Sheet for the year 1968 and made available details of calculation of bonus for that year-to all the registered Trade Unions connected with the Mill.

The workers, however, alleged that the Company's profits for the year 1968 were Rs. 89 lakhs, and dissatisfied with the quantum of bonus declared, they resorted to a lightning stay-in-strike from 4-30 P.M. on 16-8-1969. The Gokak Girani Rastria Mazdoor Sangh and the Girani Rashtria Kamgar Sangh had approached the Conciliation Officer in this behalf demanding 20 per cent bonus for the year 1968.

There are 5 registered Trade Unions connected with the Mills. Sri A. H. Desai who is reported to have sponsored the strike is the President of the now defunct Textile Labour Union. In Addition to

the demand of 20 per cent bonus, Sri Desai also urged for immediate settlement of the dispute regarding Dearness Allowance which has been remanded to the Industrial Tribunal by the High Court of Mysore.

The Assistant Labour Commissioner, Belgaum Division, Hubli took up the matter in conciliation. The Trade Union representative informed him that they had not sponsored the strike and expressed their inability to persuade the workers to call of the strike, as the workers were not prepared to do so, unless the management agree to pay more bonus for 1968. The conciliation proceedings, therefore, ended in failure and a report to this effect was submitted by the Commissioner of Labour.

During my visit to Belgaum on 30th August 1969, I also discussed this matter with the management and the representatives of the Trade Unions and tried to settle the matter amicably. I regret to state that my efforts did not yield any fruit.

It would not be desirable to allow the present situation to continue any further, as it would expose the management to further heavy financial losses; deprive the country of foreign exchange earnings; and also badly affect the workmen themselves, in so far as they would stand to lose the wages for the period for which they have stayed away from work.

After making a careful assessments of the situation and taking all aspects of the matter into consideration, Government have issued orders to-day (1) referring the dispute to adjudication under Section 10 (1) of the Industrial Dispute Act and (2) prohibiting the continuance of the strike under Section 10 (3) of the Act.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮೊದಲನೆಯದಾಗಿ ಮಾನ್ಯ ಮಂತ್ರಿಗಳಲ್ಲಿ ಒಂದೇ ಒಂದು ವಿಷಯ ಕೇಳಬೇಕಾಗಿದೆ. 16-8-1968ರಿಂದ ಈ ತಿಂಗಳ ಕೊನೆಯವರೆಗೂ ಕೂಡ ಒಂದು ಮುಷ್ಕರವನ್ನೂ ನಹ ನಡೆಸುವುದಕ್ಕೆ ಸರ್ಕಾರ ಅವಕಾಶ ಕೊಡುತ್ತಾ ಇಲ್ಲ. ಇದಕ್ಕಿಂತ ಮುಂಚೆಯೇ ಸಂಬಂಧಪಟ್ಟ ಕಾರ್ಮಿಕ ಪ್ರತಿನಿಧಿಗಳನ್ನು ಮತ್ತು ಮಾಲೀಕರನ್ನೂ ಮಂತ್ರಿಗಳು ಕರೆಸಿ ಮಾತನಾಡುವುದಕ್ಕೆ ಆಗುತ್ತಾ ಇರಲಿಲ್ಲವೇ! ಇದು ಸರ್ಕಾರದ ಧೋರಣೆಗೆ ವಿರುದ್ಧವಾಗಿದೆ ಎಂದು ಹೇಳುತ್ತೇನೆ.

ಎರಡನೆಯದಾಗಿ ಆಕ್ಷೇಪಣಾರ್ಹವಾದ ವಿಷಯ ಏನೆಂದರೆ ಈ ಸ್ಟೇಟ್‌ಮೆಂಟಿನಲ್ಲಿ Sri Desai is the President of the now defunct Labour Union ಎಂದು ಹೇಳುತ್ತಾರೆ. ಅಂದರೆ ಒಂದು ಕಡೆ ದೇಸಾಯಿ ಅವರು ಈ ಕೃಪಾಸಿಟಿಯಲ್ಲಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಅವರ ಮಾತನ್ನು ಕೇಳಿ ಮುಷ್ಕರ ಹೂಡಿದ್ದಾರೆಂದು ಹೇಳುತ್ತಾರೆ. ಹೀಗಾದರೆ defunct ಆಗುವುದಕ್ಕೆ ಸಾಧ್ಯ ಇಲ್ಲ. ಇಲ್ಲವೇ ಯೂನಿಯನ್ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿರಬೇಕು. ಇಲ್ಲದಿದ್ದರೆ defunct ಅನ್ನುವ ಪದ ಹೇಳಿರುವುದು ಸರಿಯಾಗಿಲ್ಲ ಎಂದು ಹೇಳ ಬೇಕಾಗಿದೆ.

Sri K. PUTTASWAMY.—The registration has been cancelled. In my statement I have made it very clear that it was a lighting strike and nobody knew about it. So, there was no question of Government trying to know whether there was a strike brewing and sending for the Concerned.

Mysore Village Panchayats and Local Boards (Amendment) Bill, 1969

(*Introduction*)

Sri B. L. GOWDA (Deputy Minister for Co-operation).—Sir, I beg to introduce the Mysore Village Panchayats and Local Boards (Amendment) Bill, 1969, 1969.

Mr. SPEAKER.—The Bill is introduced.

Mysore Irrigation (Levy of Betterment Contribution and Water Rate) (Amendment) Bill, 1969)

(*Introduction*)

Sri D. PARMESWARAPPA (Deputy Minister for Major Irrigation).—Sir, I beg to introduce the Mysore Irrigation (Levy of Betterment Contribution and Water Rate) (Amendment) Bill, 1969.

Mr. SPEAKER.—The Bill is introduced.

Mysore Public Premises (Eviction of Unauthorised Occupants) (Amendment) Bill 1969

(*Introduction.*)

Sri H. V. KOUJALGI (Minister for Revenue).—Sir, I beg to introduce the Mysore Public Premises (Eviction of Unauthorised Occupants) (Amendment) Bill, 1969.

Mr. SPEAKER.—The Bill is introduced.

Mysore Land Revenue (Second Amendment) Bill, 1969

(*Introduction*)

Sri H. V. KOUJALGI.—Sir, I beg to introduce the Mysore Land Revenue (Second Amendment) Bill, 1969.

Mr. SPEAKER.—The Bill is introduced.

Mysore Appropriation (No. 4) Bill, 1969

(Introducction)

Sri K. PUTTASWAMY (Minister for Law, Labour and Parliamentary Affairs).—On behalf of the Hon. Finance Minister, Sir, I beg to introduce the Mysore Appropriation (No. 4) Bill, 1969.

Mr. SPEAKER.—The Bill is introduced.

Mysore Appropriation (No. 4) Bill, 1969

Motion to Consider

Sri K. PUTTASWAMY.—Sir, I beg to move :

"That the Mysore Appropriation (No. 4) Bill, 1969 be taken into consideration."

Mr. SPEAKER.—Motion Moved :

"That the Mysore Appropriation (No. 4) Bill, 1969 be taken into consideration.'

† Sri K. PUTTASWAMY.—Sir, the House has debated these Demands for two days and the Hon. Finance Minister has given convincing reply. So, I request the House to take this Bill into consideration.

Mr. SPEAKER.—The question is :

"That the Mysore Appropriation (No. 4) Bill, 1969 be take into consideration."

The motion was adopted.

Mr. SPEAKER.—The question is :

"That clauses 2 and 3, do stand part of the Bill."

The motion was adopted.

Clauses 2 and 3, were added to the Bill.

Mr. SPEAKER.—The question is :

"That the Schedule, Clause 1, the Long Title and Enacting formula do stand part of the Bill."

The motion woas adopted.

Schedule, Clause 1, the Long Title and Enacting formula were added to the Bill.

Motion to pass

Sri K. PUTTASWAMY.—I move :

"That the Mysore Appropriation (No. 4) Bill, 1969, be passed."

Mr. SPEAKER.—The question is :

"That the Mysore Appropriation (No. 4) Blll, 1969, be passed."

The House divided.

Mr. SPEAKER.—The result of the Division is :

Ayes : 76
Noes : 52

The " Ayes" have it.

The motion was adopted.

Formation of a Committee for Scheduled Castes and Schedule Tribes

Sri J. P. SARWESH (Serum).—Sir, some days back it was announced by the Government that the Cabinet has taken a decision to appoint a Committee of Legislators to go into the problems of Scheduled Castes and Schedule Tribes. As the Chief Minister is here in the House I request through you that this Committee may be constituted before the present session of the House adjourns.

Sri AZEEZ SAIT.—Sir, you just now announced the result of the Division as 76 for Ayes and 52 for Noes. You failed to say that one member was neutral as he kept on sitting without voting either for Ayes or for Noes.

Mr. SPEAKER.—It is not necessary that he should vote. Rules do not say so.

Notice of Privilege Motion given by Sri R. M. Hegde

(Contd.)

ಶ್ರೀ ವಾಟಾಳ್ ನಾಗರಾಜ್.—ಶ್ರೀ ಹೆಗಡೆಯವರು ಶ್ರೀ ಗೋಪಾಲಗೌಡರಮೇಲೆ ತಂದಿರುವ ಹಕ್ಕುಭಾದ್ಯತೆ ನಿರ್ಣಯದ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಅದನ್ನು ತಿಳಿಸಲು ಅವಕಾಶಮಾಡಿಕೊಡಬೇಕು.

Mr. SPEAKER.—It is for the hon. Member to say. Now the House is seized of the matter. I am not calling upon any hon Member, but it is for the hon. Member to stand up and say. Even then the question will have to be put to the. House for leave to withdraw the motion and if the House grants leave he can withdraw.

ಶ್ರೀ ಆರ್. ಎಂ. ಹೆಗಡೆ.—ಮಾನ್ಯ ಸಭಾಪತಿಗಳೇ, ನಾನು ಹೊರಗೆ ಹೋಗಿ ರಾಬಿಯಲ್ಲಿ ನನ್ನ ಮಿತ್ರರ ಸಂಗಡ ಮಾತನಾಡಿ ಒಂದು ನಿರ್ಣಯಕ್ಕೆ ಬಂದಿದ್ದೇನೆ. ಶ್ರೀ ಗೋಪಾಲಗೌಡರೂ ನಾನೂ ಭೇಟಿಯಾಗಿ ಒಂದು ತೀರ್ಮಾನಕ್ಕೆ ಬಂದಿರುವಂತೆ ನಾನು ಕೊಟ್ಟಿರುವ ಪೋಷನ್ನನು ನಾನು ಪ್ರೆಸ್‌ಮಾಡುವುದಿಲ್ಲ. ಅದನ್ನು ವಾಪಸು ಪಡೆಯಲು ಅನುಮತಿ ಬೇಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ನಾನೊಂದು ಮನವಿಮಾಡುತ್ತೇನೆ. ಈಗಾಗಲೇ ನರ್ವೇಶ್‌ರವರು ತಿಳಿಸಿದ್ದಾರೆ. ಮುಖ್ಯ ಮಂತ್ರಿಗಳಿದ್ದಾರೆ, ಸರಕಾರ ಒಂದು ತೀರ್ಮಾನ ಮಾಡಿದೆ, 20 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ನಿಮ್ನವರ್ಗಕ್ಕೆ ಆಗಿರುವ ಅನುಕೂಲ ಮತ್ತು ಅನಾನುಕೂಲ ವಿಮರ್ಶೆಮಾಡಲು ಒಂದು ಸಮಿತಿಮಾಡಲು ರಾಜ್ಯ ಸರಕಾರ ಆರ್ಡರ್ ಮಾಡಿರುವುದಾಗಿ ಪ್ರಕಟವಾಗಿದೆ. ಸುಮಾರು ಎಂಟು ದಿವಸಗಳಲ್ಲಿ ಸಮಿತಿ ರಚಿಸುವುದಾಗಿ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಆ ವಿಚಾರದಲ್ಲಿ ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4-30 P.M.

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಅಧ್ಯಕ್ಷರೇ, ಈ ಷೆಡ್ಯೂರ್ ಕ್ಯಾನ್ಸ್ ಮತ್ತು ಜ್ಯೆಬ್ಸ್‌ನ ಬಗ್ಗೆ ಈ ಮನೆಯ ಮತ್ತು ಮೇಲ್ಮನೆಯ ಕೆಲವು ಸದಸ್ಯರು ಒಂದು ಕಮಿಟಿ ಆಗಬೇಕೆಂದು ಅನ್ನುವಂತಹ ಒಂದು ನಿರ್ಣಯ ಮಾಡಿದ್ದೇವೆ. ಆ ಕಮಿಟಿ ಎಷ್ಟು ಜಾಗ್ರತೆ ಆದರೆ ಅಷ್ಟೂ ನಮಗೆ ಸಂತೋಷವಾಗುತ್ತದೆ. ನಾವು ಆ ಕಮಿಟಿ ಮಾಡಬೇಕಾದರೆ ರೂಲ್ಸ್ ಅಮೆಂಡ್ ಮಾಡಬೇಕಾಗಿದೆ ಎಂಬ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಮಾಡಬೇಕಾದರೆ ರೂಲ್ಸ್ ಅಮೆಂಡ್ ಮಾಡಿಯೇ ಮಾಡಬೇಕಾಗುತ್ತದೆ. ಇಲ್ಲ ಮತ್ತೆ ಯಾವುದೇ ರೀತಿಯಿಂದ ಮಾಡುವುದಕ್ಕೆ ಸಾಧ್ಯವಿದ್ದರೆ ಆ ರೀತಿಯಿಂದ ಮಾಡುವುದಕ್ಕೆ ವಿಚಾರ ಮಾಡುತ್ತೇವೆ. ಈ ಮಾನ್ಯ ಸಭೆಗೆ ಸ್ಪಷ್ಟವಾಗಿ ಹೇಳುವಂತಹದು ಏನೆಂದರೆ ನಾವು ಯಾವ ರೀತಿಯಿಂದ ನಿರ್ಣಯ ಮಾಡಿದ್ದೇವೆ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬ ಆತುರತೆ ನಿಜವಾಗಿಯೂ ಇದೆ, ಮುಂದೆ ಹಾಕಬೇಕೆಂದು ಇಲ್ಲ. ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತಾ ಇದ್ದೇನೆ. ರೂಲ್ಸ್ ಅಮೆಂಡ್ ಮಾಡಬೇಕಾದರೆ ಮಾಡೋಣ, ಮತ್ತೆ ಯಾವುದಾದರೂ ರೀತಿಯಿಂದ ಮಾಡುವುದಕ್ಕೆ ಸಾಧ್ಯವಾದರೆ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡೋಣ.

General Discussion on the Annual Financial Statement of the M.S.E.B. for 1969-70

Sri D PARAMESHWARAPPA.—(Deputy Minister for Major Irrigation and Electricity) : Sir, I beg to move :

> "That the Annual Financial Statement of the Mysore State Electriccity Board for the year 1969-70 laid on the table of the House on 1st April 1969 be taken into consideration."

Mr. SPEAKER.—Motion moved :—

> "That the Annual Financial Statement of the Mysore State Electricity Board for the year 1969-70 laid on the Table of the House on 1st April 1969 be taken into consideration."

Sri M. NAGAPPA.—Sir, I have sent a substituted motion under Rule 279, and I may be permitted to move that motion.

Mr. SPEAKER.—Yes.

Sri M. NAGAPPA.—Sir, I move :

"That this House expresses its deep concern over the imposition of surcharge from 13th April 1969 and requests the Board to revise its decision."

Mr. SPEAKER.—Motion moved :

"That this House expresses its deep concern over the imposition of surcharge from 13th April 1969 and requests the Board to revise its decision."

(MR. DEPUTY SPEAKER in the Chair)

Sri H. N. NANJE GOWDA.—I want a clarification, Sir. ಈ ಅನ್ಯುಯರ್ ಫೈನಾನ್‌ಷಿಯಲ್ ಸ್ಟೇಟ್‌ಮೆಂಟನ್ನು ಫಸ್ಟ್ ಏಪ್ರಿಲ್ 1969ರಲ್ಲಿ ಈ ಸಭೆಯ ಮುಂದೆ ಮುಂಡಿಸ ಲಾಯಿತು, ತದನಂತರ ಅಂದರೆ ಏಪ್ರಿಲ್ 13ರಂದು ಟ್ಯಾರಿಫ್ ರೇಟ್ ರಿವೈಸ್ ಮಾಡಿ ಒಂದು ಹುಕುಂನ್ನು ವಿದ್ಯುಚ್ಛಕ್ತಿ ಮಂಡಲಿಯವರು ಹೊರಡಿಸಿದರು. ಅದರ ಪರಿಣಾಮ ಏನು ಎಂಬುದು ನಮಗೆ ಆಗ ಗೊತ್ತಾಗಲಿಲ್ಲ. ಅದರಿಂದ ಏರಿಕೆಯಾದಂತಹ ಹಣ ಎಷ್ಟು? ಅದರಿಂದ ಅವರು ಕೈಗೊಳ್ಳಬಹುದಾದಂತಹ ಅಭಿವೃದ್ಧಿ ಕಾರ್ಯಕ್ರಮಗಳೇನು ಎಂಬ ಮುಂತಾದ ವಿಷಯಗಳನ್ನು ವಿವರವಾಗಿ ಈ ಸಭೆಯ ಮುಂದೆ ಮುಖ್ಯಮಂತ್ರಿಗಳು ಮಂಡಿಸಲಿಲ್ಲ. Hence it would not be in order to discuss this Financial Statement of the Electricity Board, which was laid on the Table of the House on 1st April 1969. Therefore, I request you, Sir, to direct the Chief Minister or the other Minister to place a modified Financial Statement with details as to what is the effect of the rise in tariff rates, what is the increase on the receipt side, the actual expenditure, and how do they propose to utilise the extra amount they are getting, etc. We may take up the discussion tomorrow after having all the records. That is my objection.

Mr. DEPUTY SPEAKER.—You wanted only a clarification.

Sri H. N. NANJE GOWDA.—Clarification as well as it is my objection.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಅನ್ಯುಯಲ್ ಫೈನಾನ್‌ಷಿಯಲ್ ಸ್ಟೇಟ್‌ಮೆಂಟ್ ಈ ಸಭೆಯಲ್ಲಿ ಚರ್ಚೆಗೆ ಬರುತ್ತದೆ ನಿಜ, ಆದರೆ ವೋಟಿಂಗಿಗೆ ಬರುವುದಿಲ್ಲ. ರೂಲ್ಸ್ ಪ್ರಕಾರ ಅವರು ಪ್ರತಿವರ್ಷ ಈ ಸಭೆಯ ಮುಂದೆ ಇಡಬೇಕಾದ್ದು ಅವರ ಕರ್ತವ್ಯ ಆ ಪ್ರಕಾರ ಇಟ್ಟಿದ್ದಾರೆ. ತಮ್ಮ ಅಭಿಪ್ರಾಯಗಳನ್ನು ಅವರು ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಟ್ಯಾರಿಫ್ ಹೆಚ್ಚು ಮಾಡಿದ್ದರಿಂದ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಸಭೆಗೆ ತಿಳಿಸಿದರೆ ಅನುಕೂಲವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಚರ್ಚೆ ಪ್ರಾರಂಭ ಮಾಡಿ, ವಿಚಾರಗಳನ್ನು ವ್ಯಕ್ತಮಾಡಿ ಆದನ್ನೆಲ್ಲಾ ರಿಪ್ಲೈನಲ್ಲಿ ಹೇಳುತ್ತೇನೆ. ಮೊದಲೇ ರಿಪ್ಲೈಮಾಡಿ ಮುಗಿಸಿ ಅನಂತರ ಚರ್ಚೆ ಮಾಡುತ್ತೇವೆ ಎಂದರೆ ಅದು ಆಗುವುದಿಲ್ಲ. ತಾವು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು, ಅದಕ್ಕೆ ಕೊನೆಯಲ್ಲಿ ಉತ್ತರ ಹೇಳುತ್ತೇನೆ.

Sri H. N. NANJE GOWDA.—We have to discuss the Financial Statement of the Electricity Board The Hon. Chief Minister is saying that we are not here to pass it. I am not entering into the technical details. The Financial Statement was laid on the Table of the House on 1st April 1969, and after 13 days the tariff rates were increased. We do

not know the implications ; we do not know the compelling reasons for the increase ; we do not know what is the increase on the receipt side. Let the Hon. Chief Minister explain the detai's as an introductory talk. Let us know whether the Electricity Board has examined all these aspects before rising the rates. Without all this information, we are left in darkness.

ಶ್ರೀ ಎಚ್. ಬಿ. ಜ್ವಾಲನಯ್ಯ.—ಟ್ಯಾರಿಫ್ ರೇಟ್ ಹೆಚ್ಚು ಮಾಡಿದ ಮೇರೆ ರಸೀಟ್ ಸ್ಟೈಡ್ ಮತ್ತು ಎಕ್ಸ್‌ಪೆಂಡೀಚರ್ ಸ್ಟೈಡ್‌ನಲ್ಲಿ ಯಾವ ರೀತಿ ಪರಿಣಾಮವಾಗುತ್ತದೆ ಎಂಬುದನ್ನು ತಾವು ಹೇಳಬೇಕು, ಅದನ್ನು ತಿಳಿದುಕೊಳ್ಳದೇ ಚರ್ಚೆಮಾಡುತ್ತಾ ಹೋದರೆ ಚರ್ಚೆ ಸಂಪೂರ್ಣವಾಗುವುದಿಲ್ಲ.

Sri H. N. NANJE GOWDA.—Sir, I would like to bring to your kind notice that there was not even a hint about the increase in tariff rates in the Financial Statement when it was placed on the Table of the House on 1st April 1969. This House is interested to know as to what prompted them to raise the rates within a span of 13 days.

Sri S. SIVAPPA.—Sir, according to the rules of the Electricity Board, the Budget of the Electricty Board will be prepared in the form prescribed in the rules, and that has to be submitted to the Government before the end of every year as per section 61 of the Electricity Supply Rules, 1958 for being laid before the House. The budget of the Board has to give a clear picture of the budgetary state of affairs of the Board which includes the receipts and revenues of the Board. Unless we know the exact revenues of the Electricity Board for that particular year, there would be no use in discussing the financial statement of the Electricity Board. Therefore we would like to know what exactly is the anticipated revenue and anticipated expenditure of the Electricity Board for the year 1969-70.

Sri VEERENDRA PATIL.—The Financial Statement that has been placed on the table of the House and which is going to be discussed, now consists of all the information. The only information that the hon. Members want to know is in regard to the increase in the tariff so far as I. P. sets servicing is concerned. After it was submitted the Government there has been increase in the tariff so far as I .P. sets servicing is concerned. I know most of the hon. Members would deal with that point and I will be in a position to reply, to all the points that would arise during the course of discussions. Hon. members know that on the rural electrification programmes the Electricity Board is incurring heavy losses and these programmes are not at all remunerative. In order to make good some losses they have increased the tariff rates. The amount of revenue that would accrue due to this increase might be hardly 20 or 22 lakhs of rupees. I will note down all the points that would be raised by the hon. Members and at the end I will be in a position to give effective replies to those points.

Sri H. B. JWALANAIAH.—We want to now the total revenue that would come to the Electricity Board.

Sri VEERENDRA PATIL.—I have not said anything about the total revnues. I have only stated about the revenue that might come to the Electricity Board due to the minimum increase in the tariff of I. P. Sets which may not be more than 20 to 22 lakhs of rupees.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದಲ್ಲಿ 97 ಸಾವಿರ ಐ. ಪಿ. ಸೆಟ್ಸ್ ಇವೆ ಎಂದು ಹೇಳಿದರು. ಅಂದರೆ ಅಂದಾಜು ಒಂದು ಲಕ್ಷ ಐ. ಪಿ. ಸೆಟ್ಸ್ ಎಂದು ಇಟ್ಟುಕೊಂಡರೆ ಒಂದೊಂದು ಐ. ಪಿ. ಸೆಟ್ಟಿಗೂ 4 ಎಚ್. ಪಿ. ಪ್ರಕಾರ ಲೆಕ್ಕ ಹಾಕಿದರೂ ಅಲ್ಲಿಗೆ 4 ಲಕ್ಷ ಹಾರ್ಸ್‌ಪವರ್ ವಿದ್ಯುಚ್ಛಕ್ತಿ ಆಯಿತು. ಒಂದು ಹಾರ್ಸ್ ಪವರ್‌ಗೆ ಒಂದು ರೂಪಾಯಿನಂತೆ ಆದರೂ 4 ಲಕ್ಷ ರೂಪಾಯಿಗಳಾಯಿತಲ್ಲವೇ ?

Mr. DEPUTY SPEAKER.—It is for discussion.

Sri H. N. NANJE GOWDA.—I had given notice of a privilege motion on April 13th which has not yet been disposed of. But the Hon. Speaker gave an assurance that all the information would be placed on the table of the House while the House would take up discussion of the financial statement of the Electricity Board. On that assurance I did not press my notice of privilege. I request the Hon. Chair to fulfil that assurance.

Mr. DEPUTY SPEAKER.—I do not know anything about that.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈಗ ನಮ್ಮ ಮುಂದಿಟ್ಟಿರತಕ್ಕದ್ದು ವಿದ್ಯುಚ್ಛಕ್ತಿಯ ಸಪ್ಲಿಮೆಂಟರಿ ಎಸ್ಟಿಮೇಟ್. ಆದರೆ ಈ ಹಿಂದೆ ಮಾನ್ಯ ನಂಜೇಗೌಡರು ತಂದಿದ್ದ ಮೋಷನ್ ಇದೀ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಹಾಗೆ ಚರ್ಚೆ ಮಾಡಬೇಕೆಂದು. ಇದಕ್ಕೆ ಈಗ ಸರ್ಕಾರದವರು 2 ದಿವಸಗಳ ಅವಕಾಶ ಕೊಡುತ್ತೇವೆಂದು ಹೇಳಿದರೆ ಸಾಲದು. ಇದಕ್ಕೆ ನಾಲ್ಕು ದಿನಗಳನ್ನಾದರೂ ಕೊಡುವುದಾದರೆ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಅದಕ್ಕೆ ಸರ್ಕಾರದವರು ಒಪ್ಪುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ.

Sri H. N. NANJE GOWDA.—If what had been promised by the Chair, is not to be furnished, I will have to press for taking up my privilege motion.

Mr. DEPUTY SPEAKER.—Hon. Members privilege motion is not before the House.

Sri H. N. NANJE GOWDA.—It is on the record as to what assurance had been given by the Hon. Chair during the last session. If we do not have necessary information, how are we to participate in the deliberations ? Are we expected to participate without having the relevant information in the matter ? I am very sorry is the assurance of the hon. Chair is not respected and necessary information is not placed before the House.

Sri D. B. KALMANKAR.—The Budget of the State Electricity Board has increased. We wanted some information which the Government promised to furnish. According to the statement made, there are various heads which we do not understand. We want to know what is the expenditure, what are the receipts of the Board, how do they compare with the old ones and at what rate those are being imposed ? The statement that is given now does not give any idea at all. When that is the position how does the discussion, if held, would be useful ? Our discussion will be artificial and it will have no meaning. Therefore, I

request the Hon. Chair to arrange to furnish all the information about the increase of tarrif rate and how it was implemented.

Sri H. N. NANJE GOWDA.—It is given here as Rs. 18 crores. I want to know the forecast of 1969-70. Should we take that it is a correct statement ?

Mr. DEPUTY SPEAKER.—I am requesting you to speak on this point. The Minister concerned will reply.

Sri D. B. KALMANKAR.—In order to facilitate smooth discussion, we want all the relevant matters before hand. If he wants, he may give an introductory speech.

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ಬೇಕಾದಂಥ ಅವಶ್ಯಕವಾದಂಥ ಡೇಟಾವನ್ನು ಸರ್ಕಾರದವರು ಒದಗಿಸಿಕೊಡಬೇಕು. ಕಾನೂನು ಪ್ರಕಾರ 10 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಈ ಮಾನ್ಯ ಸಭೆಯಲ್ಲಿ 30 ಕೋಟಿ ರೂಪಾಯಿಗಳವರೆಗೆ ಇರಬೇಕೆಂದು ನಿರ್ಣಯ ಮಾಡಿದೆ. ಇವತ್ತು 48 ಕೋಟಿ ರೂಪಾಯಿಗಳವರೆಗೂ ನಿಮ್ಮನ್ನು ಕೇಳದೆ ಕಾನೂನು ವಿರುದ್ಧವಾಗಿ ಉಪಯೋಗಿಸಿಕೊಂಡಿದ್ದಾರೆ. ಅಂತಹ ಅವ್ಯವಹಾರವನ್ನು ವಿದ್ಯುಚ್ಛಕ್ತಿ ಮಂಡಲಯವರು ಮಾಡುತ್ತಿದ್ದಾರೆ. ಅದನ್ನು ವಿಚಾರ ಮಾಡಬೇಕು. The M.S.E.B. is not authorised to draw so much of loan. According to annual statement, the receipt is not according to law. There is hundred per cent increase in loan and revenue.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಇಂತಹ ಪರಿಸ್ಥಿತಿ ಇದೆ. ನಾನು ಈ ಸಭೆಗೆ ಬಂದು 8 ವರ್ಷಗಳಾಗಿವೆ. ಒಂದು ವರ್ಷವೂ ಎಂ. ಎಸ್. ಇ. ಬಿ. ಬಗ್ಗೆ ಈ ರೀತಿಯಾಗಿ ಚರ್ಚೆಯಾಗಲಿಲ್ಲ. ಇವತ್ತು ಎಂ. ಎಸ್. ಇ. ಬಿ. ಅಟಾನಮಸ್. ಬಾಡಿಯಾಗಿರುವುದರಿಂದ ಈ ಸಭೆಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ ಇದರಿಂದ ಅದು ಆಗಿದ್ದೇ ಆಟ. ನಾವು ನೋಡುತ್ತಾ ಇದ್ದೇವೆ. ಇವತ್ತು ಸರ್ಕಾರದವರು ಅಪ್ಪಣೆ ಕೊಡಿಸಿರುವ ಹಾಗೆ ಟ್ಯಾರಿಫ್ ರೇಟ್ ಮಿನಿಮಂ ಸೇಕಡ 100ರಷ್ಟು ಜಾಸ್ತಿ ಮಾಡಿದ್ದಾರೆ ಡಿಪಾಜಿಟ್‌ನಲ್ಲಿಯೂ ಸೇಕಡ 100ರಷ್ಟು ಜಾಸ್ತಿಯಾಗುತ್ತದೆ. ಇವತ್ತು ರೈತ ಬಾವಿ ತೆಗೆದರೆ, 3 ಎಕರೆ ವ್ಯವಸಾಯ ಮಾಡಬೇಕಾದರೆ ಆತನಿಗೆ ಪ್ರಾಣವೇ ಹೋಗುತ್ತದೆ. ಇನ್ನೊಂದು ಕಡೆ ವಿಪರೀತವಾಗಿ ಸಾಲ ಮಾಡುತ್ತಿದ್ದಾರೆ. ಅವರು ಸಾಲ ಮಾಡುವುದನ್ನು ವಿಚಾರಮಾಡಿ ಅಂದರೆ ಅದನ್ನು ಚರ್ಚೆಮಾಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳುತ್ತಾರೆ.

ಇನ್ನು ಇದರಲ್ಲಿ ಆದಾಯ ಎನ್ನುವುದನ್ನು ಅನ್ಯುಯಲ್ ಸ್ಟೇಟ್‌ಮೆಂಟ್ ಎಂದು ಕರೆಯುತ್ತಾರೆ. ಅನ್ಯುಯಲ್ ಸ್ಟೇಟ್‌ಮೆಂಟ್ ಎಂಬುದಕ್ಕೆ ಎಸ್ಟಿಮೇಟೆಡ್ ರೆವಿನ್ಯೂ ಎಂಬುದಾಗಿ ಹೇಳಬೇಕು. ಫೆಬ್ರುವರಿ ತಿಂಗಳಿನೊಳಗೇ ಎಂ. ಎಸ್. ಇ. ಬಿ. ಯವರು ಸರ್ಕಾರಕ್ಕೆ ಈ ವರದಿಯನ್ನು ಕಳುಹಿಸಿದ್ದರು ಏಪ್ರಿಲ್ ಒಂದನೇ ತಾರೀಖಿನಲ್ಲಿ ಅದನ್ನು ಇಲ್ಲಿ ಇಟ್ಟರು ಇವತ್ತು ಆಗಲೇ ವಿದ್ಯುಚ್ಛಕ್ತಿದರ ಜಾಸ್ತಿಯಾಗಿದೆ. ಆದರೆ ಎಷ್ಟು ರೇಟ್ ಜಾಸ್ತಿಯಾಗಿದೆ, ಎಷ್ಟು ರೆವಿನ್ಯೂ ಬರುತ್ತದೆಂಬುದು ಅದರಲ್ಲಿಲ್ಲ ಅದರ ಬಗ್ಗೆ ಅಂಕಿ ಅಂಶಗಳನ್ನು ಮಂತ್ರಿಗಳು ಹೇಳಿದರೆ ನಾವು ಚರ್ಚೆ ಮಾಡಬಹುದು. ದೊಡ್ಡದೊಡ್ಡ ಚೀಫ್ ಇಂಜಿನಿಯರುಗಳು, ಅಧಿಕಾರಿಗಳು ಎಲ್ಲರೂ ಎಂ.ಎಸ್.ಇ.ಬಿ. ಯಲ್ಲಿದ್ದಾರೆ. ಅವರಿಂದ ಎಲ್ಲಾ ರಿಕಾರ್ಡ್‌ಗಳನ್ನು ತರಿಸಿ ಈ ಸಭೆಯ ಮುಂದೆ ಇಡಿ. ಅಲ್ಲಿನ ಪರಿಸ್ಥಿತಿ ಏನಿದೆಯೆಂಬುದನ್ನು ತಿಳಿಸಿ. ನಂತರ ವಿಚಾರಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದನ್ನು ನುಮ್ಮನೆ ಚರ್ಚೆಮಾಡುವುದರಿಂದ ಏನೂ ಪ್ರಯೋಜನವಿಲ್ಲ.

† ಶ್ರೀ ವೀರೇಂದ್ರ ಪಾಟೀಲ್.—ಪ್ರತಿವರ್ಷವೂ ರೂಲ್ಸ್ ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡಿನ ಫೈನಾನ್ಸಿಯಲ್ ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಚರ್ಚೆಗೆ ಇಡುತ್ತೇವೆ. ಆ ರೀತಿ ಇವತ್ತೂ ಅದು ಚರ್ಚೆಗೆ ಬಂದಿದೆ. ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ತಯಾರಾದಮೇಲೆ ಏನಾದರೂ ಸರ್‌ಚಾರ್ಜು ಹೆಚ್ಚುಮಾಡಿದರೆ ಅದು ಬಹುಶಃ ರಿವೈಜ್ಡ್ ಬಡ್ಜೆಟ್ ಆಗಿ ಅದು ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ಬರುತ್ತದೆ. ಮತ್ತೆ ಅದು ಇಲ್ಲಿ ಚರ್ಚೆಗೆ ಬರುತ್ತದೆ. ಇದರಲ್ಲಿ ಯಾವ ತರಹ ಅಂಬಿಗ್ಯುವಿಟಿ ಇಲ್ಲ. ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ರೆವಿನ್ಯೂ ರೆಸೀಟ್ ಸೈಡಿನಲ್ಲಿ 18 ಕೋಟಿ

(ಶ್ರೀ ವೀರೇಂದ್ರ ಪಾಟೀಲ್)

50 ಲಕ್ಷ ರೂಪಾಯಿಗಳು, ಎಕ್ಸ್ ಪೆಂಡಿಚರ್ 20ಕೋಟಿ 74 ಲಕ್ಷ ರೂಪಾಯಿಗಳು—ಹೀಗೆ ಎಸ್ಟಿಮೇಟ್ ಮಾಡಿ ಡಿಫಿಸಿಟ್ ಬಡ್ಜೆಟ್ 2ಕೋಟಿ 20 ಲಕ್ಷ ರೂಪಾಯಿಗಳು ಇದೆ. ಈ ಡಿಫಿಸಿಟ್ಟನ್ನು ತುಂಬುವುದರ ನಲುವಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಸರ್‌ಚಾರ್ಜ್ ಹಾಕಿದ್ದಾರೆ ಮತ್ತು ಮಿನಿಮಂ ಐ.ಪಿ. ಸೆಟ್‌ಮೇಲೆ ಡಬ್ಬಲ್ ಮಾಡಿದ್ದಾರೆ. ಇವೆರಡರಿಂದ ಎಷ್ಟು ಬರುತ್ತದೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್ ಅಂದಾಜು ಪ್ರಕಾರ ಸರ್‌ಚಾರ್ಜು ಮತ್ತು ಐ.ಪಿ. ಸೆಟ್‌ನಿಂದ ಸುಮಾರು 2 ಕೋಟಿ ರೂಪಾಯಿಗಳು ಬರುತ್ತದೆ. ಇದರಿಂದ 24 ಲಕ್ಷ ರೂಪಾಯಿಗಳು ಡಿಫಿಸಿಟ್ ಎಲೆಕ್ಟ್ರಿಸಿಟಿ ಬೋರ್ಡಿಗೆ ಬರುತ್ತದೆ. ಈಗಿನ ಅಂದಾಜು ಪ್ರಕಾರ ಈ ವರ್ಷ 2 ಕೋಟಿ ರೂಪಾಯಿಗಳು ಹೆಚ್ಚು ಬರುತ್ತದೆ. ಈ ಎರಡು ಕೋಟಿ ರೂಪಾಯಿಗಳಲ್ಲಿ ರೈತರಿಂದ ಮತ್ತು ಐ. ಪಿ. ಸೆಟ್ ಸರ್ವಿಸ್‌ನಿಂದ 22 ಲಕ್ಷ ರೂಪಾಯಿಗಳಷ್ಟು ಬರುತ್ತದೆ. ಅದಕ್ಕಿಂತ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿಲ್ಲ. ಉಳಿದುದು ಡೊಮಸ್ಟಿಕ್ ಕನ್‌ಸಂಪ್‌ಷನ್ ಮತ್ತು ಸರ್ ಚಾರ್ಜುಗಳಿಂದ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದಮೇಲೆ ಇದರಲ್ಲಿ ಯಾವ ತರಹ ಅಂಬಿಗ್ಯುಯಟಿ ಇಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ.

5-00 P. M.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಯವರೇ, ಎಲೆಕ್ಟ್ರಿಸಿಟಿ ಮಂತ್ರಿಯವರಾದ ಶ್ರೀ ವೀರೇಂದ್ರ ಪಾಟೀಲರು 1969—70ನೇ ಇಸವಿಯ ಫೈನಾನ್ಸಿಯಲ್ ಸ್ಟೇಟ್‌ಮೆಂಟನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಬಗ್ಗೆ ಸಾಕಷ್ಟು ಅನುಮಾನವನ್ನು ಮಾನ್ಯ ಸದಸ್ಯರನೇಕರು ವ್ಯಕ್ತಪಡಿಸಿದ್ದಾರೆ. 69—70ನೇ ಇಸವಿಯಲ್ಲಿ ಬರತಕ್ಕ ಅಂದಾಜು ಆಯ ವ್ಯಯ ಎಷ್ಟು ಅಂದರೆ, ಅದು ಎಷ್ಟು ನರಿಯಾಗಿ ಬರುತ್ತದೆಂಬುದನ್ನು ನೋಡದೆ ಕೆಲವು ಅಂಕಿ ಅಂಶಗಳನ್ನು ಊಹಾಪೋಹದ ಮೇಲೆ ಇಲ್ಲಿ ಕೊಟ್ಟಿದ್ದಾರೆ. ಅವರು ಹೇಳಿದ ಪ್ರಕಾರ 14·25 ಕೋಟಿ ರೂಪಾಯಿ ಆದಾಯ, 20·75 ಕೋಟಿ ರೂಪಾಯಿ ವೆಚ್ಚವೆಂದು ತೋರಿಸಿದ್ದಾರೆ. ಇವತ್ತಿನ ದಿವಸ ವ್ಯವಸಾಯ ಪಂಪ್‌ಸೆಟ್ಟುಗಳಮೇಲೆ ಟ್ಯಾರಿಫ್ ರೇಟು ಹಾಕಿದ್ದನ್ನು ಅದರಲ್ಲಿ ಸಮೂದು ಮಾಡದೆ, ಅದನ್ನು ಮರೆಮಾಚಿಸಿ, ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ನಿಜವಾಗಿಯೂ, ಇವರಿಗೆ ಕರಾರುವಾಕ್ಕಾದ ಲೆಕ್ಕಪತ್ರಗಳನ್ನು ಕೊಡತಕ್ಕ ಶಕ್ತಿಯಿಲ್ಲವೆಂದು ಹೇಳ ಬೇಕಾಗಿದೆ. ಎಲೆಕ್ಟ್ರಿಸಿಟಿ ಬೋರ್ಡಿನ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಪ್ರತಿ ವರ್ಷ ಫೆಬ್ರುವರಿ ತಿಂಗಳಲ್ಲಿ ಕಳಿಸಿ, ಈ ಸಭೆಯಲ್ಲಿ ಚರ್ಚೆ ಮಾಡಿ, ಎಲೆಕ್ಟ್ರಿಸಿಟಿ ಬೋರ್ಡಿನ ಬಜೆಟಿನಲ್ಲಿ ಇರತಕ್ಕಂತಹ ರೋಪಡೋಪಗಳನ್ನು ಎತ್ತಿ ತೋರಿಸತಕ್ಕದ್ದು ಪದ್ಧತಿ. ಆದರೆ ಸರ್ಕಾರದವರು ಅದನ್ನು ಗಮನಕ್ಕೆ ತಗೆದುಕೊಳ್ಳದೆ, ಅದರ ಒಂದು ಅವಕಾಶ ಕೂಡ ಈ ಸಭೆಗೆ ಕೊಡದೆ, ಈ ಸಭೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆಂದು ಹೇಳಬೇಕಾಗಿದೆ. ಇವತ್ತು ಎಲೆಕ್ಟ್ರಿಸಿಟಿ ಬೋರ್ಡಿನ ಆಸ್ತಿ ಏನಿದೆ, ಖರ್ಚು ಏನಿದೆ ಎಲ್ಲವನ್ನೂ ನಾವು ನೋಡಬೇಕಾಗಿದೆ, ಸರ್ಕಾರದವರು ಈಗ ಏನೇನು ವಿದ್ಯುಚ್ಛಕ್ತಿ, ಪ್ರೊಜೆಕ್ಟುಗಳನ್ನು ಕಟ್ಟಿದರೋ, ಅವುಗಳನ್ನೆಲ್ಲಾ ಎಲೆಕ್ಟ್ರಿಸಿಟಿ ಬೋರ್ಡಿಗೆ ವಹಿಸಿ ಕೊಟ್ಟಿದ್ದಾರೆ. ಶರಾವತಿಯನ್ನು ಒಂದು ಮಾತ್ರ ಕೊಡದೆ ಬಿಟ್ಟಿದ್ದಾರೆ. ಹೀಗೆ ಕೊಟ್ಟು ಬಿಟ್ಟು ಸರ್ಕಾರದವರು ಇವತ್ತು ಒಂದು ಮಾರ್ವಾಡಿ ವ್ಯಾಪಾರವನ್ನು ಅವರಿಗೆ ಮಾಡಲು ಬಿಟ್ಟಿದ್ದಾರೆ.ಅವರು ವ್ಯಾಪಾರ ಮಾಡುವುದಕ್ಕೋಸ್ಕರ ಒಂದು ಅಂಗಡಿ ಇಟ್ಟಿದ್ದಾರೆ. ಅದು ಎಲೆಕ್ಟ್ರಿಸಿಟಿ ಬೋರ್ಡು ಎಂದು. ಅವರು ಮಾರ್ವಾಡಿಯೋಪಾದಿಯಲ್ಲಿ ಲಾಭ ನಷ್ಟ ಎಂಬುದು ನೋಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಪಂಪ್‌ಸೆಟ್ಟು ಹಾಕಿದರೆ, ಖರ್ಚು ಎಷ್ಟಾಗುತ್ತದೆ, ಎಷ್ಟು ಲಾಭ ಬರುತ್ತದೆ ಎಂಬ ಒಂದು ದೃಷ್ಟಿಯಿಂದ ಮಾಡುತ್ತಿದ್ದಾರೆ. ಇವತ್ತು ಇವರ ಸ್ಟೋರ್ಸ್ ಲೆಕ್ಕ ನೋಡುವುದಾದರೆ, ಇವರ ಲೆಕ್ಕದ ಪ್ರಕಾರ 1969-70ನೇ ಇಸವಿಯಲ್ಲಿ ಇವರ ಸ್ಟೋರ್ಸ್ ಸುಮಾರು 950 ಲಕ್ಷ ರೂಪಾಯಿಯಷ್ಟು ಇದೆ. ಇವರು ಬಡ್ಡಿ ಎಷ್ಟು ಕೊಡುತ್ತಿದ್ದಾರೆಂದರೆ 1965—66ರಲ್ಲಿ ಎರಡುವರೆ ಕೋಟಿ ಕೊಡುತ್ತಿದ್ದಾರೆ. ಸರ್ಕಾರದ ಕಡೆಯಿಂದ ಕೊಟ್ಟಿರತಕ್ಕ ಲೋನು ಸುಮಾರು 17·25 ಕೋಟಿ. 28·75 ಕೋಟಿ ಪಬ್ಲಿಕ್ ಬಾರೋಯಿಂಗ್ಸ್. ನರಿಯಾದ ಉತ್ಪತ್ತಿ ಮಾಡದೆ ಈ ಲೋನು ದಿನೇ ದಿನೇ ಏರುತ್ತಾ ಇದೆ. ಇನ್ನು ಒಂಬತ್ತುವರೆ ಕೋಟಿ ರೂಪಾಯಿಯಷ್ಟು ಪ್ಯಾಟೀರಿಯಲ್ಸ್ ಇವರ ಸ್ಟೋರ್ಸಿನಲ್ಲಿದೆ. ಅವುಗಳಲ್ಲಿ ಎಷ್ಟು ಕೆಲಸಕ್ಕೆ ಉಪಯೋಗವಿಲ್ಲದವುಗಳಿದ್ದಾವೋ ಎಂಬ ಗೊತ್ತಿಲ್ಲ. ಇವರ ನೀತಿಯಲ್ಲಿ ಸ್ಟೋರ್ಸ್ ಇಂತಿಷ್ಟೇ ಇಡಬೇಕೆಂದೇನೂ ಇಲ್ಲ. ಇವತ್ತು ಲೈನ್ಸ್‌ಲ್ಲಿ, ಪ್ಯಾಟರೀಯಲ್ಸ್ ಎಲ್ಲಾ ಬಿದ್ದಿವೆ. ಯಾರು ತಿಂದರೂ ಗೊತ್ತಿಲ್ಲ. ಇವತ್ತು ತಾಮ್ರದ ತಂತಿಗಳನ್ನು ತಗೆದು ಅಲ್ಯೂಮಿನಿಯಂ ತಂತಿಗಳನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೆ

ಇದ್ದಂತಹ ತಾಮ್ರದ ತಂತಿಗಳು ಎಲ್ಲಿ ಹೋಯಿತು? ನೂರಾರು ಮೈಲಿ ಗುಡ್ಡದ ತಂತಿಗಳನ್ನು ತೆಗೆದು ಹಾಕಿದ್ದು ಅವುಗಳೆಲ್ಲಾ ಎಲ್ಲಿ ಹೋಯಿತು? ನಿಮ್ಮ, ಈ ವ್ಯವಸ್ಥೆಯಲ್ಲಿ ದುಂದು ವೆಚ್ಚದಿಂದ ಖರ್ಚು ಜಾಸ್ತಿಯಾಗಿದೆ. ಇವತ್ತು ನಿಮ್ಮ ಬಜೆಟನ್ನು ಹಿಡಿತದಲ್ಲಿ ಇಡದೆ, ಏರುಪೇರು ಆಗುತ್ತಿದೆ. ಇವತ್ತು ಮೈಸೂರು ದೇಶದಲ್ಲಿನ ಒಂದೊಂದೇ ಎಲೆಕ್ಟ್ರಿಸಿಟಿ ಪ್ರೊಜೆಕ್ಟನ್ನು ಅವರಿಗೆ ಕೊಡುತ್ತಿದ್ದೀರಿ. ಭದ್ರಾ ಕೊಟ್ಟರಿ, ಶರಾವತಿ ಕರೆಂಟ್ ಮಾರಾಟ ಮಾಡಿದಿರಿ. ಇಷ್ಟೆರ್ನಾ ಮಾಡಿದರೂ ದಿನೇ ದಿನೇ ಲಾಸ್ ಆಗುತ್ತಾ ಇದೆ. ಅದಕ್ಕೆ ಇವತ್ತು ಹೇಳುತ್ತಿದ್ದಾರೇನೆಂದರೆ, ಹಳ್ಳಿಗಳಿಗೆ ಇರಿಗೇಶನ್ ಪಂಪ್‌ಸೆಟ್ಟುಗಳಿಗೆ ಕರೆಂಟ್ ಕೊಟ್ಟಿದ್ದೇವೆ, ಅದಕ್ಕೋಸ್ಕರ ಲಾಸ್ ಆಯಿತು ಎಂದು ಹೇಳುತ್ತಿದ್ದಾರೆ. ನಿಮ್ಮ ಆಯವ್ಯಯ ಪಟ್ಟಿಯನ್ನು ನೋಡಿದರೆ ನೀವು ಎಷ್ಟು ವಿದ್ಯುಚ್ಛಕ್ತಿ ಎಷ್ಟು ಕಿಲೋವಾಟ್ಸ್ ತಯಾರು ಮಾಡುತ್ತಿದ್ದೀರಿ ಮತ್ತು ಇದರಿಂದ ಇರಿಗೇಶನ್ ಪಂಪಸೆಟ್ಸ್‌ಗೋಸ್ಕರ ಎಷ್ಟು ಖರ್ಚಾಗುತ್ತದೆ ಎಂದು ಗೊತ್ತಾಗುತ್ತದೆ. ಇದರಿಂದ ಲಾಸ್ ಆಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ನಿಮಗೆ ನಿಮ್ಮ ಖರ್ಚಿನಮೇಲೆ ಹಿಡಿತವಿಲ್ಲದಿರುವುದರಿಂದ, ಲಾಸ್ ತುಂಬುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ. ನಿಜವಾಗಿಯೂ ಮಿತವ್ಯಯದ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡ್ ಕೆಲಸ ಮಾಡಿದರೆ ನಮ್ಮ ಖಜಾನೆಗೆ ಸುಮಾರು 10 ಕೋಟಿ ರೂಪಾಯಿ ಆದಾಯ ಕೂಡ ಬಹುದಾಗಿತ್ತು. ನೀವು ಇವತ್ತು ಲೈನ್ಸ್ ಹಾಕುವಾಗ, ಟ್ರಾನ್ಸ್‌ಮಿಶನ್ ಲೈನ್ ಹಾಕುವಾಗ ಹೇಗೆ ಕೆಲಸ ಮಾಡುತ್ತಿದ್ದೀರಿ? ಟೆಂಡರ್ ಕರೆಯುತ್ತೀರಾ, ಮತ್ತು ಕಂಟ್ರಾಕ್ಟರಿಗೆ ಏನು ಕಂಡಿಶನ್ ಹಾಕಿ ಆ ಕೆಲಸಗಳನ್ನು ಕೊಡುತ್ತಿದ್ದೀರಿ? ಇದು ಒಂದು ರೀತಿಯ ಲೂಟಿ ಮಾಡುವುದಕ್ಕೋಸ್ಕರ, ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೋಸ್ಕರ ಇಂಥ ಪ್ರೊಜೆಕ್ಟುಗಳನ್ನು ಕಟ್ಟಿದ್ದೀರಿ. 40 - 50 ಕೋಟಿ ರೂಪಾಯಿ ಪ್ರೊಜೆಕ್ಟುಗಳು ಇವತ್ತು 150 ಕೋಟಿ ರೂಪಾಯಿಯಾಯಿತು. ಟ್ರಾನ್ಸ್‌ಮಿಶನ್ ಲೈನುಗಳಿಗೆ ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿದ್ದೀರಿ. ಇದರಿಂದ ಮಿತವ್ಯಯದ ದೃಷ್ಟಿಯಿಂದ ಈ ಕೆಲಸಗಳನ್ನು ಮಾಡಲು ನಿಮ್ಮಿಂದ ಸಾಧ್ಯವಾಗಲಿಲ್ಲ.

[Mr. Chairman (Sri K. H. Ranganath) in the Chair.]

10 ಕೋಟಿ ರೂಪಾಯಿಗಳಲ್ಲಿ ಆಗತಕ್ಕಂಥ ಕೆಲಸಕ್ಕೆ 20 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೀರಿ, ಲಾಭ ಬರುವ ಉದ್ಯಮಕ್ಕೆ ನೀವು ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ. ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಸಂಬಂಧದಲ್ಲಿ ದಂಡವನ್ನು ಜಾಸ್ತಿ ಮಾಡಿ ಈಗೊತ್ತು ನೀವು ರೈತನ ಬೆನ್ನುಮೂಳೆಯನ್ನು ಮುರಿಯುವ ಕೆಲಸವನ್ನು ಮಾಡುತ್ತಿದ್ದೀರಿ. ನಮ್ಮ ದೇಶದಲ್ಲಿ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಈ ದೇಶದಲ್ಲಿ ಅನ್ನವನ್ನು ಬೆಳೆಯುತಕ್ಕ ಅನ್ನದಾತನಿಗೆ ಸರಿಯಾಗಿ ಕೊಡುವುದಿಲ್ಲ. ಅದರ ಜೊತೆಗೆ ರೈತನಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಗೆ ಹೆಚ್ಚು ದರವನ್ನು ವಿಧಿಸುತ್ತಿದ್ದೀರಿ. ನಮ್ಮ ದೇಶದಲ್ಲಿ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಕಡಿಮೆ ದರಕ್ಕೆ ಮದ್ರಾಸು ಮತ್ತು ಆಂಧ್ರ ಪ್ರದೇಶಗಳಿಗೆ ಕೊಡುತ್ತಿದ್ದೀರಿ. ನಿಮಗೆ ನಾಚಿಕೆಯಾಗುವುದಿಲ್ಲವೆ? ಇಡೀ ಭಾರತದಲ್ಲಿ ಹೈಡ್ರೋ ಎಲೆಕ್ಟ್ರಿಸಿಟಿಯನ್ನು ತಯಾರು ಮಾಡತಕ್ಕ ಪ್ರಕೃತಿದತ್ತವಾದ ಅವಕಾಶ ಮೈಸೂರು ರಾಜ್ಯದಲ್ಲಿ ಇದೆ. ಹೀಗಿರುವಾಗ ನಮ್ಮದೇಶದಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ನಮ್ಮದೇಶದ ರೈತರಿಗೆ, ಸುಲಭದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಅನ್ನ ಬೆಳೆಯುತಕ್ಕ ಕಾರ್ಯಕ್ರಮವನ್ನು ಸರ್ಕಾರ ಮಾಡುವುದಕ್ಕೆ ಆಗಿಲ್ಲ. ಆಂಧ್ರದಲ್ಲಿ ಮದ್ರಾಸಿನಲ್ಲಿ ಪಂಪುಸೆಟ್ಟುಗಳಿಗೆ ಜಾಸ್ತಿ ದರವನ್ನು ವಿಧಿಸಿದ್ದಾರೆ ಅದಕ್ಕೋಸ್ಕರ ನಾವು ಪಂಪುಸೆಟ್ಟಿಗೆ ಮಿನಿಮಮ್ ಚಾರ್ಜ್ ಅನ್ನು 48 ರೂಪಾಯಿಗಳನ್ನು ಹಾಕಬೇಕು ಎನ್ನುವ ವಾತಾವರಣವನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ಹೇಳುತ್ತಿದ್ದಾರೆ. ನಿಮ್ಮ ರೈತರಿಗೆ ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವ ಮನೋಭಾವನೆ ನಿಮಗೆ ಇಲ್ಲ. ನೀವು ಈ ವಿಚಾರದಲ್ಲಿ ಮಾರ್ಪಾಡು ಬುದ್ಧಿಯನ್ನು ಉಪಯೋಗಿಸಿ ದೇಶವನ್ನು ಉಳುತ್ತಿದ್ದೀರಿ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೈಸೂರು ದೇಶದಲ್ಲರ್ತಕ್ಕ ಸುಮಾರು 83 ಸಾವಿರ ಪಂಪುಸೆಟ್ಟುಗಳಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಪಂಪುಸೆಟ್ಟುಗಳು ಹಳೆಯ ಪಂಪುಸೆಟ್ಟುಗಳು ಹಿಂದೆ ಹಾಕಿದಂತಹ ಪಂಪುಸೆಟ್ಟುಗಳು. ಅವುಗಳಲ್ಲಿ ಬಹುಭಾಗ ಕೋಲಾರ, ಬೆಂಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಇವೆ. ಆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಲೈನನ್ನು ಎಳೆದದ್ದು ಅನೇಕ ವರ್ಷಗಳ ಹಿಂದೆ. ಆಗ ಒಂದು ಪೋಲಿನ ಬೆಲೆ ಏನಿತ್ತು, ತಂತಿಯ ಬೆಲೆ ಏನಿತ್ತು, ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಲೈನನ್ನು ಹಾಕಲು ಬೆಲೆ ಏನಿತ್ತು, ಇವೊತ್ತು ಏನಿದೆ ಅದೊಂದನ್ನೂ ನೀವು ಲೆಕ್ಕ ಹಾಕದೇ ಎರಡ್ನಾ ಸೇರಿಸಿ ಪಂಪುಸೆಟ್ಟುಗಳಿಗೂ ಒಂದೇ ದರವನ್ನು ವಿಧಿಸಿದ್ದೀರಿ. ತಂತಿಯ ಬೆಲೆ ಜಾಸ್ತಿಯಾಗಿದೆ, ಕಂಬದ ಬೆಲೆ ಜಾಸ್ತಿಯಾಗಿದೆ, ಎಂದು ಹೇಳಿ ಈಗ 10-12 ವರ್ಷಗಳ ಹಿಂದೆ ಹಾಕಿದಂತಹ ಪಂಪುಸೆಟ್ಟುಗಳಿಗೂ ಈಗಿನ

(ಶ್ರೀ ಎಸ್. ಶಿವಪ್ಪ)

ದರವನ್ನೇ ವಿಧಿಸಿದ್ದೀರಿ. ಇದು ನ್ಯಾಯವೇ ? ನೀವು ಮದ್ರಾಸು, ಆಂಧ್ರ, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಕಾರಣ ನಮ್ಮಲ್ಲಿ ಸರ್‌ಪ್ಲಸ್ ವಿದ್ಯುಚ್ಛಕ್ತಿ ಇದೆಯೆಂದು. ತೌರೂರಾದ ಮೈಸೂರಿಗೆ, ಬಡರೈತನು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಹೆಚ್ಚಿನ ಬೆಲೆಯನ್ನು ವಿಧಿಸಿರತಕ್ಕದ್ದೂ ರಾಜಕೀಯ ಲಕ್ಷಣವೇ ? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಮೊದಲು ಇರಿಗೇಷನ್ನಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಒಂದು ಅಶ್ವಶಕ್ತಿಗೆ ಒಂದು ರೂಪಾಯಿತ್ತು. ಅದನ್ನು 100 ಪರ್ಸೆಂಟ್ ಜಾಸ್ತಿ ಮಾಡಿ ಎರಡು ರೂಪಾಯಿ ಮಾಡಿದರು ಎರಡು ರೂಪಾಯಿ ಇದ್ದದ್ದನ್ನು ಈಗ 4 ರೂಪಾಯಿ ಮಾಡಿದ್ದಾರೆ. ಒಂದಕ್ಕೆ ಎರಡರಷ್ಟು ಜಾಸ್ತಿ ಮಾಡಿದ್ದಾರೆ. ಒಬ್ಬ ರೈತ ಒಂದು ಅಶ್ವಶಕ್ತಿ ಪಂಪುಸೆಟ್ಟು ತೆಗೆದುಕೊಂಡರೂ ಕೂಡ ಅವನು 48 ರೂಪಾಯಿಗಳು ಮಿನಿಮಮ್ ಚಾರ್ಜ್ ಕಟ್ಟಬೇಕು ಇದು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಮಂತ್ರಿಗಳು ಕೆಲವರು ನಾವು ರೈತರ ಪ್ರತಿನಿಧಿಗಳು ಎಂದು ಹೇಳುತ್ತಾರೆ. ಯಾವ ರೈತನೂ ಕೂಡ 12 ತಿಂಗಳು ವಿದ್ಯುಚ್ಛಕ್ತಿಯನ್ನು ಉಪಯೋಗಿಸುವಷ್ಟು ನೀರು ಬಾವಿಯಲ್ಲಿಲ್ಲ. ಹಳ್ಳಿಗಳವರ ಕಷ್ಟ ಬಹಳವಾಗಿದೆ. ಪಾಪ ಅವರಿಗೆ ಮಳೆಗಾಲದಲ್ಲಿ ಒಂದೆರಡುಮೂರು ತಿಂಗಳು ಅವರಿಗೆ ನೀರು ಸಿಕ್ಕುತ್ತದೆ. ಅದೂ ಅವರ ಪುಣ್ಯ. ಇನ್ನು 9 ತಿಂಗಳು ಅವರು ಸುಮ್ಮನೇ ಇರಬೇಕಾಗುತ್ತದೆ. ಹೀಗಿರಬೇಕಾದರೆ ಪಂಪುಸೆಟ್ಟುಗಳಿಗೆ ಹೇಗೆ ಅವರು 3 ತಿಂಗಳಿಗೆ ನರಾಸರಿ ಮಿನಿಮಮ್ ಚಾರ್ಜ್ ಕೊಡಬೇಕು. ಒಂದು ಅಶ್ವಶಕ್ತಿಗೆ 4 ರೂಪಾಯಿಗಳನ್ನು ಎಲ್ಲಿಂದ ತಂದು ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಒಂದಕ್ಕೆ ನಾಲ್ಕರಷ್ಟು ದರವನ್ನು ಹೆಚ್ಚಿಸಿರುವುದರಿಂದ ಅನೇಕ ಜನ ರೈತರು ಪಂಪುಸೆಟ್ಟುಗಳನ್ನು ಬಿಡುವ ಕಾಲ ಬಂದಿದೆ. ಅದಕ್ಕೆ ಕೂಡತಕ್ಕಂಥ ದುಡ್ಡೂ ಕೂಡ ರೈತನಿಗೆ ಹುಟ್ಟುವುದಿಲ್ಲ. ಅಂಥಾ ಒಂದು ದೊಡ್ಡ ತೊಂದರೆಯನ್ನು ಇರಿಗೇಷನ್ ಪಂಪುಸೆಟ್ಟುಗಳನ್ನು ಉಪಯೋಗಿಸತಕ್ಕವರಮೇಲೆ ಹಾಕಿದ್ದೀರಿ. ಕೈಗಾರಿಕೆಗಳಿಗೆ ಯಾವರೀತಿಯ ದರಗಳಲ್ಲಿ ನೀವು ವಿದ್ಯುಚ್ಛಕ್ತಿಯನ್ನು ಕೊಡುತ್ತೀದ್ದೀರಿ? ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಇವೇ ಭಾರತದೇಶದವರನ್ನೇ ಕರೆಯುತ್ತಿದ್ದೀರಿ. ಬೊಂಬಾಯಿ, ಕಲ್ಕತ್ತ, ಮುಂತಾದ ನಗರಗಳಿಗೆ ಹೋಗಿ ಕೈಗಾರಿಕೋದ್ಯಮಿಗಳವರ ಬಾಗಿಲನ್ನು ತಟ್ಟಿ ತಟ್ಟಿ ಬನ್ನಿ ಬನ್ನಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಸುಲಭವರದರಲ್ಲಿ ನಿಮಗೆ ಎಷ್ಟು ವಿದ್ಯುಚ್ಛಕ್ತಿಯನ್ನಾದರೂ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅನ್ನವನ್ನು ಬೆಳೆಯತಕ್ಕ ರೈತನಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ನೀವು ಏತಕ್ಕೆ ಪ್ರಯತ್ನ ಮಾಡಲಿಲ್ಲ. ಬಡಬೋರೇ ಗೌಡನಿಗೆ, ಅನ್ನದಾತನಿಗೆ ಬೆನ್ನು ಮೂಳೆಯನ್ನು ಮುರಿಯುವ ಕೆಲಸವನ್ನು ಮಾಡುತ್ತಿದ್ದೀರಿ. ನಮಾಜವಾದವನ್ನು ಸ್ಥೇಳತಕ್ಕಂಥ ಶ್ರೀಮಾನ್ ಪರಮೇಶ್ವರಪ್ಪನವರು ಈ ಕಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದಾರೆ. ಅವರಿಗೆ ಇಂಥಾ ಒಂದು ಟ್ಯಾರಿಫನ್ನು ಜಾಸ್ತಿಮಾಡುವುದಕ್ಕೆ ಹ್ಯಾಗೆ ಮನಸ್ಸು ಬಂತು ? ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಹಿಂದೆ ಇದ್ದಂತಹ ದರಗಳಿಗೆ ಪಂಪುಸೆಟ್ಟುಗಳ ದರವನ್ನು ಕೂಡಲೇ ಇಳಿಸಬೇಕು. ಅದಕ್ಕೆ ಸಂಬಂಧಪಟ್ಟ ಆಜ್ಞೆಯನ್ನು ಮಾಡಬೇಕು. ಇದು ರೈತರಿಗೋಸ್ಕರ ಇರತಕ್ಕ ಸರ್ಕಾರ ಎನ್ನುವ ನಂಬಿಕೆ ನಿಮಗೆ ಇದ್ದ ಪಕ್ಷದಲ್ಲಿ ಈಗ ಹೊಸದಾಗಿ ದರವನ್ನು ವಿಧಿಸಿರತಕ್ಕ ಆಜ್ಞೆಯನ್ನು ನಾಳೆಯೇ ರದ್ದುಮಾಡಿ ಹಳೆಯ ದರದಲ್ಲಿಯೇ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎನ್ನುವಂಥಾ ಒಂದು ಘೋಷಣೆಯನ್ನು ಹೊರಡಿಸಬೇಕು. ಇಲ್ಲದಿದ್ದರೆ ರೈತರು ಒಂದು ದೊಡ್ಡ ಮುಷ್ಕರ ಹೂಡುತ್ತಾರೆ. ಈಗ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ದರವನ್ನು ಪರಿಸಿರುವುದರಿಂದ ಬರತಕ್ಕ ದುಡ್ಡಿನಿಂದಲೇ ಸರ್ಕಾರವನ್ನು ನಡೆಸಬೇಕಾದಂತಹ ಅವಶ್ಯಕತೆ ಇಲ್ಲ. ರೈತರು ದೊಡ್ಡ ಹೋರಾಟವನ್ನು ಮಾಡಬೇಕಾದರೆ ಅವರು ಬೆಂಗಳೂರಿಗೆ ಬರಬೇಕು. ಅವರು ಬೆಂಗಳೂರಿಗೆ ಬಂದು ವಿಧಾನಸೌಧವನ್ನು ಮುತ್ತಿಗೆ ಹಾಕಿದಾಗ ಅದರಿಂದ ಸಂತೋಷಪಡತಕ್ಕದ್ದಲ್ಲ ಎರಡು ಕೋಟಿ ಜನಗಳಿಂದ ಆರಿಸಿಬಂದ ಪ್ರತಿನಿಧಿಗಳು ಈ ಶಾಸನಸಭೆಯಲ್ಲಿ ಇದ್ದಾರೆ. ಎಲ್ಲರೂ ರೈತನ ಹಿತ ರಕ್ಷಣೆ ಮಾಡಬೇಕು. ಈಗ ಸರ್ಕಾರದವರು ಪಂಪುಸೆಟ್ಟುಗಳಿಗೆ ಹೆಚ್ಚಿನ ದರವನ್ನು ವಿಧಿಸತಕ್ಕ ಬಗ್ಗೆ ಏನೊಂದು ಕರಾಳ ಶಾಸನವನ್ನು ಸರ್ಕಾರದವರು ಮಾಡಿದ್ದಾರೆಯೋ ಅದನ್ನು ವಜಾ ಮಾಡಬೇಕೆಂದು ನಾನು ಸರ್ಕಾರಕ್ಕೆ ಅಗ್ರಹಪೂರ್ವಕವಾಗಿ ಹೇಳಬೇಕಾಗುತ್ತದೆ. ರೈತ ಸತ್ಯಾಗ್ರಹ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಂಪುಸೆಟ್ಟುಗಳು ಇವೆ. ಇವೊತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು ಹೇಳಿದ ಹಾಗೆ ಕೇಳುತ್ತೇವೆ ಎಂದರೆ ನಿಮಗೆ ಯೋಚನೆ ಮಾಡತಕ್ಕ ಶಕ್ತಿ ಇಲ್ಲವೇ ? ಅವರು ಹೇಳಿದಹಾಗೆ ಕೇಳುವಂಥಾ ಅವಕಾಶವನ್ನು ಕೊಡಬೇಡಿ.

ರೈತನಿಗೆ ಅನುಕೂಲವಾಗುವ ಹಾಗೆ ಆಜ್ಞೆ ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇದೆ. ಆದ್ದರಿಂದ ಸರ್ಕಾರದವರು ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳಿಗೆ ವಿಧಿಸಿರತಕ್ಕ ದರವನ್ನು ರದ್ದುಮಾಡಿ ಹಿಂದೆ ಇದ್ದಂತಹ ದರಕ್ಕೆ ಇಳಿಸುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಇದರಿಂದ ರೈತರಿಗೆ ಸಹಾಯ ವಾಡಿದಂತಾಗುತ್ತದೆ ಎಂದು ನಾನು ಮತ್ತೊಮ್ಮೆ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇವೊತ್ತು ಸಿಟಿಗಳಲ್ಲಿ ಮತ್ತು ಟೌನುಗಳಲ್ಲಿ ವಿದ್ಯುಚ್ಛಕ್ತಿ ದರವನ್ನು ಒಂದಕ್ಕೆರಡರಷ್ಟು ಜಾಸ್ತಿ ಮಾಡಿದ್ದಾರೆ. ಈಗ ಸಿಟಿ ಮತ್ತು ಟೌನುಗಳಲ್ಲಿರತಕ್ಕ ಜನಗಳು ಸೌದೆಯನ್ನು ಉಪಯೋಗಿಸುವುದನ್ನು ಕೈ ಬಿಟ್ಟಿದ್ದಾರೆ. ಮನೆಯಲ್ಲಿ ಹೆಂಗಸರಿಗೆ ಕಷ್ಟವನ್ನು ತಪ್ಪಿಸಬೇಕೆಂದು ಅಡಿಗೆಗೂ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿದ್ದಾರೆ. ಇದರ ಬಗ್ಗೆ ವಿದ್ಯುಚ್ಛಕ್ತಿ ಬೋರ್ಡಿನವರು ಮಾರ್ಜ್ಯಾಡಿಗಳ ತತ್ವವನ್ನು ಅನುಸರಿಸಿ ವಿದ್ಯುಚ್ಛಕ್ತಿಯ ದರವನ್ನು ಜಾಸ್ತಿಮಾಡಿದ್ದಾರೆ. ಈಗ ಎರೆಕ್ಟ್ರಿಕ್ ಸ್ಟೌವ್‌ಗಳನ್ನು ಕಡಿಮೆಹಾಕಿ ಮತ್ತೆ ಸೌದೆಯನ್ನು ತರುವ ಹಾಗೆ ಇಲ್ಲ. ಇಂದು ಅಧುನಿಕ ಯುಗದಲ್ಲಿ ವಿದ್ಯುಚ್ಛಕ್ತಿ ಎಲ್ಲರಿಗೂ ಬೇಕಾದ ವಸ್ತು. ಅದು ಲಗ್ಜುರಿ ಆರ್ಟಿಕಲ್ ಅಲ್ಲ. ಇವೊತ್ತು ವಿದ್ಯುಚ್ಛಕ್ತಿಯನ್ನು ದೀಪಕ್ಕೆ ಉಪಯೋಗಿಸುತ್ತಿದ್ದಾರೆ. ಅಡಿಗೆಗೆ ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಪ್ರತಿಯೊಂದು ಸಂಸಾರಕ್ಕೂ ತೊಂದರೆಯಾಗಿದೆ. ಆದಕಾರಣ ಈಗ ಮನೆಬಳಕೆಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಏನು ದರವನ್ನು ಹೆಚ್ಚು ಮಾಡಿದ್ದಾರೆ ಅದನ್ನು ಸರ್ಕಾರದವರು ಪುನರ್‌ವಿಮರ್ಶೆ ಮಾಡಿ ಕಡಿಮೆ ಮಾಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ವಿದ್ಯುಚ್ಛಕ್ತಿ ಬೋರ್ಡಿನವರಿಗೆ ದೊಡ್ಡ ದೊಡ್ಡ ಪವರ್ ಪ್ರಾಜೆಟ್‌ಗಳನ್ನು ವಹಿಸಬಾರದೆಂದು ನಾನು ಆಗಾಗ್ಗೆ ಹೇಳುತ್ತಲೇ ಇದ್ದೇನೆ. ವಿದ್ಯುಚ್ಛಕ್ತಿ ಬೋರ್ಡ್ ಈಗ ಅಟಾನಮಸ್ ಬಾಡಿ ಆಗಿರುವುದರಿಂದ ಮತ್ತು ಎಲ್ಲವನ್ನೂ ಆ ಬೋರ್ಡಿಗೆ ವಹಿಸುತ್ತಿರುವುದರಿಂದ ಅವರೇ ಏತಕ್ಕೆ ನೇರವಾಗಿ ಸಾಲವನ್ನು ಎತ್ತಿ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಬಾರದು ಎಂಬತಕ್ಕಂಥ ಸೂಚನೆಯನ್ನು ಸಹ ನಾನು ಕೊಟ್ಟಿದ್ದೇನೆ. ಈಗಾಗಲೇ ಕರಾವತಿ ಪ್ರಾಜೆಟ್‌ನ್ನು ಅವರಿಗೆ ವಹಿಸಿದ್ದೀರಿ. ಅವರು ಅಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಗೆ ಮಾರುತ್ತಾ ಇದ್ದಾರೆ. ಆ ರಾಜ್ಯಗಳಿಂದ ಬರತಕ್ಕಂಥ ಉತ್ಪತ್ತಿಯನ್ನು ಸರ್ಕಾರಕ್ಕೆ ವಾಪಸ್ಸುಕೊಡುವುದಕ್ಕೆ ಬೋರ್ಡಿನವರಿಗೆ ಆಗುತ್ತಿಲ್ಲ. ಈ ಕಾರಣದಿಂದ ಮೊನ್ನೆಯ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಬೋರ್ಡಿನವರು ಸರ್ಕಾರಕ್ಕೆ ಕೊಡಬೆಕಾಗಿದ್ದ ಏಳೂವರೆ ಕೋಟಿ ರೂಪಾಯಿಗಳನ್ನು ಸಾಲ ಎಂದು ಪರಿಗಣಿಸಿದ್ದೀರಿ. ಈ ಹಣವನ್ನೇ ಕೊಡುವುದು ಅವರಿಗೆ ಕಷ್ಟವಾಗಿರುವುದರಿಂದ ಇನ್ನು ಬಡ್ಡಿಯನ್ನು ಯಾವ ರೀತಿ ಅವರು ಕೊಡುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಬೋರ್ಡಿನವರಿಗೂ ಮತ್ತು ಸರ್ಕಾರಕ್ಕೂ ಕರಾರುವಾಕ್ಕಾದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದರ ಬಗ್ಗೆ ಆಖ್ಯೈರಾದ ರೆಕ್ಕ ನಮಗೆ ಸಿಗುತ್ತಿಲ್ಲ. ಬೋರ್ಡಿನವರಿಗೂ ಸರ್ಕಾರಕ್ಕೂ ಇಂಟರ್‌ಲಿಂಕ್ ಇರುವುದರಿಂದ ಸರಿಯಾದ ರೆಕ್ಕ ಸಿಗುತ್ತಿಲ್ಲ. ಇನ್ನು ಮುಂದೆಯಾದರೂ ಕೂಡ ಸರ್ಕಾರದವರೇ ಪೂರ್ಣ ಜವಾಬ್ದಾರಿಯನ್ನು ತಗೆದುಕೊಂಡರೆ ಸರಿಯಾದ ರೆಕ್ಕ ಸಿಗುತ್ತದೆ ಮತ್ತು ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಪಂಪ್‌ಸೆಟ್ಟುಗಳಮೇಲೆ ಹಾಕಿರುವ ವಿದ್ಯುಚ್ಛಕ್ತಿ ದರವನ್ನು ಕಡಿಮೆಮಾಡಬೇಕು ಮತ್ತು ಟ್ಯಾರಿಫ್ ರೇಟನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಒಂದು ಆರ್ಡರನ್ನು ನಾಳೆಯೇ ಹೊರಡಿಸುವ ಒಂದು ಒಳ್ಳೆಯ ಬುದ್ಧಿ ಸರ್ಕಾರಕ್ಕೆ ಬರಲಿ ಎಂದು ಹೇಳುತ್ತೇನೆ. ಇಲ್ಲದಿದ್ದರೆ ರೈತರ ಹೋರಾಟವನ್ನು ಎದುರಿಸುವುದಕ್ಕೆ ಸರ್ಕಾರದವರು ಸಿದ್ಧರಾಗಬೇಕಾಗುತ್ತದೆ ಎಂಬ ಸೂಚನೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಗೆ ಸಂಬಂಧಿಸಿದ 1969—70ನೇ ಸಾಲಿನ ವಾರ್ಷಿಕ ವಿತ್ತೀಯ ವಿವರಣಾ ಪಟ್ಟಿ ಚರ್ಚೆಗಾಗಿ ನಮ್ಮ ಮುಂದೆ ಬಂದಿದೆ. ಮೈಸೂರು ಸ್ಟೇಟ್ ಎರೆಕ್ಟ್ರಿಸಿಟಿ ಬೋರ್ಡ್ ಅಟಾನಮಸ್ ಬಾಡಿ ಆಗಿರುವುದರಿಂದ ಅದರ ವ್ಯವಹಾರದಲ್ಲಿ ಕೈಹಾಕುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ ಎಂಬುದು ನಿರ್ದಿಷ್ಟವಾಗಿ ಗೊತ್ತಿದೆ. ಆದರೂ ಕೂಡ ಬೋರ್ಡಿನಲ್ಲಿ ಏನಾದರು ಅಕ್ರಮಗಳು ಅನ್ಯಾಯಗಳು ಆದಾಗ ಆ ಬಗ್ಗೆ ಸರ್ಕಾರದವರು ಸೂಕ್ತವಾದ ಡೈರೆಕ್ಷನ್ ಕೊಡುವುದರ ಮೂಲಕ ಅಲ್ಲಿಯ ಅಡಳಿತವನ್ನು ಸರಿಪಡಿಸುವಂತಹ ಒಂದು ಅಧಿಕಾರ ಸರ್ಕಾರಕ್ಕೆ ಇದೆ ಎಂಬುದನ್ನು ಸರ್ಕಾರ ಮರೆಯಬಾರದು. ಈ ಬೋರ್ಡಿನ ಅಡಳಿತವನ್ನು ಅವರು ಅನುಸರಿಸುವ ಕಾರ್ಯನೀತಿ

(ಶ್ರೀ ಕೆ. ಪಿ. ನಾಡಗೌಡ)

ಯನ್ನು ನೋಡಿದಾಗ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ ಹಳ್ಳಿಯ ಜನರು ಕೈ ಕೊಳ್ಳುವಂತಹ ಸಣ್ಣ ಉದ್ಯೋಗಗಳು ಯಾಂದೆ ಬರುವುದಿಲ್ಲ ಎಂಬ ಬಗ್ಗೆ ಶ್ರೀ ಜಿ. ಸಿ. ಕುಮಾರಪ್ಪ ನವರು ಒಂದು ಕಡೆ ಹೇಳಿದ್ದಾರೆ. ಅವರು ಒಂದು ಸಾರಿ ಜೇನುತುಪ್ಪ ಮಾರಾಟದ ಸೊಸೈಟಿಗೆ ಭೇಟಿ ಕೊಟ್ಟು ಅಲ್ಲಿಯ ಆಯವ್ಯಯ ಪಟ್ಟಿಯನ್ನು ನೋಡಿ ಅದರ ಬಗ್ಗೆ ಅಲ್ಲಿಯ ಮೇನೇಜರ್ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಸಾಕಷ್ಟು ಲಾಭ ಈ ಉದ್ಯಮದಿಂದ ಬರುತ್ತಿದೆ ಎಂದು ಹೇಳಿದರಂತೆ. ಇದಕ್ಕೆ ಕಾರಣ ಜೇನುತುಪ್ಪವನ್ನು ಉತ್ಪಾದನೆ ಮಾಡುವವರು ಮತ್ತು ಅವರ ಮಕ್ಕಳು ಯಾವ ರೀತಿಯಿಂದಲೂ ಅದನ್ನು ಬಳಕೆ ಮಾಡುವುದಿಲ್ಲ ಎಂಬುದು ತಿಳಿದುಬಂದಿದೆ. ಮತ್ತೊಂದು ಉದಾಹರಣೆ ಕೊಡಬೇಕೆಂದರೆ ಒಬ್ಬ ಗೌಳಿಗ ಕೆಲವು ಹಸುಗಳನ್ನು ಕಟ್ಟಿದ್ದರೆ ಆತನು ಹಾಲನ್ನೆಲ್ಲಾ ಪೇಟೆಗೆ ತೆಗೆದುಕೊಂಡು ಹೋಗಿ ಮಾರಬಿಡುತ್ತಾನೆ ಮತ್ತು ಆತನ ಮಕ್ಕಳು ಆ ಹಾಲನ್ನು ಕುಡಿಯುವಂತಹ ಸಂದರ್ಭ ಬರದಂತೆ ನೋಡಿಕೊಳ್ಳುತ್ತಾನೆ. ಈ ಉದಾಹರಣೆಗಳ ಪ್ರಕಾರವೇ ನಮ್ಮ ವಿದ್ಯುಚ್ಛಕ್ತಿ ಬೋರ್ಡಿನ ಕಾರ್ಯನೀತಿಯೂ ಸಹ ಆಗಿದೆ. ವಿದ್ಯುಚ್ಛಕ್ತಿ ಮಾರಾಟದಿಂದ ಬೋರ್ಡಿಗೆ ಬಿಜಾಪುರ ಜಿಲ್ಲೆಯಿಂದ 8 ಲಕ್ಷ ರೂಪಾಯಿಗಳ ವರಮಾನ ಇದ್ದರೆ ಗೋವಾದಿಂದ 195 ಲಕ್ಷ ರೂಪಾಯಿಗಳ ವರಮಾನ ಇದೆ. ಅಂದರೆ ನಮ್ಮ ಬೋರ್ಡಿನವರು ಹೋರ ರಾಜ್ಯಗಳಿಗೇ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿದ್ದಾರೆ. ಮತ್ತು ಆ ಮೂಲಕ ಹೆಚ್ಚಿನ ಲಾಭ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಶರಾವತಿ ಯೋಜನೆಯ ಕೃಪಾಕಟಾಕ್ಷ ಮೈಸೂರು ರಾಜ್ಯದ ಕೆಲವೇ ಹಳ್ಳಿಗಳ, ಕೆಲವೇ ಬಾವಿಗಳಮೇಲೆ ಬಿದ್ದಿದೆ. ಈ ಯೋಜನೆ ಮುಗಿದನಂತರ ಎಲ್ಲಾ ಹಳ್ಳಿಗಳಿಗೂ ಮತ್ತು ಎಲ್ಲಾ ಪಂಪ್‌ಸೆಟ್ಟುಗಳಿಗೂ ಕೂಡ ವಿದ್ಯುಚ್ಛಕ್ತಿ ಸಿಗುತ್ತದೆಂದು ನಾವು ಭಾವಿಸಿದ್ದೆವು. ಮತ್ತು ಇಡೀ ರಾಜ್ಯವೇ ಬೆಳಕಿನಿಂದ ಕೂಡಿರುತ್ತದೆ ಎಂದು ಭಾವಿಸಿದ್ದೆವು. ಆದರೆ ಇವತ್ತಿನದಿವಸ ಈ ಯೋಜನೆಯ ಲಾಭವನ್ನು ಕೇರಳ, ಮದ್ರಾಸ್, ಆಂಧ್ರ ವಗೈರೆ ಮಹಾರಾಷ್ಟ್ರ ರಾಜ್ಯಗಳು ಪಡೆದುಕೊಳ್ಳುತ್ತಿವೆ. ಈ ರೀತಿ ಬೋರ್ಡಿನವರು ಬೇರೆ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತಿರುವುದರಿಂದ ನಮ್ಮ ರಾಜ್ಯದ ರೈತರಿಗೆ ಯಾವ ಅನುಕೂಲವೂ ಆಗುತ್ತಿಲ್ಲ. ಮತ್ತು ಅವರ ಜೀವನಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಶರಾವತಿ ಯೋಜನೆಯ ಪವರ್‌ನ್ನು ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಒದಗಿಸುತ್ತಿರುವುದರಿಂದ ಕೆಲವೇ ಜನರು ಶ್ರೀಮಂತರಾಗುವುದಕ್ಕೆ ಅವಕಾಶವಾಗಿದೆ. ಇವತ್ತಿನದಿವಸ ಈ ಬೋರ್ಡಿನವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ. ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಒಂದು ಪ್ರಯಾರಿಟಿ ಲಿಸ್ಟ್ ಮಾಡಿಕೊಂಡಿದ್ದಾರೆ. ಮತ್ತು ಅದರ ಪ್ರಕಾರ ಕೊಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಒಂದು ಪಂಪ್‌ಸೆಟ್ಟಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಆ ಪಂಪ್‌ಸೆಟ್ಟು ಇರುವ ಹತ್ತಿರದಲ್ಲಿಯೇ ಮತ್ತೊಂದು ಬಾವಿ ಇದೆ. ಅಲ್ಲಿಗೆ ಬಹಳ ಕಡಿಮೆ ಖರ್ಚಿನಲ್ಲಿ ಲೈನ್ ಎಳೆಯಬಹುದು. ಏತಕ್ಕೆ ಲೈನ್ ಹಾಕಿ ವಿದ್ಯುಚ್ಛಕ್ತಿ ಕೊಡಬಾರದು ಎಂದು ಎಕ್ಸಿಕ್ಯುಟಿವ್ ಇಂಜನಿಯರ್ ಅವರನ್ನು ಕೇಳಿದರೆ ಪ್ರಯಾರಿಟಿ ಲಿಸ್ಟ್ ಪ್ರಕಾರ ಕೊಡುತ್ತೇವೆಂದು ಹೇಳುತ್ತಾರೆ. ಈ ಒಂದು ಕಾರಣದಿಂದಲೇ ಬೋರ್ಡಿಗೆ ನಷ್ಟವಾಗುತ್ತಿರುವುದು. ಏಕಕಾಲಕ್ಕೆ ನೂರಾರು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿದರೆ ಖರ್ಚು ಸಹ ಕಡಿಮೆಯಾಗುತ್ತದೆ ಮತ್ತು ರೈತರಿಗೂ ಕೂಡ ಅನುಕೂಲವಾಗುತ್ತದೆ. ಈ ಕಾರಣದಿಂದ ಪ್ರಯಾರಿಟಿ ಲಿಸ್ಟನ್ನು ಅನುಸರಿಸುವುದನ್ನು ಕೈಬಿಡಬೇಕು, ಮತ್ತು ವ್ಯವಹಾರ ಜ್ಞಾನವನ್ನು ಬೋರ್ಡಿನವರು ಕಂಡುಕೊಳ್ಳಬೇಕು. ಫೀಲ್ಡ್ ವರ್ಕರ್‌ಗೆ 200 ರೂಪಾಯಿಗಳನ್ನು ಕೊಡದಿದ್ದರೆ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯವಾಗಿದೆ. ಆದರೂ ಕೂಡ ಸರ್ಕಾರದವರು ಈ ವಿಷಯದಲ್ಲಿ ಕೈಹಾಕಿ ತಿದ್ದುವುದಕ್ಕೆ ಇಷ್ಟ ಪಡುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಬೋರ್ಡಿನವರಿಂದ ಜನಸಾಮಾನ್ಯರಿಗೆ ಮತ್ತು ರೈತರಿಗೆ ಲಾಭವಾಗುತ್ತಿಲ್ಲ ಎಂಬ ಮಾತನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ಇದಕ್ಕೆ ಉಪಾಯ ತೋರದಂತಾಗಿದೆ.

5-30 P.M.

ಎರಡನೆಯದಾಗಿ ಪಂಪು ಸೆಟ್ಟುಗಳನ್ನು ಒದಗಿಸಿ ಅದಕ್ಕೆ ಕರೆಂಟು ಕೊಡುವಾಗ ನಮ್ಮ ಬಿಜಾಪುರ ಬರಗಾಲ ಪೀಡಿತ ಪ್ರದೇಶ ಎಂದು ಗುರುತ್ತಿದ್ದರೂ ಇಲ್ಲಿ ಪಂಪು ಸೆಟ್ಟುಗಳ ಸಂಖ್ಯೆ ಕೊಟ್ಟಿರುವುದು ಕೇವಲ 1428 ಅಂದರೆ 1968 ರಲ್ಲಿ ಮಾಡಿದ ಅಂದಾಜು. ಇಲ್ಲಿ ಮಳೆ ಕಡಮೆ. ಆಧಾವ ಪೀಡಿತ ಹಳ್ಳಿಗಳಿಗೆ ಯಾವ ನೀರೂ ಹರಿಯುತ್ತಿಲ್ಲ. ಆದರೆ ಎಲ್ಲೋ ಕೆಲವು ಕಡೆ ನೀರು ನಿಂತಿದ್ದರೆ ಅಲ್ಲಿಗೆ ಪಂಪು ಸೆಟ್ಟನ್ನು ರೈತರು ಹಾಕಿಕೊಂಡು ನೀರು ಪಡೆಯಬೇಕಾಗುತ್ತದೆ. ಇದರ ಬಗ್ಗೆ

ನಾಕಷ್ಟು ಮುಂಚಿತವಾಗಿ ಒಂದು ಕಾರ್ಯಕ್ರಮ ಇಟ್ಟುಕೊಂಡು ಎಲ್ಲಿ ವಿಪರೀತವಾಗಿ ಮಳೆ ಯಿಂದ ಹೆಚ್ಚು ನೀರು ಬರುತ್ತದೋ ಮತ್ತು ಅದು ಉಪಯೋಗವಿಲ್ಲದೆ ಸಮುದ್ರಕ್ಕೆ ಹೋಗಿ ಸೇರುತ್ತದೋ ಅಂತಹ ನೀರನ್ನು ತಡೆದು ಅದಕ್ಕೆ ಸರಿಯಾದ ಒಂದು ಒಡ್ಡು ಮಾಡಿಕೊಂಡು ಅಲ್ಲ ಪಂಪು ಸೆಟ್ಟುಗಳನ್ನು ಹಾಕಿಕೊಂಡು ಇರುವ ನೀರನ್ನು ಉಪಯೋಗಿಸಿಕೊಳ್ಳಬೇಕು. ಇಲ್ಲಿ ಕೇವಲ ನಾಲ್ಕು ತಿಂಗಳು ಕಾಲ ಮಾತ್ರ ಹರಿಯುವ ನೀರು ಸಿಗುತ್ತದೆ. ಉಳಿದ ಕಾಲದಲ್ಲಿ ನೀರು ಇರುವು ದಿಲ್ಲ. ಇಲ್ಲಿ ಪಂಪು ಸೆಟ್ಟುಗಳನ್ನು ಕೊಡುವಾಗ ಮಿನಿಮಂ ದರದಲ್ಲಿ ಬೋರ್ಡಿನವರು ಪವರ್ ಕೊಡುವುದು ಅಗತ್ಯ ಎಂದು ಹೇಳುತ್ತೇನೆ. ನಮ್ಮ ಕಡೆ ಇರುವ ನದಿಗಳು ಎಂದರೆ, ಮಲಪ್ರಭಾ ಹಾಗೂ ಘಟಪ್ರಭಾ ಮತ್ತು ಕೃಷ್ಣಾ ನದಿಯಿಂದ ಬರುವ ನೀರು ಸ್ವಲ್ಪ. ಇವು ಎಲ್ಲಿ ಬರುತ್ತಿವೆಯೋ ಅಂತಹ ಜಾಗದಲ್ಲಿ ಪಂಪು ಸೆಟ್ಟುಗಳನ್ನು ಹಾಕಿಕೊಂಡು ಪೂರ್ಣವಾಗಿ ಉಪಯೋಗಮಾಡಿಕೊಳ್ಳ ಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಘಟಪ್ರಭಾ ಎಡದಂಡೆ ನಾಲಾದಲ್ಲಿ ಇರಿಗೇಷನ್‌ಗೆ ಕೇವಲ ನಾಲ್ಕು ತಿಂಗಳು ಕಾಲ ಮಾತ್ರ ನೀರು ಸಿಗುತ್ತದೆ. ಉಳಿದ ವೇಳೆಯಲ್ಲಿ ನೀರು ಇಲ್ಲಿ ಸಿಗುವುದಿಲ್ಲ, ಘಟಪ್ರಭಾ, ಮಲಪ್ರಭಾ ಇತ್ಯಾದಿ ನದಿಗಳಿಂದ ನೀರು ಉಪಯೋಗಿಸಿಕೊಳ್ಳಬೇಕಾದರೆ ಪಂಪು ಸೆಟ್ಟುಗಳು ಇಲ್ಲಿನ ಜನರಿಗೆ ಅವಶ್ಯವಾಗಿ ಬೇಕು ಮತ್ತು ಇರಿಗೇಷನ್ ಬ್ರಾಂಚಿನವರು ಇಲ್ಲಿ ಒಂದು ಕೆನಾಲ್ ಮಾಡಿಸಿಕೊಟ್ಟು ನೀರನ್ನು ಎತ್ತಲು ಸೌಕರ್ಯ ಮಾಡಿಕೊಡಬೇಕು ಮತ್ತು ಇದಕ್ಕೆ ಇರಿಗೇಷನ್ ಬ್ರಾಂಚಿನವರು ಪರ್ಮಿಷನ್ ಕೊಡುತ್ತಿಲ್ಲ ಎಂದು ಕೇಳುತ್ತೇನೆ. ನೀರಾವರಿ ಮಾಡುವವರಿಗೆ ಹೆಚ್ಚು ಸೌಕರ್ಯ ಮಾಡಬೇಕಾದರೆ ಸಾಧ್ಯವಾದಷ್ಟು ಬೇಗ ಸರಕಾರ ಪರ್ಮಿಷನ್ನು ಕೊಟ್ಟು ಬೇಸಾಯ ಮಾಡುವವರಿಗೆ ಅನುಕೂಲ ಮಾಡಿಕೊಡಬೇಕು. ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುತ್ತಿರುವಾಗ ಹರಿಯುವ ನೀರನ್ನು ಸದು ಪಯೋಗ ಮಾಡಿಕೊಳ್ಳಬೇಕಾದರೆ ಅಲ್ಲಲ್ಲಿ ಲಿಫ್ಟ್ ಇರಿಗೇಷನ್ ಸೌಕರ್ಯವನ್ನು ಮಾಡಲು ಲೈಸನ್ಸ್ ಮೂಲಕವೋ ಇಲ್ಲವೇ ಪರ್ಮಿಟ್‌ಗಳ ಮೂಲಕವೋ ಸಹಾಯ ಮಾಡಿಕೊಡಬೇಕು ಎಂದು ಸರಕಾರದ ಗಮನಕ್ಕೆ ತರುತ್ತೇನೆ. ಇನ್ನು ರೈತರಿಗಾಗಿ ಪಂಪುಸೆಟ್ಟುಗಳನ್ನು ಕೊಡುವಾಗ ಅದಷ್ಟೂ ಮಿನಿಮಂ ದರದಲ್ಲಿ ಕೊಡಬೇಕು ಮತ್ತು ನುಲಭ ಕಂತುಗಳಲ್ಲಿ ಅದನ್ನು ವಾಪಸು ಪಡೆಯುವಂತೆ ಪ್ರಯತ್ನ ಮಾಡಬೇಕು ಮತ್ತು ಎಲ್ಲ ರೈತರಿಗೂ ಬೇಗನೆ ಪಂಪುಸೆಟ್ಟುಗಳು ಸಿಗುವಂತೆ ಮಾಡಲು ಈಗ ಇರುವ ಪ್ರಯಾರಿಟಿಲಿಸ್ಟನ್ನು ತೆಗೆದುಹಾಕಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿ ಸುತ್ತೇನೆ.

†ಶ್ರೀ ಬೋಳಾ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಸಭೆಯುಮುಂದೆ ಇಟ್ಟಿರ ತಕ್ಕ ಎರೆಕ್ಶಿಸಿಟಿ ಬೋರ್ಡಿನ 1969—70 ರ ಸ್ಟೇಟುಮೆಂಟನ್ನು ಕೃಷಿಕರ ದೃಷ್ಟಿಯಿಂದ ನಾನು ವಿರೋಧಿಸುತ್ತೇನೆ.

ಈ ಸ್ಟೇಟುಮೆಂಟು ಬಂದನಂತರ ಎರೆಕ್ಟಿಸಿಟಿ ಬೋರ್ಡಿನವರು ಕೃಷಿ ಮಾಡುವ ಜನರಮೇಲೆ ಪ್ರತಿಯೊಂದು ಹಾರ್ಸ್ ಪವರು ಮೇಲೂ ಹೆಚ್ಚು ದರದ ಟ್ಯಾಕ್ಸ್ ಹಾಕುತ್ತಿದ್ದಾರೆ ಇದರಿಂದ ಹೆಚ್ಚು ರಿಟರ್ನ್ ಬರಲು ಸಹಾಯವಾಗುತ್ತದೆ ಎಂದು ಸರಕಾರ ಹೀಗೆ ರೇಟು ಹೆಚ್ಚು ಮಾಡುವುದು ಸರಿ ಯಲ್ಲ. ಇದು ರಾಜ್ಯದ ಎರಡು ಕೋಟಿ ಜನರ ಹಿತಕ್ಕೂ ಧಕ್ಕೆ ಉಂಟುಮಾಡುತ್ತದೆ. ಇವೊತ್ತು ನಮ್ಮ ರಾಜ್ಯದಲ್ಲಿರುವ ಆಹಾರ ಸಮಸ್ಯೆ ಪರಿಹಾರವಾಗಬೇಕಾದರೆ ಮತ್ತು ಪ್ರತಿಯೊಂದು ರಾಜ್ಯ ದಲ್ಲೂ ಹೆಚ್ಚು ಉತ್ಪನ್ನ ಮಾಡಬೇಕಾದರೆ ಸರಕಾರ ಹಾಗೂ ಎರೆಕ್ಟಿಸಿಟಿ ಬೋರ್ಡಿನವರು ಇಬ್ಬರೂ ಕರೆತು ನೂಕ್ತವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವೊತ್ತು ರೈತ ಹೆಚ್ಚು ಆಹಾರ ಧಾನ್ಯವನ್ನು ಬೆಳೆಸಬೇಕಾಗಿದೆ. ಮತ್ತು ರೈತರಿಂದ ನಾವು ಲಂಚ ಬೇರೆ ವಸೂಲು ಮಾಡು ತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಕ್ಷಾಮ ಬರುತ್ತಲೇ ಇದೆ, ಈ ದೇಶದಲ್ಲಿ ಕೆಲವು ಕಡೆ ಸರಿಯಾಗಿ ಮಳೆ ಸುರಿಲಿಲ್ಲ. ಕೆಲವು ಕಡೆ ವಿಪರೀತವಾಗಿ ಮಳೆ ಬಂದು ರೈತರು ಬೆಳೆದ ಫಸಲೂ ನಷ್ಟವಾಗಿದೆ. ಈಚೆಗೆ ಸೆಂಟ್ರಲ್ ಗವರ್ನಮೆಂಟಿನವರು ಗೊಬ್ಬರದಮೇಲೆ ಶೇಕಡಾ ಹತ್ತರಷ್ಟು ತೆರಿಗೆ ಜಾಸ್ತಿ ಮಾಡಿದ್ದಾರೆ. ಇದರಿಂದ ಆಹಾರಧಾನ್ಯದ ಬೆಳೆಯೂ ಕೂಡ ಒಂದಕ್ಕೆರಡರಷ್ಟು ಏರಿದೆ. ಕೆಲವು ಕಡೆ ಕ್ವಿಂಟಾಲ್‌ಗೆ ಹತ್ತು ಇಪ್ಪತ್ತು ರೂಪಾಯಿಗಳಷ್ಟು ಕಡಿಮೆ ಯೂ ಆಗಿದೆ. ನಮ್ಮ ದೇಶದಲ್ಲಿ ಇರುವ ನದಿಗಳಿಗೆ ಎಲ್ಲ ಕಡೆಗಳಲ್ಲೂ ಕಟ್ಟೆ ಕೆಲಸ ಸಂಪೂರ್ಣವಾಗಿ ಆಗಿಲ್ಲ. ಕೆಲವು ಕಡೆ ಹೆಚ್ಚಾಗಿ ಹರಿದು ಹೋಗುವ ನೀರನ್ನು ಳಿಸಿಕೊಂಡು ಅದನ್ನು ಪಯೋಗಿಸಬೇಕಾ ಗಿದೆ. ಇಂತಹ ಕಡೆಗಳಲ್ಲಿ ಪಂಪುಗಳನ್ನು ರೈತರು ಉಪಯೋಗಿಸಿಕೊಂಡು ಅದನ್ನು ಪಯೋಗಿಸಬೇಕಾ ಬೇಕಾಗುತ್ತದೆ. ಹೆಚ್ಚು ಜನಸಾಮಾನ್ಯರು ಪಂಪುಗಳನ್ನು ಪಯೋಗಿಸಬೇಕಾದರೆ ಸರಕಾರ ಹೆಚ್ಚು ಪ್ರೋತ್ಸಾಹ ಕೊಡಬೇಕು. 1960 ರಿಂದ 1965ನೇ ಸಾಲಿನವರೆಗೆ ಒಂದು ಹೆಚ್.ಪಿ. ಎಂಜಿನ್ನಿ ಗಾಗಿ 18 ರೂಪಾಯಿಗಳಷ್ಟು ಟ್ಯಾಕ್ಸ್‌ನ್ನು ಹಾಕಿದ್ದರು. ಇದನ್ನು 1965ರಿಂದ 68ನೇ ಸಾಲಿನ

(ಶ್ರೀ ಬೋಳಾ ರಘುರಾಮ ಶೆಟ್ಟಿ)

ವರೆಗೆ 24 ರೂಪಾಯಿಗಳಷ್ಟು ಏರಿಸಿದ್ದಾರೆ. ಬೋರ್ಡಿನ ಬಜೆಟನ್ನು ಸಭೆಯ ಮುಂದೆ ಇಟ್ಟಮೇಲೆ ಪುನಃ 48 ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ಇದನ್ನು ರೈತರಮೇಲೆ ಹಾಕುವುದಕ್ಕೆ ಮೊದಲು ಈ ಸಭೆಯ ಒಪ್ಪಿಗೆ ಪಡೆಯಬೇಕಾಗಿತ್ತು. ಇದರಮೇಲೆ ಪಂಪುಸೆಟ್ ಇಟ್ಟುಕೊಂಡಿರುವವರು ಮಿನಿಮಂ ರೇಟು ಎಂದು ನಾಲ್ಕು ರೂಪಾಯಿಗಳಷ್ಟು ಬೇರೆ ಕೊಡಬೇಕಾಗಿದೆ. ಇದರಿಂದ ಎಲ್ಲರಿಗೂ ಪಂಪುಸೆಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಹೇಳಬೇಕಾದರೆ ಜೂನ್ ತಿಂಗಳಿಂದ ಅಕ್ಟೋಬರು ಮತ್ತು ನವಂಬರು ತಿಂಗಳವರೆಗೆ ಪಂಪುಸೆಟ್ಟು ಉಪಯೋಗ ಮಾಡುವ ಅಗತ್ಯವೇ ಇಲ್ಲ. ಆನಂತರ ಇಲ್ಲಿ ಹೆಚ್ಚು ಹರಿಯುವ ನೀರು ಸಮುದ್ರಕ್ಕೆ ಹೋಗುತ್ತದೆ. ಈಗೆ ಹರಿಯುವ ನೀರು ಸಿಗುವ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಪ್ರಯೋಗಿಸಬೇಕು.

ಈಗ ಈ ಹೊಸ ಟ್ಯಾರಿಫ್ ಮತ್ತು ಹೊಸ ಟ್ಯಾಕ್ಸ್‌ನ್ನು ಏರಿಸಿದ್ದುದರಿಂದ ಇದರ ಪರಿಣಾಮ ಅಳವಾದ ಬಾವಿಯಿಂದ ನೀರು ತೆಗೆಯುವುದಕ್ಕೆ ಹೋದರೆ 3-4 ಹಾರ್ಸ್ ಪವರ್ ಪಂಪ್‌ಸೆಟ್ಟನ್ನು ಇಟ್ಟುಕೊಂಡಿದ್ದವರಿಗೆ 7-8 ಪಟ್ಟು ಹೆಚ್ಚು ಟ್ಯಾಕ್ಸ್ ಕೊಡಬೇಕಾಗುತ್ತದೆ. ಈವೊತ್ತಿನ ದಿವಸ ರೈತರು ಎಲ್ಲೋ ಸಾಲ ಮಾಡಿ ಗೊಬ್ಬರ ತಂದು, ಪಂಪುಸೆಟ್ಟನ್ನು ಇಟ್ಟು ಕೊಂಡರೆ ಆ ಬಡರೈತನಿಗೆ ಟ್ಯಾಕ್ಸ್ ಕೊಡಲಕ್ಕೆ ಸಾಮರ್ಥ್ಯ ಇದೆಯೇ ಎನ್ನುವುದನ್ನು ವಿಚಾರ ಮಾಡಬೇಕು. ರೈತ ಟ್ಯಾಕ್ಸ್ ಕೊಡಲು ಅಸಮರ್ಥನಾದರೆ ಡಿಸ್‌ಕನೆಕ್ಷನ್ ಮಾಡುತ್ತಾರೆ. ಈರೀತಿ ಪರಿಸ್ಥಿತಿ ರೈತನಿಗೆ ಇರುವುದರಿಂದ ತೊಂದರೆಯಾಗಿದೆಯೆಂದೂ ಎಲ್ಲಾ ಪಕ್ಷಗಳೂ, ಸಂಘ ಸಂಸ್ಥೆಗಳೂ ರೈತರೂ ಪ್ರತಿಯೊಬ್ಬರೂ ಪ್ರತಿಭಟನೆ ಮಾಡುತ್ತಿದ್ದಾರೆ. ಈ ದಿವಸ ಅಗ್ಗದ ದರದಲ್ಲಿ ಮದ್ರಾಸಿಗೂ, ಮಹಾರಾಷ್ಟ್ರಕ್ಕೂ, ಕೇರಳಕ್ಕೂ, ಗೋವಾ ಪ್ರದೇಶಕ್ಕೂ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುತ್ತಿದ್ದಾರೆ. ಅವರೆ ನಮ್ಮ ರಾಜ್ಯದ ಬೆನ್ನೆಲುಬು ಎಂದು ಹೇಳುತ್ತಾ ಇರುವ ರೈತರಿಗೆ ದುಬಾರಿಯಾದ ದರವನ್ನು ಹಾಕುವುದು ಯಾವ ನ್ಯಾಯ ಎಂದು ಈವೊತ್ತು ನಮ್ಮ ರಾಜ್ಯದಲ್ಲಿ 2 ಕೋಟಿ ಇರತಕ್ಕಂಥ ಜನತೆಯನ್ನು ಆಳತಕ್ಕಂಥ ಸರ್ಕಾರವನ್ನು ನಾವು ಪ್ರಶ್ನಿಸಬೇಕಾಗಿದೆ. ಈ ಜನತೆಯನ್ನು ಸಮಾಧಾನ ಮಾಡುವ ಜವಾಬ್ದಾರಿ ಎರೆಕ್ಟ್ರಿಸಿಟಿ ಬೋರ್ಡ್‌ನವರಮೇಲೆ ಇದೆ. ಎರೆಕ್ಟ್ರಿಸಿಟಿ ಬೋರ್ಡ್‌ನವರು ದರ ಏರಿಸಿದ್ದುದು ಮಾತ್ರವಲ್ಲದೆ ಅವರು ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುವುದರಲ್ಲಿಯೂ ಕೂಡ ಅವ್ಯವಸ್ಥೆಯೆಂಟಾಗಿದೆ. ಮುಖ್ಯವಾಗಿ ಮಳೆಗಾಲದಲ್ಲಿ ಯಾವ ಹೊತ್ತಿನಲ್ಲಿ ದೀಪ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಮನೆ ದೀಪ ಇರುವವರಿಗೆ ಇದರ ಅನುಭವ ಚೆನ್ನಾಗಿ ಗೊತ್ತಿದೆ. ಈವೊತ್ತಿನ ದಿವಸ ವಿದ್ಯುಚ್ಛಕ್ತಿ ಬೋರ್ಡ್‌ನವರು ಸರಿಯಾದಂಥ ವಿವರಗಳನ್ನೊಳಗೊಂಡ ಲೆಕ್ಕಪತ್ರಗಳನ್ನು ಕೊಡಬೇಕು. ಇವರು ಮಾಡಿರತಕ್ಕಂಥ ಸಾಲವಾಗಲಿ, ಅಥವಾ ಮೂಲವಾಗಲಿ ಅದನ್ನು ಯಾವುದಕ್ಕೆ ಉಪಯೋಗ ಮಾಡಿದ್ದಾರೆ. ಇಂದು ನೋಡಿದರೆ ನಮ್ಮ ಅನುಭವದ ಪ್ರಕಾರ ಹೇರಳವಾಗಿ ಸಾಮಾನುಗಳನ್ನು ಕೊಂಡುಕೊಂಡು ಜಮಾ ಮಾಡಿಟ್ಟುಕೊಂಡಿದ್ದಾರೆ. ಅದನ್ನು ಸಂಪೂರ್ಣವಾಗಿ ಉಪಯೋಗ ಕೂಡ ಮಾಡುತ್ತಾ ಇಲ್ಲ. ಸಾಮಾನ್ಯವಾಗಿ 1962-63 ನೇ ಸಾಲನಲ್ಲಿ 542.62 ಲಕ್ಷ ರೂಪಾಯಿಗಳಷ್ಟು ಸಾಮಾನುಗಳ ಸ್ಟಾಕ್ ಇತ್ತು. ಅವರ ವರದಿ ಪ್ರಕಾರ 25 ಲಕ್ಷ ರೂಪಾಯಿಗಳಷ್ಟು ಸಾಮಾನುಗಳು ನಷ್ಟವಾಗಿದೆ. ಇದು ಹಾಳಾಗಿದೆಯೇ ಅಥವಾ 3 ವರ್ಷದಿಂದ ಸಾಮಾನುಗಳನ್ನು ಹಾಗೆಯೇ ಇಟ್ಟುಕೊಂಡು ಅದನ್ನು ಸರಿಯಾಗಿ ಉಪಯೋಗ ಮಾಡದೇ ಇದ್ದಾರೆಯೇ ಎನ್ನುವುದನ್ನು ತಿಳಿಸಬೇಕು. ಆದರೆ ಇದರ ಬಗ್ಗೆ ಬೇಕಾಗಿರುವ ಸಾಲದ ಹೊರೆಯನ್ನು ರೈತವರ್ಗದವಮೇಲೆ ಹಾಕಿದ್ದಾರೆ. ಈವೊತ್ತಿನ ದಿವಸ ಎರೆಕ್ಟ್ರಿಸಿಟಿ ಬೋರ್ಡ್‌ನವರು ಹೇಳುತ್ತಾ ಇರುವುದು ಇಡೀರಾಜ್ಯಕ್ಕೆ ಎಲ್ಲಾ ಹಳ್ಳಿಗಳಿಗೂ ಅಗಾಧವಾಗಿ ವಿದ್ಯುಚ್ಛಕ್ತಿ ಪೂರೈಕೆ ಮಾಡುತ್ತಿದ್ದೇವೆ ಎಂದು. ಆದರೆ ಅದರ ಭಾರ ರೈತ ಹೊರಬೇಕು. ಇದು ಖಂಡನೀಯವಾಗಿದೆ. ಏತಕ್ಕೆಂದರೆ ಮೊದಲನೆಯದಾಗಿ ನಾನು ಹೇಳುವುದು ನಗರಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿದರೆ, ನಮ್ಮ ಇಡೀ ರಾಜ್ಯದ ಸಂಪತ್ತಿಗೆ ನಗರವಾಸಿಗಳಿಂದಲೇ ಕೊಡುವ ಟ್ಯಾಕ್ಸ್‌ನಿಂದ ಆಗುವುದಿಲ್ಲ ಅಥವಾ ಅವರ ಒಬ್ಬರಮೇಲೆಯೇ ತೆರಿಗೆ ಹಾಕಿದರೆ ವಿದ್ಯುಚ್ಛಕ್ತಿ ಇಡೀ ರಾಜ್ಯಕ್ಕೆ ಪೂರೈಕೆ ಆಗುವುದಿಲ್ಲ. ಹಳ್ಳಿಯ ರೈತವರ್ಗದವರಮೇಲೆ ಅತಿ ಕೆಳಗಿನಮಟ್ಟದ ಜೀವನವನ್ನು ನಡೆಸಿಕೊಂಡು ಬರುತ್ತಾ, ಇರುವ ಜನರಮೇಲೆ ಈ ತೆರಿಗೆಯ ಭಾರ ಬೀಳುತ್ತಾ, ಇರುವಾಗ ಈವೊತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆ, ಪಂಪುಸೆಟ್ಟು ಪೂರೈಕೆಯನ್ನು ನಾವು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಎಲ್ಲಾ ಭಾರವನ್ನೂ ರೈತರು ಹೊರಲೇಬೇಕಾಗಿದೆ. ಪಂಪುಸೆಟ್ಟಿಗೆ ಹಾಕಿರತಕ್ಕಂಥ ದರವನ್ನು ದುಬಾರಿ ಮಾಡಬೇಕೆನ್ನುವುದು, ರೈತರು ಉಪಯೋಗ ಮಾಡತಕ್ಕಂಥ ಪವರ್‌ಗೆ ವಿದ್ಯುಚ್ಛಕ್ತಿ ದರವನ್ನು ದುಬಾರಿ ಮಾಡಬೇಕೆನ್ನುವುದು ಸರಿಯಲ್ಲ. ಈ ವಿಚಾರವನ್ನು ಎರೆಕ್ಟ್ರಿಸಿಟಿ ಬೋರ್ಡ್‌ನವರು ತೀರ್ಮಾನ ಮಾಡದೇ ಇರುವುದು ದುರದೃಷ್ಟಕರ ಎಂದು

ಹೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ದೇಶದ ಬೆನ್ನೆಲುಬು ಎಂದು ಹೇಳತಕ್ಕಂಥ ರೈತರನ್ನು ಮುಂದಕ್ಕೆ ತರಬೇಕಾದರೆ ಎಲೆಕ್ಟ್ರಿಸಿಟಿ ಪೂರೈಕೆ ನಗರಗಳಲ್ಲಿರುವಂತೆ ಹಳ್ಳಿಗಳಲ್ಲಿಯೂ ಆಗಬೇಕು. ಮತ್ತು ಈಗ ಇರುವ ಟ್ಯಾಕ್ಸ್‌ನಲ್ಲಿ ಅರ್ಧ ದರ ಮಾಡಬೇಕು, ರೈತರ ನ್ಯಾಯವಾದ ಕೇಳಿಕೆಗೆ ಗಮನಕೊಡಬೇಕು ಎಂದು ಹೇಳುತ್ತೇನೆ. ಸರ್ಕಾರದವರೂ ಕೂಡ ಈಪೊತ್ತಿನ ದಿವಸ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಏನು ಹೇಳುತ್ತಾರೋ ಅದರಂತೆ ಕೇಳುತ್ತಿದ್ದಾರೆ. ಅವರು ಯಾವುದಾದರೂ ವಿಷಯದಲ್ಲಿ ಈ ರೀತಿಯಲ್ಲದ ಈರೀತಿ ಮಾಡಬೇಕು ಎಂದು ಹೇಳಿದರೆ ಅದಕ್ಕೆ ಒಪ್ಪಿಗೆ ಕೊಟ್ಟು ಬಿಡುತ್ತಾರೆ. ಅದುದರಿಂದ ಇಂತಹ ಸಂದರ್ಭದಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ನ್ನು ಮಾತ್ರವಲ್ಲದೆ ಸರ್ಕಾರವು ನೀತಿಯನ್ನೂ ಖಂಡನೆ ಮಾಡಬೇಕಾಗಿದೆ. ಇವತ್ತಿಂದ ರೈತರು ದಾಗೆ ಏಳುವಮಟ್ಟಿಗೆ ಅವಕಾಶವಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಅದುದರಿಂದ ನಾನು ಈಗ ಹೇಳುವುದು ರೈತರಿಗೆ ಕೊಡುವ ಪಂಪುಸೆಟ್ಟಿನಮೇಲೆ ಹಾರ್ಸ್ ಪವರ್‌ಮೇಲೆ ಏನು ದರ ಹಾಕಿದ್ದೀರಿ ಅದನ್ನು ಕಡಿಮೆ ಮಾಡಬೇಕು ಅಂದರೆ ಅರ್ಧ ದರ ಮಾಡಬೇಕು ಇಲ್ಲವೇ ಕಷ್ಟೇ ಪಕ್ಷ ಹಿಂದೆ ಇರುವ ದರದರ್ಜಾದರೂ ಮುಂದುವರಿಸಬೇಕೆಂದು ಹೇಳುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಅಧ್ಯಕ್ಷರೆ, ಮೈಸೂರು ರಾಜ್ಯದ ವಿದ್ಯುಚ್ಛಕ್ತಿಯನ್ನು ಮಂಡಲಿಯು ಮನಸ್ಸೋಚ್ಛೆಯಾಗಿ ರಾಜ್ಯಭಾರ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿ ಇದಕ್ಕಿಂತ ಹಿಂದೆ ಮೈಸೂರು ರಾಜ್ಯ ಸರ್ಕಾರ ಒಂದು ಇರಾಖೆಯಾಗಿ ಕೆಲಸ ಮಾಡುತ್ತಿತ್ತು. ಆ ಕಾಲದಲ್ಲಿ ನಡೆಯುತ್ತಿದ್ದ ವ್ಯವಹಾರಕ್ಕೂ ಈ ಒಂದು ಮಂಡಲಿ ಆದಮೇಲೆ ಆಗುತ್ತಾ ಇರತಕ್ಕಂಥ ವ್ಯವಹಾರಕ್ಕೂ ಹೋಲಿಸಿ ನೋಡಿದರೆ ಈ ಮಂಡಲಿ ಆದಮೇಲೆ ಪರಿಸ್ಥಿತಿ ತುಂಬಾ ಹದಗೆಟ್ಟಿದೆ ಎಂದು ಹೇಳಬಹುದು ಈ ಮಂಡಲಿ ಹೆಸರಿನಲ್ಲಿ ನಡೆಯುತ್ತಾ ಇರತಕ್ಕಂಥ ದುಂದುವೆಚ್ಚ ಮತ್ತು ಅದರಲ್ಲಿ ಆಗತಕ್ಕಂಥ ಸಾಮಾನಿನ ಅಪಹರಣ ಮತ್ತು ಅನಾವಶ್ಯಕವಾದ ಸಿಬ್ಬಂದಿಗೆ ಹೆಚ್ಚು ಖರ್ಚು ಮಾಡುತ್ತಾ ಇರುವುದು ಈ ಎಲ್ಲಾ ರೀತಿಯಿಂದಾಗಿ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಅಪಾರ ನಷ್ಟವಾಗುತ್ತಾ ಇದೆ. ಅದುದರಿಂದ ಈ ನಷ್ಟವನ್ನು ತುಂಬಿಸಲಿಕ್ಕೆ ಸರಧಾರ್ಜು ಕೊಡಬೇಕು ಅಲ್ಲದೆ ವಿದ್ಯುತ್ ಪಂಪ್ ಸೆಟ್ಸ್‌ನ್ನು ಉಪಯೋಗಿಸತಕ್ಕಂಥವರು ಮಿನಿಮಮ್ ಧಾರ್ಜು ಜಾಸ್ತಿ ಕೊಡಬೇಕು, ಇತ್ಯಾದಿ, ಇತ್ಯಾದಿ ಕೊಡಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಈರೀತಿ ಬೋರ್ಡ್‌ನವರು ಜನತೆಯಿಂದ ಕೊಡಿಸುವುದಕ್ಕೆ ಬಹಳ ಹೂಣರು, ಬುದ್ಧಿವಂತರೂ ಆಗಿದ್ದಾರೆ. ಮತ್ತು ಅವರಿಗೆ ಉತ್ತರ ಕೊಡುವ ಶಕ್ತಿಯೂ ಕೂಡ ರಾಜ್ಯಸರ್ಕಾರದ ಮಂತ್ರಿಗಳಿಗಿಲ್ಲ. ಅವರು ಸರ್ಕಾರಕ್ಕೆ ಹೇಳುತ್ತಾರೆ ನಮಗೆ ರಾಸ್ ಆಗುತ್ತಾ ಇದೆ, ನೀವೂ ಕೂಡ ನಮಗೆ ಏನೂ ಕೊಡುತ್ತಾ ಇಲ್ಲ ರಾಸ್ ಆದರೆ ನಮಗೆ ವಿದ್ಯುಚ್ಛಕ್ತಿಯ ಆಡಳಿತ ನಡೆಸಲು ಕಷ್ಟವಾಗುತ್ತದೆ ಹೀಗೆಲ್ಲಾ ಹೇಳಿ ಈರೀತಿ ಮಾಡಬೇಕು ಎಂದು ಹೇಳಿದರೆ ಹಾಗೆ ಮಾಡಿರಿ ಎಂದು ಮಂತ್ರಿಗಳು ಹೇಳುತ್ತಾರೆ. ಶ್ರೀಮಾನ್ ಶಿವಪ್ಪನವರು ಹೇಳಿದರು, ಶ್ರೀಮಾನ್ ಪರಮೇಶ್ವರಪ್ಪನವರು ಮೊದಲು ಈ ಕಡೆಯಲ್ಲೇ ಇದ್ದವರು, ಅವರಿಗೆ ಸೋಷಿಯಾಲಸಮ್ ಎಲ್ಲಾ ಗೊತ್ತು ಎಂದು ಈಗ ಶ್ರೀಮಾನ್ ಪರಮೇಶ್ವರಪ್ಪನವರು ಆಳುವ ಪಕ್ಷದೊಳಗೆ ಸೇರಿಕೊಂಡು ಮಂತ್ರಿಗಳಾಗಿದ್ದಾರೆ. ಅವರು ಈ ದಿನ ರೈತರ ಬಗ್ಗೆ ಏನು ಯೋಚನೆ ಮಾಡುತ್ತಿಲ್ಲ. ಏತಕ್ಕೆಂದರೆ ಅವರು ಈಗ ಅಧಿಕಾರದಲ್ಲಿದ್ದಾರೆ, ಅವರಿಗೆ ಬಂಗಲೆ ಸುಲಭವಾಗಿ ಸಿಕ್ಕಿದೆ, ಆದ್ದರಿಂದ ಅವರಿಂದ ನಾವು ಈಗ ಹೆಚ್ಚಿನ ಪ್ರತಿಫಲ ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ಈ ದಿನ ಈ ರೀತಿ ದರವನ್ನು ಹೆಚ್ಚುವಾಡಲಿಕ್ಕೆ ಬೋರ್ಡಿನ ಆಡಳಿತವೇ ಕಾರಣ ಎಂದು ಹೇಳಬಹುದು. 20 ವರ್ಷಗಳಿಂದ ಹಿಂದೆಯೂ ಕೂಡ ನೀರಾವರಿ ಪಂಪುಸೆಟ್ಟುಗಳು ಇತ್ತು. ಕೋಲಾರ ಜಿಲ್ಲೆಯಲ್ಲಿ ಮೊಟ್ಟಮೊದಲು ಇದು ಪ್ರಾರಂಭವಾಯಿತು. ಆಗಿನ ಕಾಲದಲ್ಲಿ ಇದಕ್ಕೆ ಮಿನಿಮಮ್ ಧಾರ್ಜಸ್ ಒಂದು ತಿಂಗಳಿಗೆ ಒಂದು ರೂಪಾಯಿ ಇತ್ತು. ಆಮೇಲೆ ವಿದ್ಯುಚ್ಛಕ್ತಿ ಬೋರ್ಡ್ ಆದಮೇಲೆ ಒಂದು ರೂಪಾಯಿ ಇದ್ದ ಧಾರ್ಜನ್ನು 2 ರೂಪಾಯಿ ಮಾಡಿದ್ದಾರೆ. ಈಗ 4 ರೂಪಾಯಿ ಮಾಡಿದ್ದಾರೆ. ಮೂಕ ಪ್ರಾಣಿಗಳ ಹಾಗಿರುವ ರೈತರಿಗೆ ಸಂಘಟಿತ ಶಕ್ತಿಯಿಲ್ಲ, ಅದುದರಿಂದ ಏನು ಬೇಕಾದರೂ ಮಾಡಬಹುದು ಎಂದು ಭಾವಿಸಿರುವಂತಿದೆ. ಹೀಗೆಯೇ ಬಿಟ್ಟರೆ ಮುಂದಿನ ವರ್ಷ 8 ರೂಪಾಯಿ ಮಾಡುವರು.

ಇನ್ನು ನಷ್ಟವಾಗುವುದಕ್ಕೆ ಅನೇಕ ಕಾರಣಗಳಿವೆ, 9–10 ರೂಪಾಯಿ ಬಡ್ಡಿ ಕೊಟ್ಟು ಬ್ಯಾಂಕುಗಳಿಂದ ಸಾಲ ತೆಗೆದು 6 ರೂಪಾಯಿ ಬಡ್ಡಿಗೋ ಏನೋ ಅವೇ ಬ್ಯಾಂಕಿನಲ್ಲಿ ಸಾಲದ ಹಣವನ್ನಿಡುವರು. ವಿದ್ಯುತ್ ಮಂಡಲ ಅಧಿಕಾರಿಗಳಿಗೂ ಮತ್ತು ಬ್ಯಾಂಕುಗಳಿಗೂ ಏನು ಸಂಬಂಧವಿದೆಯೋ ಅರ್ಥವಾಗುವುದಿಲ್ಲ. ಹೀಗೆ ನಷ್ಟಮಾಡಿಕೊಂಡು ಅದನ್ನು ರೈತರು ಹೊರಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳವರು ಮುಖ್ಯ ಮಂತ್ರಿಗಳ ಬಳಿಗೆ ಹೋಗಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಹೇಳಿದರೆ ಪಂಪುಸೆಟ್ಟು ಹಾಕುವವರು ಅನುಕೂಲವಿದ್ದಾರು, ಅವರಿಗೆ ಕಡಿಮೆ ದರ ವಿಧಿಸಬೇಕು ಎಂದು ಹೇಳುವುದರಲ್ಲಿ ಏನೂ ನ್ಯಾಯವಿಲ್ಲ ಎಂದು ಹೇಳಿದರು. ಇಂದು ಕೋಲಾರ ಜಿಲ್ಲೆಯಲ್ಲಿರುವ 83 ಸಾವಿರ ಪಂಪುಸೆಟ್ಟುಗಳಲ್ಲಿ 15,277 ಕ್ಕೆ ವಿದ್ಯುತ್ ಮಂಡಲಿ ಅಂಕಿಯ ಪ್ರಕಾರ ದರ ಜಾಸ್ತಿಯಾಗಿದೆ. ಇದರಲ್ಲಿ ಮುಕ್ಕಾಲು ಭಾಗ ಬಾವಿಗಳಿಗೆ ಹಾಕಿರುವುದಿದೆ. 60-70 ಭಾಗ ಬಾವಿಗಳಿಗೆ ಮಿನಿಮಂ 2 ರೂಪಾಯಿದೆ, ಖರ್ಚುಮಾಡಲು ಬಾವಿಗಳಲ್ಲಿ ನೀರು ಕೂಡ ಇಲ್ಲ. ಭಾವಿ ತೋಡಲು ಸಾಲ ಮಾಡಿ ಪಂಪುಸೆಟ್ಟು ಹಚ್ಚಲು ಸಾಲ ಮಾಡಿ ವ್ಯವಸಾಯಮಾಡಲು ಹೊರಟಿರುವಾಗ ಬಾವಿಗಳಲ್ಲಿ ನೀರೇ ಇಲ್ಲವಾಗಿದೆ. ಮಳೆ ಬಂದಾಗ ನೀರಿರುವುದು, ನಂತರ ಯಾವ ಬೆಳೆಗೂ ನೀರು ದೊರೆಯುವುದಿಲ್ಲ. ಕೇಗಿರುವಾಗ ಮಿನಿಮಂ 3 ಎಚ್. ಪಿ. ಮೋಟಾರ್ ಇಟ್ಟಿರುವವರಿಗೆ ಮೊದಲು ವರ್ಷಕ್ಕೆ 72 ರೂಪಾಯಿ ಥಾರ್ಜು ಬೀಳುತ್ತಿತ್ತು, ಈಗ ಹೊಸ ನೀತಿ ಪ್ರಕಾರ 144 ರೂಪಾಯಿ ಕೊಡಬೇಕು, ಎಷ್ಟು ಕರೆಂಟು ಖರ್ಚಾದರೂ ಕೊಡಬೇಕು ; ದೇವರಿಗೆ ಮುಡುಪು ಕೊಟ್ಟಹಾಗೆ ಮಂಡಲಿಗೆ ಕೊಡಬೇಕು. ಇದಕ್ಕೇನು ಕಾರಣ ? ಹತ್ತಾರು ವರ್ಷಗಳಿಂದ ವಿದ್ಯುಚ್ಛಕ್ತಿ ಬೋರ್ಡ್ ಆಗುವುದಕ್ಕೆ ಮುಂಚಿನಿಂದಲೂ ಪಂಪು ಹಾಕಿರುವವರಿದ್ದಾರೆ. ಈಗ ಬೋರ್ಡ್ ಆಗಿದೆ, ಅದಕ್ಕೆ ಥೇರ್ಮನ್ ಇದ್ದಾರೆ, ಸಿಬ್ಬಂದಿ ಇದೆ, ಅದಕ್ಕೆ ಜಾಸ್ತಿ ಕೊಡಬೇಕು, ಖರ್ಚು ಜಾಸ್ತಿ, ಆದುದರಿಂದ 2 ರೂಪಾಯಿ ಕೊಡಬೇಕು. ಬೋರ್ಡ್ ಆದಮೇಲೆ ಕಂಬ ಹಾಕಿಲ್ಲ, ಹಂದೆ ಹಾಕಿದ್ದೇ, ಆದರೂ ಜಾಸ್ತಿ ದರ ಕೊಡಬೇಕು ಎಂದು ಹೇಳಿದರೆ ಹೇಗೆ ? ನಿಮ್ಮನ್ನು ಕೇಳುವವರು ಯಾರೂ ಇಲ್ಲವೇ ? ಇಂದು ಕೋಲಾರ ಜಿಲ್ಲೆ ಪರಿಸ್ಥಿತಿ ನೋಡಿದರೆ ಅಲ್ಲಿ ಬೇರೆ ಭಾಗಗಳಿಗಿಂತ ಬಹಳ ಕಡಮೆ ಮಳೆ ಬರುವುದು ; 24 ಇಂಚು ಮಳೆ ಬರುವುದು, ಅಲ್ಲಿ 2-3 ವರ್ಷಗಳಿಗೊಂದು ಬೆಳೆಯಾಗುವುದು ; ಕೆಲವು ವೇಳೆ ಬೆಳೆ ಪೂರ್ಣವಾಗಿ ನಾಶವಾಗುವುದು, ಅಲ್ಲಿ ಬಾವಿಯೇ ಆಧಾರ ಮತ್ತು ನೀರಿಲ್ಲದೆ ಬೋರ್‌ವೆಲ್ ಹಾಕಿ ಬೆಂ ಜುಲ ಆಧಾರದಮೇಲೆ ವ್ಯವಸಾಯಾಭಿವೃದ್ಧಿ ಮಾಡಲು ಸಾಧ್ಯ. ಹಸಿರು ಕ್ರಾಂತಿಗೆ ಸಹಾಯಮಾಡುವುದಾಗಿ ಕೋಲಾರ ಜಿಲ್ಲೆಯವರಿಗೆ ಭರವಸೆ ಕೊಟ್ಟು ಸರಕಾರ ದರ ಹೆಚ್ಚಿಸುವ ನೀತಿ ಅನುಸರಿಸುತ್ತಿದೆ. ನಾವೇನು ಮಾಡುವುದು, ಮಂಡಲಿ ಮಾಡಿದೆ ಎಂದು ಸರಕಾರ ಹೇಳಬಹುದು. ಆದರೆ ಸರಕಾರಕ್ಕೂ ಮಂಡಲಿಗೂ ಸಂಬಂಧವಿಲ್ಲವೇ ? ಮಂಡಲಿಯಲ್ಲಿರುವ ಅಕೌಂಟ್ಸ್ ನಮ್ಮ ರಾಜ್ಯದ್ದು, ಸರಕಾರದವರು ಸಾಲ ಕೊಡಲು ಗ್ಯಾರಂಟಿ ಕೊಡಬೇಕು. ಹೀಗಿರುವಾಗ ಬೋರ್ಡ್ ಏನು ಮಾಡಿದರೂ ಸರಕಾರ ಏನು ನಿರ್ದೇಶ ಕೊಡಲೂ ಸಾಧ್ಯವಿಲ್ಲವೆಂದರೆ ಅದು ಬಹಳ ಅವಮಾನದ ವಿಷಯ ; ಶೋಭಾಯಮಾನವಾದ ವಿಷಯವಲ್ಲ.

ಕೋಲಾರ ಜಿಲ್ಲೆಯವರಿಗೆ ಹೇಳುವುದಾದರೆ ಅಲ್ಲಿರುವ ಬಾವಿಗಳಲ್ಲಿ ಮುಕ್ಕಾಲು ಭಾಗದ ಬಾವಿಗಳಲ್ಲಿ ನೀರು ಕಡಮೆ, ರೈತರಿಗೆ ಮಿನಿಮಂ ಜಾಸ್ತಿಯಿದ್ದರೆ ತುಂಬಾ ತೊಂದರೆಯಾಗುವುದು ಮತ್ತು ವ್ಯವಸಾಯಾಭಿವೃದ್ಧಿಗೂ ತೊಂದರೆಯಾಗುವುದು. ಆದುದರಿಂದ ಯಾವುದೇ ಕಾರಣದಿಂದ ಮಿನಿಮಂ ದರವನ್ನು ಹೆಚ್ಚಿಸಬಾರದು ಎಂದು ಒತ್ತಾಯಮಾಡುತ್ತೇನೆ. ನಾವೇನೇ ಹೇಳಿದರೂ ಮಂಡಲಿಯ ತೀರ್ಮಾನವನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂದು ಹೇಳುವುದು ನೂಕ್ಕುವಲ್ಲ. ಈಗ ಸಿವಿಲ್ ಪಿ. ಡಬ್ಲ್ಯು. ಇಲಾಖೆಯಿದೆ, ದೇಶದಲ್ಲಲ್ಲಾದರೂ ಒಂದು ಅಣೆಕಟ್ಟು ಕಟ್ಟಬೇಕಾದರೆ ಆ ಇಲಾಖೆಯ ಎಂಜಿನಿಯರು ಹೋಗಬೇಕು, ಕಟ್ಟಿಸಬೇಕು. ಆದರೆ ಆ ಸಿವಿಲ್ ಇಲಾಖೆಯ ಕೆಲಸವನ್ನು ರೆಗ್ಯುಲರ್ ಪಿ. ಡಬ್ಲ್ಯು. ಡಿ. ಮಾಡಬಹುದಾಗಿತ್ತು. ಹಾಗೆ ಮಾಡದೆ ಒಬ್ಬ ಸೂಪರಿಂಟೆಂಡಿಂಗ್ ಎಂಜಿನಿಯರು, ಚೀಫ್ ಎಂಜಿನಿಯರು ಮುಂತಾದವರನ್ನು ಅನಾವಶ್ಯಕವಾಗಿ ಸಿವಿಲ್ ಇಲಾಖೆಗೆ ಹಾಕಿ ಹಣ ಪೋಲುಮಾಡುವುದನ್ನು ನಿಲ್ಲಿಸಿದರೆ ಈ ಇಲಾಖೆಯಿಂದಾಗುವ ನಷ್ಟವನ್ನು ಕಡಮೆಮಾಡುವುದಕ್ಕೆ ಖಂಡಿತ ಸಾಧ್ಯವಾಗುತ್ತದೆ. ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ದುರಾಡಳಿತ, ಅನಾವಶ್ಯಕವಾದ ಸಿಬ್ಬಂದಿ ಮುಂತಾದ್ದು ಕರದ ನಷ್ಟಕ್ಕೆ ಕಾರಣವಾಗಿದೆ. ಕೆಲವು ಕಡೆ ಸಿಮೆಂಟ್ ಪೋಲ್ಸ್ ಹಾಕುತ್ತಿದ್ದಾರೆ. ಖಾಸಗಿಯವರು ಕೆಲವರು ಸಿಮೆಂಟ್ ಪೋಲ್ಸ್‌ಗೆ ಮಂಡಲಿಯವರು ಖರ್ಚುಮಾಡುವುದರ ಅರ್ಧ ಖರ್ಚಿನಲ್ಲಿ ತಾವು ಸಿಮೆಂಟು ಕಂಬಗಳನ್ನು ಸರಬರಾಜು ಮಾಡುವುದಕ್ಕೆ ಸಿದ್ಧ ಎಂದು ಹೇಳಿದ್ದಾರು. ಅನಾವಶ್ಯಕವಾಗಿ ಯಾರಿಗೋ ಕೆಲಸಕ್ಕೆ ಕೆಲಸ ಕೊಡುವುದಕ್ಕೆ ಸಹಾಯಮಾಡುವುದಕ್ಕೆ ಮಂಡಲಿ ದೊಡ್ಡದಾಗಿ ಸಿಮೆಂಟ್ ಪೋಲ್ಸ್ ತಯಾರಿಸುವ ಒಂದು ದೊಡ್ಡ ಕಾರ್ಖಾನೆ ತೆರೆದಿದ್ದಾರೆ. ನಿಜವಾಗಿಯೂ ಒಂದೊಂದು ಪೋಲನ್ನು ತಯಾರಿಸಲು ಎಷ್ಟು ಖರ್ಚಾಗಿದೆ ಎಂದು ಮಂಡಲಿಯು ಲೆಕ್ಕಾಚಾರ ಮಾಡಲಿ. ಖಾಸಗಿಯವರು ಕಡಮೆ ಖರ್ಚಿನಲ್ಲಿ ಒದಗಿಸುವುದಾದರೆ ಮಂಡಲಿ ತಯಾರಿಸುವುದನ್ನೇಕೆ ಕೈಬಿಡಬಾರದು ? ಮಂಡಲಿಗೆ ವ್ಯವಹಾರ ದೊಡ್ಡದಾಗಿರಬೇಕು, ಬೇಕಾದವರಿಗೆ ಆಫೀಸರ ಕೆಲಸ ಕೊಡಲು ಅಧಿಕಾರವಿರಬೇಕು, ಅದನ್ನು ಕಡಮೆ ಮಾಡಿಕೊಳ್ಳಲು ತಯಾರಿಲ್ಲ. ಆದುದರಿಂದ ವಿದ್ಯುತ್ ಮಂಡಲಿಗೆ ನಷ್ಟ

ವಾಗುತ್ತಿದೆ. ಇದರಿಂದ ಅನಾವಶ್ಯಕವಾಗಿ ದುಂದು ಖರ್ಚಾಗುತ್ತಿದೆ. ಆ ನಷ್ಟವನ್ನು ರೈತರ ಮೇಲೆ ಹಾಕುತ್ತಿದ್ದಾರೆ. ಬರಗಾಲ ಪೀಡಿತ ಪ್ರದೇಶವೆಂದು ಹೆಸರು ಪಾಸಿಯಾಗಿರುವ ಕೋಲಾರ ಜಿಲ್ಲೆಯ ರೈತರಮೇಲೆ ಹೆಚ್ಚಿಸಿರುವ ಮಿನಿಮಂ ದಂಡವನ್ನು ಹಾಕಿದರೆ ತೀವ್ರ ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ.

6-00 P.M.

ಈಗಾಗಲೇ ಕೋಲಾರ ಜಿಲ್ಲೆಯ ಎರಡು ತಾಲ್ಲೂಕು ಕೇಂದ್ರಗಳಲ್ಲೂ ಸರ್ಕಾರದ ಮತ್ತು ಮುಂಡಲಿಯ ಕ್ರಮದ ವಿರುದ್ಧ ಅಲ್ಲಲ್ಲಿ ಒಂದು ದಿವಸದ ಉಪವಾಸ ಸತ್ಯಾಗ್ರಹ ಮತ್ತು ಬಹಿರಂಗ ಸಭೆಗಳ ಮುಖಾಂತರ, ಪೋಸ್ಟ್ ಕಾರ್ಡ್ ಮುಖಾಂತರ ಮುಖ್ಯ ಮಂತ್ರಿಗಳ ಮತ್ತು ಮುಂಡಲಿಯ ಅಧ್ಯಕ್ಷರ ಗಮನವನ್ನು ಸೆಳೆದಿದ್ದಾರೆ. ಶಾಂತ ರೀತಿಯಲ್ಲಿ, ಪ್ರಜಾಪ್ರಭುತ್ವ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದಾರೆ. ಕೋಲಾರ ಜಿಲ್ಲೆಯ ಮತ್ತು ಬೆಂಗಳೂರು ಜಿಲ್ಲೆಯ ಜನ ಏನೇ ಮಾಡಿದರೂ ಕೂಡ ನಮ್ಮನ್ನೆ ಇರುವ ಕಾಲ ಮುಗಿದುಹೋಗಿದೆ. ಆದರ ವಿರುದ್ಧ ಚಳುವಳಿ ಮಾಡುವುದಕ್ಕೆ ಖಂಡಿತವಾಗಿಯೂ ತಯಾರಾಗಿದ್ದಾರೆ. ಮತ್ತು ಸಾವಿರಾರು ಜನ ಜೈಲಿಗೆ ಹೋಗುವುದಕ್ಕೂ ಕೂಡ ತಯಾರಾಗಿದ್ದಾರೆ. ಅಲ್ಲದೆ ತಮ್ಮ ಆಫೀಸುಗಳ ಮುಂದೆ ಪಿಕೆಟಿಂಗ್ ಮಾಡುವುದು ಮುಂತಾದ ರೀತಿಯನ್ನೆಸುನರಿಸಿ ನಿಮ್ಮ ಸರ್ವಾಧಿಕಾರ ಖಂಡಿತವಾಗಿಯೂ ನಡೆಯುವಹಾಗೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಾರೆ ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರದವರಿಗೂ ಮತ್ತು ವಿದ್ಯುಚ್ಛಕ್ತಿ ಮಂಡಲಿಯವರಿಗೂ ಎಚ್ಚರಿಕೆ ಕೊಡ ಬಯಸುತ್ತೇನೆ. ಮಿನಿಮಂ ಚಾರ್ಜನ್ನು ಯಾವುದೇ ಕಾರಣದಿಂದಲೂ ಕೂಡ ಜಾಸ್ತಿ ಮಾಡ ಬಾರದು. ಹಾಗೆ ಮಾಡಿದ್ದೇ ಆದರೆ ರೈತರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ ಅಲ್ಲದೆ ವ್ಯವಸಾಯಾಭಿವೃದ್ಧಿ ಕೆಲಸವೂ ಕೂಡ ಕುಂಠಿತವಾಗುತ್ತದೆ ಎಂಬ ವಿಚಾರವನ್ನು ವಿರೋಧ ಪಕ್ಷದವರು ಮಾತ್ರವಲ್ಲ ಕಾಂಗ್ರೆಸ್ ಪಕ್ಷದವರೂ ಕೂಡ ಹೇಳಿದ್ದಾರೆ ಮತ್ತು ಅವರೂ ಕೂಡ ಇದಕ್ಕೆ ವಿರೋಧವಾಗಿದ್ದಾರೆ. ಆದ್ದರಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ ಅಂತ ಅನ್ನುವುದಾದರೆ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಮಿನಿಮಂ ಚಾರ್ಜನ್ ಹೆಚ್ಚು ಮಾಡಿರುವ ಆಜ್ಞೆಯನ್ನು ತಕ್ಷಣ ವಾಪಸು ತೆಗೆಯುಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆ ಮಾಡದೇ ಹೋದಲ್ಲಿ ಪ್ರಬಲವಾದ ಒಂದು ಚಳವಳಿ ನಡೆದು ಬಹಳ ಹಾನಿಯುಂಟಾಗುತ್ತದೆ. ರೈತರ ಒಂದು ಶಕ್ತಿಯನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ ಎಂದು ಸರ್ಕಾರದವರಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂತಹ ಪ್ರಾಮುಖ್ಯವಾದ ವಿಷಯ ಚರ್ಚೆಯಾಗತಕ್ಕ ಕಾಲದಲ್ಲಿ ಸರ್ಕಾರದ ವತಿಯಿಂದ, ಇದರಮೇಲೆ ಅವರಿಗೆ ಅಭಿಮಾನ ಇದ್ದರೆ ಮಾನ್ಯ ಮಂತ್ರಿಗಳು ಕುಳಿತು ಮಾನ್ಯ ಸದಸ್ಯರು ಏನು ಸಲಹೆ ಮಾಡುತ್ತಾರೆ ಎಂಬುದನ್ನು ಕೇಳಿ ಸೂಕ್ತವಾದ ಉತ್ತರ ಕೊಡುವುದು, ಕಾರ್ಯಕ್ರಮ ತೆಗೆದುಕೊಳ್ಳುವುದು ಸ್ವಾಭಾವಿಕ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲದೇ, ಯಾರಾದರೂ ಇರುತ್ತೇವೆ ಅಂತ ಹೇಳಿದ ಪಕ್ಷದಲ್ಲಿ ಇದರ ಬಗ್ಗೆ ಕಾತುರತೆ ಸರ್ಕಾರಕ್ಕೆ ಇಲ್ಲ ಅಂತ ಅನ್ನುವುದು ಇದರಿಂದಲೇ ವ್ಯಕ್ತವಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಭಾರದ ವಿಷಯ ಈಗ ಚರ್ಚೆಯಲ್ಲಿ ಇದೆ. ವಿದ್ಯುಚ್ಛಕ್ತಿ ಮಂಡಲಿ ವ್ಯಾಪಾರಿ ಸಂಸ್ಥೆಯಾಗಿರುವುದರಿಂದ ಲಾಭ ಮತ್ತು ನಷ್ಟ ಈ ಎರಡೂ ಇಲ್ಲದೇ ನಡೆಸಿಕೊಂಡು ಹೋಗಬೇಕು ಎಂದು ಅನ್ವತಕ್ಕ ಒಂದು ಸಂಸ್ಥೆಯಾಗಿ ಮಾಡಲಾಯಿತು. ವಿದ್ಯುಚ್ಛಕ್ತಿ ಮಂಡಲಿಗೂ ಸರ್ಕಾರಕ್ಕೂ ಈಗ ಅನೇಕ ರೀತಿಯಲ್ಲಿ ಬಾಂಧವ್ಯ ಇದೆ. ಈ ಮಂಡಲಿ ಸರ್ಕಾರದ ಒಂದು ಅಂಗ—ಒಂದು ಎಕ್ಸಿಕ್ಯೂಟೀವ್ ಲಿಂಕ್, ಇದು ಶಾಸನದ ಪ್ರಕಾರ ಆಗಿದೆ. ಇದು ಸರ್ಕಾರದ ಸಂಸ್ಥೆ, ಸರ್ಕಾರ ತನ್ನ ಥೋರಣೆ ಏನಿದೆ ಅದನ್ನು ತಾನು ನೇರವಾಗಿ ಇಂಪ್ಲಿಮೆಂಟ್ ಮಾಡುವುದರ ಬದಲು ಒಂದು ಕಾರ್ಪೋರೇಷನ್ ಮಾಡಿ ಅದರ ಮುಖೇನ ವ್ಯವಹಾರ ನಡೆಸುವುದಕ್ಕೆ ಮಾಡಿರತಕ್ಕ ಒಂದು ವ್ಯವಸೆ ಇದು. ಆದ್ದರಿಂದ ಸರ್ಕಾರದ ನೀತಿ, ಥೋರಣೆ ಏನಿದೆ ಆ ಥೋರಣೆಗಳ ಆಯಕಟ್ಟಿಗೆ ಒಳಪಟ್ಟು ಇದು ಕೆಲಸ ಮಾಡಬೇಕು. ಆಡಳಿತದವರಿಗೆ ನೀವು ನಷ್ಟ ಹೊಂದಕೂಡದು, ಲಾಭ ಹೆಚ್ಚು ಮಾಡಕೂಡದು ಆ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು ಹೋಗತಕ್ಕದ್ದು, ಮಾಡಿದರೆ ಲಾಭ ಮಾಡಿ, ನಷ್ಟವಾತ್ರ ಆಗಕೂಡದು ಎಂಬ ಒಂದು ನಿಯಮವನ್ನು ಹಾಕಿದ್ದಾರೆ. ನಾವು ಒಂದು ಕಡೆ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿ ಹರಿದು ಜನ ಜೀವನ ಉತ್ತಮಗೊಳ್ಳಬೇಕು, ಆಹಾರದ ಉತ್ಪಾದನೆಯಾಗಬೇಕು, ದೇಶದಲ್ಲಿ ಸಮೃದ್ಧಿಯಾಗಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ, ಇನ್ನೊಂದು ಕಡೆ ಲಾಭ ಬಂದಹೊರತು ಕೆಲಸ ಮಾಡಬಾರದು ಎಂಬ ಉದ್ದೇಶವನ್ನು

(ಶ್ರೀ ಹೆಚ್. ಎಂ.ಚನ್ನಬಸಪ್ಪ)

ಇಟ್ಟುಕೊಂಡಿದ್ದೇವೆ. ಈ ಎರಡರ ಸಮನ್ವಯದಿಂದ ಕೆಲಸ ಮಾಡುವುದು ಕಷ್ಟ. ಆದ್ದರಿಂದ ಸರ್ಕಾರದ ಈ ನೀತಿಯಲ್ಲೇ ಬದಲಾವಣೆಯಾಗಬೇಕೆಂದು ನಾನು ಸಲಹೆ ಮಾಡುತ್ತೇನೆ.

ಒಂದು ಕಡೆ ಶರಾವತಿಯಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡಿ ಅದನ್ನು ಅವರು ಮಾರಾಟ ಮಾಡಬೇಕು. ಮತ್ತೊಂದು ಕಡೆ ನಾವು ಉತ್ಪಾದನೆ ಮಾಡತಕ್ಕ ವಿದ್ಯುತ್ತಿನ ಇನ್‌ಸ್ಪೆಕ್ಷನ್, ಅವರದೇ ಆಗಿದೆ. ಈ ದ್ವಿಗುಣ ನೀತಿ ಹೋಗಬೇಕು. ಇಲ್ಲವೇ ಇನ್‌ಸ್ಪೆಕ್ಷನ್, ಪ್ರೊಡಕ್ಷನ್ ಡಿಸ್ಟ್ರಿಬ್ಯೂಷನ್ ಎಲ್ಲವನ್ನೂ ವಿದ್ಯುಚ್ಛಕ್ತಿ ಮಂಡಲಗೇ ಕೊಡಿ, ಇಲ್ಲವೇ ಇನ್‌ಸ್ಪೆಕ್ಷ— ವಿಚಾರಣೆ ಮಾಡುವುದು—ಮತ್ತು ಉತ್ಪಾದನೆ ಮಾಡುವುದು ಇವಿಷ್ಟನ್ನೂ ನಿಮ್ಮ ಕೈಯಲ್ಲಿ ಮಡಗಿಕೊಂಡು, ಉತ್ಪಾದನೆಯಾದಂತಹ ವಿದ್ಯುತ್ತನ್ನು ಉತ್ಪಾದನಾ ಜಾಗದಲ್ಲಿ ನಿರ್ದಿಷ್ಟವಾದ ದರಗಳಿಗೆ ಮಂಡಲಗೆ ಮಾರಾಟ ಮಾಡಿ. ಒಂದೊಂದರಲ್ಲಿ ಒಂದೊಂದು ನೀತಿಯನ್ನು ಇಟ್ಟುಕೊಂಡಿರುವುದರಿಂದ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಸರ್ಕಾರದವರು ಈ ಹಿಂದೆ ಯಾವುದೇ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಒಂದು ವ್ಯವಸ್ಥೆಯನ್ನು ಮಾಡಿರಲಿ. ಆದರೆ ನಾನು ಹೇಳುತ್ತಿರುವುದು ಸರ್ಕಾರದವರೇ ಎಲ್ಲ ವಿದ್ಯುಚ್ಛಕ್ತಿಯ ಉತ್ಪನ್ನ ಕೇಂದ್ರಗಳನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲಿ, ಅದಕ್ಕೂ ನಾನು ಬೇಡವೆನ್ನುವುದಿಲ್ಲ. ಮುಂದೆ ಹೊಸದಾಗಿ ಕೈಗೊಳ್ಳತಕ್ಕ ವಿದ್ಯುತ್ ಕೇಂದ್ರಗಳೇನಿವೆ ಅವುಗಳನ್ನೂ ಸಹಾ ಸರ್ಕಾರದವರೇ ತಮ್ಮ ಕೈಯಲ್ಲಿಟ್ಟುಕೊಳ್ಳಲಿ, ನಾನು ಬೇಡವೆನ್ನುವುದಿಲ್ಲ. ಅದೇ ರೀತಿ ಇವುಗಳ ಇನ್‌ವೆಸ್ಟಿಗೇಷನ್ ಕೂಡ ಇವರ ಕೈಯಲ್ಲೇ ಇರಬೇಕು. ಹೀಗೆ ಯಾವುದಾದರೊಂದು ನಿರ್ದಿಷ್ಟ ನೀತಿ ಮಾತ್ರ ಇರಬೇಕೆಂದು ಹೇಳುತ್ತೇನೆ. ಹೀಗೆ ಸರ್ಕಾರದವರು ಉತ್ಪತ್ತಿಮಾಡತಕ್ಕ ವಿದ್ಯುಚ್ಛಕ್ತಿಯನ್ನು ಅವರ ಖರ್ಚುಗಳೇನೆಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಹಾಗೆ ಅವನ್ನು ಆ ವಿದ್ಯುಚ್ಛಕ್ತಿ ಮಂಡಲಗೆ ಮಾರಾಟ ಮಾಡಲಿ. ಸರ್ಕಾರದವರು ವಿದ್ಯುಚ್ಛಕ್ತಿ ಮಂಡಲಗೆ ಮಾರಾಟ ಮಾಡತಕ್ಕ ಹಣವೇನಿದೆ ಅದು ಮುಂದೆ ಸರ್ಕಾರಕ್ಕೆ ಹೊಸ ಹೊಸ ವಿದ್ಯುತ್ತಾ ಪದನೆಗೆ ಬೆಂಬಲನೀಡತಕ್ಕ ಮಟ್ಟದಲ್ಲಿರಬೇಕು. ಅಂದರೆ ಸರ್ಕಾರದವರು ಆ ವಿದ್ಯುಚ್ಛಕ್ತಿಯನ್ನು ಉತ್ಪನ್ನಮಾಡತಕ್ಕ ಖರ್ಚು ಹೆಚ್ಚಗಳಿಗೂ ಮತ್ತು ಅವರು ವಿದ್ಯುತ್ತನ್ನು ಮಾರಾಟ ಮಾಡತಕ್ಕ ದರಕ್ಕೂ ಒಂದು ಹತ್ತಿರದ ಸಂಬಂಧವಿರಬೇಕು. ಅಂಥ ಒಂದು ನೀತಿಯನ್ನು ಸರ್ಕಾರದವರು ಅನುಸರಿಸಬೇಕು ಎಂಬುದು ನನ್ನ ವಾದ. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿ ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಬೇಕಾದ್ದು ಬಹಳ ಪ್ರಾಮುಖ್ಯವಾದ ಕೆಲಸ. ಆ ಕೆಲಸ ಬಹಳ ಸಮರ್ಪಕವಾಗಿ ನಡೆಯಬೇಕು. ಅದಕ್ಕಾಗಿ ಸರ್ಕಾರದವರು ಸೂಕ್ತ ಸಲಹೆಗಳನ್ನು ಪಡೆಯುವುದಕ್ಕಾಗಿ ಒಂದು ತಜ್ಞರ ತಂಡವನ್ನು ಕರೆದು ಸಮಾಲೋಚನೆ ನಡೆಸಬೇಕಾದ್ದು ಬಹಳ ಅಗತ್ಯ. ಈ ದಿವಸ ಒಂದು ಕಡೆ ಸರ್ಕಾರದವರು ಹೇಳುತ್ತಿದ್ದಾರೆ ದೇಶದಲ್ಲಿ ಆಹಾರದ ಉತ್ಪತ್ತಿ ಹೆಚ್ಚಾಗಬೇಕು ಎಂದು. ಹಾಗೆ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕಾಗಿದ್ದರೆ ಅದಕ್ಕೆ ಬಹಳ ಅವಶ್ಯಕವಾದದ್ದು ನೀರು. ಈಗಾಗಲೇ ನಮ್ಮ ಹೊಳೆಗಳಲ್ಲರತಕ್ಕ ನೀರು ಪೂರೈಸುತ್ತಾ ಬಂದಿದೆ. ಇನ್ನು ನಮ್ಮ ಕೆರೆಕಟ್ಟೆಗಳಲ್ಲರತಕ್ಕ ನೀರು ಪೂರೈಸಿದಮೇಲೆ ನಮಗೆ ನೀರು ಬೇಕಾದರೆ ನ ಭೂಗರ್ಭದಲ್ಲರತಕ್ಕ ನೀರನ್ನೇ ಮೇಲಕ್ಕೆ ತರಬೇಕು. ಹೀಗೆ ರೈತನ ಭೂಗರ್ಭದಲ್ಲರತಕ್ಕ ನೀರನ್ನೆತ್ತಿ ಆಹಾರಧಾನ್ಯಗಳನ್ನು ಹೆಚ್ಚು ಹೆಚ್ಚು ಉತ್ಪನ್ನ ಮಾಡಬೇಕಾದರೆ ಅವನಿಗೆ ಹೆಚ್ಚಿನ ಖರ್ಚುಹೆಚ್ಚಗಳು ಬರುತ್ತವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಕೆಲವರು ಕೃಷ್ಣಾಗೋದಾವರಿಯಲ್ಲಿ ನಮ್ಮ ನೀರಿಲ್ಲವೇ ಎಂದು ಕೇಳಬಹುದು. ಅದೂ ಕೂಡ ಇನ್ನು ಕೆಲವೇ ದಿನಗಳಲ್ಲಿ ನಿರ್ಧರವಾಗತಕ್ಕ ಸಂದರ್ಭ ಬರಬಹುದು.

ಇನ್ನು ನಮ್ಮ ಮಂತ್ರಿಗಳು ಗ್ರೀನ್ ರೆವಲ್ಯೂಷನ್ ವಿಚಾರವನ್ನೆತ್ತಿದ್ದರು. ಗ್ರೀನ್‌ರೆವಲ್ಯೂಷನ್ ಎಂದರೆ ಯಾರೋ ಒಬ್ಬ ರೈತ ಎಲ್ಲಿಯೋ ಒಂದು ಕಡೆ ತಾನು ಕಷ್ಟಪಟ್ಟು ಬೆಳೆಸಿದ್ದ ಬೆಳೆಯಹತ್ತಿರ ಹೋಗಿ ಮಂತ್ರಿಗಳು ನಿಂತು ಫೋಟೋ ತೆಗೆಸಿಕೊಂಡರೆ ಅದು ಗ್ರೀನ್ ರೆವಲ್ಯೂಷನ್ ಅಲ್ಲ. ಗ್ರೀನ್ ರೆವಲ್ಯೂಷನ್ ಎಂದರೇನು ಎಂಬುದನ್ನು ಆ ಪಂಜಾಬಿಗೆ ಹೋಗಿ ನೋಡಿದರೆ ಆಗ ವ್ಯಕ್ತವಾಗುತ್ತದೆ. ಆ ರೀತಿ ಇಲ್ಲ ಮಾಡುವುದಕ್ಕೆ ಹೊರಟರೆ ರೈತನಿಗೆ ತಾನು ಹಾಕಿದ ಬಂಡವಾಳಕ್ಕೆ ಬಡ್ಡಿ ಸಹಾ ಬರುವುದಿಲ್ಲ. ಆದರೆ ನಾನೀನಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮುಖ್ಯ ಸಲಹೆಯನ್ನು ಕೊಡಬೇಕೆಂದು ಎದ್ದು ನಿಂತಿದ್ದೇನೆ: ಭೂಗರ್ಭದಲ್ಲರತಕ್ಕ ನೀರನ್ನೆತ್ತಿ ಬೇಸಾಯ ಮಾಡಬೇಕೆಂದರೆ ರೈತನಿಗೆ ಹೆಚ್ಚು ಹಣ ಖರ್ಚಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಆ ರೈತನು ಇನ್ನಿತರೇ ತಾನು ಕೊಡಬೇಕಾದ ತೆರಿಗೆಗಳು ಮತ್ತು ವಿದ್ಯುಚ್ಛಕ್ತಿಯ ಬಗ್ಗೆ ಕೊಡತಕ್ಕ ಶುಲ್ಕ ಇವುಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಆ ರೈತನು

ಭೂಮಿಗೆ ಹಾಕಿರತಕ್ಕ ಹಣ ಅದರ ಬಡ್ಡಿ ಇಷ್ಟೆಲ್ಲಾ ಗಮನದಲ್ಲಿಟ್ಟುಕೊಂಡು ಆತನು ಬೆಳೆಯತಕ್ಕ ಧಾನ್ಯಗಳಿಗೆ ಒಂದು ನ್ಯಾಯವಾದ ಬೆಲೆಯನ್ನು ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಇದರಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚುಕಡಮೆ ಇದ್ದರೂ ಅದಕ್ಕೆ ನನ್ನ ಅಡ್ಡಿಯಿಲ್ಲ. ಈ ನೀತಿಗೆ ಸರ್ಕಾರದವರು ಒಪ್ಪುವುದಾದರೆ ಅವರು ಈ ವಿದ್ಯುಚ್ಛಕ್ತಿಯ ಬಗ್ಗೆ ಯಾವ ದರವನ್ನಾದರೂ ನಿಗದಿ ಮಾಡಲಿ ಅದಕ್ಕೆ ನನ್ನ ಅಡ್ಡಿಯಿಲ್ಲ. ಇದಕ್ಕೆ ನನ್ನ ಬೆಂಬಲವಿದೆ. ಆದರೆ ಈ ದಿವಸ ಸರ್ಕಾರದವರಾದರೂ ಮಾಡುತ್ತಿರುವುದೇನು ? ಒಂದು ಕಡೆ ರೈತನಿಗೆ ಹೆಚ್ಚು ಹೆಚ್ಚು ದವಸಧಾನ್ಯಗಳನ್ನು ಬೆಳೆಯುಬೇಕೆಂದು ಅವನಿಗೆ ಪ್ರೋತ್ಸಾಹ ಕೊಟ್ಟುದುದಕ್ಕೆ ಆ ರೈತನು ಬೆರಗಾಗಿ ಹೆಚ್ಚು ಆಹಾರ ಉತ್ಪಾದನೆ ಮಾಡಿದಾಗ ಅವನಿಗೆ ಹೆಚ್ಚಿನ ಖರ್ಚುವೆಚ್ಚಗಳು ಬಿದ್ದಿದ್ದಾಗ ಅವನ ಧಾನ್ಯದ ಬೆಲೆಗಳು ಏಕ್‌ದಂ ಇಳಿದರೆ ಅವನ ಗತಿಯೇನು ? ಅವನನ್ನು ಕೇಳುವವರೇ ಇಲ್ಲ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಬಹಳ ವಿವರವಾಗಿ ಮಾತನಾಡಬೇಕೆಂದಿದ್ದೇನೆ. ಅವರಿಗೆ ಯಾವಾಗ ಪುರಸತ್ತು ಇರುತ್ತದೋ ಆಗ ಅವರು ಹೇಳಿಕಳುಹಿಸಲಿ. ನಾನು ಅವರನ್ನು ಮುಖತಃ ಕಂಡು ವಿಚಾರಗಳನ್ನು ವಿವರವಾಗಿ ಹೇಳುತ್ತೇನೆ. ಆದರೆ ಪ್ರಕೃತದಲ್ಲಿ ಸರ್ಕಾರದವರು ಒಂದು ಕಡೆ ವಿದ್ಯುತ್ ದರವನ್ನು ಏರಿಸಿ, ನೀರಿನ ದರವನ್ನೂ ಹೆಚ್ಚುಮಾಡಿ ಅತ್ತ ರೈತನ ಬೆಳೆಗೆ ಹೆಚ್ಚು ಬೆಲೆಯನ್ನು ನಿಗದಿ ಮಾಡದಿರುವುದು ದೇಶದ ಆರ್ಥಿಕ, ನೀತಿಗೆ ತಪ್ಪಿರುದ್ಧವಾಗಿದೆ. ವಿದ್ಯುತ್ ದರಗಳಾದರೂ ಹೀಗೆ ಏರುವುದಕ್ಕೆ ಕಾರಣವಾದರೂ ಏನು ? ಆ ವಿದ್ಯುತ್‌ಮಂಡಳಿಯಲ್ಲಿ ಅಧಿಕಾರಿಗಳ ನೌಕರರ ಸಂಬಳ ಹಾಗೂ ನೌಕರುಗಳ ವೇಜಸ್‌ಗಳು ವಿಪರೀತ ಹೆಚ್ಚಾಗಿವೆ. ಇಲ್ಲಿ ಅನುಸರಿಸಬೇಕೆಂಬ ಒಂದು ನೀತಿ ಏನೆಂದರೆ ಆ ನೌಕರರ ಸಂಬಳ ಜಾಸ್ತಿಯಾಗಬೇಕು, ಅವರಿಗೆ ಕೆಲಸ ಕಡಮೆಯಾಗಬೇಕು, ಅವರಿಗೆ ಪುರಸತ್ತು ಹೆಚ್ಚಾಗಬೇಕು. ಇದು ಈ ದಿವಸ ದೇಶದಲ್ಲಿ ಎದ್ದು ಕಾಣುತ್ತಿರುವ ನೀತಿ. ಇದಕ್ಕೆ ಸರ್ಕಾರಗಳ ಪುರಸ್ಕಾರ. ನಾವು ಅವರಿಗೆ ಕೊಡತಕ್ಕ ಸಂಬಳಕ್ಕೆ ತಕ್ಕ ಕೆಲಸವನ್ನು ಮಾಡಿ ಎಂದು ಕೇಳಬಾರದಂತೆ. ಇದು ಎಂಥಾ ನೀತಿಯೋ ನಾನು ಕಾಣೆ. ಹೀಗಾಗಿ ಈ ದಿವಸ ರಾಜ್ಯದಲ್ಲಿ ಎಲ್ಲ ವಸ್ತುಗಳ ಬೆಲೆಯೂ ದಿನ ದಿನಕ್ಕೂ ಏರುತ್ತಿವೆ. ನಾನು ಈ ಸಂದರ್ಭದಲ್ಲಿ ನನ್ನ ಗಮನದಲ್ಲಿ ಕೇವಲ ಮೈಸೂರು ಸರ್ಕಾರವೊಂದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಈ ವಿಚಾರದಲ್ಲಿ ಎಲ್ಲಾ ಸರ್ಕಾರಗಳೂ ನಿಶ್ಯಕ್ತಿಯುತವಾಗಿವೆ. ಕೆಲಸಕ್ಕೆ ತಕ್ಕ ಸಂಬಳವನ್ನು ಕೊಡುತ್ತೇವೆಂಬ ಕೂಗು ಈ ದಿವಸ ದೇಶದಲ್ಲಿ ಎಲ್ಲೆಯೂ ಕೇಳಿಬರುತ್ತಿಲ್ಲ. ಜೀವನಕ್ಕೆ ತಕ್ಕಷ್ಟು ಸಂಬಳ ಬೇಕು, ಅತನ ಅವಶ್ಯಕತೆಗಳಿಗೆ ಸಾಕಷ್ಟು ಸಂಬಳ ಬೇಕು ಎಂಬ ಕೂಗುಗಳು ಕೇಳಿಬರುತ್ತಿವೆಯೇ ವಿನಾ ಕೆಲಸಕ್ಕೆ ತಕ್ಕಷ್ಟು ಸಂಬಳ ಕೊಡಿ ಎಂಬ ಕೂಗೆಲ್ಲೂ ಇಲ್ಲ. ನಾನು ಇಷ್ಟು ಸಂಪಾದನೆ ಮಾಡುತ್ತಿದ್ದೇನೆ ನನಗೆ ಇಷ್ಟು ಸಂಬಳ ಕೊಡಿ ಎಂದರೆ ಅದರಲ್ಲಿ ಅರ್ಥವಿದೆ.....

Sri M. S. KRISHNAN.—What percentage does the wage Bill bear to the total income of a Factory ? There are certain norms to fix the wages. If it is below some percentage, it would not be all-right.

Sri H. M. CHANNABASAPPA.—I have already stated that I am making a general statement that the wage structure is going high and high, without reference to the work that is being done. ಅಂಕಿ ಅಂಶಗಳ ಆಧಾರಸ್ಥಂಭವಾಗಿಟ್ಟುಕೊಂಡು ಮಾತನಾಡತಕ್ಕವನು ನಾನು. ದೇಶದಲ್ಲಿ ಸೋಷಿಯಲಿಸ್ಟಿಕ್ ಸಮಾಜವನ್ನು ಕಟ್ಟತಕ್ಕ ನೀತಿಯೋ ಇದು ? ನೀತಿ ನಿಯಮಗಳನ್ನು ಗಾಳಿಗೆ ತೂರಿ ಫೇರ್‌ವೆ, ಸೈಕ್ಯಾಕ್ ಮಾಡಿ ಹೆದರಿಸಿ ಬೆದರಿಸಿ ಸಂಬಳಗಳನ್ನು ಕೊಡಿ ಎನ್ನುವುದಕ್ಕೆ ಬರಲು, ಕೆಲಸವನ್ನು ಹೆಚ್ಚಿಗೆ ಮಾಡಿ ನಾನಿಷ್ಟು ಹೆಚ್ಚಿಗೆ ಕೆಲಸಮಾಡಿದ್ದೇನೆ ನನಗಿಷ್ಟು ಹೆಚ್ಚಿಗೆ ಕೊಡಿ ಎಂದು ಕೇಳುವುದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಅದನ್ನು ಬಿಟ್ಟು ಕೆಲಸ ಮಾಡಿದ್ದೇನೆ ಹೆಚ್ಚು ಸಂಬಳ ಕೊಡಿ ಎಂಬ ವಾದದ ಅರ್ಥವೇನು ? ಇದು ನಿಮಗೆಲ್ಲಾ ಬಹಳ ತಮಾಷೆಯಾಗಿದ್ದಂತೆ ಕಾಣುತ್ತಿದೆ. ಕಾಂಗ್ರೇಸ್ಸಿನವರು ಬೇರೆಯವರಲ್ಲ, ನೀವು ಬೇರೆಯವರಲ್ಲ. ಇದು ಬಹಳ ಪ್ರಾಮುಖ್ಯವಾದ ವಿಷಯ. ಕೆಲಸಮಾಡತಕ್ಕವನಿಗೆ ಸಮರ್ಪಕವಾದ ಕೂಲಿ, ಸಂಬಳ ಕೊಡಬೇಕು ಎನ್ನುವುದರಲ್ಲಿ ನಾನೂ ಒಬ್ಬ. ಅವನು ಮಾಡತಕ್ಕ ಕೆಲಸಕ್ಕೆ ಬೃಹದಾಕಾರವಾಗಿ ಸಂಬಳ ಸಾರಿಗೆ ಕೊಡುವುದು ಸರಿಯಲ್ಲ. ಕೆಲಸ ಇರುವುದು ಎಷ್ಟು, ಜನಗಳು ಇರುವುದು ಎಷ್ಟು ಎಂಬುದನ್ನು ನೋಡಬೇಕು. ಎಲ್ಲರಿಗೂ ಸಂಬಳ ಕೂಡಿ ಎಂಬುದಾಗಿ ಹೇಳುವುದರಲ್ಲಿ ಅರ್ಥವಿಲ್ಲ. Wage sill should be pruned in proportion to the production. The days when we could pressurite Government are gone. We cannot use pressure tactics for exploitation.

(SRI H. M. CHANNABASAPPA)

Otherwise the country will go to dogs. ಈಗ ಇದು ಎರಡು ಪಾರ್ಟಿಗಳಿಗೆ ಇರುವ ಸಂಬಂಧ. ವಿದ್ಯುಚ್ಛಕ್ತಿಯನ್ನು ಕೊಂಡು ಅದನ್ನು ಉಪಯೋಗ ಮಾಡಿ ವಿದ್ಯುಚ್ಛಕ್ತಿ ಮಂಡಲಗೆ ಹಣ ಕೊಡುವವರು ನಾವು. ನಮಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವವರು ನೀವು. ಯಾವುದಾದರೂ ಬದಲಾವಣೆಯಾಗಬೇಕಾದರೆ ಉಭಯತ್ರರೂ ಸಾಮರಸ್ಯದಿಂದ ಇದನ್ನು ಮಾಡಬೇಕೇ ವಿನಹ it cannot be one way traffic ದರಗಳನ್ನು ವಿಧಾಯಕ ಮಾಡುವಾಗ್ಗೆ ಸ್ಪೇಚ್ಛೆಯಾಗಿ ಮಾಡುವ ಕಾಲ ಹೋಯಿತು. ಅದು ಈಗ ವಿದ್ಯುಚ್ಛಕ್ತಿ ಮಂಡಲಯವರಿಗೆ ಗೊತ್ತು. ಅನೇಕ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ನರಬರಾಯಿ ಮಾಡುವಾಗ ಒಂದು ನಿರ್ದಿಷ್ಟ ಕಾಲ, ನಿರ್ದಿಷ್ಟ ರೇಟ್‌ನಲ್ಲಿ ನರಬರಾಯಿ ಮಾಡುತ್ತಾರೆ. ಅದು ಕಾಂಟ್ರಾಕ್ಟ್ ಆಗಿರುತ್ತದೆ. ಆ ಬಗ್ಗೆ ಒಂದು ಫುಲ್‌ಸ್ಟಾಪ್ ಕಾಮ ಬದಲಾವಣೆಮಾಡುವುದಕ್ಕಾಗುವುದಿಲ್ಲ. ರೈತಾಪಿ ಜನಗಳು ವಿದ್ಯುಚ್ಛಕ್ತಿ ಪಡೆದು ವಿದ್ಯುಚ್ಛಕ್ತಿಯಿಂದ ನೀರನ್ನು ಎತ್ತಿ ಉತ್ಪಾದನೆ ಮಾಡುವ ಕಾಲದಲ್ಲಿ ನಮಗೆ ನಿಮಗೆ ಒಪ್ಪಂದವಾಗುತ್ತಿರುವಾಗ ಅದನ್ನು ಏಕಪಕ್ಷೀಯವಾಗಿ ಹೆಚ್ಚುಮಾಡ ಬೇಕೆನ್ನುವುದು ನ್ಯಾಯಸಮ್ಮತವಾಗುವುದಿಲ್ಲ. 24 ರೂಪಾಯಿಗಳಷ್ಟು ಇದ್ದುದನ್ನು 48 ರೂಪಾಯಿಗಳಿಗೆ ಏರಿಸುವಾಗ ಅದನ್ನು ಯಾರೇ ಆಗಲಿ ಒಂದು ಕಾನೂನು ಕಟ್ಟಳೆಯಲ್ಲಿ ಮಾಡ ಬೇಕು. ಅದನ್ನು ಏರುಹೇರು ಮಾಡಿದರೆ ಅದನ್ನು ಬದಲಾವಣೆಮಾಡುವುದಕ್ಕೆ ನಮಗೆ ಒಂದು ಸಂಪೂರ್ಣ ಹಕ್ಕು ಉಂಟು. ಏಕೆಂದರೆ ವಿದ್ಯುಚ್ಛಕ್ತಿ ತೆಗೆದುಕೊಳ್ಳುವಾಗ ರೈತನಾದವನಿಗೆ ಸರಿಯಾಗಿ ಗೊತ್ತಾಗುವುದಿಲ್ಲ. ಅತನು ಅಗ್ರಿಮೆಂಟ್ ಓದಿರುವುದಿಲ್ಲ. ಹೆಬ್ಬೆಟ್ಟು ಒತ್ತಿ ಅದನ್ನು ತೆಗೆದುಕೊಳ್ಳುತ್ತಾನೆ. ಕಾನೂನು ಬದ್ಧವಾಗಿ ಅವನು ಮಾತನಾಡದೇ ಇದ್ದರೂ ಮಾರ್ಲ್ ರೈಟ್ ಅವನಿಗೆ ಇದೆ. ನೀವು ದರವನ್ನು ಏಕಪಕ್ಷೀಯವಾಗಿ ಹೆಚ್ಚಿಸಿದಾಗ ನಿಮಗೇನು ತೊಂದರೆಯಾಗುತ್ತದೆಂಬ ಬಗ್ಗೆ ಅವರನ್ನಾಗಲೀ, ಅವರ ಪ್ರತಿನಿಧಿಗಳನ್ನಾಗಲೀ ಕರೆದು ಮಾತನಾಡಿ ಒಂದು ಸಾಮರಸ್ಯದಿಂದ ಚರ್ಚೆ ನಡೆಸಿದ್ದೀರಾ? ಆದ್ದರಿಂದ ಇನ್ನು ಮುಂದೆ ವಿದ್ಯುಚ್ಛಕ್ತಿ ದರವನ್ನು ನಿಕ್ಕಾಪಟ್ಟೆ ಸ್ಪೇಚ್ಛೆಯಾಗಿ ಹೆಚ್ಚಿಸುವ ನಿಮ್ಮ ನೀತಿ ಸರಿಯಲ್ಲ. ನ್ಯಾಯಕ್ಕೆ ವಿರುದ್ಧವಾದುದು ಮತ್ತು ಅದು ಬಹಳ ತಪ್ಪು ಎಂಬುದಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. The equipment as also labour and supervisory charges, working capital have been mounting year after year. ಇದು ವಾಸ್ತವ. ಕಾರಣವೇನೇ ಇರಲಿ. ಇದು ಜಾಸ್ತಿ ಆಗುತ್ತಾ ಇದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇದು ಹೆಚ್ಚು ಆಗುತ್ತಿರುವುದನ್ನು ತಡೆಗಟ್ಟುವ ಕಡೆಗೆ ನಮ್ಮ ಗಮನ ಹರಿಸಬೇಕು. ಕೊಡುವವರು ಇದ್ದಾರೆಂದು ನಮ್ಮನೆ ಅವರ ಮೇಲೆ ತೆರಿಗೆ ಹೇರುವುದು ಅರ್ಥಶಾಸ್ತ್ರಕ್ಕೆ ನ್ಯಾಯವಾಗುವುದಿಲ್ಲ. ಮೊದಲು ನಿಮ್ಮ ಕೆಲಸ ಎಷ್ಟಿದೆಯೋ ಆ ಕೆಲಸಕ್ಕೆ ಪ್ರಮಾಣಕ್ಕನುಗುಣವಾಗಿ ನಿಮ್ಮ ವೇಜ್ ಬಿಲ್ ಜನರು ಇದ್ದಾರೆಯೇ ಎಂಬುದನ್ನು ನೋಡಬೇಕು. ನಾವು ಕೊಡತಕ್ಕ ಸಂಬಳಕ್ಕೆ ಸರಿಯಾಗಿ ಕೆಲಸವಾಡುತ್ತಾರೆಯೇ ಎಂದು ಯಾರ್ಡ್‌ಸ್ಟಿಕ್ ಇಟ್ಟು ನೋಡಬೇಕು. ಕೆಲಸ ಒಂದಕ್ಕೆರಡರಷ್ಟು ಮಾಡಿದರೆ ಎರಡರಷ್ಟು ಸಂಬಳ ಕೊಡಿ. ಮೂರರಷ್ಟು ಮಾಡಿದರೆ ಮೂರರಷ್ಟು ಕೊಡಿ. ಆಗ ಒಂದು ರೀತಿ ಕೆಲಸಗಾರರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಮಾನ್ಯ ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಒಬ್ಬರು ಮಾಡುವಂಥ ಕೆಲಸಕ್ಕೆ ಇಬ್ಬರು ಮೂವರು ಮಾಡುವುದು—ಇದು ಸರಿಯಲ್ಲ. ಹೀಗೆ ಮಾಡಿದರೆ ಸಿಬ್ಬಂದಿ ಹೆಚ್ಚಿಸಿಕೊಂಡಷ್ಟು ಸಂಬಳ ಹೆಚ್ಚು ಕೊಡಬೇಕಾಗುತ್ತದೆ. ಇವತ್ತು ಎಲ್ಲವನ್ನೂ ವಿಶದವಾಗಿ ಹೇಳುವುದಕ್ಕಾಗುವುದಿಲ್ಲ. ಬೇರೆ ಅವಕಾಶವನ್ನು ತೆಗೆದುಕೊಂಡು ಹೇಳುತ್ತೇನೆ. ಆಡಳಿತದಲ್ಲಿ ಒಬ್ಬನಿಗೆ ಕೆಲಸ ಸಾಲದೇ ಇದ್ದರೂ ಆ ಕೆಲಸಕ್ಕೆ 3-4 ಜನರು ಇದ್ದಾರೆ. ಒಬ್ಬನಿಗೆ ಸಾಕಷ್ಟು ಕೆಲಸವಿಲ್ಲ. ಅಂದಮೇಲೆ ಅದರ ಜೊತೆಗೆ ಗುಂಪು ಕಟ್ಟಿಕೊಂಡು ನಮ್ಮ ಸಂಬಳವನ್ನು ಜಾಸ್ತಿಮಾಡಿ ಎಂದು ಹೇಳುವುದು ಸರಿಯಲ್ಲ. ರೈತರು ಇವತ್ತಿನವರೆಗೂ ಬಹಳ ಶಾಂತಿಯುತವಾಗಿ ನೀವು ಹೇಳಿದಹಾಗೆ ಕೇಳಿಕೊಂಡು ಬಂದಿದ್ದಾರೆ. ನಾನು ಇಡೀ ಭರತಖಂಡದಲ್ಲಿ ರೈತಾಪಿಜನಗಳನ್ನು ಹೋಗಿ ನೋಡಿ ಬಂದು ಇದನ್ನು ಹೇಳುತ್ತಿದ್ದೇನೆ. ಕ್ರಮೇಣ ಅವರೂ ಕೂಡ ಈಗ ಎಚ್ಚರ ಗೊಳ್ಳುತ್ತಿದ್ದಾರೆ. ಇಡೀ ಭರತಖಂಡದಲ್ಲಿ, ಅದರಲ್ಲಿಯೂ ಈ ರಾಜ್ಯದಲ್ಲಿಯೇ ಎಲ್ಲ ರೈತಾಪಿ ಜನಗಳೂ ಸರ್ಕಾರದಮೇಲೆ ದಂಗೆ ಏಳುವ ಮುನ್ನ ನೀವು ಎಚ್ಚರಿಕೆಯಾಗಿರಿ. ಆಹಾರ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. 40 ರೂಪಾಯಿಗಳಂತೆ ಬತ್ತಕ್ಕೆ ಕೊಡಿ ಎಂದು ಹೇಳಿದರೆ, 48 ರೂಪಾಯಿಗಳು ಎರೆಕ್ಟ್ರಾಸಿಟಿಗೆ ಹೋಗುತ್ತದೆ. ಆದ್ದರಿಂದ ನಿಮ್ಮ ನೀತಿಯನ್ನು ಸ್ವಲ್ಪ ಬದಲಾವಣೆಮಾಡಿ ಎಂದು ನಾನು ಹೇಳಿದೆ. ಆದರೆ ನೀವು ಏನೂ ಮಾಡಿಲ್ಲ. ಶರಾವತಿ ಮತ್ತು ಭದ್ರಾ ಯೋಜನೆಗಳು ಇವತ್ತಿನದಿವಸ ಎರೆಕ್ಟ್ರಾಸಿಟಿ ಬೋರ್ಡಿನ ವಶದಲ್ಲಿದ್ದರೂ ಅದರ ಉತ್ಪತ್ತಿ

ಯನ್ನು ಸರ್ಕಾರದವರೇ ತೆಗೆದುಕೊಂಡಿದ್ದಾರೆ. ಉತ್ಪಾದನೆ ಪೂರ್ತಿಯಾಗಿ ನಿಮ್ಮ ಕೈಯಲ್ಲಿ ಇರಬಹುದು, ಹೊಸ ಉದ್ಯಮಗಳನ್ನು ಜಾರಿಗೆ ತರುವುದು ನಿಮ್ಮ ಕೈಯಲ್ಲಿ ಇರಬಹುದು, ವಿದ್ಯುಚ್ಛಕ್ತಿ ಮಂಡಲಗೆ ನಿರ್ದಿಷ್ಟ ರೇಟಿಗೆ ಅವರು ಆ ಪಾಯಿಂಟ್‌ನಲ್ಲಿ ಮಾರಾಟಮಾಡಿ ಅದರಲ್ಲಿ ಏನು ಉತ್ಪತ್ತಿ ಬರುತ್ತದೆಯೋ ಅದು ಜನರಲ್ ರೆವಿನ್ಯೂಗೆ ಬರುತ್ತದೆ. ಏಕೆಂದರೆ ಅವರು ಸಾಲಸೋಲವಾಡಿ ಕಟ್ಟಿದ್ದಾರೆ. ಅದರಿಂದ ಉತ್ಪಾದನೆ ಹೆಚ್ಚಿಗೆ ಬರಬೇಕು. ಮತ್ತೆ ಆಹಾರ ನೀತಿ, ವ್ಯವಸಾಯ ನೀತಿ ನಿಮ್ಮ ಕೈಯಲ್ಲಿ ಇರಬೇಕು. ಆದು ಎಲೆಕ್ಟ್ರಿಸಿಟಿ ಬೋರ್ಡಿಗೆ ಇರಬಾರದು. ಅವರು ವ್ಯಾಪಾರಮಾಡಿ ಕೊಡಿ ಎಂದು ಹೇಳಿದರೆ ಅದು ಆಗುವುದಿಲ್ಲ. ನುಂಕದವನ ಹತ್ತಿರ ನುಖದುಃಖ ಹೇಳಿದ ಹಾಗಾಗುತ್ತದೆ. ಅವರನ್ನು ವ್ಯಾಪಾರ ದೃಷ್ಟಿಯಿಂದ ಕೆಲಸಮಾಡಿ ಎಂದುದಾಗಿ ಹೇಳಿದರೆ ಆಗುವುದೇ ಇಲ್ಲ. ಆಂದಮೇಲೆ ವ್ಯವಸಾಯಗಾರರಿಗೂ ದರವನ್ನು ಕಡಿಮೆಮಾಡಿ ಕೊಡಿ ಎಂದು ಹೇಳಿದರೆ ಅವರು ಹೇಗೆ ಲಾಭವಿಲ್ಲದೆ ಕೆಲಸಮಾಡುವುದಕ್ಕಾಗುತ್ತದೆ? ಅದು ಆಗುವುದಿಲ್ಲ.

6-3^ P.M.

ಇದಕ್ಕೆ ನಿರ್ದಿಷ್ಟವಾದಂತಹ ನೀತಿಯನ್ನು ನೀವು ರೂಪಿಸಬೇಕು. ಭೂಗರ್ಭದಲ್ಲಿರತಕ್ಕ ಜಲದ ಪ್ರತಿಯೊಂದು ತೊಟ್ಟನ್ನೂ ಮೇಲಕ್ಕೆ ತೆಗೆದು ದೇಶಕ್ಕೆ ಉತ್ಪತ್ತಿ ಮಾಡತಕ್ಕ ರೀತಿಯಲ್ಲಿ ಉಪಯೋಗಿಸಬೇಕು. ಅದಕ್ಕೆ ಎಷ್ಟು ಖರ್ಚಾಗುತ್ತದೆ ಅದನ್ನು ಸರ್ಕಾರದ ಬೊಕ್ಕಸದಿಂದ ಕೊಡಬೇಕು. ದೊಡ್ಡ ದೊಡ್ಡ ಯೋಜನೆಗಳನ್ನು ನಿರ್ಮಾಣ ಮಾಡುವಾಗ ನಾವು ಕೇಂದ್ರ ಸರ್ಕಾರದ ಹಣದಿಂದ ಅದನ್ನು ಕಟ್ಟಿ, ಆದರಿಂದ ಬರತಕ್ಕ ನೀರನ್ನು ಮಾರಾಟ ಮಾಡಿ. ಹಾಗೆ ಇದು ಒಂದು ಉದ್ಯಮವೆಂದು ಭಾವನೆ ಮಾಡಬೇಕು. ಮತ್ತು ಎಲ್ಲೆಲ್ಲಿ ಹೊಳೆ ಇದೆ, ಅದರ ನೀರನ್ನು ಉಪಯೋಗ ಮಾಡಬೇಕು. ಒಬ್ಬ ಹಳ್ಳಿಯ ರೈತನು, ಹೊಳೆಯ ಬಡದಲ್ಲಿ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳಿದರೆ, ಅವನಿಗೆ ನೀವು ಕೊಡುತ್ತಾ ಇಲ್ಲ. ಎಲ್ಲೆಲ್ಲ ಹೊಳೆಗಳು ಇವೆಯೋ, ಎಲ್ಲೆಲ್ಲ ಸಣ್ಣ ಕಾಲುವೆಗಳು ಹೋಗುತ್ತವೋ ಅಲ್ಲೆಲ್ಲಾ ನಮ್ಮ ಎಲೆಕ್ಟ್ರಿಸಿಟಿ ಲೈನು ಹೋಗಬೇಕು. ಅಲ್ಲಿ ದುಡ್ಡು ಬರಲಿ, ಬರದಿರಲಿ, ಲೈನು ಹಾಕಬೇಕು. ಇವತ್ತು ಕಾವೇರಿ, ಕೃಷ್ಣಾ, ಘಟಪ್ರಭಾ ಮತ್ತು ಅದರ ಅಕ್ಕಪಕ್ಕದಲ್ಲಿ ವಿದ್ಯುಚ್ಛಕ್ತಿ ಲೈನು ಹೋದರೆ ರೈತನು ವಿದ್ಯುಚ್ಛಕ್ತಿ ತೆಗೆದುಕೊಳ್ಳುತ್ತಾನೆ. ಈಗ ಹುಚ್ಚು ಬಿಡದೆ ಮದುವೆಯಾಗುವುದಿಲ್ಲ, ಮದುವೆಯಾಗದೆ ಹುಚ್ಚು ಬಿಡುವುದಿಲ್ಲವೆಂಬ ಗಾದೆಯಂತೆ ಆಗಿದೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ಲಾಭವಾಗದೆ ಹೋದರೆ, ಹೊಳೆಯ ಪಕ್ಕದಲ್ಲಿ ಲೈನು ಎಳೆಯುವ ಹಾಗೆ ಇಲ್ಲ. ಈ ಒಂದು ಪರಿಸ್ಥಿತಿಗೆ ತಂದೊಡ್ಡಿ ರೈತಾಪಿ ಜನರು ಉತ್ಪಾದನೆಯಿಂದ ಬೆಳೆಯಬೇಕೆಂದು ಹೇಳಿದರೆ ಹೇಗೆ ಸಾಧ್ಯ? ಅದು ಸರ್ಕಾರದ ನೀತಿಯಿಂದ ನೇರವಾಗಿ ನಡೆಯಬೇಕು. ಅದರ ಉತ್ಪನ್ನ 10–15 ವರ್ಷಗಳಲ್ಲಿ ಬರಬಹುದು ಯಾವ ರೀತಿ ಕೃಷ್ಣರಾಜಸಾಗರ ಕಟ್ಟುವಾಗ, ಆಗ ಉತ್ಪತ್ತಿ ಏನೂ ಬರುತ್ತಾ ಇರಲಿಲ್ಲ. ಈಗ ನೋಡಿ, ಅಲ್ಲಿ ಎಲ್ಲಾ ಲಕ್ಷ್ಮಿ ತಾಂಡವಾಡುತ್ತಿದೆ. ಇವತ್ತಿನದಿವಸ ಬಿತ್ತಿದ ಬೀಜದ ಉತ್ಪತ್ತಿ ಬರಬೇಕಾದರೆ, ಹತ್ತಾರು ವರ್ಷ ಆಗಬೇಕು. ಇದಕ್ಕೆಲ್ಲಾ ಎಲ್ಲಿಂದ ದುಡ್ಡು ತರಬೇಕೆಂದು ನೀವು ಯೋಚನೆ ಮಾಡುತ್ತಿದ್ದೀರಿ. ಇವತ್ತು ಕಾಳಸಂತೆಯ ಹಣ ಎಷ್ಟು ಇವೆ? ಇವತ್ತು ರೈತನು ಅವನ ಗುದಿಲಲು ರಿಪೇರಿ ಮಾಡುವುದಕ್ಕೆ ಅವನಲ್ಲಿ ಹಣವಿಲ್ಲ. ಆದರೆ ಸಟ್ಟಣಿಗಳಲ್ಲಿ ಸಾಧಗಳಮೇಲೆ ಸಾಧಗಳಾಗುತ್ತಿವೆ. ಇವತ್ತು ಅಂತವರ ಜೋಬಿಗೆ ಕೈ ಹಾಕುವುದಕ್ಕೆ ನಮಗೆ ನಮಗೆ ಧೈರ್ಯವಿಲ್ಲ. ಮುಂಬಾಯಿ, ಕಲ್ಕತ್ತಾದ ಕಡೆ ಹೋಗಿ ನೋಡಿ, ಸಾಧಗಳಮೇಲೆ ಸಾಧಗಳಾಗುತ್ತಿವೆ.

ಆದ್ದರಿಂದ ಹೊಳೆಯ ಪಕ್ಕಗಳಲ್ಲಿ ಇಂಥ ಎಲೆಕ್ಟ್ರಿಸಿಟಿ ಲೈನುಗಳನ್ನು ಎಳೆಯಬೇಕು. ಇವೆಲ್ಲಾ ಪಾರ್ಟ್ ಅಂಡ್ ಪಾರ್ಸೆಲ್ ಆಫ್ ದಿ ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಬೇಕು. It is part and parcel of the Agriculture Department; it is not a programme of the M.S.E.B. which is a business concern and a Marwadi. ಅದು ಮಾರ್ವಾಡಿ ಇದ್ದಹಾಗೆ ಇರಬಾರದು. ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಬೇಕಾದರೆ, ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ, ಅದು ವ್ಯವಸಾಯದ ಒಂದು ಅಂಗವಾಗಿ ಕೆಲಸ ಮಾಡಬೇಕು. ಅದನ್ನು ನಾವು ಯೋಚನೆ ಮಾಡಬೇಕು. I will be very happy to discuss this with as many people as possible as to how exactly the whole thing could be given a shape. ಈ ವಿದ್ಯುಚ್ಛಕ್ತಿಯನ್ನು ಹೊರ ರಾಜ್ಯಗಳಿಗೆ ಮಾರಾಟಮಾಡುತ್ತಿದ್ದಾರೆ. ಇದು ಮನೆಗೆ ಮಾರಿ ಪರರಿಗೆ ಉಪಕಾರಿ ಎಂಬ ಗಾದೆಯ ಹಾಗೆ ಆಯಿತು. ಶರಾವತಿ ವಿದ್ಯುಚ್ಛಕ್ತಿ ಆಗುವಾಗ ಹೇಳುತ್ತಿದ್ದಿರಿ, ವಿದ್ಯುಚ್ಛಕ್ತಿ ಪೂರ್ತಿಯಾಗಿ ಆಗಲಿ, ನೀವು ಕೇಳಿದಷ್ಟು ಕೊಡುತ್ತೇವೆಂದು ಜನರು

(SRI H. M. CHANNABASAPPA)

ಕಾದರು, ಬೆಳಿಗ್ಗೆ, ನಂಜೆ, ಎಲ್ಲಾ ಕಾದು, ಇವತ್ತು ಬರುತ್ತದೆ, ನಾಳೆ ಬರುತ್ತದೆ, ಬಂತು, ಬಂತು ಎಂದು ಎಲ್ಲರೂ ಕಾದು ಕೂತರು. ಆದರೆ ಶರಾವತಿ ಬಂದಮೇಲೆ ಬೇಕಾದಷ್ಟು ವಿದ್ಯುಚ್ಛಕ್ತಿ ಬಂತು. ಇದನ್ನು ಮಾರಾಟ ಮಾಡಬೇಕಾದರೆ, ಬೇರೆ ರಾಜ್ಯಗಳಿಗೆ ಹೆಚ್ಚು ಕೊಡಲು ಪ್ರಾರಂಭ ಮಾಡಿದಿರಿ. ಇವತ್ತು ಏನು ಮಾಡುತ್ತಿದ್ದೀರೆಂದರೆ, ಒಂದು ಗ್ರಿಡ್ ಎಂದು ಮಾಡಿದ್ದೀರಿ. ಗ್ರಿಡ್ ಮಾಡಿದಂತಹ ಉದ್ದೇಶ ಬೇರೆ. ಈಗ ಆಗಿರತಕ್ಕಂತದ್ದು ಬೇರೆ. ನಮ್ಮ ವಿದ್ಯುಚ್ಛಕ್ತಿಯನ್ನು ಅವರಿಗೆ ತೆಗೆದುಕೊಂಡು ಹೋಗಲು ನಾವು ಅಲ್ಲಿಯವರೆಗೆ ಲೈನು ಹಾಕಿಕೊಡಬೇಕು. ನಾವು ಒಂದು ಧೋರಣೆಯನ್ನು ಇಟ್ಟುಕೊಂಡಿರಬೇಕು. ಒಂದು ಗುರಿಯನ್ನು ಇಟ್ಟುಕೊಂಡಿರಬೇಕು ಇವತ್ತು ನಾವು ವಿದ್ಯುಚ್ಛಕ್ತಿಯನ್ನು ಯಾವ ದರದಲ್ಲಿ ಕೊಡುತ್ತಿದ್ದೇವೆ? ನಮಗೆ 10 ಪೈಸೆಯಲ್ಲಿ ಕೊಡುತಿದ್ದಾರೆ. ಟ್ಯಾಕ್ಸ್ ಸೇರಿ 11 ಪೈಸೆ. ಮೊದಲು 5 ಪೈಸೆ ಇತ್ತು. ಮದ್ರಾಸಿನಲ್ಲಿ 8 ಪೈಸೆ. ಪಕ್ಕದ ಕೇರಳದಲ್ಲಿ 8 ಕಾಲು ಪೈಸೆ. ಇದು ಯಾವ ನೀತಿ? ರೈತರು ತಾನಾಗಿ ಏಳಬೇಕೋ ಏನು? ಅವರಿಗೆ ಎಲ್ಲರೂ ಒಗ್ಗಟ್ಟಾಗತಕ್ಕ ಶಕ್ತಿ ಇದ್ದರೆ ನಮ್ಮನ್ನು ನಿಮ್ಮನ್ನು ಹವ ಮಾಡುತ್ತಿದ್ದರು. ಪಾಪ ಅವರಿಗೆ ಊರಿಂದ ಬೆಂಗಳೂರಿಗೆ ಬರಲು ಬಸ್ಸಿಗೆ ಸಹ ದುಡ್ಡಿಲ್ಲ. ಹೀಗಾದರೆ ಅವರು ಒಂದು ಸತ್ಯಾಗ್ರಹ ಮಾಡುವುದಾದರೂ ಹೇಗೆ? ಹೀದೆ ನಾನು ಹುಡುಗ ನಾಗಿದ್ದಾಗ, ವಿಶ್ವೇಶ್ವರಯ್ಯ ಕೆನಾಲ್‌ನ ಒಂದು ಬ್ಲಾಕ್ ಸಿಸ್ಟಂ ಬಗ್ಗೆ, ಪುಟ್ಟಣ್ಣ ಎಂಬ ಸ್ಕೂರ್ ಮಾಸ್ಟರ್ ಅವರ ಜೊತೆಗೆ, 5 ಸಾವಿರ ಜನರು ಕಾಲ್ನಡಿಗೆಯಲ್ಲೇ ಮಂಡ್ಯದಿಂದ ಇಲ್ಲಿಗೆ ಅವೆನ್ಯೂ ರೋಡಿಗೆ ಬಂದಿದ್ದರು. ಆಗ ಇಲ್ಲಿ ಸರ್ ಮಿರ್ಜಾ ಸಾಹೇಬರು ಗಡಗಡ ನಡುಗಿಹೋದರು. ಈಗ ಜನ ಎಚ್ಚೆತ್ತು ಸರ್ಕಾರ ಏನು ಮಾಡುತ್ತಿದ್ದಾರೆ ಎಂದು ಬಹಳ ಕಾತರತೆಯಿಂದ ನೋಡುತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ತಾವುಗಳೆಲ್ಲರೂ ಬುದ್ಧಿವಂತರು ಮತ್ತು ಯುವಕರು ಉತ್ಸಾಹದಿಂದ ಕೆಲಸಮಾಡತಕ್ಕ ಶಕ್ತಿ ನಿಮಗೆ ಇದೆ. I have got suggestions to give but the time at my disposal is short and I am afraid I cannot do justice. What I request is, please be realistic in your attempts. Please know for certain that the farmers are the people who are even today responsible for the development of the country. They are the people who are contributing more than 56 per cent for the national wealth in the country. They are the people who are supplying 56 per cent of the raw material required for the ordinary industries. Industries may stop but if farming operation stops, I am afraid that will result in great loss to the country. Therefore, tomorrow alone please sit, discuss and take a decision to go back to original rates. As to wherefrom to get funds, it is your business. ಅಧಿಕಾರಾರೂಢರಾಗಿರತಕ್ಕ ತಾವು ಎಲ್ಲರೂ ಸೇರಿ ಈ ಕೆಲಸವನ್ನು ಮಾಡಬೇಕು. ವಿದ್ಯುಚ್ಛಕ್ತಿ, ಪಂಪುಸೆಟ್ಟುಗಳು, ಬಾವಿ ಈ ಮೂರು ವಿಷಯಗಳಿಗೂ ಸಂಬಂಧಪಟ್ಟ ಹಾಗೆ ಒಂದು ಪ್ಯಾಕೇಜ್ ಪ್ರೋಗ್ರಾಮ್ ಹಾಕಿ ಕೊಂಡು ಇದರ ಸೌಲಭ್ಯಗಳನ್ನು ಜನತೆಗೆ ಒದಗಿಸತಕ್ಕ ಕೆಲಸವನ್ನು ಸರ್ಕಾರದವರು ನಿರ್ವಹಿಸ ಬೇಕು. ದೇಶದಲ್ಲಿ ಉತ್ಪಾದನೆ ಮಾಡತಕ್ಕ ಕೆಲಸಗಳನ್ನು ಸರ್ಕಾರದವರೇ ಮಾಡಬೇಕು. ಗ್ರೀನ್ ರೆವಲ್ಯೂಷನ್ ಎನ್ನುವ ಪುಸ್ತಕವನ್ನು ಸರ್ಕಾರದವರು ಪ್ರಿಂಟ್ ಮಾಡಿದ್ದಾರೆ. ಆದರಲ್ಲಿ ಮಂತ್ರಿಗಳೆಲ್ಲರೂ ನಿಂತುಕೊಂಡು ಫೋಟೋ ತೆಗೆಸಿಕೊಂಡಿದ್ದಾರೆ. This is not green revolution; it will only lead to blood revolution. Real green revolution must take place. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತಕ್ಕುದು ಇಷ್ಟೆ. ವಿದ್ಯುಚ್ಛಕ್ತಿ ಮಂಡಲಿಯವರು ವ್ಯವಸಾಯ ಉದ್ಯಮಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡ ತಕ್ಕ ವಿಷಯದಲ್ಲಿ ಬೇರೆ ಒಂದು ನೀತಿಯನ್ನು ಅನುಸರಿಸಬೇಕು. ಮತ್ತು ಆಹಾರ ಉತ್ಪಾದನೆಗೆ ಸಂಬಂಧಪಟ್ಟ ಹಾಗೆ ವಿದ್ಯುಚ್ಛಕ್ತಿ ಇಲಾಖೆಯವರು ಮತ್ತು ವ್ಯವಸಾಯ ಇಲಾಖೆಯವರು ಇಬ್ಬರೂ ಸೇರಿ ವಿದ್ಯುಚ್ಛಕ್ತಿಯನ್ನು ಯಾವರೀತಿ ಉಪಯೋಗ ಮಾಡಬೇಕು ಎನ್ನುವುದರ ಬಗೆ ಒಂದು ನೀತಿಯನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ಇನ್ನು ಹೇಳತಕ್ಕಂಥಾದ್ದು ಅನೇಕ ವಿಷಯಗಳಿವೆ; ಆದರೆ ಈಗ ಕಾಲಾವಕಾಶ ಇಲ್ಲ. ಬೇರೆ ಅವಕಾಶವನ್ನು ತೆಗೆದುಕೊಂಡು ನಾನು ಮಾತನಾಡುತ್ತೇನೆ. ಈಗ ಪಂಪುಸೆಟ್ಟುಗಳಿಗೆ ಒದಗಿಸ ತಕ್ಕ ವಿದ್ಯುಚ್ಛಕ್ತಿಗೆ 48 ರೂಪಾಯಿಗಳನ್ನೇನು ವಿಧಿಸುವುದಕ್ಕೆ ಹೊರಟಿದ್ದಾರೆ ಇದು ಸರಿಯಲ್ಲ.

ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ನುಲಭದರದಲ್ಲಿ ಕೊಟ್ಟು ಹೆಚ್ಚು ಆಹಾರೋತ್ಪಾದನೆಯನ್ನು ಮಾಡುವ ದೃಷ್ಟಿಯಿಂದ ಕೆಲಸಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನದಿವಸ ಮೈಸೂರು ರಾಜ್ಯದಲ್ಲಿರತಕ್ಕ ವಿದ್ಯುಚ್ಛಕ್ತಿ ಮಂಡಲಯವರು ಇತ್ತೀಚೆಗೆ ವಿದ್ಯುಚ್ಛಕ್ತಿ ದರವನ್ನು ಏರಿಸುತ್ತಿರುವ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇವೊತ್ತಿನದಿವಸ ವಿದ್ಯುಚ್ಛಕ್ತಿ ಮಂಡಲಯವರು ದೇಶಾದ್ಯಂತ ಒಂದು ಏಕರೂಪವಾದ ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿರತಕ್ಕ ಬಗ್ಗೆ, ಅದರಲ್ಲೂ ಪಂಪುಸೆಟುಗಳ ಬಗ್ಗೆ ಒಂದು ಅಶ್ಚರ್ಯಕ್ಕಿಗೆ ಎರಡು ರೂಪಾಯಿಗಳಿಂದ ನಾಲ್ಕು ರೂಪಾಯಿಗಳಿಗೆ ಏರಿಸಿರುವ ವಿಚಾರದಲ್ಲಿ ವಿರೋಧ ಇರತಕ್ಕ ವಿಷಯದಲ್ಲಿ ಈ ಸಭೆಯ ಮಾನ್ಯ ಸದಸ್ಯರು ಬಹಳ ತೀವ್ರವಾಗಿ ವಿರೋಧಿಸಿದ್ದಾರೆ. ಆದ್ದರಿಂದ ಈ ಒಂದು ದರವನ್ನು ಏರಿಸಿರತಕ್ಕ ಬಗ್ಗೆ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುವವರಲ್ಲಿ ನಾನೂ ಒಬ್ಬ. ಇವೊತ್ತಿನ ದಿವಸ ವಿರೋಧಪಕ್ಷ ಹಾಗೂ ಕಾಂಗ್ರೆಸ್‌ಪಕ್ಷ ಎರಡು ಕಡೆಗಳಲ್ಲೂ ಇದರ ಬಗ್ಗೆ ಒಂದೇ ಅಭಿಪ್ರಾಯ ಇದೆ. ಎಲ್ಲರೂ ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲರಲ್ಲೂ ಈ ಬಗ್ಗೆ ಒಂದೇ ಅಭಿಪ್ರಾಯ ಇದೆ ಎಂದು ನಾನು ಈ ಸಭೆಯಮೂಲಕ ವಿದ್ಯುಚ್ಛಕ್ತಿ ಮಂಡಲಗೆ ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ವಿದ್ಯುಚ್ಛಕ್ತಿ ಮಂಡಲಯವರು ಕೆಲಸಮಾಡಿರತಕ್ಕದ್ದನ್ನು ನೋಡಿದರೆ ಶ್ರೀಮಾನ್ ಚನ್ನಬಸಪ್ಪನವರು ಹೇಳಿದಹಾಗೆ ಇದು ಮಾರ್ಬಾಡಿ ಬೋರ್ಡ್ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ದೇಶದಲ್ಲಿ ಸರ್ಕಾರದ ವತಿಯಲ್ಲಿ ಎರೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಇದ್ದ ಕಾಲದಲ್ಲಿ ಆಗುತ್ತಿದ್ದಂತಹ ಕೆಲಸ ಮತ್ತು ಸೌಲಭ್ಯಗಳು ಇವೊತ್ತಿನದಿವಸ ಬೋರ್ಡಿನಿಂದ ನಮಗೆ ದೊರೆಯುತ್ತಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆ ಮನೆಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಉಗಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ವಿದ್ಯುಚ್ಛಕ್ತಿ ಮಂಡಲಯವರು ಹೆಚ್ಚಿನ ದರವನ್ನು ಏರಿಸಿರುವುದರಿಂದ ಗ್ರಾಮಾಂತರ ಪ್ರದೇಶದ ಜನಗಳ ಕಷ್ಟವನ್ನು ಇಷ್ಟೆಂದು ಹೇಳತೀರದು. ಸಾಮಾನ್ಯವಾಗಿ ರೈತರಾದಂಥವರಿಗೆ ನರಿಯಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಒಂದೊಂದು ಸಾರಿ ಲೋಡ್ ಜಾಸ್ತಿಯಾಗಿ ಮೋಟಾರ್ ಸುಟ್ಟುಹೋಗುತ್ತದೆ. ಮತ್ತೆ ಕೆಲವು ಸಾರಿ ಫ್ಯೂಜ್ ಹೋಗಿಬಿಡುತ್ತದೆ. ಆಲ್ಯೂಮಿನಿಯಮ್ ವೈರ್ ಹಾಕಿರುತ್ತಾರೆ. ಅದು ಜಾಗ್ರತೆ ಸುಟ್ಟು ಹೋಗುತ್ತದೆ. ಗಾಳಿಗೆ ಅಲ್ಲಾಡುವಂತಹ ವೈರನ್ನು ಹಾಕಿರುತ್ತಾರೆ. ಫ್ಯೂಜ್ ಹೋಗಿದೆ ಬಂದು ಹಾಕಿ ಎಂದು ಸಂಬಂಧಪಟ್ಟ ಆಫೀಸಿಗೆ ತಿಳಿಸಿದರೆ ಅವರು ಬಂದು ರಿಪೇರಿ ಮಾಡಬೇಕಾದರೆ ಎರಡು ದಿವಸಗಳಾಗುತ್ತದೆ. ನಾನು ಸಹ 3 ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿದ್ದೇನೆ. ಅವುಗಳು ಕೆಟ್ಟರೆ ನಾವು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಸಂಬಂಧಪಟ್ಟ ನೌಕರರೇ ಬಂದು ರಿಪೇರಿ ಮಾಡಬೇಕಾಗುತ್ತದೆ. ಈಗ ಉಪಯೋಗಿಸುವ ಸಾಮಾನುಗಳು ಬಹಳ ಕೆಳದರ್ಜೆಯವುಗಳಾಗಿವೆ ಎಂದು ಹೇಳಬಹುದು. ನಾನು ನನ್ನ ಚಿಕ್ಕವಯಸ್ಸಿನಿಂದಲೂ ಕೂಡ ಈ ವಿದ್ಯುಚ್ಛಕ್ತಿ ಮಂಡಲಯವರು ಉಪಯೋಗಿಸುವ ಮೆಟೀರಿಯಲ್ಸ್‌ನ್ನು ನೋಡುತ್ತಿದ್ದೇನೆ. ಮೊದಲು ಉಪಯೋಗಿಸುತ್ತಿದ್ದ ಸಾಮಾನುಗಳಿಗಿಂತ ಈಗಿನ ಸಾಮಾನುಗಳು ಬಹಳ ಕೆಳದರ್ಜೆಯವುಗಳಾಗಿವೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ ಈಗಿನ ಟ್ರಾನ್ಸ್‌ಫಾರ್ಮರ್‌ಗಳು ನರಿಯಾಗಿ ಕೆಲಸವನ್ನೇ ಮಾಡುತ್ತಿಲ್ಲ. ಆಗಾಗ್ಗೆ ಕೆಟ್ಟು ಹೋಗುತ್ತಿರುತ್ತವೆ. ಮತ್ತು ಬೆಲೆಗಳು ಸಹ ಜಾಸ್ತಿಯಾಗಿವೆ. ಚೇರ್‌ಮನ್ ಅವರನ್ನು ಕೇಳಿದರೆ, ಏನು ಮಾಡುವುದು, ತಾವುಗಳು ಸಹಕರಿಸಬೇಕು ಎಂದು ಹೇಳುತ್ತಾರೆ. ಈ ಒಂದು ವಿದ್ಯುಚ್ಛಕ್ತಿ ಮಂಡಲಯ ಕೆಲಸವನ್ನು ಮತ್ತು ಆಗುತ್ತಿರುವ ಅನ್ಯಾಯಗಳನ್ನು ಹೇಳಿದ್ದಿದ್ದರೆ ನನ್ನ ಆತ್ಮಕ್ಕೆ ತೃಪ್ತಿಯಾಗುವುದಿಲ್ಲ. ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವಂತೆ ಈ ಬೋರ್ಡನ್ನು ಸಹ ಸೂಪರ್‌ಸೀಡ್ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಈಗ ಅಲ್ಲಿ ಅಷ್ಟೊಂದು ಹಣ ಪೋಲಾಗುತ್ತದೆ. ಅಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಬೇಕಾದರೆ 3-4 ದಿವಸಗಳವರೆಗೂ ಕೂಡ ಹೇಳಬಹುದು. ಅಷ್ಟೊಂದು ಅನ್ಯಾಯ ನಡೆಯುತ್ತಿದೆ. ಒಂದು ಪೋಲನ್ನು ನೆಡಲು 20-30 ಜನ ಹೋಗುತ್ತಾರೆ. ಬೆಳಿಗ್ಗೆ ಹತ್ತೂವರೆ ಗಂಟೆಗೆ ಪೋಲನ್ನು ನೆಡಲು ಹೊರಟು ನೆಡುವ ಸ್ಥಳಕ್ಕೆ 12 ಗಂಟೆಯಹೊತ್ತಿಗೆ ಸೇರುತ್ತಾರೆ. ಮತ್ತೆ ಮೂರು ಗಂಟೆಗೆ ವಾಪಸ್ ಬಂದುಬಿಡುತ್ತಾರೆ. ಅಲ್ಲಿಗೆ ಅವರ ಆ ದಿನದ ಕೆಲಸ ಮುಗಿಯಿತು. ಒಂದು ಕಂಬ ನಡೆಲು 3-4ಜನ ಆದರೆ ಸಾಕು. ಅದರ ಬದಲು 20-30 ಜನರು ಒಂದು ಕಂಬವನ್ನು ಗಾಡಿಯಲ್ಲಿ ಹಾಕಿಕೊಂಡು ತಮ್ಮಷ್ಟಕ್ಕೇ ಆದ ಘೋಷಣೆಗಳನ್ನು ಕೂಗುತ್ತಾ ಸ್ಮಶಾನ ಯಾತ್ರೆಯಲ್ಲಿ ಜನರು ಹೋಗುವಂತೆ ಹೋಗುತ್ತಿರುತ್ತಾರೆ. ಇವತ್ತು ಯಾರಾದರೂ ರೈತರಿಗೆ ಇರಿಗೇಷನ್ ಪಂಪ್‌ಸೆಟ್ಟು ಮಂಜೂರು ಆದರೆ, ಲೈನ್ ಎಳೆಯುವುದಕ್ಕೆ ಬೇಕಾದ ಕಂಬವನ್ನು ತೆಗೆದುಕೊಂಡು ಹೋಗಲು ಸಂಬಂಧಪಟ್ಟ ರೈತರೇ ಗಾಡಿಯನ್ನು ತೆಗೆದು

(ಶ್ರೀ ಎನ್. ಚಿಕ್ಕೇಗೌಡ)

ಕೊಂಡು ಹೋಗಬೇಕು. ಲೈನ್ ಎಳೆಯುವುದಕ್ಕೆ ಬಂದ ಲೈನ್‌ಮನ್‌ಗಳಿಗೆ ನಮ್ಮ ಹಳ್ಳಿಗಳಲ್ಲಿ ಊಟ ಹಾಕುವ ಪದ್ಧತಿ ಬೇರೆ ಇವೆ. ಈಗ ಬೋರ್ಡಿನಲ್ಲಿ 25 ಸಾವಿರ ಜನರು ಕೆಲಸದಲ್ಲಿ ಇದ್ದಾರೆಂದು ಕೇಳಿದ್ದೇನೆ. ಮತ್ತೆ ಕೆಲವರು 35 ಸಾವಿರ ಜನರು ಇದ್ದಾರೆಂದು ಹೇಳುತ್ತಾರೆ. ಇವತ್ತು ಚೇರ್‌ಮನ್ ಅವರು ಕೊಡುವ ಅಂಕಿ ಅಂಶಗಳಲ್ಲಿ ಮತ್ತು ಚೀಫ್-ಇಂಜಿನಿಯರ್ ಅವರು ಕೊಡುವ ಅಂಕಿಅಂಶಗಳಲ್ಲಿ ವ್ಯತ್ಯಾಸಗಳು ಇವೆ. ಅಲ್ಲಿಯ ಪದ್ಧತಿ ಯಾವ ರೀತಿ ಇದೆ ಎಂದರೆ ಎಲ್ಲವೂ ಲಂಚ ಮಯವಾಗಿದೆ. ಒಂದು ಪಂಪ್‌ಸೆಟ್ಟು ದೊರಕಿಸಿಕೊಳ್ಳಬೇಕಾದರೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಲಂಚ ಕೊಡಬೇಕು. ಈ ಲಂಚ ಕೊಡುವುದು ಸೂಪರ್‌ವೈಸರಿಂದ ಪ್ರಾರಂಭವಾಗುತ್ತದೆ. ಮೊದಮೊದಲು ಪ್ರೈಯಾರಿಟಿ ಲಿಸ್ಟ್ ಪ್ರಕಾರ ಪಂಪ್‌ಸೆಟ್ಟುಗಳನ್ನು ಮಂಜೂರು ಮಾಡುತ್ತೇವೆ ಎಂದು ಹೇಳುತ್ತಾರೆ. ಮಂಜೂರು ಆದಮೇಲೆ ಸೂಪರ್‌ವೈಸರ್‌ಗೆ 100ರಿಂದ 200 ರೂಪಾಯಿಗಳವರೆಗೆ ಲಂಚ ಕೊಡಬೇಕು. ಇಲ್ಲದಿದ್ದರೆ ಮುಂದಿನ ಕೆಲಸವಾಗುವುದಿಲ್ಲ. ಲಂಚ ತೆಗೆದು ಕೊಳ್ಳದೆ ನಿಸ್ವಾರ್ಥತೆಯಿಂದ ಕೆಲಸ ಮಾಡುವ ಇರಾಖೆ ಎಂದರೆ ವಿದ್ಯುಚ್ಛಕ್ತಿ ಬೋರ್ಡ್ ಒಂದೇ ಎಂಬುದಾಗಿ ಈ ಬೋರ್ಡ್ ಮೊದಲು ಹೆಸರು ಪಡೆದಿತ್ತು. ಆದರೆ ಈಗ ಅಲ್ಲಿ ಲಂಚ ಎಂಬುದು ತಾಂಡವವಾಡುತ್ತಿದೆ. ಇಷ್ಟೊಂದು ಕಷ್ಟಪಟ್ಟು ಒಂದು ಪಂಪ್‌ಸೆಟ್ಟು ಪಡೆದುಕೊಂಡರೆ ಅದು ಆಗಾಗ್ಗೆ ಕೆಟ್ಟುಹೋಗುತ್ತಿರುತ್ತದೆ. ಕೆಟ್ಟು ಹೋಗಿದೆ, ಒಂದು ರಿಪೇರಿ ಮಾಡಬೇಕೆಂದು ಕಂಪ್ಲೈಂಟ್ ಕೊಟ್ಟರೆ ಈಗ ಲೈನ್‌ಮನ್ ಇಲ್ಲವೆಂದು ಹೇಳುತ್ತಾರೆ. ರಿಪೇರಿ ಮಾಡಲು 2-3 ದಿನ ತೆಗೆದುಕೊಳ್ಳುತ್ತಾರೆ. ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತೆ ಬೋರ್ಡಿನ ಚೇರ್‌ಮನ್ ಅವರಾದ ಶ್ರೀ ಅಪ್ಪ ಎಂಬುವರಿಗೆ 2,700 ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ. ಹಿಂದಿನ ಚೇರ್‌ಮನ್ ಅವರು ಕೇವಲ 700 ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದರು. ಈಗಿನವರು ರಿಟೈರ್ ಆಫೀಸರ್ ಬೇರೆ ಆಗಿದ್ದಾರೆ. ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಅವರನ್ನು ಮಾತನಾಡಿಸುವುದೇ ಕಷ್ಟವಾಗಿದೆ. ಈಗ ಬೋರ್ಡಿನಲ್ಲಿ ಕೆಲಸಮಾಡುತ್ತಿರುವ ಸುಮಾರು 25 ಸಾವಿರ ನೌಕರರಿಗೆ ಫ್ರೀ ಆಗಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಇದ್ದಾರೆ. ಫ್ರೀಯಾಗಿ ಒದಗಿಸುವುದನ್ನು ತಪ್ಪಿಸಿ ಅವರಿಗೆ ತಿಂಗಳಿಗೆ ಎರಡು ರೂಪಾಯಿಗಳಂತೆ ಚಾರ್ಜು ಮಾಡಿ ಎಂದು ಚೇರ್‌ಮನ್ ಅವರನ್ನು ಕೇಳಿದರೆ, ಅವರು ಇರುವ ರೂಲ್ಸನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇವೆಲ್ಲ ಕಾರಣದಿಂದ ನಾನು ಬೋರ್ಡನ್ನು ಸೂಪರ್‌ಸೀಡ್ ಮಾಡ ಬೇಕೆಂದು ಹೇಳುತ್ತಿರುವುದು. ಅಲ್ಲಿಯ ನೌಕರರಿಗೆ ಫ್ರೀಯಾಗಿ ವಿದ್ಯುಚ್ಛಕ್ತಿ ಕೊಡಬೇಕೆಂದು ರೂಲ್ಸ್ ಇದ್ದರೆ ಅದನ್ನು ಬದಲಾವಣೆ ಮಾಡುವುದು ಏನು ಕಷ್ಟವಾಗುವುದಿಲ್ಲ. ನಾನು ಸರ್ಕಾರಕ್ಕೆ ಹೇಳುವುದು ಇಷ್ಟೆ, ಬೋರ್ಡಿನ ಆಡಳಿತವನ್ನು ಸರ್ಕಾರದವರೇ ತೆಗೆದುಕೊಂಡು ನಡೆಸಿದರೆ, ಈಗ ಆಗುತ್ತಿರುವ ದುರುಪಯೋಗವನ್ನು ಬಹಳಷ್ಟುಮಟ್ಟಿಗೆ ತಪ್ಪಿಸಬಹುದು. ಕೆಲವು ಜನ ಅಲ್ಲಿ ಸೇರಿ ಕೊಂಡು ಪಾರುಪತ್ಯ ನಡೆಸುತ್ತಿದ್ದಾರೆ. ಅಲ್ಲಿಯ ನೌಕರರಿಗೆ ಫ್ರೀ ವಿದ್ಯುಚ್ಛಕ್ತಿ, ಫ್ರೀ ಮನೆ, ಇಷ್ಟೇಅಲ್ಲಾ ಅನುಕೂಲಗಳನ್ನು ಅವರಿಗೆ ಕೊಟ್ಟು ಅದರ ಖರ್ಚನ್ನು ಇವತ್ತು ರೈತರಮೇಲೆ ಹಾಕುವುದಕ್ಕೆ ಹೊರಟಿದ್ದಾರೆ. ಅಲ್ಲಿಯ ನೌಕರರಿಗೆ ಫ್ರೀಯಾಗಿ ವಿದ್ಯುಚ್ಛಕ್ತಿ ಕೊಡುವ ಬದಲು ತಿಂಗಳಿಗೆ ಎರಡು ರೂಪಾಯಿಗಳಂತೆ ಚಾರ್ಜು ಮಾಡಿದರೆ ಎಷ್ಟೋ ಆದಾಯ ಬರುತ್ತದೆ. ಇದನ್ನು ಬಿಟ್ಟು ರೈತರಮೇಲೆ ಹೆಚ್ಚಿನ ರೇಟನ್ನು ಹಾಕುವುದು ಯಾವ ನ್ಯಾಯ. ಇವತ್ತು ಒಬ್ಬ ರೈತನಿಗೆ ಪಂಪ್ ಸೆಟ್ಟು ಕೊಟ್ಟರೆ, ಅದರ ಲಾಭ ಕೂಡಲೇ ಸಿಗುವುದಿಲ್ಲ. ಲಾಭ ಸಿಗುವುದು ಮುಂದಿನ ತಲೆಮಾರಿಗೆ ಎಂದು ಹೇಳಬಹುದು. ಒಂದು ವರ್ಷ ಮಳೆ ಇಲ್ಲದಿದ್ದರೆ ಬೆಳೆ ಹೋಗುತ್ತದೆ. ಆ ವರ್ಷ ಅವರ ಕಷ್ಟ ಹೇಳುವುದಕ್ಕಾಗುವುದಿಲ್ಲ. ಇಂಥಹವೆಲ್ಲಾ ಕಾರಣ ಬೇಡವೇ ಎಂದು ಕೇಳುತ್ತೇನೆ. ಟ್ಯಾರಿಫ್ ಕಮಿಟಿಯವರು ದರದ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆಂದು ಸರ್ಕಾರದವರು ಹೇಳ ಬಹುದು. ಮಾನ್ಯ ಚೆನ್ನಬಸಪ್ಪನವರು ಹೇಳಿದಂತೆ ಆ ಕಮಿಟಿಯಲ್ಲಿ ಕನ್ಸ್ಯೂಮರ್ಸ್ ಕಡೆಯ ಪ್ರತಿನಿಧಿಗಳು ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಆ ರೀತಿ ಕನ್ಸ್ಯೂಮರ್ಸ್ ಕಡೆಯ ಪ್ರತಿನಿಧಿಗಳನ್ನು ತೆಗೆದುಕೊಂಡು ದರವನ್ನು ನಿಗದಿ ಮಾಡುವುದು ಮಂಡಲಯ ಕರ್ತವ್ಯ ವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ದರವನ್ನು ಒಬ್ಬೊಬ್ಬರಿಗೆ ಒಂದೊಂದು ರೀತಿ ವಿಧಿಸಿ ಬೋರ್ಡಿನವರು ಕರ್ತವ್ಯಲೋಪ ಮಾಡಿದ್ದಾರೆಂದು ಹೇಳಬಹುದು. ಸಿನಿಮಾದವರಿಗೆ ಮತ್ತು ಹೋಟೆಲ್‌ನವರಿಗೆ ಕಡಿಮೆ ದರದಲ್ಲಿ ಒದಗಿಸಿ ಗೃಹಬಳಕೆಯವರಿಗೆ ಹೆಚ್ಚಿನ ದರವನ್ನು ವಿಧಿಸುತ್ತಿದ್ದಾರೆ. ಸಿನಿಮಾದವರಿಗೆ ವರಮಾನ ಜಾಸ್ತಿ ಇದೆ, ಅವರಿಗೆ ಏತಕ್ಕೆ ದರವನ್ನು ಹೆಚ್ಚು ಮಾಡ ಬಾರದು ಎಂದು ಕೇಳಿದರೆ, ಅವರಿಂದ ರಿಬೇಟ್ಸ್ ಹೆಚ್ಚು ಬರುವುದರಿಂದ ಅವರ ಮೇಲೆ ಹೆಚ್ಚಿನ ದರ ವನ್ನು ವಸೂಲ್ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಇವತ್ತಿನ ದಿವಸ ವಿದ್ಯುಚ್ಛಕ್ತಿಯನ್ನು

ಅತಿ ಕಡಿಮೆ ವೆಚ್ಚದಲ್ಲಿ ತಯಾರು ಮಾಡುತ್ತಿರುವುದು ಮೈಸೂರು ರಾಜ್ಯ ಒಂದೇ. ಈ ಕಾರಣದಿಂದ ಬೋರ್ಡಿಗೆ ಹೆಚ್ಚಿನ ಉತ್ಪತ್ತಿ ಇರಬೇಕು. ಆದರೆ ಎದ್ಯುಚ್ಚಕ್ತಿ ಮಂಡಲಿಯವರಿಗೂ ಎಚ್.ಇ.ಸಿ.ಪಿ. ಇಲಾಖೆಯವರಿಗೂ ಹೊಂದಾಣಿಕೆ ಇಲ್ಲದಿರುವುದರಿಂದ ನಷ್ಟವಾಗುವುದಕ್ಕೆ ಅವಕಾಶವಾಗಿದೆ. ಆ ನಷ್ಟವನ್ನು ತಪ್ಪಿಸಲು ಸಿಕ್ಕಾಪಟ್ಟೆ ದರವನ್ನು ಹೆಚ್ಚಿಸುತ್ತಿದ್ದಾರೆ.

ಚೇರ್‌ಮನ್‌ರವರು.—ತಾವು ನಾಳೆ ತಮ್ಮ ಭಾಷಣವನ್ನು ಮುಂದುವರೆಸಬಹುದು. ಸಭೆ ಇವತ್ತು ಎದ್ದು ನಾಳೆ ಒಂದು ಗಂಟೆಗೆ ಪುನಃ ಸೇರುತ್ತದೆ.

The House adjourned at Seven of the Clock to meet again at One of the Clock on Tuesday, the 2nd September 1969.

WD 13520—GPB—600—5-12-1969